ಶನಿವಾರ, ಏಪ್ರಿಲ್ 18, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಮತದಾನ ಮಾಡಿ’

ಚುನಾವಣಾ ಆಯೋಗದ ವತಿಯಿಂದ ಪಶ್ಚಿಮ ಬಂಗಾಳದಲ್ಲಿ ಶುಕ್ರವಾರ ಮತದಾನ ಜಾಗೃತಿ ಕಾರ್ಯಕ್ರಮ ನಡೆಯಿತು

ರಜತ್ ತಾಲೀಮು

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟೀದಾರ್ ತಾಲೀಮು ನಡೆಸಿದರು

PRM/KA/RERA/1250/303/PR/170905/000071

SKYVIEW
Devanahalli

This Akshay Tritiya, Bring Home Prosperity in Gold

Book your flat today and collect your gold coin at the Akshay Tritiya function tomorrow.

100 Flats | **100** Grams Gold on Every Flat | **10 PM** Offer vaild till tonight | **43.75** (2BHK) Lakhs

All Inclusive (only GST extra)

Home Loan Available from Leading Banks

Ready for Handover*

Move in today. Grow tomorrow.
High appreciation. Strong rental returns.

Just 7 Min from the Kempegowda International Airport

Location advantages
Walkable distance from following:

- Multi Speciality Hospital
- Akash Medical College and International First Grade College of Management

Contact: - 080-35492970

Book a FREE Site Visit | Reserve Your Dream Home Today

Limited Units. Assured Delivery. Prime Location.

Project office: Bychapura, Behind Akash International School, Devanahalli Town, Bangalore.

For Interiors I Partial OC to be Obtained*

www.skyviewdevanahalli.com

T&C apply. Price applicable on select inventory. Images are for representation purposes only.

Developed and Marketed by

MAHAKARA DEVELOPERS
AGARWAL GROUP
REAL ESTATE & CONSTRUCTION

Scan for project location

prajavani.net prajavani

www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 78,493 | ನಿಫ್ಟಿ 24,353 | $/₹ 92.91

ಗ್ರೀನ್ ಮಿಂಚು
ಅಹಮದಾಬಾದಿನಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಕ್ಯಾಮರಾನ್ ಗ್ರೀನ್ (79; 55 ಎಸೆತ) ಅಮೋಘ ಬ್ಯಾಟಿಂಗ್ ಮಾಡಿದರು

ಎನ್‌ಡಿಎ ನಡೆಗೆ ‘ಇಂಡಿಯಾ’ ಬೇಲಿ

23 ಗಂಟೆ ಸುದೀರ್ಘ ಚರ್ಚೆ • ಸಂವಿಧಾನ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಸೋಲು • ಸರ್ಕಾರಕ್ಕೆ ಮುಖಭಂಗ

ಪ್ರಜಾವಾಣಿ ವಾರ್ತೆ



ನವದೆಹಲಿ: ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು 850ಕ್ಕೆ ಏರಿಸುವ ಹಾಗೂ 2029ರ ಚುನಾವಣೆಯಿಂದ ಮಹಿಳೆಯರಿಗೆ ಶೇ 33 ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಶುಕ್ರವಾರ ಸೋಲಾಗಿದೆ. ಇದರಿಂದ, ಐದು ರಾಜ್ಯಗಳ ಚುನಾವಣೆಯ ನಡುವಿನಲ್ಲೇ ಮಸೂದೆಗೆ ಅಂಗೀಕಾರ ಪಡೆಯಲು ಶತಪ್ರಯತ್ನ ನಡೆಸಿದ್ದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಮುಖಭಂಗವಾಗಿದೆ.

ಎರಡು ದಿನಗಳಲ್ಲಿ ಸುಮಾರು 23 ಗಂಟೆಗಳ ಚರ್ಚೆ ಬಳಿಕ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ಮಸೂದೆ ಕುರಿತ ಚರ್ಚೆಯಲ್ಲಿ 56 ಮಹಿಳಾ ಸಂಸದರು ಸೇರಿದಂತೆ 123 ಸದಸ್ಯರು ಭಾಗಿಯಾದರು. ಎನ್‌ಡಿಎ ಮೈತ್ರಿಕೂಟವು ವೈಎಸ್‌ಆರ್ ಕಾಂಗ್ರೆಸ್‌ನ ನಾಲ್ವರು ಸಂಸದರ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಯಿತು. ಆದರೆ, ಮಸೂದೆ ಅಂಗೀಕಾರಕ್ಕೆ ಈ ಬೆಂಬಲ ಸಾಕಾಗಲಿಲ್ಲ. ಟಿಎಂಸಿಯ ಏಳು ಸಂಸದರು ಸೇರಿದಂತೆ ವಿಪಕ್ಷ ಮೈತ್ರಿಕೂಟದ ಕೆಲವು ಸಂಸದರು ಗೈರಾದರು.

2021ರಲ್ಲಿ ವಿವಾದಾತ್ಮಕ ಮೂರು ಕೃಷಿ ಕಾಯ್ದೆಗಳನ್ನು ಕೇಂದ್ರ ಬಿಜೆಪಿ ಸರ್ಕಾರ ರದ್ದುಗೊಳಿಸಿತ್ತು. ದಣಿವರಿಯದ ರೈತರ ಸಂಘಟಿತ ಹೋರಾಟಕ್ಕೆ ಪ್ರಧಾನಿ ಮೋದಿ ಮಣಿದಿದ್ದರು. ಸಂವಿಧಾನ ತಿದ್ದುಪಡಿ ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ಎರಡು ಮಸೂದೆಗಳ ಸೋಲು ಮೋದಿ ಸರ್ಕಾರಕ್ಕೆ ಎರಡನೇ ಪ್ರಮುಖ ಸಂಸದೀಯ ಹಿನ್ನಡೆಯಾಗಿದೆ. ಮೋದಿ ಆಡಳಿತದ ಅವಧಿಯಲ್ಲಿ ಸಂಸತ್ತಿನಲ್ಲಿ ಮಸೂದೆಗೆ ಸೋಲು ಆಗಿದ್ದು ಇದೇ ಮೊದಲು.

ಸಂವಿಧಾನ (131 ನೇ ತಿದ್ದುಪಡಿ) ಮಸೂದೆಯ ಪ್ರಕಾರ, 2011ರ ಜನಗಣತಿಯ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ನಡೆಸಲಾಗುತ್ತದೆ. 2029ರ ಲೋಕಸಭಾ ಚುನಾವಣೆಗೆ ಮೊದಲು ಮಹಿಳಾ ಮೀಸಲಾತಿ ಕಾನೂನನ್ನು ಕಾರ್ಯಗತಗೊಳಿಸಲು ಲೋಕಸಭಾ ಸ್ಥಾನ ಗಳನ್ನು 543 ರಿಂದ 850ಕ್ಕೆ ಏರಿಸಲಾಗುತ್ತದೆ ಎಂದು ವಿವರಿಸಲಾಗಿತ್ತು.

ಸಂವಿಧಾನ ತಿದ್ದುಪಡಿ ಮಸೂದೆಗೆ ಸೋಲಾಗಿರುವುದರಿಂದ ಉಳಿದ ಎರಡು ಸಾಮಾನ್ಯ ಮಸೂದೆಗಳಿಗೆ ಅಂಗೀಕಾರ ಪಡೆಯುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದು ಸಂಸದೀಯ ವ್ಯವಹಾರ ಕಿರಣ್ ರಿಜಿಜು ಸ್ಪಷ್ಟಪಡಿಸಿದರು. ಬಳಿಕ ಕಲಾಪವನ್ನು ಶನಿವಾರಕ್ಕೆ ಮುಂದೂಡಲಾಯಿತು.

ಕಳೆದ 48 ಗಂಟೆಗಳಲ್ಲಿ, ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಚರ್ಚಿಸುತ್ತಿದ್ದಂತೆ ಮೂರನೇ ಎರಡರಷ್ಟು ಬಹುಮತದ ಕೊರತೆ ಇರುವುದು ಸರ್ಕಾರಕ್ಕೆ ಸ್ಪಷ್ಟವಾ ಗಿತ್ತು. ಈ ಮಸೂದೆಗೆ ಸೋಲಾಗಲಿದೆ ಎಂದು ಬಿಜೆಪಿ ಸಂಸದರೇ ಹೇಳಿಕೊಂಡಿದ್ದರು.

4C

ಸರ್ಕಾರ ಮಂಡಿಸಿದ್ದು ಮಹಿಳಾ ಮಸೂದೆ ಅಲ್ಲ, ಭಾರತದ ಚುನಾವಣಾ ರಚನೆಯನ್ನು ಬದಲಾಯಿಸುವ ಪ್ರಯತ್ನ. ಇದು ನಮ್ಮ ಸಂವಿಧಾನದ ಮೇಲಿನ ದಾಳಿ. ಈ ಪ್ರಯತ್ನವನ್ನು ನಾವು ಸೋಲಿಸಿದ್ದೇವೆ.

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ವಿಪಕ್ಷವು ಮಹಿಳೆಯರನ್ನು ಗೌರವಿಸುವ ಐತಿಹಾಸಿಕ ಅವಕಾಶವನ್ನು ಸಂವಿಧಾನ ತಿದ್ದುಪಡಿ ಮಸೂದೆ ಸೋಲಿಸುವ ಮೂಲಕ ಕಳೆದುಕೊಂಡಿದೆ. ಮಹಿಳೆಯರಿಗೆ ಹಕ್ಕುಗಳನ್ನು ನೀಡುವ ಮೋದಿ ಸರ್ಕಾರದ ಹೋರಾಟ ಮುಂದುವರಿಯಲಿದೆ.

ಕಿರಣ್ ರಿಜಿಜು, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಮಹಿಳೆಯರಿಗೆ ಶೇ 33 ಮೀಸಲಾತಿ ನೀಡುವ ಮಸೂದೆಯ ಸೋಲನ್ನು ಸಂಭ್ರಮಿಸುವುದು ಖಂಡನೀಯ. ಕಲ್ಪನೆಗೂ ಮೀರಿದ ಕೃತ್ಯ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಮಳೆ: ಸಿಡಿಲು ಬಡಿದು ಕುರಿಗಾಹಿ ಸಾವು

ಕಲಬುರಗಿ: ಬಿಸಿಲಿನಿಂದ ತತ್ತರಿಸಿದ್ದ ಕಲ್ಯಾಣ ಕರ್ನಾಟಕದ ವಿವಿಧೆಡೆ ಶುಕ್ರವಾರ ಸುರಿದ ಮಳೆ ತುಸು ತಂಪೆರೆದಿದೆ. ಕೊಪ್ಪಳ ತಾಲ್ಲೂಕಿನ ಜಬ್ಬಲಗುಡ್ಡ ಗ್ರಾಮದಲ್ಲಿ ಗುರುವಾರ ರಾತ್ರಿ ಸಿಡಿಲು ಬಡಿದು ಕುರಿಗಾಹಿ ಕರಿಯಪ್ಪ ದ್ಯಾಮಣ್ಣ ಮ್ಯಾದ್ನೇರಿ (35) ಮೃತಪಟ್ಟಿದ್ದಾರೆ.

4A

ಚಿನಕುರುಳಿ ಪ್ರಕಾಶ್ ಶೆಟ್ಟಿ

ವಿದ್ಯುತ್ ದರ ಏರಿಕೆ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸರಬರಾಜು ಕಂಪನಿಗಳ ಆದಾಯದಲ್ಲಿನ ಖೋತಾ ಸರಿದೂಗಿಸಲು ಬೆಸ್ಕಾಂ ವ್ಯಾಪ್ತಿಯಲ್ಲಿ ಯೂನಿಟ್‌ಗೆ 56 ಪೈಸೆ ಮತ್ತು ಚೆಸ್ಕಾಂ ವ್ಯಾಪ್ತಿಯಲ್ಲಿ 15 ಪೈಸೆಯನ್ನು ಗ್ರಾಹಕರಿಂದ ಹೆಚ್ಚುವರಿಯಾಗಿ ವಸೂಲಿ ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅನುಮತಿ ನೀಡಿದೆ.

ಆದರೆ, ಮೆಸ್ಕಾಂ ವ್ಯಾಪ್ತಿಯಲ್ಲಿ ಯೂನಿಟ್‌ಗೆ 9 ಪೈಸೆ, ಹೆಸ್ಕಾಂ ಮತ್ತು ಜೆಸ್ಕಾಂ ವ್ಯಾಪ್ತಿಯಲ್ಲಿ ಯೂನಿಟ್‌ಗೆ ತಲಾ 10 ಪೈಸೆ ಪ್ರಕಾರ ಗ್ರಾಹಕರಿಗೆ ಹಿಂತಿರುಗಿಸುವಂತೆ ಆದೇಶಿಸಲಾಗಿದೆ.

ಮೂರು ಕಂಪನಿಗಳಲ್ಲಿನ ಗ್ರಾಹಕರು 2024–25ನೇ ಸಾಲಿನಲ್ಲಿ ಬಳಸಿದ್ದ ವಿದ್ಯುತ್‌ಗೆ ಇದು ಅನ್ವಯವಾಗಲಿದೆ.

ಕಳೆದ ವರ್ಷದ ಮಾರ್ಚ್‌ನಲ್ಲಿ ಆಯೋಗವು ಮೂರು ವರ್ಷಗಳ ಅವಧಿಗೆ ಬಹುವಾರ್ಷಿಕ ದರ ನಿಗದಿಪಡಿಸಿ ಆದೇಶ ಹೊರಡಿಸಿತ್ತು. ಅದರ ಪ್ರಕಾರ ಈ ವರ್ಷದ ಏಪ್ರಿಲ್ ಒಂದರಿಂದಲೇ ದರ ಹೆಚ್ಚಳವಾಗಿದೆ.

4

ಹೊರ್ಮುಜ್ ಈಗ ಮುಕ್ತ



ಟೆಹರಾನ್ (ಎಎಫ್‌ಪಿ): ‘ಲೆಬನಾನ್–ಇಸ್ರೇಲ್ ಕದನ ವಿರಾಮದ ಉಳಿದ ಅವಧಿವರೆಗೆ (ಏ.27ರವರೆಗೆ) ಹೊರ್ಮುಜ್ ಜಲಸಂಧಿಯನ್ನು ಎಲ್ಲ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಪೂರ್ಣವಾಗಿ ಮುಕ್ತಗೊಳಿಸಲಾಗಿದೆ’ ಎಂದು ಇರಾನ್ ಶುಕ್ರವಾರ ಹೇಳಿದೆ.

ಲೆಬನಾನ್–ಇಸ್ರೇಲ್ ಮಧ್ಯೆ 10 ದಿನಗಳ ತಾತ್ಕಾಲಿಕ ಕದನ ವಿರಾಮ ಗುರುವಾರದಿಂದ ಜಾರಿಗೆ ಬಂದಿದೆ. ಇದರ ಬೆನ್ನಲ್ಲೇ ಇರಾನ್ ಈ ಮಹತ್ವದ ಘೋಷಣೆ ಮಾಡಿದೆ.

‘ಹೊರ್ಮುಜ್ ಜಲಸಂಧಿಯನ್ನು ಪೂರ್ಣವಾಗಿ ಮುಕ್ತಗೊಳಿಸಲಾಗಿದೆ’ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇರಾನ್ ನಿರ್ಧಾರವನ್ನು ಸ್ವಾಗತಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಟ್ರೂತ್ ಸೋಷಿಯಲ್ ಸಾಮಾಜಿಕ ಜಾಲತಾಣದಲ್ಲಿ ‘ಥ್ಯಾಂಕ್ಯೂ’ ಎಂದು ಪೋಸ್ಟ್ ಮಾಡಿದ್ದಾರೆ. ಶೀಘ್ರವೇ ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳ್ಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 8

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಜನತಾ ಬ್ಯಾಂಕ್‌ಗೆ ₹14.75 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025–26ರ ಆರ್ಥಿಕ ವರ್ಷದಲ್ಲಿ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ₹14.75 ಕೋಟಿ ಲಾಭ ಗಳಿಸಿದೆ.



ಸಿ.ಎಲ್. ಮರಿಗೌಡ

ರಾಜ್ಯದ ಪ್ರಮುಖ ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ಒಂದಾದ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮಲ್ಲೇಶ್ವರದಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ನಗರದ ವಿವಿಧೆಡೆ 7 ಶಾಖೆಗಳ ಮೂಲಕ ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿದೆ. ಬ್ಯಾಂಕ್‌ನ ನಿವ್ವಳ ಲಾಭ ₹11.45 ಕೋಟಿ ಆಗಿದ್ದು, ವಸೂಲಾಗದ ಸಾಲದ ಪ್ರಮಾಣ ಶೂನ್ಯಕ್ಕೆ ಇಳಿದಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಲ್.ಮರಿಗೌಡ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 31ರಂತೆ ಬ್ಯಾಂಕ್‌ನ ಸ್ವಂತ ಬಂಡವಾಳ ₹158.33 ಕೋಟಿಯಷ್ಟಾಗಿದ್ದು, ಠೇವಣಿ ₹647 ಕೋಟಿ ಯಾಗಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರ ₹1,089 ಕೋಟಿ ಯಾಗಿದೆ ಎಂದು ಬ್ಯಾಂಕ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿ ವಿನೋದ ಶಿವರಾಮಯ್ಯ ಹೇಳಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-176/25-26/205/2026-27/(E-149817) ದಿನಾಂಕ: 17.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ ವಿವರ	ಗ್ರಾಮದ ನಂ	ಸರ್ವೆ. ಎ–ಗುಂ	ವಿಸ್ತೀರ್ಣ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಪರಿಷ್ಕೃತ ಕೋರಿರುವ ಭೂ ಉಪಯೋಗ	ಬದಲಾವಣೆ
1	ಶ್ರೀ ಪಿ.ಕೆ. ಚಂದ್ರಶೇಖರ್	ಬೆಂಗಳೂರು ಪೂರ್ವ	ವರ್ತೂರು	ಸೂಲಿಕುಂಟೆ	33/1 41/13	3–02 0–20	ವ್ಯವಸಾಯ ವಲಯ	ವಸತಿ
ಒಟ್ಟು						3–22		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವ್ಯವಸಾಯ ಮಾಡಲು ಸಾಧ್ಯವಿರುವುದಿಲ್ಲ, ನಮ್ಮ ಜಮೀನಿನ ಸುತ್ತಮುತ್ತ ವಸತಿ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಸಹಾಯವಾಣಿ/ವಾಟ್ಸಪ್: 94831 66622 (24x7). @BDAOfficialGoK

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.

2ನೇ ಮಹಡಿ, ವನ ವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003. ದೂರವಾಣಿ ಸಂಖ್ಯೆ: 22228263, 22228264

ಸಂಖ್ಯೆ: : STRRPA/TP/CLU/166/2025-26 ದಿನಾಂಕ: 17.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ಮುನಿರಾಜು ಸಿ. ಬಿನ್ ಲೇಟ್ ನರಸಿಂಹಯ್ಯ ಉ ನರಸಿಂಹಪ್ಪ, ಚನ್ನಹಳ್ಳಿ ಗ್ರಾಮ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು.	ದೇವನ ಹಳ್ಳಿ	ಚನ್ನರಾಯ ಪಟ್ಟಣ	ಚನ್ನಹಳ್ಳಿ	3/22 3/31	0-05½ 0-04¾	ವ್ಯವಸಾಯ	ವಾಣಿಜ್ಯ
2	ಶ್ರೀ ನರಸಿಂಹಮೂರ್ತಿ ಬಿನ್ ಲೇಟ್ ದೊಡ್ಡ ನರಸಿಂಹಯ್ಯ ಉ ನರಸಿಂಹಪ್ಪ, ಚನ್ನಹಳ್ಳಿ ಗ್ರಾಮ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು.	ದೇವನ ಹಳ್ಳಿ	ಚನ್ನರಾಯ ಪಟ್ಟಣ	ಚನ್ನಹಳ್ಳಿ	3/30	0-05	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಾಣಿಜ್ಯ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ವಾಣಿಜ್ಯ ಉದ್ದೇಶದ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಪೂರೈಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆಂದು ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/238/ಶಿರಡಿ ಸಾಯಿ/2026–27

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)

ಅಧಿಸೂಚನೆ

ಬೆಂಗಳೂರು, 02 ಏಪ್ರಿಲ್ 2026

ಎಸ್.ಓ. 1720(ಇ)––ರೈಲ್ವೆ ಕಾಯ್ದೆ 1989 (1989 ರ 24) ರ ಸೆಕ್ಷನ್ 20 ಎ ನ ಉಪವಿಭಾಗ (1) ರ ಮೂಲಕ ನೀಡಲಾದ ಅಧಿಕಾರವನ್ನು ಚಲಾಯಿಸುತ್ತಾ (ಇನ್ನು ಮುಂದೆ ಸದರಿ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ), ಕೇಂದ್ರ ಸರ್ಕಾರ (ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಸಾರ್ವಜನಿಕ ಉದ್ದೇಶಕ್ಕಾಗಿ, ಇಲ್ಲಿ ಲಗತ್ತಿಸಲಾದ ವೇಳಾಪಟ್ಟಿಯಲ್ಲಿ ನೀಡಲಾದ ಸಂಕ್ಷಿಪ್ತ ವಿವರಣೆಯನ್ನು ವಿಶೇಷ ರೈಲ್ವೆ ಯೋಜನೆಯ ಕಾರ್ಯಗತಗೊಳಿಸುವಿಕೆಗೆ ಅಗತ್ಯವಿದೆ ಎಂದು ತೃಪ್ತಿಪಡಿಸಿದ ನಂತರ, ಕರ್ನಾಟಕ ರಾಜ್ಯದ ಚೈನೇಜ್ 162/700–800 (ಹಬ್ಬನಘಟ್ಟ ಕಾವಲ್ ಗ್ರಾಮ) ದಲ್ಲಿರುವ ಅರಸೀಕೆರೆ ಹಬ್ಬನಘಟ್ಟದಲ್ಲಿ ಎಲ್ ಸಿ ಸಂಖ್ಯೆ 131 ರ ಬದಲಿಗೆ ಆರ್ ಓಬಿ ನಿರ್ಮಾಣ, ಅಂತಹ ಭೂಮಿಯನ್ನು ವಶಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ.

ಈ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು, ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಮೇಲೆ ತಿಳಿಸಿದ ಉದ್ದೇಶದ ದಿನಾಂಕಕ್ಕಾಗಿ ನಾಚ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಬಳಸುವುದಕ್ಕೆ ಆಕ್ಷೇಪಣೆ ಸಲ್ಲಿಸಬಹುದು. ಸದರಿ ಕಾಯ್ದೆಯ ಸೆಕ್ಷನ್ 20ಡಿಯ ಉಪ–ವಿಭಾಗ (1) ರ ಅಡಿಯಲ್ಲಿ ಇದರ ಪ್ರಕಟಣೆಯ ಕುರಿತು;

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು ಚೈನೇಜ್ 162/700–800 (ಹಬ್ಬನಘಟ್ಟ ಕಾವಲ್ ಗ್ರಾಮ) ದಲ್ಲಿರುವ ಅರಸೀಕೆರೆ ಹಬ್ಬನಘಟ್ಟದಲ್ಲಿ ಎಲ್ ಸಿ ಸಂಖ್ಯೆ 131ರ ಬದಲಿಗೆ ಆರ್ ಓಬಿ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರ, ಹಾಸನ ಸಹಾಯಕ ಆಯುಕ್ತರು ಮತ್ತು ಮಧ್ಯಸ್ಥರು, ಅಂದರೆ ಬೆಂಗಳೂರು ಪ್ರಾದೇಶಿಕ ಆಯುಕ್ತರು ಅವರಿಗೆ ಲಿಖಿತವಾಗಿ ಸಲ್ಲಿಸಬೇಕು ಮತ್ತು ಭಾವಣಿಯ ಮೇಲೆ ಆಧಾರವನ್ನು ನಿಗದಿಪಡಿಸಬೇಕು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ವೃತ್ತಿಪರರಿಂದ ಅಹವಾಲು ಕೇಳಿಕೊಳ್ಳಲು ಅವಕಾಶವನ್ನು ನೀಡಬೇಕು ಮತ್ತು ಅಂತಹ ಎಲ್ಲಾ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಬಾವಿಸಿದಂತೆ ಹೆಚ್ಚಿನ ವಿವರಣೆಯನ್ನು ನಡೆಸಿದ ನಂತರ, ಯಾವುದೇ ಇದ್ದರೆ, ಯಾವುದೇ ಆಕ್ಷೇಪಣೆಗಳನ್ನು ಅನುಮತಿಸಬಬುದು ಅಥವಾ ನಿರಾಕರಿಸಬಹುದು.

ಸದರಿ ಕಾಯ್ದೆಯ ಸೆಕ್ಷನ್ 20ಡಿ ಯ ಉಪ–ವಿಭಾಗ (2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮ;

ಈ ಅಧಿಸೂಚನೆಯ ಅಡಿಯಲ್ಲಿ ಬರುವ ಭೂಮಿಯ ಯೋಜನೆಗಳು ಮತ್ತು ಇತರ ವಿವರಗಳು ಮೇಲೆ ತಿಳಿಸಲಾದ ಸಕ್ಷಮ ಪ್ರಾಧಿಕಾರದ ಕಚೇರಿ, ಸಹಾಯಕ ಆಯುಕ್ತರು, ಹಾಸನದಲ್ಲಿ ಲಭ್ಯವಿದೆ ಮತ್ತು ಆಸಕ್ತ ವ್ಯಕ್ತಿಯು ಪರಿಶೀಲಿಸಬಹುದು.

ವೇಳಾಪಟ್ಟಿ

ಕರ್ನಾಟಕ ರಾಜ್ಯದ ಚೈನೇಜ್ 162/700–800 (ಹಬ್ಬನಘಟ್ಟ ಕಾವಲ್ ಗ್ರಾಮ) ನಲ್ಲಿರುವ ಅರಸೀಕೆರೆ–ಹಬ್ಬನಘಟ್ಟದಲ್ಲಿ ಪ್ರಸ್ತಾವಿತ ವಿಶೇಷ ರೈಲ್ವೆ ಯೋಜನೆಯ ನಿರ್ಮಾಣದಲ್ಲಿ ಎಲ್‌ಸಿ ಸಂಖ್ಯೆ 131ರ ಬದಲಿಗೆ ಆರ್‌ಓಬಿಯ ರಚನೆಯೊಂದಿಗೆ ಅಥವಾ ಇಲ್ಲದೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ಹಾಸನ — **ತಾಲೂಕು:** ಅರಸೀಕೆರೆ
ಹೋಬಳಿ: ಕಸಬ — **ಗ್ರಾಮ:** ಹಬ್ಬನಘಟ್ಟ ಕಾವಲ್

ಕ್ರ. ಸಂ.	ಸರ್ವೇ ನಂ.	ಭೂಮಾಲೀಕರು	ಆರ್‌ಟಿಸಿ ಪ್ರಕಾರ ಒಟ್ಟು ವಿಸ್ತೀರ್ಣ (ಎ–ಜಿ)	ಭೂಮಿಯ ವರ್ಗೀಕರಣ	ಸ್ವಾಧೀನಕ್ಕೆ ಅಗತ್ಯವಿರುವ ವಿಸ್ತಾರ	ವಿಸ್ತೀರ್ಣ ಚದರ ಮೀಟರ್ ನಲ್ಲಿ	ಹೆಕ್ಟೇರ್ ನಲ್ಲಿ ವಿಸ್ತರಣೆ	ಮರಗಳು ಮತ್ತು ಸಸ್ಯಗಳ ವಿವರಗಳು	ಕಟ್ಟಡ ಮತ್ತು ಇತರೆ
1	2	3	4	5	6	7	8	9	10
1	252	ಶ್ರೀ ಕಸ್ತೂರಬಾ ಟ್ರಸ್ಟ್ ಪರವಾಗಿ ಪ್ರತಿನಿಧಿ	85–27	ಭಾಗಾಯಿತು	0–35	3540.98	0.354	23 ತಂಗಿನಕಾಯಿ (ದೊಡ್ಡದು) 15 ತಂಗಿನಕಾಯಿ (ಸಣ್ಣದು) 8 ಕಾಡಿನ ಮರ	-

ಅಮೂರ್ತ

ಕ್ರ. ಸಂ.	ಗ್ರಾಮದ ಹೆಸರು	ಸ್ವಾಧೀನದ ವ್ಯಾಪ್ತಿ (ಪ್ರದೇಶದಲ್ಲಿ)		
		ಎ–ಜಿ	ವಿಸ್ತೀರ್ಣ ಚದರ ಮೀಟರ್‌ನಲ್ಲಿ	ಪ್ರದೇಶ ಹೆಕ್ಟೇರ್‌ನಲ್ಲಿ
1	ಹಬ್ಬನಘಟ್ಟ ಕಾವಲ್	0-35	3540.98	0.354
ಒಟ್ಟು		0-35	3540.98	0.354

[ನಂ. ಡಬ್ಲ್ಯೂ.271/ಸಿಎನ್/ಬಿಎನ್ ಸಿ/2025–26/ಲ್ಯಾಂಡ್ ಎಸ್ ಆರ್ ಪಿ/1727] (ಪ್ರದೀಪ್ ಪುರಿ)
ಮುಖ್ಯ ಇಂಜಿನಿಯರ್-III/ನಿರ್ಮಾಣ/ಸಾಮಾನ್ಯ
ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್

PUB/32/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಜಲಮಂಡಳಿಗೆ ಐಎಸ್‌ಒ ಮಾನ್ಯತೆ

ಐಎಸ್‌ಒ 50001: 2018 ಪಡೆದ ದೇಶದ ಪ್ರಥಮ ಜಲಮಂಡಳಿ ಎಂಬ ಹೆಗ್ಗಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಐಎಸ್‌ಒ 50001: 2018 ಪ್ರಮಾಣಪತ್ರ ಪಡೆದಿದೆ. ಈ ಪ್ರಮಾಣಪತ್ರ ಪಡೆದ ದೇಶದ ಮೊದಲ ಜಲ ಮಂಡಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಬ್ಯೂರೋ ವೆರಿಟಾಸ್ ಅಧಿಕೃತವಾಗಿ ನೀಡಿರುವ ಈ ಪ್ರತಿಷ್ಠಿತ ಪ್ರಮಾಣಪತ್ರವು, ಮಂಡಳಿಯ ಅತ್ಯುತ್ತಮ ಇಂಧನ ನಿರ್ವಹಣಾ ವ್ಯವಸ್ಥೆಗಳನ್ನು ಔಪಚಾರಿಕವಾಗಿ ಗುರುತಿಸಿದೆ.

ಮಂಡಳಿಯ ಕಾವೇರಿ ಜಲಸಂಗ್ರಹದ ಮೂಲವಾದ ಮಂಡ್ಯ ಜಿಲ್ಲೆಯ ತೊರೆಕಾಡನಹಳ್ಳಿ, ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಮತ್ತು ತಾತಗುಣಿ ಮೂರು ಪ್ರಮುಖ ಸ್ಥಳಗಳಲ್ಲಿರುವ ತನ್ನ ಬೃಹತ್ ನೀರು ಸರಬರಾಜು ಪಂಪಿಂಗ್ ಸ್ಟೇಷನ್‌ಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ವಹಿಸುತ್ತಿರುವುದಕ್ಕಾಗಿ ಜಲಮಂಡಳಿಗೆ ಈ ಪ್ರಮಾಣಪತ್ರವನ್ನು ನೀಡಿ ಗೌರವಿಸಲಾಗಿದೆ.

ಪ್ರಮಾಣಪತ್ರವು ಕಾವೇರಿ ಭವನದಲ್ಲಿರುವ ಪ್ರಧಾನ ಕಚೇರಿಯ ಪ್ರಮುಖ ಪೂರಕ ಕಾರ್ಯಗಳನ್ನು ಹಾಗೂ ಬೃಹತ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರಂತರ ನೀರು ಸರಬರಾಜು ಮಾಡುವ ಒಟ್ಟಾರೆ ಪ್ರಕ್ರಿಯೆಯನ್ನು ಒಳಗೊಂಡಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮಮನೋಹರ್ ಪ್ರಸಾತ್ ತಿಳಿಸಿದ್ದಾರೆ.

ಈ ಮೈಲಿಗಲ್ಲನ್ನು ಸಾಧಿಸುವಲ್ಲಿ ಮುಖ್ಯ ಎಂಜಿನಿಯರ್ (ಯೋಜನೆ) ರಾಜೀವ್, ಮುಖ್ಯ ಎಂಜನಿಯರ್ (ಕೆ-ಒ ಅಂಡ್ ಎಂ) ರಾಜಶೇಖರ್ ಅವರ ಸಂಘಟಿತ ಪ್ರಯತ್ನದಿಂದ ಸಾಧ್ಯವಾಗಿದೆ. ಕಳೆದ ವರ್ಷವಷ್ಟೇ, ಕೊಳವೆ ಮೂಲಕ ಕುಡಿಯುವ ನೀರು ಸರಬರಾಜು ನಿರ್ವಹಣಾ ವ್ಯವಸ್ಥೆಗಾಗಿ ಭಾರತೀಯ ಮಾನದಂಡಗಳ ಬ್ಯೂರೋ ಪ್ರಮಾಣಪತ್ರವನ್ನು ಪಡೆದಿತ್ತು ಎಂದು ಹೇಳಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಐಎಸ್‌ಒ 50001: 2018 ಪ್ರಮಾಣಪತ್ರವನ್ನು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ನೇತೃತ್ವದಲ್ಲಿ ಹಸ್ತಾಂತರಿಸಿ ಧನ್ಯವಾದ ಅರ್ಪಿಸಲಾಯಿತು

'ಸಾರಥಿ'ಯಿಂದ ಜಲಸಂಭ್ರಮ

ನಗರದ 'ಸಾರಥಿ' ಸಂಸ್ಥೆಯು ಜಲ ಸಂಭ್ರಮ ಕಾರ್ಯಾಗಾರವನ್ನು ಏ.21ರಿಂದ ಮೂರು ದಿನ ಬನಶಂಕರಿಯ ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿ ಹಮ್ಮಿಕೊಂಡಿದೆ.

ಜಲ ಸಂರಕ್ಷಣೆಯಲ್ಲಿ ಸಮುದಾಯ, ಮಹಿಳೆಯರ ಪಾತ್ರ, ನೀರಿನ ಮಹತ್ವದ ಕುರಿತು ವಿವಿಧ ಉಪನ್ಯಾಸ, ಚಟುವಟಿಕೆಗಳು ಮೂರು ದಿನ ಇರಲಿವೆ. ತಜ್ಞರೊಂದಿಗೆ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ. ರೀಲ್ಸ್, ಕವನ, ಕಥೆ ಹಾಗೂ ಲೇಖನ ಸ್ಪರ್ಧೆ ಆಯೋಜಿಸಲಾಗುತ್ತದೆ. ಆಸಕ್ತರು 88374 19265(ಕಲ್ಪನಾ ರಮೇಶ್) ಸಂಪರ್ಕಿಸಿ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಸಾರಥಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆ ಡಿ.ಎಸ್. ಶಮಂತಾ ತಿಳಿಸಿದ್ದಾರೆ.

ದೆಹಲಿ ವಿಶ್ವವಿದ್ಯಾಲಯ

ಜಾಹೀರಾತು ಸಂ. ಆರ್&ಪಿ/319/2026 ದಿನಾಂಕ: 17.03.2026

ದೆಹಲಿ ವಿಶ್ವವಿದ್ಯಾಲಯದಲ್ಲಿನ **ಕಂಪ್ಯೂಟರ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಮತ್ತು ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಫಾಕಲ್ಟಿ ಆಫ್ ಟೆಕ್ನಾಲಜಿ** ವಿಭಾಗಗಳಲ್ಲಿ **ಅಸಿಸ್ಟಂಟ್ ಪ್ರೊಫೆಸರ್** ಹುದ್ದೆಯನ್ನು, 7ನೇ ಕೇಂದ್ರ ವೇತನ ಆಯೋಗದ ವೇತನ ಶ್ರೇಣಿಯ ಅಕಾಡೆಮಿಕ್ ಪೇ ಲೆವೆಲ್ 10ರಲ್ಲಿ ನೇಮಕಾತಿ ಮಾಡಿಕೊಳ್ಳಲು, ಅರ್ಹ ಅಭ್ಯರ್ಥಿಗಳಿಂದ ನಿರ್ದಿಷ್ಟ ಅರ್ಜಿ ನಮೂನೆಯಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ ಎರಡು ವಾರಗಳ ಅವಧಿಯು, ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ. ವಿವರಗಳಿಗಾಗಿ, ದಯವಿಟ್ಟು ವಿಶ್ವವಿದ್ಯಾಲಯದ **www.du.ac.in** ವೆಬ್‌ಸೈಟ್‌ಗೆ ಭೇಟಿ ನೀಡಿ ಮತ್ತು **"ವರ್ಕ್ ವಿದ್ ಡಿಯು"** ಶೀರ್ಷಿಕೆ ಅಡಿಯಲ್ಲಿನ **"ಅಡ್ವರ್ಟೈಸ್‌ಮೆಂಟ್–ಡಿಪಾರ್ಟ್‌ಮೆಂಟ್ಸ್"** ಕ್ಲಿಕ್ ಮಾಡಿರಿ.

ಯಾವುದೇ ಮಾರ್ಪಾಡು/ತಿದ್ದುಪಡಿ ಉಂಟಾದಲ್ಲಿ, ಅಂತಹುದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

CBC 21231/12/0008/2627 — ರಿಜಿಸ್ಟ್ರಾರ್

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಮುಪ್ರವ್ಯ(ತಾಂ)/ಉಪ್ರವ್ಯ(ಪ್ರೊ & ಎಪಿಸಿಸಿ) /ಕಾನಿಇಂ(ಪ್ರೊ)/ಸಕಾನಿಇಂ–2/2026–27/327–337 ದಿನಾಂಕ: 16.04.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಅನ್ವಯ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣೆ ಸಂಖ್ಯೆ ಮತ್ತು ವಿವರ

ವಿಚಾರಣೆ ಸಂಖ್ಯೆ: ಕವಿಪ್ರನಿನಿ/2026-27/IND0297

ಕವಿಪ್ರನಿನಿ **ತಾಂತ್ರಿಕ ನಿರ್ದಿಷ್ಟತೆಗೆ ಅನುಗುಣವಾಗಿ 25 ಸಂಖ್ಯೆಗಳ 20 ಎಂವಿಎ, 110/33–11ಕೆವಿ ವಿದ್ಯುತ್ ಪರಿವರ್ತಕಗಳ ವಿನ್ಯಾಸ, ತಯಾರಿಕೆ, ಪರೀಕ್ಷಿಸುವುದು, ತಪಾಸಣೆ ಮತ್ತು ಸರಬರಾಜು** F.O.R.D ಉಗ್ರಾಣ/ ಪ್ರದೇಶದ ಆಧಾರದಲ್ಲಿ ಇನ್ಶೂರೆನ್ಸ್, ಸಾಗಾಣಿಕೆ ಮತ್ತು ಇಳಿಸುವಿಕೆಯನ್ನು ಒಳಗೊಂಡಂತೆ.

ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **ದಿನಾಂಕ 22.04.2026 ರಂದು 15:00 ಗಂಟೆಗೆ ಅಥವಾ ನಂತರ,** ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ: 22.05.2026ರಂದು 15:00 ಗಂಟೆ.**

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ಪಡೆಯಬಹುದು. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕವಿಪ್ರನಿನಿ, ನಿಗಮ ಕಚೇರಿ, 11ನೇ ಮಹಡಿ, ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560009.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ, ಕೆಐಎಡಿಬಿ ಕೇಂದ್ರ ಕಛೇರಿ, ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001,

ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಮುಖ್ಯಕಡತ/151/2026–27 ದಿನಾಂಕ: 15.04.2026

ವಿಚಾರಣಾ ಸ್ಥಳ ವಿಳಾಸ ತಿದ್ದುಪಡಿ ಸಾರ್ವಜನಿಕ ನೋಟೀಸು

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಜಕ್ಕಸಂದ್ರ, ಶಿವಾರಪಟ್ಟಣ, ರಾಮೇನಹಳ್ಳಿ, ಕಣಿವೇನಹಳ್ಳಿ, ಹುಂಗೇನಹಳ್ಳಿ ಮತ್ತು ವರದೇನಹಳ್ಳಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಒಟ್ಟು 1637.21½ ಎ/ಗುಂ, ಖರಾಬು 490.15½ ಎ/ಗುಂ ಜಾತ 1147–06 ಎ/ಗುಂ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ ಕಲಂ 28(1) ರಡಿ ಸರ್ಕಾರದ ಪ್ರಾಥಮಿಕ ಅಧಿಸೂಚನೆ ಸಂಖ್ಯೆ : ಸಿಐ 79 ಎಸ್‌ಪಿಕ್ಯೂ(ಇ) 2024 ದಿನಾಂಕ: 10.09.2024 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 23.09.2024 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಸಂಬಂಧಪಟ್ಟ ಖಾತಾದಾರರು/ಅನುಭವದಾರರು/ ಹಿತಾಸಕ್ತದಾರರುಗಳಿಗೆ 09.01.2025 ಮತ್ತು 10.01.2025 ರಂದು ವಿಚಾರಣೆಗೆ ಹಾಜರಾಗುವಂತೆ ಪ್ರಾಥಮಿಕ ಅಧಿಸೂಚನೆಯನ್ನು ಪತ್ರಿಕಾ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು ಮತ್ತು ವಿಧಿ 28(2) ರನ್ವಯ ನೋಟೀಸ್ ಜಾರಿ ಮಾಡಲಾಗಿತ್ತು.

ಮುಂದುವರೆದು, ಮತ್ತೊಮ್ಮೆ ವಿಚಾರಣೆಯನ್ನು ನಡೆಸುವ ಅವಶ್ಯಕತೆ ಇರುವುದರಿಂದ ಈ ಕೆಳಕಂಡ ಗ್ರಾಮಗಳಿಗೆ ವಿಚಾರಣೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಆದ್ದರಿಂದ ಸದರಿ ದಿನಾಂಕದಂದು ಸ್ವತ್ತಿನ ಮೇಲೆ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಮತ್ತು ಅಧಿಸೂಚಿತ ಖಾತೆದಾರರುಗಳು ದಾಖಲೆಗಳೊಂದಿಗೆ ವಿಶೇಷ ಭೂಸ್ವಾಧೀನಾಧಿಕಾರಿ–ಕೆಐಎಡಿಬಿ , ಅರವಿಂದ ಭವನ, 5ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು ಈ ವಿಳಾಸದಲ್ಲಿ ವಿಚಾರಣೆಗೆ ಹಾಜರಾಗಬೇಕೆಂದು ದಿನಾಂಕ: 11–04–2026 ರ "ಪ್ರಜಾವಾಣಿ" ಕನ್ನಡ ದಿನ ಪತ್ರಿಕೆ ಹಾಗೂ "ಟೈಮ್ಸ್ ಆಫ್ ಇಂಡಿಯಾ" ಇಂಗ್ಲೀಷ್ ದಿನ ಪತ್ರಿಕೆಗಳ ಮೂಲಕ ಸಾರ್ವಜನಿಕ ನೋಟೀಸ್ ಹೊರಡಿಸಿ ತಿಳಿಸಲಾಗಿತ್ತು. ಸದರಿ ಮೇಲ್ಕಂಡ ವಿಳಾಸದಲ್ಲಿ ವಿಚಾರಣೆ ನಡೆಸುವುದನ್ನು ಖಾತೆದಾರರು / ಭೂಮಾಲೀಕರು ವಿಚಾರಣಾ ವಿಳಾಸವನ್ನು ಬದಲಾಯಿಸಲು ಕೋರಿರುತ್ತಾರೆ ಖಾತೆದಾರರು /ಭೂಮಾಲೀಕರ ಕೋರಿಕೆ ಮೇರೆಗೆ ವಿಳಾಸವನ್ನು ಬದಲಾಯಿಸಿ **ಗ್ರಾಮ ಪಂಚಾಯಿತಿ ಸಮುದಾಯ ಭವನ, ಸೋಮೇಶ್ವರ ದೇವಸ್ಥಾನ ಹತ್ತಿರ, ಶಿವಾರಪಟ್ಟಣ ಗ್ರಾಮ, ಕಸಬಾ ಹೋಬಳಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ** ಇಲ್ಲಿ ವಿಚಾರಣೆ ಕೈಗೊಂಡಿರುವುದರಿಂದ ಈ ಕೆಳಕಂಡ ದಿನಾಂಕಗಳಂದು ವಿಚಾರಣೆಗೆ ಹಾಜರಾಗುವಂತೆ ತಿಳಿಯಪಡಿಸಿದೆ.

ಕ್ರ. ಸಂ.	ಗ್ರಾಮ	ವಿಚಾರಣೆ ನಡೆಯುವ ದಿನಾಂಕ	ಸಮಯ
1	ಹುಂಗೇನಹಳ್ಳಿ ವರದೇನಹಳ್ಳಿ ಜಕ್ಕಸಂದ್ರ,	29.04.2026	ಬೆಳಗ್ಗೆ 11.30 ಗಂಟೆಗೆ
2	ರಾಮೇನಹಳ್ಳಿ,	30.04.2026	ಬೆಳಗ್ಗೆ 11.30 ಗಂಟೆಗೆ
3	ಕಣಿವೇನಹಳ್ಳಿ,	05.05.2026	ಬೆಳಗ್ಗೆ 11.30 ಗಂಟೆಗೆ
4	ಶಿವಾರಪಟ್ಟಣ,	07.05.2026	ಬೆಳಗ್ಗೆ 11.30 ಗಂಟೆಗೆ

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ,
ಕೆಐಎಡಿಬಿ ಕೇಂದ್ರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸ್ಪ್ರಹಾಗೆ ಶೇ 97 ಅಂಕ

ಬೆಂಗಳೂರು: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ನಗರದ ದೀಕ್ಷಾ ವೇದಾಂತು ಜ್ಯುಡಿಷಿಯಲ್ ಲೇಔಟ್‌ನ ದೀಕ್ಷಾ ಸಿಎಫ್‌ಎಲ್ ಕಾಲೇಜಿನ ವಿದ್ಯಾರ್ಥಿನಿ ಸ್ಪ್ರಹಾ ಹೂಗಾರ್ ಶೇಕಡ 97ರಷ್ಟು ಅಂಕ ಗಳಿಸಿದ್ದಾರೆ

ಸ್ಪ್ರಹಾ

'ವಚನ: ಹಳಕಟ್ಟಿ ಕೊಡುಗೆ ಸ್ಮರಣೀಯ'

ಬೆಂಗಳೂರು: 'ಕನ್ನಡದ ಸಾಹಿತ್ಯ ಪರಂಪರೆಯಲ್ಲಿ ವಚನಗಳಿಗೆ ಅಗ್ರ ಸ್ಥಾನವಿದೆ. ತಾಳೆಗರಿ ಮತ್ತು ಹಸ್ತಪ್ರತಿಗಳಲ್ಲಿ ಉಳಿದಿದ್ದ ವಚನಗಳನ್ನು ಸಂಗ್ರಹಿಸಿ, ಅವುಗಳನ್ನು ಕನ್ನಡಿಗರಿಗೆ ಸಮರ್ಪಕವಾಗಿ ತಲುಪಿಸುವಲ್ಲಿ ಫ.ಗು. ಹಳಕಟ್ಟಿ ಅವರ ಸೇವೆ ಸ್ಮರಣೀಯ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಕನ್ನಡ ಮುದ್ರಣಾಲಯಗಳ ಇತಿಹಾಸ ಸಂಶೋಧನಾ ಕೇಂದ್ರವು ಹೊರತಂದಿರುವ ಫ.ಗು.ಹಳಕಟ್ಟಿ ಅವರ ಕುರಿತಾದ 'ಮುದ್ರಣ ಗುಮ್ಮಟ' ಕೃತಿಯನ್ನು ಶುಕ್ರವಾರ ಜನಾರ್ಪಣೆ ಮಾಡಿ ಅವರು ಮಾತನಾಡಿದರು. 'ಹಳಕಟ್ಟಿಯವರ ತ್ಯಾಗ ಮತ್ತು ಸಾಹಿತ್ಯ ಸೇವೆಯನ್ನು ಈ ಕೃತಿ ಸಮಗ್ರವಾಗಿ ದಾಖಲಿಸಿದೆ' ಎಂದು ಹೇಳಿದರು.

'ವಚನಗಳನ್ನು ಸಂಗ್ರಹಿಸಿದ್ದು ಮಾತ್ರವಲ್ಲ. ಹಳಕಟ್ಟಿ ಅವರು, ಅವುಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿ ಜನಸಾಮಾನ್ಯರಿಗೆ ತಲುಪಿಸಿದರು. ಅದಕ್ಕಾಗಿ ಮುದ್ರಣ ಯಂತ್ರವನ್ನು ಖರೀದಿಸಲು ತಮ್ಮ ಮನೆಯನ್ನೇ ಮಾರಾಟ ಮಾಡಿದ್ದರು. ಬಸವನನಾಡಿಗೆ ಮುದ್ರಣ ಯಂತ್ರವನ್ನು ಪರಿಚಯಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ' ಎಂದರು.

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಆಸ್ತಿಯನ್ನು **ಶ್ರೀಮತಿ ಚಂದ್ರಮತಿ ಎಂ.,** ಶ್ರೀ ಬೀರೂರು ರುದ್ರಪ್ಪ ಉಮಾಕಾಂತ್‌ರವರ ಪತ್ನಿ, ನಂ.4, ಬಸವ ನಿವಾಸ, 9ನೇ ಮುಖ್ಯ ರಸ್ತೆ, 5ನೇ ಬ್ಲಾಕ್, ಜಯನಗರ, ಬೆಂಗಳೂರು–560011 ಹಾಗು ಪ್ರಸ್ತುತ ನಂ.232, 2ನೇ 'ಡಿ' ಕ್ರಾಸ್ ರಸ್ತೆ, 6ನೇ ಮೈನ್, 3ನೇ ಸ್ಟೇಜ್, 3ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು ಉತ್ತರ, ಬೆಂಗಳೂರು – 560079 ಇಲ್ಲಿ ವಾಸಿಸುತ್ತಿರುವ ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಸದರಿಯವರು ಷೆಡ್ಯೂಲ್ ಭೂಮಿಯನ್ನು ತಮ್ಮ ಮಾರಾಟಗಾರರಾದ ಶ್ರೀಮತಿ ಉಮಾ ರಾಜೇ ಪಾಟೀಲ್ ಅವರಿಂದ ಎರಡು ಪ್ರತ್ಯೇಕ ಕ್ರಯ ಪತ್ರದಂತೆ ಖರೀದಿಸಿರುವುದಾಗಿ ಹೇಳುತ್ತಿದ್ದಾರೆ (1) ದಿನಾಂಕ 19/06/2000ರ ಕ್ರಯ ಪತ್ರ ಇದು ಕೆಂಗೇರಿಯ ಹಿರಿಯ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ದಸ್ತಾವೇಜು ನಂ.2561 /2000–01 ಎಂದು ನೋಂದಾಯಿ ತವಾಗಿದ್ದು, ಬುಕ್–1, ಸಂಪುಟ 1948 ಮತ್ತು ಪುಟಗಳು 84 ರಿಂದ 91ರಲ್ಲಿ ಶೇಖರವಾಗಿದೆ ಮತ್ತು (2) ದಿನಾಂಕ 19/06/2000ರ ಕ್ರಯ ಪತ್ರ ಇದು ಕೆಂಗೇರಿಯ ಹಿರಿಯ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ದಸ್ತಾವೇಜು ನಂ.2570/2000–01 ಎಂದು ನೋಂದಾಯಿತವಾಗಿದ್ದು, ಬುಕ್–1, ಸಂಪುಟ 1948 ಮತ್ತು ಪುಟಗಳು 154 ರಿಂದ 161ರಲ್ಲಿ ಶೇಖರವಾಗಿದೆ. ಉದ್ದೇಶಿತ ಮಾರಾಟವನ್ನು ವಿರೋಧಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಈ ಕೆಳಗಿನ ಆಸ್ತಿಯ ಮೇಲೆ ತಮ್ಮ ಹಕ್ಕು, ಆಸಕ್ತಿ, ಮಾಲೀಕತ್ವ ಅಥವಾ ಯಾವುದೇ ರೀತಿಯ ಹಕ್ಕುಗಳು ಅಥವಾ ಕ್ಲೇಮ್‌ಗಳು ಅಥವಾ ಇತರೆ ರೀತಿಯ ಒಪ್ಪಂದಗಳು ಏನಾದರೂ ಇದ್ದಲ್ಲಿ ಅಂತಹ ಯಾವುದೇ ವ್ಯಕ್ತಿಗಳು ಅವನ/ಅವಳ/ಅವರ ಆಕ್ಷೇಪಣೆಗಳು ಮತ್ತು / ಅಥವಾ ಕ್ಲೇಮ್‌ಗಳನ್ನು ಈ ಪ್ರಕಟಣೆಯ ದಿನಾಂಕದಿಂದ ಹತ್ತು (10) ದಿನಗಳ ಒಳಗಾಗಿ ಬೆಂಬಲಿಸುವ ಸಾಕ್ಷ್ಯಾಧಾರ ದಾಖಲೆಗಳೊಂದಿಗೆ ಕೆಳ ಸಹಿದಾರರಿಗೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲೆ ತಿಳಿಸಲಾದ ಷೆಡ್ಯೂಲ್ ಆಸ್ತಿಯ ಹಕ್ಕುಗಳು ನಿಖರವಾಗಿದೆ ಮತ್ತು ಷೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕುಗಳು, ಹಿತಾಸಕ್ತಿ ಇಲ್ಲವೆಂದು ತಿಳಿಯಲಾಗುವುದು. ಈ ಪ್ರಕಟಣೆಯ ದಿನಾಂಕದಿಂದ ಹತ್ತು (10) ದಿನಗಳ ಒಳಗಾಗಿ ಹಕ್ಕುಗಳು ಅಥವಾ ಆಕ್ಷೇಪಣೆಗಳು ಬರದಿದ್ದಲ್ಲಿ ಅಂತಹ ಆಕ್ಷೇಪಣೆಗಳು ಪ್ರಜ್ಞಾಪೂರ್ವಕವಾಗಿ ಮನ್ನಾ ಮಾಡಲಾಗಿದೆ ಅಥವಾ ಕೈಬಿಡಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿಸುವುದಿಲ್ಲ ಮತ್ತು ನನ್ನ ಕಕ್ಷಿದಾರರು ಯಾವುದೇ ಹಕ್ಕುಗಳು / ಆಕ್ಷೇಪಣೆಗಳು ಇರುವುದಿಲ್ಲವೆಂಬ ರೀತಿಯಲ್ಲಿ ಈ ಕೆಳಗಿನ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಮುಂದುವರೆಯುವರು.

: ಷೆಡ್ಯೂಲ್:

ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಿ ಗ್ರಾಮದ ಸರ್ವೆ ನಂ.184ರಲ್ಲಿನ (ಈ ಹಿಂದೆ ಸರ್ವೆ ನಂ.186, ಹಳೆಯ ಸರ್ವೆ ನಂ.113/23 ಎಂದು ಗುರುತಿಸಲಾಗುತ್ತಿತ್ತು) 04 ಎಕರೆ 00 ಗುಂಟೆ ವಿಸ್ತೀರ್ಣದ ಭೂಮಿ ಇದರ ಚಕ್ಕುಬಂದಿ:–

ಪೂರ್ವಕ್ಕೆ : ಶ್ರೀ ಎ.ಎಸ್ ತೇಜಸ್ ಅವರಿಗೆ ಸೇರಿದ ಸರ್ವೆ ನಂ.149ರಲ್ಲಿನ ಆಸ್ತಿ;
ಪಶ್ಚಿಮಕ್ಕೆ : ಶ್ರೀ ಮಲ್ಲೇಶಪ್ಪ ಅವರಿಗೆ ಸೇರಿದ ಸರ್ವೆ ನಂ.113 ರಲ್ಲಿನ ಆಸ್ತಿ;
ಉತ್ತರಕ್ಕೆ : ಶ್ರೀ ಎ.ಆರ್. ಶ್ರೀನಿವಾಸ್ ಅವರಿಗೆ ಸೇರಿದ ಸರ್ವೆ ನಂ.113ರಲ್ಲಿನ ಆಸ್ತಿ; ಮತ್ತು
ದಕ್ಷಿಣಕ್ಕೆ : ರಸ್ತೆ ಮತ್ತು ಸರ್ವೆ ನಂ.113ರಲ್ಲಿನ ಆಸ್ತಿ.

ಶ್ರೀ ಕುಸುಮ ಆರ್ ಮುನಿರಾಜು,
ಶ್ರೀ ಕುಸುಮ ಕೌಶಿಕ್,
ವಕೀಲರು,
ನಂ.101, ಈಡನ್ ಪಾರ್ಕ್, ನಂ.20,
ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು-560 001.
ಫೋನ್: 080 - 22217971

ಬೆಂಗಳೂರು ದಿನಾಂಕ: 17/04/2026

ಸಿಬಿಎಸ್‌ಇ ಫಲಿತಾಂಶ

ರಾಜರಾಜೇಶ್ವರಿ ನಗರ: ಬೆಂಗಳೂರು ದಕ್ಷಿಣ ತಾಲ್ಲೂಕು ರಾಮೋಹಳ್ಳಿ ವಿನಾಯಕನಗರದ ವಿ.ಆರ್.ಇಂಟರ್ ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳು ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದ್ದಾರೆ. ಎಸ್. ಬಿ.ತೇಜಲ್ ಶೇ 95 ಅಂಕಗಳನ್ನು ಪಡೆದಿದ್ದಾರೆ.

ತೇಜಲ್ ಎಸ್. ಬಿ

ಶಾಲೆಯ 15 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. 21 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿ.ಆರ್. ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರು, ಪ್ರಾಂಶುಪಾಲರು, ಉಪ ಪ್ರಾಂಶುಪಾಲರು ಮತ್ತು ಶಾಲೆಯ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

ನಿಧನ ವಾರ್ತೆ

ಮುಕುಂದ ಅಭಯಂಕರ್

ಬೆಂಗಳೂರು: ಕಾಸ್ಮೋಸ್ ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಡಾ.ಮುಕುಂದ್ ಅಭಯಂಕರ (89) ಅವರು ಗುರುವಾರ ನಿಧನರಾದರು.

ಅವರು ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.

ಕಾಸ್ಮೋಸ್ ಬ್ಯಾಂಕ್‌ಗೆ 9 ಬಾರಿ ಅಧ್ಯಕ್ಷರಾಗಿದ್ದ ಅವರ ಬ್ಯಾಂಕ್ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಎನ್‌ಎಫ್‌ಸಿಯುಬಿ ಅಧ್ಯಕ್ಷರಾಗಿ, ರಿಸರ್ವ್ ಬ್ಯಾಂಕ್‌ನ ವಿವಿಧ ಸಮಿತಿಗಳ ಸಕ್ರಿಯ ಸದಸ್ಯರಾಗಿ ಮತ್ತು ಪುಣೆ ವಿಶ್ವವಿದ್ಯಾಲಯದ ಡೀನ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಕಾಸ್ಮೋಸ್ ಬ್ಯಾಂಕ್ ಮುಖ್ಯ ಕಚೇರಿಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ ಅಂತ್ಯಸಂಸ್ಕಾರ ನೆರವೇರಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES

Accommodation Available

Flats

APARTMENT FOR Rent. Two bedroom, Noris Road. Richmond Town. Contact:- 9844126689/ 9844313881.

OTHERS

For Sale

FOR SALE: Restaurant/ Hotel closing down, accessories like Commercial Kitchen exhaust hood, Grinders and vessels, LPG Stoves, etc available for sale. Contact 9108012898

PERSONAL

Change of Name

CHANGE OF NAME
I, **Roseline Shanthi Michael Nathan @ Roseline Shanthi** R/at No. 4/1, John Armstrong Road, Richards Town, St Thomas Town Post, Bangalore North, Bengaluru-560084, declare that the above names pertain to me only & henceforth I shall be known as **ROSELINE SHANTHI** vide affidavit dated 16-04-2026 before notary Y.R. Chandrasekar, Bengaluru.

I, KAILAS DEVIDASRAO BENDRIKAR, S/o Devidasrao Bendrikar, Residing at: E103,1st Floor, E Block,Mera Homes,Near ShellPetrol Bunk, Seegehalli,Bengaluru-560067. Have Changed my Name KAILAS DEVIDASRAO BENDRIKAR to KAILAS DEVIDAS BENDRIKAR. In all future correspondence & transactions i will use my name as KAILAS DEVIDAS BENDRIKAR only, Vide affidavit Dated:10.04.2026 before Notary K.V.Mani,Bangalore

CHANGE OF NAME
We, **Nitha Lakshmi S** and **Abhilash B.S,** residing at No. 306, 3rd Floor, SSK Paradise, Chennamanakere, Kathriguppe, Banashankari 3rd Stage, Bengaluru - 560085, have changed our minor daughter's name from **ANANYA A GOWDA** to **HITHANSHI GOWDA A** vide affidavit dated 11-03-2026 before notary L. Puttaraju, Bengaluru

I, NAVYA G, residing at G31, Chitrakut Century Apartment, Sahakarnagar, Behind Blytons Restaurant, Bangalore-560092 have changed my name to NAVVYA V RANGANATHAN vide affidavit dated 16-04-2026 before Notary A.R.Muneer Ahmed, Bangalore.

MORE Classifieds IN SUPPLEMENT

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

prajavani.net prajavani
ಶನಿವಾರ, ಏಪ್ರಿಲ್ 18, 2026 | ಬೆಂಗಳೂರು | ₹ 7.00
www.prajavani.net

ಒಡವೆಯ ಸಂಭ್ರಮ
ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಮಹಾಲಕ್ಷ್ಮಿಪುರ 2ನೇ ಹಂತದಲ್ಲಿ ಜೋಯಾಲುಕ್ಕಾಸ್ ನೂತನ ಮಳಿಗೆ ಉದ್ಘಾಟನೆಯಲ್ಲಿ ಆಭರಣ ಧರಿಸಿದ್ದ ರೂಪದರ್ಶಿ ಕಂಡಿದ್ದು ಹೀಗೆ...

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಿನಿ ಅಕಾಡೆಮಿ ಅವಾರ್ಡ್
ಮುಂಬೈನಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಸಿನಿ ಅಕಾಡೆಮಿ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ನಟ ಕಮಲ್ ಹಾಸನ್, ನಟಿ ಶ್ರುತಿ ಹಾಸನ್ ಫೋಟೊಗೆ ಪೋಸ್ ನೀಡಿದರು

ಬೆಂಗಳೂರಿನಲ್ಲಿ ಹಕ್ಕಿ ಜ್ವರ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಹೊರವಲಯದ ಹೆಸರಘಟ್ಟದ ಮುತ್ತೂರು ಗ್ರಾಮದ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಹಕ್ಕಿ ಜ್ವರ ಪ್ರಕರಣ ದೃಢಪಟ್ಟಿದೆ.

ಈ ಕೇಂದ್ರದ ಕೋಳಿಯೊಂದರಲ್ಲಿ ಎಚ್ 5 ಎನ್1 ಸೋಂಕು ಕಾಣಿಸಿಕೊಂಡಿರುವುದನ್ನು ಭೋಪಾಲ್‌ನ ಐಸಿಎಆರ್–ರಾಷ್ಟ್ರೀಯ ಅಧಿಕ ಸುರಕ್ಷತೆಯ ಪ್ರಾಣಿ ರೋಗಗಳ ಸಂಸ್ಥೆ (ಎನ್ಐಎಚ್ಎಸ್ಎಡಿ) ಇದೇ 14ರಂದು ದೃಢಪಡಿಸಿದೆ. ರಾಜ್ಯ ಮತ್ತು ಜಿಲ್ಲಾ ಕ್ಷಿಪ್ರ ಕಾರ್ಯಪಡೆ ತಂಡ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡವು ಸ್ಥಳಕ್ಕೆ ಭೇಟಿ ನೀಡಿ, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಮುತ್ತೂರು ಗ್ರಾಮದ 3 ಕಿ.ಮೀ ವ್ಯಾಪ್ತಿಯನ್ನು ಸೋಂಕಿತ ವಲಯವೆಂದು ಘೋಷಿಸಿ, 10 ಕಿ.ಮೀ ಪ್ರದೇಶವನ್ನು ಕಣ್ಗಾವಲು ವಲಯವೆಂದು ಗುರುತಿಸಲಾಗಿದೆ.

▶3

ಶಾಸಕ ವಿನಯಗೆ ಜೀವಾವಧಿ

ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣ ಶಿಕ್ಷೆ ಪ್ರಕಟಿಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಅಪರಾಧಿಯಾಗಿರುವ, ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೇರಿದಂತೆ ಪ್ರಕರಣದ 16 ತಪ್ಪಿತಸ್ಥರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಜೀವಾವಧಿ ಮತ್ತು ಇನ್ನೊಬ್ಬ ಅಪರಾಧಿಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಪ್ರಕರಣದ ಒಟ್ಟು 21 ಅಪರಾಧಿಗಳಲ್ಲಿ ವಿನಯ ಕುಲಕರ್ಣಿ ಸೇರಿದಂತೆ 17 ಆರೋಪಿಗಳನ್ನು ಅಪರಾಧಿಗಳು ಎಂದು ತೀರ್ಮಾನಿಸಿದ್ದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶುಕ್ರವಾರ ಸಂಜೆ ಶಿಕ್ಷೆಯ ಪ್ರಮಾಣವನ್ನು ತೆರೆದ ನ್ಯಾಯಾಲಯದಲ್ಲಿ ಓದಿದರು.

ಅಪರಾಧಿಗಳನ್ನು ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 302 (ಕೊಲೆ), 201 (ಅಪರಾಧದ ಸಾಕ್ಷ್ಯ ನಾಶ), 143 (ಐವರು ಅಥವಾ ಅದಕ್ಕಿಂತ ಹೆಚ್ಚು ಜನ ಸೇರಿ ಕಾನೂನುಬಾಹಿರ ಕೃತ್ಯ ಎಸಗುವುದು) 120 ಬಿ (ಕ್ರಿಮಿನಲ್ ಪಿತೂರಿ) ಅಡಿಯಲ್ಲಿ ಶಿಕ್ಷೆಗೆ ಒಳಪಡಿಸಲಾಗಿದೆ.

16 ಜನರಿಗೆ ಜೀವಾವಧಿ: ವಿನಯ ಕುಲಕರ್ಣಿ, ವಿಕ್ರಂ ಬಳ್ಳಾರಿ, ಕೀರ್ತಿ ಕುಮಾರ್, ಬಸವರಾಜ ಕುರಹಟ್ಟಿ, ಸಂದೀಪ್ ಸವದತ್ತಿ, ವಿನಾಯಕ ಕಟಗಿ, ಮಹೇಶ್ವರ ಹೊಂಗಲ್ ಅಲಿಯಾಸ್ ಮುದುಕ, ಸಂತೋಷ ಸವದತ್ತಿ, ಎಂ.ದಿನೇಶ್, ಅಶ್ವತ್ಥ, ಸುನಿಲ್, ನಜೀರ್ ಅಹಮದ್, ಶಹನವಾಜ್, ನೂತನ್, ಹರ್ಷಿತ ಮತ್ತು ಚಂದ್ರಶೇಖರ ಇಂಡಿ ಇವರಿಗೆ ಜೀವಾವಧಿ ಶಿಕ್ಷೆ ಹಾಗೂ 18ನೇ ಆರೋಪಿ ವಿಕಾಸ ಕಲಬುರಗಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಎಲ್ಲ ಅಪರಾಧಿಗಳಿಗೆ ಐಪಿಸಿಯ ವಿವಿಧ ಕಲಂಗಳ ಅಡಿಯಲ್ಲಿ ದಂಡವನ್ನೂ ವಿಧಿಸಲಾಗಿದ್ದು, ‘ಅಪರಾಧಿಗಳು ಪಾವತಿಸುವ ದಂಡದ ಒಟ್ಟು ಮೊತ್ತದಲ್ಲಿ ₹16 ಲಕ್ಷ ಮೊತ್ತವನ್ನು ಮೃತ ಯೋಗೀಶ್‌ಗೌಡ ಗೌಡರ್ ಮಕ್ಕಳು ಮತ್ತು ಅವರ ಅಣ್ಣನಾದ ಗುರುನಾಥ ಗೌಡರ್‌ಗೆ ಪಾವತಿಸಬೇಕು. ಉಳಿದ ಹಣ ಸರ್ಕಾರಕ್ಕೆ ಸೇರಬೇಕು’ ಎಂದು ಆದೇಶಿಸಲಾಗಿದೆ.

19ನೇ ಆರೋಪಿ ಚೆನ್ನಕೇಶವ ಟಿಂಗರೀಕರ್ ಹಾಗೂ 20ನೇ ಆರೋಪಿ ವಾಸುದೇವ ರಾಮ ನಿಲೇಕಣಿ ಅವರನ್ನು ಭ್ರಷ್ಟಾಚಾರ ತಡೆ ಕಾಯ್ದೆ–1988ರ ಕಲಂ 7, 13(1)(ಡಿ) ಜತೆಗೆ 13(2)ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ಖುಲಾಸೆಗೊಳಿಸಲಾಗಿದೆ.

ಅಪರಾಧಿಗಳಿಗೆ ವಿಧಿಸಲಾಗಿರುವ ಶಿಕ್ಷೆಗಳೆಲ್ಲ ಏಕಕಾಲದಲ್ಲಿ ಜಾರಿಯಾಗಲಿವೆ. ಅಪರಾಧಿಗಳೆಲ್ಲರೂ ವಿಚಾರಣಾಧೀನ ಕೈದಿಯಾಗಿ ಅನುಭವಿಸಿದ ಬಂಧನದ ಅವಧಿಯು ಜೈಲು ಶಿಕ್ಷೆಯಿಂದ ಕಡಿತಗೊಳ್ಳಲಿದೆ.

ಪ್ರಕರಣದಲ್ಲಿ ಮೊದಲು ಮಾಫಿ ಸಾಕ್ಷಿಯಾಗಿ ನಂತರ ಪ್ರತಿಕೂಲ ಸಾಕ್ಷ್ಯ ನುಡಿದಿದ್ದ 17ನೇ ಆರೋಪಿ ಶಿವಾನಂದ ಶ್ರೀಶೈಲ ಬಿರಾದಾರ್ ವಿರುದ್ಧ ವಿಚಾರಣೆಗೆ ಅನುಮತಿ ಕೋರಿ ಅಗತ್ಯ ಅರ್ಜಿ ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ನ್ಯಾಯಾಲಯ ಅವಕಾಶ ಕಲ್ಪಿಸಿದೆ.

ಇನ್ನಷ್ಟು ಸುದ್ದಿಗಳು ▶8

ಶಾಸಕ ಸ್ಥಾನದಿಂದ ವಿನಯ ಅನರ್ಹ

ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರು ಶಾಸಕ ಸ್ಥಾನದಿಂದ ಅನರ್ಹಗೊಳ್ಳಲಿದ್ದಾರೆ.

ಶಿಕ್ಷೆಗೆ ಗುರಿಪಡಿಸಿದ ತೀರ್ಪಿನ ಪ್ರತಿ ಸಿಕ್ಕಿದ ತಕ್ಷಣವೇ ವಿಧಾನಸಭೆ ಸಚಿವಾಲಯವು ವಿನಯ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುತ್ತದೆ. ಒಂದು ವೇಳೆ, ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ, ತಡೆಯಾಜ್ಞೆ ಸಿಕ್ಕಿದರೆ ಅನರ್ಹತೆ ಆದೇಶ ಹಿಂಪಡೆಯಲು ಅವಕಾಶವಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ವಿನಯ ಕುಲಕರ್ಣಿ

ಹೊತ್ತಿ ಉರಿದ ಕಾರು– ಬಸ್ • ನಾಲ್ವರು ಸಜೀವ ದಹನ

ಮಕ್ಕಳು ಸೇರಿ 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಯಾದಗಿರಿ: ಸುರಪುರ ತಾಲ್ಲೂಕಿನ ಶಾಂತಪುರ ಕ್ರಾಸ್ ಬಳಿ ಶುಕ್ರವಾರ ಕಾರು ಹಾಗೂ ವಿಆರ್‌ಎಲ್ ಬಸ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ನಾಲ್ವರು ಮಕ್ಕಳು ಸೇರಿ ಒಂದೇ ಕುಟುಂಬದ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಅಪಘಾತದ ತೀವ್ರತೆಯಿಂದಾಗಿ ಕಾರು ಹಾಗೂ ಬಸ್ ಸುಟ್ಟು ಕರಕಲಾಗಿವೆ.

ಕಾರಿನಲ್ಲಿ ಪ್ರಯಾಣಿಸುತ್ತಿದ್ದ ರಾಯಚೂರು ಜಿಲ್ಲೆಯ ಸಿರವಾರ ಪಟ್ಟಣ ಪಂಚಾಯಿತಿ ಸದಸ್ಯ ಕೃಷ್ಣ ನಾಯಕ್ (52), ಅವರ ಪತ್ನಿ ಅನಂತಾ ಕಲಾ ಕೃಷ್ಣ (45), ಮಗಳು ನಿಸರ್ಗಾ ಶರಣಪ್ಪ(30), ಅಂಬೇಡ್ಕರ್ ಅಭಿವೃದ್ಧಿ ನಿಗಮದ ರಾಯಚೂರು ತಾಲ್ಲೂಕು ಅಧಿಕಾರಿ ಶರಣಪ್ಪ (36), ಮೊಮ್ಮಕ್ಕಳಾದ ವೈಷ್ಣವ್ (5), ಶ್ರೀನಿಧಿ (ಒಂದೂವರೆ ವರ್ಷ), ಅದ್ವಿಕ್ (5), ಶಶಿಕಲಾ(30) ಮತ್ತು ಅವರ ಪುತ್ರಿ ಚಂದನ (8) ಮೃತಪಟ್ಟಿದ್ದಾರೆ. ಶಶಿಕಲಾ ಅವರ ಪುತ್ರ ವಿರಾಟ್ ಅದೃಷ್ಟವಶಾತ್ ಬದುಕಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಸುರಪುರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಸುರಪುರ ತಾಲ್ಲೂಕಿನ ಶಾಂತಪುರ ಕ್ರಾಸ್ ಸಮೀಪ ಸಂಭವಿಸಿದ ಅಪಘಾತದಲ್ಲಿ ಸುಟ್ಟು ಕರಕಲಾದ ಕಾರು ಹಾಗೂ ವಿಆರ್‌ಎಲ್ ಬಸ್

‘ಕೃಷ್ಣ ಅವರು ಕಾರಿನಲ್ಲಿ ಕುಟುಂಬ ಸಮೇತ ಸುರಪುರದಲ್ಲಿನ ವೇಣು ಗೋಪಾಲಸ್ವಾಮಿಯ ದರ್ಶನ ಪಡೆದು ಸಿರವಾರಕ್ಕೆ ವಾಪಸ್ ತೆರಳುತ್ತಿದ್ದರು. ಕಾರು ಚಲಾಯಿಸುತ್ತಿದ್ದ ಶರಣಪ್ಪ ಅವರು ಶಾಂತಪುರ ಕ್ರಾಸ್ ಸಮೀಪದ ರಸ್ತೆಯಲ್ಲಿ ವಾಹನವೊಂದನ್ನು ಹಿಂದಿಕ್ಕುವ ಭರದಲ್ಲಿ ಬೆಂಗಳೂರಿನಿಂದ ಕಲಬುರಗಿಯತ್ತ ಹೊರಟಿದ್ದ ವಿಆರ್‌ಎಲ್ ಬಸ್‌ಗೆ ಡಿಕ್ಕಿ ಹೊಡೆದಿದ್ದರಿಂದ ಅವಘಡ ಸಂಭವಿಸಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರು ಡಿಕ್ಕಿ ಹೊಡೆದಿದ್ದರಿಂದ ಬಸ್‌ನ ಮುಂಭಾಗದಲ್ಲಿ ಬೆಂಕಿ ಕಾಣಿಸಿಕೊಂಡು ಬಳಿಕ ಕಾರಿಗೂ ವ್ಯಾಪಿಸಿದೆ. ಕಾರಿನ ಮುಂದಿನ ಸೀಟ್‌ನಲ್ಲಿ ಕುಳಿತಿದ್ದ ಕೃಷ್ಣ ನಾಯಕ್, ಶರಣಪ್ಪ, ಚಂದನ ಮತ್ತು ಶ್ರೀನಿಧಿ ಸುಟ್ಟು ಕರಕಲಾಗಿದ್ದಾರೆ. ಕಾರಿನಲ್ಲಿದ್ದ ಉಳಿದವರು ಡಿಕ್ಕಿಯಿಂದಾದ ಪೆಟ್ಟು, ಬೆಂಕಿಯಿಂದ ಸುಟ್ಟ ಗಾಯಗಳಿಂದಾಗಿ ಮೃತಪಟ್ಟಿದ್ದಾರೆ. ಬಸ್‌ನಲ್ಲಿದ್ದ 20 ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ’ ಎಂದು ಮಾಹಿತಿ ನೀಡಿದರು.

ಮನೆಯೊಳಗೆ ಸೇರಿದ್ದ ಚಿರತೆ ಸೆರೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಸಿದ್ದಾರ್ಥ ನಗರ ಬಡಾವಣೆಯಲ್ಲಿ ವಿನಯ ಮಾರ್ಗದ ನಿವಾಸಿ ಸುರೇಶ್ ಅವರ ಮನೆಯೊಳಗೆ ನುಸುಳಿ, ಅವರ ತಾಯಿ ಮಲಗಿದ್ದ ಮಂಚದ ಕೆಳಗೆ ಅವಿತಿದ್ದ ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದು, ಕಾಡಿಗೆ ಸೇರಿಸುವಲ್ಲಿ ಯಶಸ್ವಿಯಾದರು.

ಬಡಾವಣೆಯಲ್ಲಿ ಚಿರತೆ ಕಂಡುಬಂದಿದ್ದರಿಂದ, ಜನರು ಎಚ್ಚರದಿಂದಿರುವಂತೆ ಶುಕ್ರವಾರ ಮುಂಜಾನೆಯೇ ಇಲಾಖೆಯು ಸೂಚನೆ ನೀಡಿತ್ತು. ಈ ನಡುವೆ, ಬೆಳಿಗ್ಗೆ ಮನೆಯೊಳಗೆ ಚಿರತೆ ಸೇರಿಕೊಂಡಿದೆ ಎಂದು ಸುರೇಶ್ ಮಾಹಿತಿ ನೀಡಿದರು. ಅಧಿಕಾರಿಗಳು ಹಾಗೂ ಎಲ್‌ಟಿಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿ 3 ರಿಂದ 4 ವರ್ಷದ ಗಂಡು ಚಿರತೆಯನ್ನು ಸೆರೆ ಹಿಡಿದರು.

ಸುರೇಶ್ ಅವರ ತಾಯಿ ಮಲಗಿದ್ದ ಮಂಚದ ಕೆಳಗೆ ಅವಿತಿದ್ದ ಚಿರತೆಯನ್ನು ನೋಡಿ ಮನೆಕೆಲಸದ ಮಹಿಳೆ ಬೆಚ್ಚಿಬಿದ್ದರು. ಅವರನ್ನು ಹೊರಗೆ ಕರೆತಂದ ಬಳಿಕ ಬಾಗಿಲು ಮುಚ್ಚಿ ಇಲಾಖೆಗೆ ಮಾಹಿತಿ ನೀಡಿದರು..

ಎಸಿಎಫ್ ರವೀಂದ್ರ ಹಾಗೂ ಚಾಮರಾಜೇಂದ್ರ ಮೃಗಾಲಯದ ಪಶು-ವೈದ್ಯಾಧಿಕಾರಿ ಶಶಿಕುಮಾರ್ ನೇತೃತ್ವದಲ್ಲಿ ಎಲ್‌ಟಿಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಕಿಟಕಿ ಬಳಿಯಿಂದ ಎರಡು ಬಾರಿ ಅರವಳಿಕೆ ಚುಚ್ಚುಮದ್ದು ನೀಡಿದ ಬಳಿಕ ಮನೆಯೊಳಗೆ ತೆರಳಿ, ಚಿರತೆ ಸೆರೆ ಹಿಡಿದು ಬೋನಿನಲ್ಲಿರಿಸಿ ಕೊಂಡೊಯ್ದರು.

‘ವಾಹನಗಳಿಗೆ ಹೆದರಿ ಮನೆ ಸೇರಿರಬಹುದು’

‘ಚಿರತೆಯು ವರಕೋಡು ಅಥವಾ ಚಾಮುಂಡಿಬೆಟ್ಟದ ಭಾಗದಿಂದ ದಾರಿ ತಪ್ಪಿ ಜನವಸತಿ ಪ್ರದೇಶಕ್ಕೆ ಬಂದಿರಬಹುದು. ವಾಹನಗಳು ಅಡ್ಡ ಬಂದ ವೇಳೆ, ಬಾಗಿಲು ತೆರೆದಿದ್ದರಿಂದ ಮನೆಯೊಳಕ್ಕೆ ಬಂದಿರಬಹುದು’ ಎಂದು ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಪರಮೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅರಣ್ಯ ಇಲಾಖೆಯು ಸೆರೆ ಹಿಡಿದ ಗಂಡು ಚಿರತೆ ಪ್ರಜಾವಾಣಿ ಚಿತ್ರ

‘ಚಿರತೆಯನ್ನು ಸೆರೆ ಹಿಡಿದ ಬಳಿಕ ಎನ್‌ಎಫ್‌ಸಿಎ (ನಿಯಮಾವಳಿಯಂತೆ ಪಶು ವೈದ್ಯಾಧಿಕಾರಿಗಳಿಂದ ಆರೋಗ್ಯ ತಪಾಸಣೆ ನಡೆಸಲಾಯಿತು. ಅವರ ಶಿಫಾರಸಿನ ಮೇರೆಗೆ ಮತ್ತೆ ಅರಣ್ಯಕ್ಕೆ ಬಿಡಲಾಯಿತು’ ಎಂದರು.

ಐದು ಪಾಲಿಕೆಗಳ ಚುನಾವಣೆ: ಆಯೋಗಕ್ಕೆ ರಾಜ್ಯ ಸರ್ಕಾರದಿಂದ ಮನವಿ

ಸೆ. 30ರವರೆಗೆ ಅವಧಿ ವಿಸ್ತರಿಸಲು ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಗೆ ಕಾಲಮಿತಿಯನ್ನು ವಿಸ್ತರಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸರ್ಕಾರ ಪತ್ರ ಬರೆದಿದೆ.

ಮುಖ್ಯ ಕಾರ್ಯದರ್ಶಿಯವರಿಗೆ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರು ಬರೆದಿರುವ ಪತ್ರವನ್ನು ಉಲ್ಲೇಖಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಜಗದೀಶ್ ಅವರು, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿ ಎಸ್. ಹೊನ್ನಾಂಬ ಅವರಿಗೆ ಏಪ್ರಿಲ್ 15ರಂದು ಪತ್ರ ಬರೆದು, ನಗರ ಪಾಲಿಕೆಗಳ ಚುನಾವಣೆಗೆ ಸಮರ್ಪಕವಾಗಿ ಸಿದ್ಧತೆ ನಡೆಸಬೇಕಾಗಿರುವುದರಿಂದ ಕಾಲಮಿತಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸುವಂತೆ ಸೂಚಿಸಿದ್ದಾರೆ.

‘ಜಿಬಿಎ ವ್ಯಾಪ್ತಿಯಲ್ಲಿ ಜನಗಣತಿ ಕಾರ್ಯ ನಡೆಯುತ್ತಿದ್ದು, ಇಡೀ ಆಡಳಿತ ಮತ್ತು ಕ್ಷೇತ್ರಮಟ್ಟದ ಯಂತ್ರವು ಅದರಲ್ಲಿ ತೊಡಗಿಕೊಂಡಿದೆ. ಈ ಚಟುವಟಿಕೆಗಳು ಶಾಸನಬದ್ಧ ಮತ್ತು ಸಮಯಕ್ಕೆ ಸೀಮಿತವಾಗಿರುವುದರಿಂದ ಎಣಿಕೆ, ಮೇಲ್ವಿಚಾರಣೆ, ತರಬೇತಿ ಮತ್ತು ಸಂಪರ್ಕಕ್ಕಾಗಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸುವ ಅಗತ್ಯವಿದೆ. ಇದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಪೂರ್ವ ಸಿದ್ಧತಾ ಕಾರ್ಯಗಳಿಗೆ ಸೀಮಿತ ಅವಕಾಶವಿದ್ದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಸಹ ಏಕಕಾಲದಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ. ಇದರ ಜೊತೆಗೆ ಮೇ, ಜೂನ್‌ನಲ್ಲಿ ಶೈಕ್ಷಣಿಕ ಪರೀಕ್ಷಾ ಕರ್ತವ್ಯಗಳಿಗೆ ಸಿಬ್ಬಂದಿ ನಿಯೋಜಿಸುವುದರಿಂದ ಲಭ್ಯವಿರುವ ಸಿಬ್ಬಂದಿ ಮತ್ತಷ್ಟು ಕಡಿತವಾಗುವ ಸಾಧ್ಯತೆ ಇದೆ’ ಎಂದು ಜಿಬಿಎ ಮುಖ್ಯ ಆಯುಕ್ತರು, ಮುಖ್ಯ ಕಾರ್ಯದರ್ಶಿಯವರಿಗೆ ಏಪ್ರಿಲ್ 8ರಂದು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ಈ ಹಿನ್ನೆಲೆಯಲ್ಲಿ ಆಡಳಿತ ಯಂತ್ರ ಜನಗಣತಿ ಕಾರ್ಯಾಚರಣೆಯಲ್ಲಿ ತೊಡಗಿರುವುದರಿಂದ, ಎಸ್ಐಆರ್ ಪ್ರಕ್ರಿಯೆಯೂ ಆರಂಭವಾಗುವುದರಿಂದ ನಗರ ಪಾಲಿಕೆಗಳ ಚುನಾವಣೆಯ ಕಾಲಮಿತಿಯನ್ನು ವಿಸ್ತರಿಸಬೇಕು’ ಎಂದು ಪತ್ರದಲ್ಲಿ ಹೇಳಿದ್ದಾರೆ.

ರಾಜ್ಯ ಚುನಾವಣಾ ಆಯೋಗದ ಆಯುಕ್ತರಿಗೂ ಜಿಬಿಎ ಮುಖ್ಯ ಆಯುಕ್ತರು ಏಪ್ರಿಲ್ 6ರಂದು ಇದೇ ರೀತಿಯ ಪತ್ರ ಬರೆದಿದ್ದಾರೆ.

ಸೂಚನೆ: ನಗರ ಪಾಲಿಕೆಗಳಿಗೆ ಜೂನ್ 30ರೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಐದು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮೀಸಲಾತಿಯನ್ನು ಅಂತಿಮಗೊಳಿಸಿ ಅಧಿಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ಏಪ್ರಿಲ್ 14ರಂದು ಪ್ರಮಾಣಪತ್ರ ಸಲ್ಲಿಸಿತ್ತು.

▶3

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಶ್ರೀ ಅನುಪಮ ಪದವಿ ಪೂರ್ವ & ಡಿಗ್ರಿ ಕಾಲೇಜು

ಬೆಂಗಳೂರಿನ ಪೀಣ್ಯ 2ನೇ ಹಂತ ಆಂಧ್ರಹಳ್ಳಿ ಮುಖ್ಯರಸ್ತೆ ಯಲ್ಲಿರುವ ಶ್ರೀ ಅನುಪಮ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಿ ಕಾಲೇಜಿಗೆ ಟಾಪರ್ಸ್ ಗಳಾಗಿದ್ದಾರೆ

ವಾಣಿಜ್ಯ ವಿಭಾಗ 2025-2026

ವಿಜಯ ವೆಂಕಟೇಶ್ — ವೆಂಕಟೇಶ್ ಬಿ.ಕೆ.

Admission open Register Now 98456 04363 99726 28000

ಚಂದನ .ವಿ 95.67% · ರೇಖ ವೈ 92.50%
ತನುಶ್ರೀ 91.33% · ಪ್ರಮೋದ್ 87.67% · ಚಿರಾಗ್ 84.33% · ನವ್ಯ 84.17%
ಸವಿತ 84.17% · ದಿವ್ಯಶ್ರೀ 81.83% · ಲತಾ 80.83% · ಚೇತನ್ ಎನ್ 75.50%

Architect's Marvel, Builder's Dream, Owner's Pride !

2 & 3 BHK Flats
with 50% Open Space
@ JP Nagar 7th Phase

MAJESTIC PROPERTY DEVELOPERS PVT. LTD.

Majestic Fortune No. 421, 2nd Main, Eshwara Layout, JP Nagar, 7th Phase, Bengaluru-560 078. (Near Yelachenahalli Metro Station, Kanakapura Road)
Mob: 90191 63704 93412 28681
www.majesticdevelopers.in
Scan for Location

Centrally located Swimming Pool with a Toddler's Pool | Skating | Gym Party hall | Basketball | Archery Library/ Reading Room | Landscaped Gardens Children Play Area | Table Tennis Jogging / Walking trail | Shuttle Court Squash Court | Pool / Billiards Tables

B.M.S. PRE UNIVERSITY COLLEGE FOR WOMEN

Late B.M.Sreenivasaiah, Founder — Late B.S.Narayan, Former Donor Trustee

'A' Grade Awarded by PU Board

College toppers bring laurels with outstanding Academic Achievement

The Management, Principal and Faculty members of BMS PU COLLEGE FOR WOMEN proudly congratulate the College Toppers for their Exceptional performance in II PUC BOARD EXAMINATION...

TOPPERS OF II PUC ANNUAL EXAMINATION MARCH - 2026

Name	Stream	Marks	Rank
Ms. Yamuna Yadav	Arts	(593/600)	State 4th Rank
Ms. Harshitha K Gowda	Commerce	(596/600)	State 5th Rank
Ms. Akshatha Inamdar	Commerce	(594/600)	State 7th Rank
Ms. Mary Harshitha	Commerce	(593/600)	State 8th Rank
Ms. Sanjana BM	Commerce	(592/600)	State 9th Rank
Ms. Meghana H K	Commerce	(591/600)	State 10th Rank
Ms. Yashaswini J	Science	(586/600)	Science Topper of College

2026 ADMISSIONS OPEN

The Institution celebrates the remarkable achievement of toppers, whose dedication, perseverance and Academic Excellence have brought immense pride to the College The achievement stands as a testimony to the college's commitment to providing quality education fostering academic brilliance, and nurturing future leaders

ADMISSION FREE For 95% and above in 10th Std
MERITORIOUS SCHOLARSHIP for 85% and above in 10th Std

COURSES OFFERED:
SCIENCE
- P.C.M.B. (Physics, Chemistry, Mathematics, Biology)
- P.C.M.E. (Physics, Chemistry, Mathematics, Electronics)
- P.C.M.Cs.(Physics, Chemistry, Mathematics, Computer Science)

COMMERCE
- H.E.B.A. (History, Economics, Business Studies, Accountancy)
- S.E.B.A. (Statistics, Economics, Business Studies, Accountancy)
- M.E.B.A. (Basic Maths, Economics, Business Studies, Accountancy)
- M.S.B.A. (Basic Maths, Statistics, Business Studies, Accountancy)
- C.S.B.A. (Computer Science, Statistics, Business Studies, Accountancy)

ARTS
- H.E.P.S. (History, Economics, Political Science, Sociology)
- H.E.P.P. (History, Economics, Political Science, Psychology)

CONTACT: BUGLE ROCK ROAD, BASAVANAGUDI, BENGALURU 560 004
Ph: 91-80-26607833 | 7338367755 | 7338247755 | 9538137661
email: principalbmspucollege@gmail.com, Website: www.bmspucw.ac.in

NOTE : WE HAVE NO BRANCHES

REAL ESTATE SELLING

Sites

Anjanapura

SITE FOR SALE
45 X 60 sqft
anjanapura
EAST SOUTH corner at JP nagar 9th phase, anjanapura gollahalli Contact 9845018051 / 8296373555

Arkavathi Layout

ARKAVATHI LAYOUT Sampigehalli BDA Site 30X40 North Very Good Location Contact Owner: 9448531837/ 9606922132

Banashankari

BANASHANKARI 6TH Stage, 11th Block, 20x30 West Facing Site Sale. 1.10Cr. Direct Owner.Call: 9844947990, 8431089761.

BANASHANKARI 6TH Stage 1st Block. 30x40 Site For Sale Near NPS School. Brokers Excuse. 9686026739.

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

Indiranagar

COMMERCIAL PLOT Jeevan Bhima Nagar Main Road 2100 Sft Rs. 39,000/- Retail, Co-Living/ Working: 9900110517

J P Nagar

JP-NAGAR 2ND Phase 30x50 30x42 34000/ PSft 45x60 36000/- Psft 40x60 Jaynagar 4th T Block 45000/- 9916375577

JP, NAGAR 4th Phase Dollers Colony 50x80,West Facing panduranga layout 3640Sqft, North`East Corner :9945114693/ 9632852947

BUNGALOW FOR SALE
5989 Sq ft, Furnished 4 BHK Bungalow for sale in Baglur. It's 20 minutes drive to Airport. Price 5cr. Call owner :
9113209192

Kanakapura Road

KANAKAPURA ROAD near Nice Road BDA approved site 30x40 corner 60feet Road 13,000/- sft. 9845000299.

Kempegowda Layout

SITE SALE West Facing 40X60 BDA 40ft Road Rs. 10500/- Negotiable Nadaprabu Kempegowda Layout 7th Block J Sector Near NPS School White Money Ok Contact: 6366711598/ 7338050412

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

BDA SITE South facing, measuring 50x80, 1st K Sector, 60 ft Double Road Commercial, Connects Business Corridor, Kempegowda Layout, Site Sale. 11000/- psqft. 7975079267.

"KEMPEGOWDA BDA 65x85 East BDA Approved, 45ft Road close to Peripheral Ring Road. Attached KNS. ₹7500/-. 9845314932"

CONSTRUCTION MATERIALS FOR SALE
Used construction machineries in good condition such as Material Hoist, Passenger Hoist, Bar Cutting and Bending Machines, Concrete Mixer 1, 2, 3 & 4 Bags Capacity, Shuttering Plate and Scaffolding, Tractor Mounted 16 KVA D.G Set for sale.
Contact: 6360605636 / 8431164733

BDA SITE_SALE @ NADAPRABHU KEMPEGOWDA LAYOUT40x60_Semi Commercial,50x80 - Commercial 300feet road,163x100 BDA Single-Plan "11A"Katha Site. Contact:9686469799

30X40 SITE Sale Nadaprabhu Kempegowda Layout, 7th Block, H Sector, NF, Near Challaghatta Metro 10200/ Sqft Slightly Negotiable 7892059756

Tumkur Road

30*45 FEET, W/F at 'Ravi Kirlosker Layout' at 40 Feet Road @ Rs. 15,000.00 per Sq/Ft. No brokers, only genuine buyers. Contact 9900177430

Multiple Locations

RERA Approved PLOTS
Mysore, Hubli, Haveri
Near likely Airport
Nelamangala
Starting @ Rs.1599/sqft
Farm Plots Rs. 599/sqft
For Special Offer and Free Visit Contact
9916 356 000

Nelamangala

BYRASHETTYHALLI AISHWARYA County BMRDA 40X60,East And Banashankari BDA 30X40,Sites For Sale : 9620117773/9845857006

SITE SALE 35x50 west face, Rashi gateway near D-mart, Nelamangala-Tumkur toll. Ph-9880093622

Vijayanagar

40X60 WEST Facing Site For Sale in Vijaynagar. Genuine Buyers Only Whatsapp Message: 9535252060.

Vishweshwariah Layout

DIRECT OWNER 30x40 Opp Park Facing Site Sale VISHWESHWARAIAH LAYOUT BLOCK-2 Full Developed Area. 9742681666

VISHWESHWARAIAH LAYOUT BDA Site for Sale West facing 30x40, 3rd block, Broker Excuse Contact: 7349549087

"MALLATHAHALLI ITI,NGEF Attech`Revenue 33x30`West B-khata,E-katha ₹11800/- Negotiable,& Vishveshwaraiah 3rd`Block 20x30`East`face 3floor`House ₹1,35,00000/- Negotiable. 9845793121"

Vidyaranyapura

SAMBRAM COLLEGE Near Amba Bhavani Temple Back,Side 30x40, 37.5x40 WF BBMP B/E Katha, 40x60 WF Best County 2, DC Conversion A/E Katha: 8296895858

Rajanukunte

***RAJANUKUNTE*, YALAHANKA,** Near Presidency University, 20x32 DC Converted fully developed site for sale. Mob 9844392575.

Agricultural Land

Chikkaballapura

AGRICULTURAL LAND-SALE 15 K.M. From CHIKKABALLAPUR. 8 K.M. From HYDERABAD HIGHWAY. Suitable: FARMHOUSE 7019666458.

VIDYASHREE HIGH SCHOOL

Affiliated to CBSE, New Delhi Affi. No. 830751
Anjananagar, Magadi Main Road, Bengaluru - 91.
E-mail: vidyashreehighschool@gmail.com Web: www.vidyashreehighschool.com

Shri B.R. Krishna Murthy, Founder Chairman

CBSE TOPPERS 25-26

KANGANA M 487 (97.4%)	SHRAVYA S. 472 (94.4%)	INDHUDHAR L 471 (94.2%)	GAGAN S R 470 (94%)	AISHWARYA S 464 (92.8%)	SNEHA S 460 (92%)	ANIKA SUSHMA RAJ 456 (91.2%)
DHANUSH V 456 (91.2%)	KALPANA R 456 (91.2%)	MEGHANA K N 454 (90.8%)	SHRAVYA S 454 (90.8%)	VEERESH GOWDA B S 454 (90.8%)	ARCHANA S 453 (90.6%)	DIGANTH L 451 (90.2%)
POSHIKA C 450 (90%)	GAYANA M 449 (89.8%)	RITHIK V 449 (89.8%)	NIKITHA M 444 (88.8%)	SHRUTHI P 440 (88.%)	KRISHNA PRASAD NAYAK 439 (87.8%)	DEEKSHA R 433 (86.6%)
DEEPAK GOWDA G 432 (86.4%)	HARINI SUBASH 418 (83.6%)	KISHORE J 418 (83.6%)	VAISHNAVI T 417 (83.4%)	VAIBHAV SURYA 414 (82.8%)	A HARISH 413 (82.6%)	SARIKA A V 410 (82%)
SAMPREETH KUMAR S 408 (81.6%)	RAKSHITH B 404 (80.8%)	BHAVANA K U 402 (80.4%)	AKASH N 399 (79.8%)	KAVITHA 391 (78.2%)	RAJESH GOWDA S 389 (77.8%)	SHUCHITH GOWDA G 388 (77.6%)
SRI KRISHNA V 384 (76.8%)	INDRAJITH J 383 (76.6%)	AMULYA K N 382 (76.4%)	VIKAS B M 377 (75.4%)	PREKSHA S 376 (75.2%)	KOUSALYA P 373 (74.6%)	

CONGRATULATIONS

100% Result of AISSE 2025-26

Admission Open For Nursery to Grade - IX A/Y 2026-27

BHARATH EDUCATION SOCIETY®
BES DEGREE COLLEGE

Recognised by UGC. Approved by AICTE.
Affiliated to Dr. MMS BCU, Re-accredited B++ Grade by NAAC.
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
080 - 2663 7295 / 94488 48416
Email: besddcol@yahoo.co.in besdegreecol@gmail.com
Website: www.besinstitutions.com

Sahakara Rathna B.L. Lakke Gowda, Founder, B.E.S Institutions

SHAPE YOUR CAREER WITH INTEGRATED SKILL ENHANCEMENT PROGRAMMES

Sri S.T. Somashekhar, Hon. President, Bharath Education Society, MLA, Yeshwanthpura Constituency, Former Minister, Govt of Karnataka

PROGRAMMES OFFERED FOR : 2026-27
B.Com | BBA | BCA
BA | HEP | HES | HEK

Languages Offered: English, Kannada, Hindi & Sanskrit
As per Dr. MMS BCU Syllabus

BES EVENING DEGREE COLLEGE
Re-accredited B Grade by NAAC.
080-26638415 / 99455 46840 E-mail: besedceve@gmail.com
PROGRAMMES OFFERED FOR : 2026-27
B.Com | BA | HEP | HES | HEK

Sri..Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Dr. N. Ashok Kumar, Principal, BES Degree College
Dr. Rekha Kowshik P.R., Principal, BES Evening Degree College

HOSTEL FACILITY AVAILABLE FOR GIRLS

BES-26701

Commercial Land

Yeshwanthpur

MOHALI (PB) – Freehold PREMIUM LAND
Rare Opportunity Sector 101A | Near International Airport 2 Acres FREEHOLD Commercial Land Adjoining Infosys, HDFC HQ & Plaksha University Unlimited FAR Ideal for IT Park / Corporate Offices / Institutions High Rental Yield & Appreciation Potential Fastest Growing IT and commercial Belt of Mohali
Flexible 4-Year Payment Plan
9815993445

Commerical

Rajajinagar

RAJAJINAGAR BDA Commercial Property 70x110 West Facing Gayathri Nagar Main Road Contact: 7899570235

Flat

Koramangala

3 BHK for Sale in Adugodi 5th Fl, 1780 Sqft, Semi Furnished Brindavan Apts,14K/ sqft negotiable Contact number to 9845021360

Kanakapura Road

LUXURY FLAT FOR SALE 3 BHK, 5 BHK VAJARAHALLI, Price:2.20Cr. and 2.75Cr. Call: 9740148870/ 9341050991.

Multiple Locations

WANTED FLATS/ Villas built by Prestige, Brigade, Sobha, Mantri, Sattva, Embassy etc. Rent/ Purchase. 7019634996.

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Sahakarnagar

QUIT MATCHBOX LIVING
LAUNCHING ON 19TH APRIL,26 - AKSHAYA TRITIYA THIS SUNDAY
SPACIOUS 2 & 3 BHK APARTMENTS
STARTING JUST ₹89.99L*
SAHAKAR NAGAR 7 mins from Mall of Asia
CALL NOW: +91 9900005948
#ThinkOutsideTheMatchBox
RERA NO: PRM/KA/RERA/1251/309/PR/171019/000265

NEW FULL APARTMENT BUILDING SALE 7.5 CR. 13,000 Sqft
9 Apt's (2 & 4 BHK's). Built-up on 2400 sft site, Ideal for Rental Income, Service Apartments Corporate Guest House. 1.5 km from. Hebbal Flyover near SAHAKARNAGAR. OWNER- 98800-53505

Yelahanka

3BHK_CENTURY SARAS. Near California-Resort. Semi-Furnished. EastFacing. First Floor. 1674Sft. Parking+ Amenities. 1.25cr. 9845336624

House

Koramangala

SALE KORAMANGALA FIRST BLOCK 50×80 NORTH FACING CALM DECENT AREA 5BHK4200SQFT, CONTACT OWNER 9845691972

Industrial & Factory

Magadi Road

MAGADI ROAD Industrial Property 100x60, For Sale/ Rent, Sunkadakatte, Machohalli, 125 HP Power: 9620696913/ 9880781399

Villas/Bunglows

Yelahanka

40X60, 7 BHK, Triplex Bungalow, corner house north facing near GKVK Mango Garden, Judicial Layout Yelahanka. Contact: 9845042454.

REAL ESTATE BUYING

Sites

Banashankari

"URGENTLY REQUIRED Residential 40x60`& 50x80 Sites Banashankari 2nd Stage, 3rd-Stage, Jayanagar Good Locations Genuine Owners Call: 9019533999/ 9900275599"

Kanakapura Road

WANT-SITE 40x60/ 30x40 Narayana Nagar, BCCHS, BSK 6th Stage, Anjanapura/ BMRDA Site around Kaggalipura. Dr.Roopak 9880299011.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Teachers/ Professors

WANTED HIGH School BEd qualified Math&Science Teacher, Ph-8217227181, mail- imageenglishschool@gmail.com, Add-JP Nagr 6th Phase, B'Lore-78

ಮದ್ಯದ ಅಮಲಿನಲ್ಲಿ ಗಲಾಟೆ: ಸ್ನೇಹಿತನ ಕೊಲೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ನಡೆದ ಗಲಾಟೆಯಲ್ಲಿ ಸ್ನೇಹಿತನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿರುವ ಘಟನೆ ಸರ್ಜಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮಟ್ಟನಹಳ್ಳಿಯ ಕೆರೆಯ ಬಳಿ ನಡೆದಿದೆ.

ಮೋಹನ್(25) ಕೊಲೆಯಾದ ಯುವಕ. 'ತಮಿಳುನಾಡಿನ ಸಿಂಗಸದನಪಲ್ಲಿ ಗ್ರಾಮದ ಮೋಹನ್ ಗುರುವಾರ ಸಂಜೆ ಸ್ನೇಹಿತ ಮನೋಜ್ ಜತೆಗೆ ಮದ್ಯದ ಪಾರ್ಟಿ ನಡೆಸಲು ಮಟ್ಟನಹಳ್ಳಿಯ ಕೆರೆಯ ಬಳಿ ಬಂದಿದ್ದರು. ಪಾರ್ಟಿ ನಡೆಸುವಾಗ ಇಬ್ಬರ ನಡುವೆ ಗಲಾಟೆ ಆಗಿತ್ತು. ಗಲಾಟೆ ವಿಕೋಪಕ್ಕೆ ಹೋದಮೇಲೆ ಸ್ಥಳದಲ್ಲಿದ್ದ ಕಲ್ಲು ತೆಗೆದುಕೊಂಡು, ಮೋಹನ್ ಮೇಲೆ ಎತ್ತಿಹಾಕಿ ಮನೋಜ್ ಪರಾರಿ ಆಗಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಮೋಹನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು. ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐಪಿಎಲ್ ಟಿಕೆಟ್ ಮಾರಾಟ: ಬಂಧನ

ಕೆಎಸ್‌ಸಿಎ ಸದಸ್ಯನೆಂದು ಹೇಳಿಕೊಂಡ ವ್ಯಕ್ತಿಗೆ ಸಿಸಿಬಿ ಪೊಲೀಸರ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಪಂದ್ಯಾವಳಿಯ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕ್ರೀಡಾಂಗಣದ ಕ್ಯಾಂಟೀನ್ ನೌಕರ ಚಂದ್ರಶೇಖರ್ ಬಂಧಿತ. ಅಕ್ರಮವಾಗಿ ಟಿಕೆಟ್ ಮಾರಾಟ ಮಾಡುವ ದಂಧೆಯಲ್ಲಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಸದಸ್ಯ ಎಂದು ಹೇಳಿಕೊಂಡಿರುವ ವ್ಯಕ್ತಿಯ ಪಾತ್ರ ಇರುವುದು ಕಂಡು ಬಂದಿದೆ. ಇಬ್ಬರ ವಿರುದ್ಧವೂ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸಿಸಿಬಿಯ ಡಿಸಿಪಿ ಹರಿಬಾಬು ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ಚಂದ್ರಶೇಖರ್

ಲಕ್ಷ್ಮಿ ಹೋಟೆಲ್‌ನ ಚಂದ್ರಶೇಖರ್ ಅವರನ್ನು ಬಂಧಿಸಲಾಗಿದೆ. ₹15 ಸಾವಿರ ಮುಖಬೆಲೆ ಟಿಕೆಟ್‌ಗಳನ್ನು ₹19 ಸಾವಿರಕ್ಕೆ ಮಾರಾಟ ಮಾಡುತ್ತಿದ್ದಾಗ ಪೊಲೀಸರು ದಾಳಿ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಕೆಎಸ್‌ಸಿಎ ಸದಸ್ಯ ಎಂಬುದಾಗಿ ಹೇಳಿಕೊಂಡ ವ್ಯಕ್ತಿ ಟಿಕೆಟ್‌ಗಳನ್ನು ನೀಡುತ್ತಿದ್ದರು ಎಂದು ಬಂಧಿತ ವ್ಯಕ್ತಿ ಮಾಹಿತಿ ನೀಡಿದ್ದಾರೆ. ತಲೆಮರೆಸಿ ಕೊಂಡಿರುವ ಆರೋಪಿಯ ಪತ್ತೆಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಏ. 15ರಂದು ಆರ್‌ಸಿಬಿ ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡಗಳ ನಡುವೆ ಐಪಿಎಲ್ ಕ್ರಿಕೆಟ್ ಪಂದ್ಯ ನಡೆದಿತ್ತು. ಆ ಪಂದ್ಯಕ್ಕಾಗಿ ಸ್ವಸ್ತಿಕ್ ಹೆವಿ ಎಂಜಿನಿಯರಿಂಗ್ ಅಂಡ್ ಇಂಡಸ್ಟ್ರಿಯಲ್ ಕಂಪನಿಯ ಹೆಸರಿಗೆ 50 ಹಾಗೂ ಧರಣಿ ಕಂಪ್ಯೂಟರ್ಸ್ ಕಂಪನಿಯ ಹೆಸರಿಗೆ 50 ಟಿಕೆಟ್‌ಗಳನ್ನು ಖರೀದಿಸಲಾಗಿತ್ತು. ಕೆಎಸ್‌ಸಿಎ ಸದಸ್ಯರೊಬ್ಬರು ಈ ಟಿಕೆಟ್‌ಗಳನ್ನು ಖರೀದಿಸಿ ಚಂದ್ರಶೇಖರ್‌ಗೆ ನೀಡಿದ್ದರು. ಪಂದ್ಯ ಆರಂಭಕ್ಕೂ ಕೆಲವೇ ಹೊತ್ತಿನ ಮೊದಲು ಚಂದ್ರಶೇಖರ್ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದರು ಎಂದು ಸಿಸಿಬಿ ಮೂಲಗಳು ಹೇಳಿವೆ.

'ಎರಡು ಖಾಸಗಿ ಕಂಪನಿಗಳ ಹೆಸರಿನಲ್ಲಿ ಆನ್‌ಲೈನ್ ಮೂಲಕ ದೊಡ್ಡ ಪ್ರಮಾಣದಲ್ಲಿ ಟಿಕೆಟ್‌ಗಳನ್ನು ಖರೀದಿಸಲಾಗಿದೆ. ಆರ್‌ಸಿಬಿಯ ಮೊದಲ ಪಂದ್ಯದಲ್ಲಿ ಇಬ್ಬರೂ ಸೇರಿಕೊಂಡು 81 ಟಿಕೆಟ್‌ಗಳನ್ನು ಮಾರಾಟ ಮಾಡಿದ್ದರು. ಏಪ್ರಿಲ್ 15ರಂದು ನಡೆದ ಪಂದ್ಯಕ್ಕೆ 100 ಟಿಕೆಟ್‌ಗಳನ್ನು ಸಿದ್ಧ ಮಾಡಿಕೊಂಡಿದ್ದರು' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಚಂದ್ರಶೇಖರ್ ಬಂಧನ ಆಗಿರುವುದು ಗೊತ್ತಾದ ಮೇಲೆ ಕೆಎಸ್‌ಸಿಎ ಸದಸ್ಯನೆಂದು ಹೇಳಿಕೊಂಡ ವ್ಯಕ್ತಿ ನಾಪತ್ತೆ ಆಗಿದ್ದಾರೆ. ಹುಡುಕಾಟ ನಡೆಸಲಾಗುತ್ತಿದೆ. 2 ಖಾಸಗಿ ಸಂಸ್ಥೆಗಳಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲು ಸಿದ್ಧತೆ ನಡೆಸಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಕೆಲಸಕ್ಕಿದ್ದ ಕಂಪನಿಯಲ್ಲಿ ಕಳ್ಳತನ: ಆರೋಪಿ ಸೆರೆ

ಬಾಗಲೂರು ಕೈಗಾರಿಕಾ ಪ್ರದೇಶದಲ್ಲಿ ಇರುವ ಅಮೆಜಾನ್ ಸೆಲ್ಲರ್ ಸರ್ವೀಸ್ ಕಂಪನಿಯಲ್ಲಿ ಮೊಬೈಲ್ ಫೋನ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಾಗಲೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ಮಂಡಲಂ ಗ್ರಾಮದ ಜೋಡಿಗಾರ್ಲ ವಂಶಿ (24) ಬಂಧಿತ.

ಜೋಡಿಗಾರ್ಲ ವಂಶಿ

ಯಲಹಂಕದ ಬಾಗಲೂರು ಕ್ರಾಸ್‌ನ ವಿನಾಯಕ ನಗರದಲ್ಲಿ ಬಾಡಿಗೆಗೆ ಮನೆ ಪಡೆದು ಆರೋಪಿ ನೆಲಸಿದ್ದ. ಅಮೆಜಾನ್ ಸೆಲ್ಲರ್ ಸರ್ವೀಸ್ ಕಂಪನಿಯ ವೇರ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ.

ಆರೋಪಿಯಿಂದ ₹2.30 ಲಕ್ಷ ಮೌಲ್ಯದ ಆರು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಂಪನಿಯ ಎಚ್‌.ಡಿ.ಪರಮೇಶ್ ನೀಡಿದ ದೂರಿನ ಮೇಲೆ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕಂಪನಿಯ ವೇರ್‌ಹೌಸ್‌ನಲ್ಲಿ ಆಂತರಿಕ ಲೆಕ್ಕ ಪರಿಶೋಧನೆ ನಡೆಸಲಾಯಿತು. ಆಗ, ನಾಲ್ಕು ಮೊಬೈಲ್‌ಗಳು ಕಾಣೆ ಆಗಿರುವುದು ಪತ್ತೆಯಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಜೋಡಿಗಾರ್ಲ ವಂಶಿ ಮೊಬೈಲ್ ಕಳ್ಳತನ ಮಾಡಿಕೊಂಡು ಹೋಗುತ್ತಿರುವ ದೃಶ್ಯ ಸೆರೆ ಆಗಿತ್ತು ಎಂದು ಮೂಲಗಳು ಹೇಳಿವೆ.

ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಹೊಸಕೋಟೆಯ ಘಟಕದಲ್ಲಿ ಶುಕ್ರವಾರ ನಾಶಪಡಿಸಲಾಯಿತು

₹38 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಬೆಂಗಳೂರು: ರಾಜ್ಯದ ವಿವಿಧೆಡೆ ಎನ್‌ಸಿಬಿಯ ಬೆಂಗಳೂರು ಪ್ರಾದೇಶಿಕ ಘಟಕದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಆರೋಪಿಗಳಿಂದ ವಶಪಡಿಸಿಕೊಂಡಿದ್ದ ₹38 ಕೋಟಿ ಮೌಲ್ಯದ ನೈಸರ್ಗಿಕ–ಸಿಂಥೆಟಿಕ್ ಡ್ರಗ್ಸ್ ಅನ್ನು ಹೊಸಕೋಟೆಯ ಘಟಕದಲ್ಲಿ ಶುಕ್ರವಾರ ನಾಶಪಡಿಸಲಾಯಿತು.

ಒಟ್ಟು 13 ಪ್ರಕರಣಗಳಲ್ಲಿ ವಿವಿಧ ಮಾದರಿಯ 128.75 ಕೆ.ಜಿ. ಮಾದಕ ವಸ್ತುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. ಗಾಂಜಾ, ಹೈಡ್ರೊಪೋನಿಕ್ ಗಾಂಜಾ, ಕೊಕೇನ್, ಎಂಡಿಎಂಎ ಕ್ರಿಸ್ಟಲ್‌ಗಳನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿತ್ತು. ಅದನ್ನು ನಾಶಪಡಿಸಲಾಯಿತು. ಕಳೆದ ಫೆಬ್ರುವರಿಯಲ್ಲೂ ₹11 ಕೋಟಿ ಮೌಲ್ಯದ 1,607 ಕೆ.ಜಿ. ಡ್ರಗ್ಸ್ ನಾಶಪಡಿಸಲಾಗಿತ್ತು. ಈ ವರ್ಷ ಒಟ್ಟು ₹49 ಕೋಟಿ ಮೌಲ್ಯದ ಡ್ರಗ್ಸ್ ನಾಶ ಪಡಿಸಿದಂತಾಗಿದೆ ಎಂದು ಎನ್‌ಸಿಬಿ ಬೆಂಗಳೂರು ಪ್ರಾದೇಶಿಕ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎನ್‌ಸಿಬಿಯ ಪ್ರಾದೇಶಿಕ ನಿರ್ದೇಶಕ ಸಚಿನ್ ಘೋರ್ಪಡೆ, ಸಿಸಿಬಿ ಕ್ರೈಂ–2 ವಿಭಾಗದ ಡಿಸಿಪಿ ರಾಜಾ ಇಮಾಮ್ ಖಾಸೀಂ, ಎನ್‌ಸಿಬಿಯ ಸಹಾಯಕ ನಿರ್ದೇಶಕ ಎಂ.ಆರ್.ಅರವಿಂದ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಹಾಜರಿದ್ದರು.

₹1.20 ಲಕ್ಷ ಲಂಚ: ಪಿಡಿಒ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನದ ಖಾತೆ ವರ್ಗಾವಣೆ ಮಾಡಿಕೊಡಲು ಲಂಚ ಪಡೆದ ಪ್ರಕರಣದಲ್ಲಿ ನೆಲಮಂಗಲ ತಾಲ್ಲೂಕಿನ ಕಳಲುಘಟ್ಟ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಗೀತಾಮಣಿ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ನಗರದ ಹೆಗ್ಗನಹಳ್ಳಿ ನಿವಾಸಿ ಫಯಾಜ್‌ಉಲ್ಲಾ ಸಾಬ್ ಅವರು ಕಳಲುಘಟ್ಟ ಗ್ರಾಮದಲ್ಲಿ ನಿವೇಶನ ಹೊಂದಿದ್ದು, ಅದರ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರು.

ಈ ಕೆಲಸ ಮಾಡಿಕೊಡಲು ಗೀತಾಮಣಿ ಅವರು ₹1.20 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಆ ಹಣವನ್ನು ತಮ್ಮ ಆಪ್ತ ಮತ್ತು ಯೂಟ್ಯೂಬರ್ ಗಂಗಾಧರ್ ಎಂಬುವವರಿಗೆ ನೀಡಲು ಸೂಚಿಸಿದ್ದರು. ಈ ಬಗ್ಗೆ ಫಯಾಜ್‌ಉಲ್ಲಾ ಸಾಬ್ ಅವರು ಬೆಂಗಳೂರು ಗ್ರಾಮಾಂತರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ದೂರಿನ ಆಧಾರದಲ್ಲಿ ರೂಪಿಸಿದ್ದ ಕಾರ್ಯಾಚರಣೆಯಂತೆ ಫಯಾಜ್ ಅವರು ಶುಕ್ರವಾರ ಗೀತಾಮಣಿ ಅವರು ಸೂಚಿಸಿದ್ದ ಸ್ಥಳಕ್ಕೆ ತೆರಳಿ, ಗಂಗಾಧರ್ ಅವರಿಗೆ ಹಣ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಗಂಗಾಧರ್, ಗೀತಾಮಣಿ ಅವರನ್ನು ಬಂಧಿಸಲಾಯಿತು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಕಸಾಪ: ಸಾಹಿತ್ಯ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2025–26ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದೆ.

ಜ.30ರಿಂದ ಫೆ.1ರವರೆಗೆ ರಾಜ್ಯದಾದ್ಯಂತ 13 ಕೇಂದ್ರಗಳಲ್ಲಿ ನಡೆದ ಈ ಪರೀಕ್ಷೆಯನ್ನು ಒಟ್ಟು 996 ಅಭ್ಯರ್ಥಿಗಳು ಎದುರಿಸಿದ್ದರು. 'ಕನ್ನಡ ಪ್ರವೇಶ' ಪರೀಕ್ಷೆಗೆ ಹಾಜರಾಗಿದ್ದ 414 ಅಭ್ಯರ್ಥಿಗಳಲ್ಲಿ 339 ಮಂದಿ (ಶೇ 81.88) ತೇರ್ಗಡೆಯಾಗಿದ್ದಾರೆ. ಅರ್ಚನಾ ಬಸವರಾಜ ಬಿರಾದಾರ ಪ್ರಥಮ ರ್‍ಯಾಂಕ್, ಶ್ರೇಯಸ್ ರಾಜು ಗುರುವ ದ್ವಿತೀಯ ರ್‍ಯಾಂಕ್, ಅಥರ್ವ ಮಡಿವಾಳೇಶ್ವರ ಹಲಕಿ ತೃತೀಯ ರ್‍ಯಾಂಕ್ ಪಡೆದಿದ್ದಾರೆ.

'ಕನ್ನಡ ಕಾವ' ಪರೀಕ್ಷೆ ಬರೆದ 367 ಅಭ್ಯರ್ಥಿಗಳಲ್ಲಿ 253 ಮಂದಿ (ಶೇ 68.94) ಉತ್ತೀರ್ಣರಾಗಿದ್ದಾರೆ. ರಾಮು ಎಂ.ಎಸ್. ಪ್ರಥಮ ರ್‍ಯಾಂಕ್, ರಘುವೀರ್ ಎಂ.ಎನ್. ದ್ವಿತೀಯ ರ್‍ಯಾಂಕ್, ಧನ್ಯ ಎಚ್.ಯು. ತೃತೀಯ ರ್‍ಯಾಂಕ್ ಗಳಿಸಿದ್ದಾರೆ.

'ಕನ್ನಡ ಜಾಣ' ಪರೀಕ್ಷೆಗೆ 30 ಅಭ್ಯರ್ಥಿಗಳು ಹಾಜರಾಗಿದ್ದು, 22 ಮಂದಿ (ಶೇ 73.33) ತೇರ್ಗಡೆಯಾಗಿದ್ದಾರೆ. ನಿಕಿತಾ ಹನುಮಂತ ದೊಡ್ಡಗೌಡರ ಪ್ರಥಮ ರ್‍ಯಾಂಕ್, ತನ್ವೀರ್ ನ. ಮುಜಾವರ್ ದ್ವಿತೀಯ ರ್‍ಯಾಂಕ್ ಹಾಗೂ ವೈಷ್ಣವಿ ಯಲ್ಲಪ್ಪ ಚೂರಿ ಮಾತನವರ ತೃತೀಯ ರ್‍ಯಾಂಕ್ ಪಡೆದಿದ್ದಾರೆ.

'ಕನ್ನಡ ರತ್ನ' ಪರೀಕ್ಷೆಗೆ 52 ಅಭ್ಯರ್ಥಿಗಳು ಹಾಜರಾಗಿದ್ದು, 40 ಅಭ್ಯರ್ಥಿಗಳು (ಶೇ 76.92) ಉತ್ತೀರ್ಣರಾಗಿದ್ದಾರೆ. ಪೂರ್ಣಿಮಾ ಪ್ರಕಾಶ ಮಾತನವರ ಪ್ರಥಮ ರ್‍ಯಾಂಕ್, ನಿತ್ಯಾ ಹರೀಶ ಕಟ್ಟಿ ದ್ವಿತೀಯ ರ್‍ಯಾಂಕ್, ಅಂಕಿತಾ ಲಹರಿ ಎಂ.ಎನ್. ತೃತೀಯ ರ್‍ಯಾಂಕ್ ಗಳಿಸಿದ್ದಾರೆ.

'ಈ ಎಲ್ಲ ಪರೀಕ್ಷೆಗಳು ಲಕ್ಷಾಂತರ ಕನ್ನಡಿಗರಲ್ಲಿ ಭಾಷೆ ಮತ್ತು ಸಾಹಿತ್ಯದ ಕುರಿತು ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಫಲಿತಾಂಶವನ್ನು ಪರಿಷತ್ತಿನ ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದು ಕೊಳ್ಳಬಹುದು' ಎಂದು ಕಸಾಪ ಆಡಳಿತಾಧಿಕಾರಿ ಕೆ.ಎ. ದಯಾನಂದ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 26612991 ಅಥವಾ 22423867

ಬೆಂಗಳೂರಿನಲ್ಲಿ ಹಕ್ಕಿ ಜ್ವರ ದೃಢ

ಎರಡನೇ ಮುಖಪುಟದಿಂದ...

ಏ. 15 ರಂದು 7,444 ಕೋಳಿಗಳು, 14 ಸಾವಿರಕ್ಕೂ ಅಧಿಕ ಮೊಟ್ಟೆಗಳು ಹಾಗೂ 2,250 ಕೆ.ಜಿ ಕೋಳಿ ಆಹಾರವನ್ನು ಪಶುಪಾಲನೆ ಇಲಾಖೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಿದೆ. ಈ ಪ್ರಕ್ರಿಯೆಯಲ್ಲಿ ಭಾಗಿಯಾದ 10 ಸಿಬ್ಬಂದಿಯನ್ನು ನಿಗಾ ವ್ಯವಸ್ಥೆಗೆ ಒಳಪಡಿಸಲಾಗಿದೆ. ಈ ಸ್ಥಳವನ್ನು ಒಂದು ವರ್ಷದವರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಣೆ ಮಾಡಲಾಗಿದೆ.

ಆರೋಗ್ಯ ಇಲಾಖೆಯ ಕಣ್ಗಾವಲು ಪ್ರಗತಿಯಲ್ಲಿದ್ದು, 3 ಕಿ.ಮೀ ವ್ಯಾಪ್ತಿಯಲ್ಲಿ ಎರಡು ಗ್ರಾಮಗಳಿಂದ ಒಟ್ಟು 3,422 ಜನರು ವಾಸ ಇದ್ದಾರೆ. 3ರಿಂದ 10 ಕಿ.ಮೀ ವ್ಯಾಪ್ತಿಯಲ್ಲಿ 17 ಗ್ರಾಮಗಳಿಂದ ಒಟ್ಟು 22,395 ಜನಸಂಖ್ಯೆಯಿದೆ.

'ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರು ಪ್ರತಿನಿತ್ಯ ಮನೆ ಮನೆಗೆ ಭೇಟಿ ನೀಡಿ, ಹತ್ತು ದಿನ ಜ್ವರದ ಬಗ್ಗೆ ಕಣ್ಗಾವಲು ನಡೆಸಲಿದ್ದಾರೆ. ಶಂಕಿತ ಪ್ರಕರಣಗಳನ್ನು ತಕ್ಷಣ ವರದಿ ಮಾಡಲು ಆಸ್ಪತ್ರೆಗಳಿಗೆ ಸೂಚಿಸಲಾಗಿದೆ. ಪಿಪಿಇ ಕಿಟ್, ಮುಖಗವಸು, ಗಂಟಲ ದ್ರವ ಸಂಗ್ರಹಿಸುವ ಕಿಟ್‌ಗಳನ್ನು ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಳ್ಳುವಂತೆ ಹೆಸರಘಟ್ಟ ಮತ್ತು ಸೊನ್ನೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೂಚನೆ ನೀಡಲಾಗಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮತ್ತೂರು ಗ್ರಾಮದಲ್ಲಿ ಪರಿಶೀಲನೆ ನಡೆಸುತ್ತಿರುವ ಕ್ಷಿಪ್ರ ಕಾರ್ಯಪಡೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡ

'ಆತಂಕಪಡುವ ಅಗತ್ಯವಿಲ್ಲ'

'ಈವರೆಗೆ ಯಾವುದೇ ಮನುಷ್ಯರಲ್ಲಿ ಹಕ್ಕಿ ಜ್ವರ ವರದಿಯಾಗಿಲ್ಲ. ಹಾಗಾಗಿ, ಜನರು ಅನಗತ್ಯ ಆತಂಕ ಪಡುವ ಅಗತ್ಯವಿಲ್ಲ. ಆದರೆ, ಜಾಗರೂಕರಾಗಿರಬೇಕು. ಅನಾರೋಗ್ಯ ಪೀಡಿತ ಹಾಗೂ ಮೃತ ಹಕ್ಕಿಗಳ ಸಂಪರ್ಕದಿಂದ ದೂರ ಇರಬೇಕು. ಯಾವುದೇ ರೀತಿಯ ಸಂದೇಹ ಉಂಟಾದಲ್ಲಿ ತಕ್ಷಣ ಪಶುಸಂಗೋಪನೆ ಅಥವಾ ಆರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು. ಕೋಳಿ ಮಾಂಸ ಮತ್ತು ಮೊಟ್ಟೆಯನ್ನು ಸರಿಯಾಗಿ ಬೇಯಿಸಿ ಸೇವಿಸಬೇಕು. ಆರೋಗ್ಯ ಇಲಾಖೆ ಎಲ್ಲ ರೀತಿಯ ಪರಿಸ್ಥಿತಿ ಎದುರಿಸಲು ಸಜ್ಜಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸೆ.30ರವರೆಗೆ ಅವಧಿ ವಿಸ್ತರಿಸಲು ಪತ್ರ

ಎರಡನೇ ಮುಖಪುಟದಿಂದ...

'ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲು ಅಗತ್ಯವಾದ ಕ್ರಮ ಕೈಗೊಳ್ಳಲು ರಾಜ್ಯ ಚುನಾವಣಾ ಆಯೋಗಕ್ಕೆ ವಾರ್ಡ್‌ವಾರು ಮೀಸಲಾತಿ ಅಗತ್ಯವಿಲ್ಲ. ರಾಜ್ಯ ಚುನಾವಣಾ ಆಯೋಗ ಮಾರ್ಚ್ 16ರೊಳಗೆ ವಾರ್ಡ್‌ವಾರು ಮತದಾರರ ಪಟ್ಟಿ ಪ್ರಕಟಿಸಬೇಕಾಗಿತ್ತು. ಚುನಾವಣೆ ಪ್ರಕ್ರಿಯೆಗೆ ತಡೆಯಾಗದಂತೆ ವಾರ್ಡ್ ಮೀಸಲಾತಿ ಸೇರಿದಂತೆ ಎಲ್ಲ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಪೂರ್ಣಗೊಳಿಸಿದೆ' ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಪ್ರಮಾಣಪತ್ರದಲ್ಲಿ ತಿಳಿಸಿದ್ದರು.

ನಗರಾಭಿವೃದ್ಧಿ ಇಲಾಖೆ ಪ್ರಮಾಣ ಪತ್ರ ಸಲ್ಲಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಬೇಕು. ಆದರೆ ಈವರೆಗೆ ಸಲ್ಲಿಸಿಲ್ಲ ಎನ್ನಲಾಗಿದೆ.

ಮಾರ್ಚ್ 9ರಂದು ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಪ್ರಕಟಿಸಿ, ಮಾರ್ಚ್ 30ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿತ್ತು. ವೇಳಾಪಟ್ಟಿ ಪ್ರಕಾರ ಏಪ್ರಿಲ್ 18ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಬೇಕು. ಜಿಬಿಎ ಮುಖ್ಯ ಆಯುಕ್ತರು, ಶನಿವಾರ ಮಧ್ಯಾಹ್ನ ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಿದ್ದಾರೆ.

ಉಚಿತ ರೇಬೀಸ್ ಲಸಿಕೆ

ಬೆಂಗಳೂರು: ಬಸವ ಜಯಂತಿಯ ಅಂಗವಾಗಿ ಕರುಣ ಪ್ರಾಣಿ ಕಲ್ಯಾಣ ಸಂಘವು ಏಪ್ರಿಲ್ 20 ರಿಂದ ಮೇ 4ರವರೆಗೆ ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿನ ಕರುಣ ಪ್ರಾಣಿ ಆಶ್ರಯಧಾಮದಲ್ಲಿ ನಾಯಿ ಹಾಗೂ ಬೆಕ್ಕುಗಳಿಗೆ ಉಚಿತ ರೇಬೀಸ್ ರೋಗ ನಿರೋಧಕ ಲಸಿಕೆ, ಜಂತು ಹುಳು ನಾಶಕ ಔಷಧ ವಿತರಣೆ ಶಿಬಿರ ಆಯೋಜಿಸಲಾಗಿದೆ.

ಶ್ವಾನ ಮಾಲೀಕರು, ಪ್ರಾಣಿ ಪ್ರಿಯರು ಮತ್ತು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಮಾಹಿತಿಗೆ 91415–79398ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೇಲ್ಸೇತುವೆ: ಕಿ.ಮೀಗೆ ₹55 ಕೋಟಿ ಹೆಚ್ಚಳ

ಬಿ–ಸ್ಮೈಲ್: ಕಾರ್ಯಸಾಧ್ಯತಾ ವರದಿ, ಡಿಪಿಆರ್‌ಗೆ ಟೆಂಡರ್ ಮೊತ್ತಕ್ಕಿಂತ ಅಧಿಕ ವೆಚ್ಚ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ 11 ಎಲಿವೇಟೆಡ್ ಕಾರಿಡಾರ್/ ಮೇಲ್ಸೇತುವೆಗಳ ವೆಚ್ಚ ಒಂದೂವರೆ ವರ್ಷದಲ್ಲಿ ಒಂದು ಕಿಲೋಮೀಟರ್‌ಗೆ ₹55 ಕೋಟಿ ಹೆಚ್ಚಳವಾಗಿದೆ.

'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ'ಯಡಿ ನೀಡಲಾಗಿದ್ದ ಕಾರ್ಯಸಾಧ್ಯತಾ ವರದಿಯಲ್ಲಿ ನಮೂದಾಗಿದ್ದ ವೆಚ್ಚಕ್ಕೂ, ಏಪ್ರಿಲ್ 16ರಂದು ಸಚಿವ ಸಂಪುಟ ಅನುಮೋದನೆ ನೀಡಿರುವ ವೆಚ್ಚಕ್ಕೂ ಅಂತರ ಹೆಚ್ಚಾಗಿದೆ. ಅಲ್ಲದೆ, ನಿರ್ಮಾಣವಾಗುವ ಮೇಲ್ಸೇತುವೆಗಳ ಉದ್ದ 50 ಕಿಲೋಮೀಟರ್ ಕಡಿಮೆಯಾಗಿದೆ.

ಬಿಬಿಎಂಪಿಯಾಗಿದ್ದಾಗ, ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಿ, ಸುಗಮ ಸಂಚಾರಕ್ಕೆ ಅನುವಾಗಲು 16 ಮೇಲ್ಸೇತುವೆ/ ಅಂಡರ್‌ಪಾಸ್, ಎರಡು ಡಬಲ್ ಡೆಕರ್ ಕಾರಿಡಾರ್, ಎರಡು ಸುರಂಗ ರಸ್ತೆ ನಿರ್ಮಿಸಲು ₹54 ಸಾವಿರ ಕೋಟಿ ವೆಚ್ಚದ ಯೋಜನೆಗಳನ್ನು ರೂಪಿಸಿ, 'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ'ಯಡಿ ಕಾರ್ಯಸಾಧ್ಯತಾ ವರದಿಯನ್ನು ದೆಹಲಿಯ ಆಲ್ಟಿನೋಕ್ ಸಂಸ್ಥೆ 2025ರ ಡಿಸೆಂಬರ್‌ನಲ್ಲಿ ಸಲ್ಲಿಸಿತ್ತು.

₹14,964 ಕೋಟಿ	ಒಟ್ಟು 124.7 ಕಿ.ಮೀ ಉದ್ದದ 16 ಮೇಲ್ಸೇತುವೆ ಹಾಗೂ ಎರಡು ಡಬಲ್ ಡೆಕರ್‌ಗಾಗುವ ವೆಚ್ಚ (2025 ಡಿಸೆಂಬರ್‌ನಲ್ಲಿ ನೀಡಲಾದ ಕಾರ್ಯಸಾಧ್ಯತಾ ವರದಿ ಪ್ರಕಾರ)
₹13,140 ಕೋಟಿ	ಒಟ್ಟು 109.5 ಕಿ.ಮೀ ಉದ್ದ 16 ಎಲಿವೇಟೆಡ್ ಕಾರಿಡಾರ್/ ಮೇಲ್ಸೇತುವೆಗಳು (2025ರ ಜನವರಿಯಲ್ಲಿ ಡಿಪಿಆರ್‌ಗೆ ಕರೆಯಲಾಗಿದ್ದ ಟೆಂಡರ್ ಪ್ರಕಾರ)
₹13,262.70 ಕೋಟಿ	ಒಟ್ಟು 75.60 ಕಿ.ಮೀ ಉದ್ದದ 11 ಎಲಿವೇಟಡ್ ಕಾರಿಡಾರ್‌ಗಳ ಅಂದಾಜು ವೆಚ್ಚ (2026ರ ಏಪ್ರಿಲ್ 16ರಂದು ಸಚಿವ ಸಂಪುಟ ಅನುಮೋದನೆ ನೀಡಿರುವುದು)

ಜೆ.ಸಿ. ರಸ್ತೆ ಮತ್ತೆ ಅಗೆತ

ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಮೇಲ್ಸೇತುವೆ ನಿರ್ಮಿಸುವ ಯೋಜನೆಗೆ ಸಚಿವ ಸಂಪುಟ ಮತ್ತೆ ಅನುಮೋದನೆ ನೀಡಿದೆ. 2010ರಿಂದ ಜೆ.ಸಿ. ರಸ್ತೆ ಮಾರ್ಗವಾಗಿ 'ಸ್ಟೀಲ್ ಬ್ರಿಡ್ಜ್', 'ಮೀನಿನ ಹೊಟ್ಟೆಯಾಕಾರದ ಮೇಲ್ಸೇತುವೆ', 'ಹಡ್ಸನ್ ವೃತ್ತದಲ್ಲಿ ವೃತ್ತಾಕಾರದ ಮೇಲ್ಸೇತುವೆ' ಯೋಜನೆಗಳಿಗೂ ಈ ಹಿಂದೆ ಅನುಮತಿ ನೀಡಲಾಗಿತ್ತು. ಇದೀಗ ಮತ್ತೆ ಅಂತಹದ್ದೇ ರೀತಿಯ ಎಲಿವೇಟೆಡ್ ಕಾರಿಡಾರ್, ಮೇಲ್ಸೇತುವೆ, ಲೂಪ್‌ಗಳನ್ನು ನಿರ್ಮಿಸಲು ಬಿ–ಸ್ಮೈಲ್‌ಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.

2024ರ ನವೆಂಬರ್‌ನಿಂದ 2025ರ ನವೆಂಬರ್‌ವರೆಗೆ ಜೆ.ಸಿ. ರಸ್ತೆಯನ್ನು ಅಗೆದು, ವೈಟ್ ಟಾಪಿಂಗ್ ಕಾಮಗಾರಿಯನ್ನು ಕೋಟ್ಯಂತರ ವೆಚ್ಚದಲ್ಲಿ ಮುಗಿಸಲಾಗಿದೆ. ಈಗ ಎಲಿವೇಟೆಡ್ ಕಾರಿಡಾರ್ ಯೋಜನೆಯನ್ನು ಇಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ವೈಟ್ ಟಾಪಿಂಗ್ ಕಾಮಗಾರಿ ಮುಗಿದು ಇನ್ನೂ ಆರು ತಿಂಗಳಾಗಿಲ್ಲ. ಆದರೆ, ಮೇಲ್ಸೇತುವೆ ಕಾಮಗಾರಿಗೆ ರಸ್ತೆಯನ್ನು ಅಗೆಯಬೇಕಾಗುತ್ತದೆ. ಮೇಲ್ಸೇತುವೆ ಯೋಜನೆ ರೂಪಿಸಿದ್ದ ಬಿ–ಸ್ಮೈಲ್, ಜೆ.ಸಿ. ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸಿದೆ. ಇದರಿಂದ ಜನರ ಹಣ ಪೋಲಾಗುವ ಜೊತೆಗೆ, ಮತ್ತೆ ಜೆ.ಸಿ ರಸ್ತೆಯಲ್ಲಿ ಮಳಿಗೆಗಳು ಸೇರಿದಂತೆ ವಾಹನ ಸವಾರರಿಗೆ ವರ್ಷಾನುಗಟ್ಟಲೆ ಸಂಕಷ್ಟ ಎದುರಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

ಈ ವರದಿ ಪ್ರಕಾರ, 15 ಕಿಲೋಮೀಟರ್ ಡಬಲ್ ಡೆಕರ್ ಮೇಲ್ಸೇತುವೆಯೂ ಸೇರಿದಂತೆ 16 ಮೇಲ್ಸೇತುವೆಗಳನ್ನು ಕಿಲೋಮೀಟರ್ ಒಂದಕ್ಕೆ ₹120 ಕೋಟಿ ವೆಚ್ಚದಲ್ಲಿ ನಿರ್ಮಿಸಲು ವರದಿ ಸಲ್ಲಿಸಲಾಗಿತ್ತು. ಈ ವರದಿಯನ್ನೇ ಆಧಾರವಾಗಿಟ್ಟು ಕೊಂಡು, ಬಿಬಿಎಂಪಿ 2025ರ ಜನವರಿ ಯಲ್ಲಿ 16 ಮೇಲ್ಸೇತುವೆಗಳಲ್ಲಿ 10 ಮೇಲ್ಸೇತುವೆಗಳ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸಲು ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲೂ ಪ್ರತಿ ಕಿಲೋಮೀಟರ್ ವೆಚ್ಚ ₹120 ಕೋಟಿ ಇತ್ತು.

'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ' ವರದಿಯಲ್ಲಿರುವ 16 ಎಲಿವೇಟೆಡ್ ಕಾರಿಡಾರ್‌ಗಳಲ್ಲಿ ಕೆಲವನ್ನು ಕೈಬಿಟ್ಟು, ಕೆಲವು ಮೇಲ್ಸೇತುವೆಗಳ ಉದ್ದವನ್ನು ಮತ್ತಷ್ಟು ಹೆಚ್ಚಿಸಿ 11 ಎಲಿವೇಟೆಡ್ ಕಾರಿಡಾರ್‌ಗಳನ್ನು ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಪಟ್ಟಿ ಅಂತಿಮಗೊಳಿಸಿತ್ತು ಈ ಪಟ್ಟಿಯನ್ನೇ ರಾಜ್ಯ ಸಚಿವ ಸಂಪುಟ ಗುರುವಾರ ಅನೋದಿಸಿದೆ. ಈ 11 ಎಲಿವೇಟೆಡ್ ಕಾರಿಡಾರ್ ಅಥವಾ ಮೇಲ್ಸೇತುವೆಗಳ ಪ್ರತಿ ಕಿಲೋಮೀಟರ್ ನಿರ್ಮಾಣ ವೆಚ್ಚ ₹175 ಕೋಟಿ ಮೀರಿದೆ.

ಎಷ್ಟು ವರ್ಷ?: ಬಿ–ಸ್ಮೈಲ್ ಉದ್ದೇಶಿಸಿರುವ 11 ಮೇಲ್ಸೇತುವೆಗಳು ನಗರ ಕೇಂದ್ರೀಕೃತ ಪ್ರದೇಶದಲ್ಲೇ ಹೆಚ್ಚು ಹಾದುಹೋಗುತ್ತವೆ. ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಈ ಮೇಲ್ಸೇತುವೆಗಳು ಉತ್ತಮ ಪರಿಹಾರ ಎಂದು ಗೋಚರಿಸುತ್ತಿದ್ದರೂ, ಅವುಗಳ ನಿರ್ಮಾಣದ ಅವಧಿಯ ಬಗ್ಗೆ ಹೆಚ್ಚಿನ ಆತಂಕ ಮೂಡಿದೆ.

ಈಜಿಪುರ ಮೇಲ್ಸೇತುವೆ ನಿರ್ಮಾಣ ಆರಂಭವಾಗಿ ಎಂಟು ವರ್ಷವಾದರೂ ಇನ್ನೂ ಮುಗಿಯುವ ಹಂತಕ್ಕೆ ಬಂದಿಲ್ಲ. ಇನ್ನು, ರಾಜರಾಜೇಶ್ವರಿನಗರ, ಯಲಹಂಕ, ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ ಹಾಗೂ ಅಂಡರ್‌ಪಾಸ್‌ಗಳು ನಾಲ್ಕಾರು ವರ್ಷಗಳಿಂದ ನಡೆಯುತ್ತಿದ್ದು, ವಾಹನ ಸಂಚಾರರಿಗೆ ದುಃಸ್ವಪ್ನವಾಗಿ ಕಾಡುತ್ತಿವೆ. ಇನ್ನು ಈ 11 ಮೇಲ್ಸೇತುವೆಗಳ ಕಾಮಗಾರಿ ಆರಂಭವಾದರೆ, ನಗರದ ವಾಹನ ಸಂಚಾರಕ್ಕೆ ಸಂಚಕಾರ ಕಟ್ಟಿಟ್ಟ ಬುತ್ತಿ ಎಂದು ನಗರತಜ್ಞರು ಅಭಿಪ್ರಾಯಪಡುತ್ತಾರೆ.

ಎಲಿವೇಟೆಡ್ ಕಾರಿಡಾರ್ ಮಾದರಿ

'ಹಣ ಎಲ್ಲಿದೆ, ಯಾರು ಕೊಡುತ್ತಾರೆ?'

ಪದ್ಮನಾಭ ರೆಡ್ಡಿ

'ಬಿ–ಸ್ಮೈಲ್‌ನಿಂದ 11 ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ ನಿಜ. ಆದರೆ, ಬಿ–ಸ್ಮೈಲ್‌ಗೆ ಹಣ ಯಾರು ನೀಡುತ್ತಾರೆ ಎಂಬುದನ್ನೇ ತಿಳಿಸಿಲ್ಲ. ₹4,000 ಕೋಟಿಯನ್ನು ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ಬಿ–ಸ್ಮೈಲ್‌ಗೆ ನೀಡಲಾಗುತ್ತದೆ ಎಂದು 2025–26ನೇ ಸಾಲಿನ ಬಜೆಟ್‌ನಲ್ಲಿ ತಿಳಿಸಲಾಗಿತ್ತು. ಆದರೆ, ಅದರಲ್ಲಿ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ. ಇನ್ನು 2026–27ನೇ ಸಾಲಿನ ಬಜೆಟ್‌ನಲ್ಲಿ ₹4,000 ಕೋಟಿ ಸೇರಿದಂತೆ ಒಟ್ಟು ₹7 ಸಾವಿರ ಕೋಟಿ ನೀಡಲಾಗುತ್ತದೆ ಎಂದು ಹೇಳಲಾಗಿದೆ. ಆದರೆ, ಅಂದಾಜು ವೆಚ್ಚದ ಪುಸ್ತಕದಲ್ಲಿ ₹3 ಸಾವಿರ ಕೋಟಿ ನೀಡುವ ಬಗ್ಗೆ ಮಾತ್ರ ಮಾಹಿತಿ ಇದೆ. ಹೀಗಾಗಿ, ಟೆಂಡರ್, ಕಾರ್ಯಾದೇಶಕ್ಕೇ ಮೇಲ್ಸೇತುವೆಗಳ ಪ್ರಕ್ರಿಯೆ ನಿಲ್ಲಲಿದ್ದು, ರಸ್ತೆಗಳನ್ನು ಹಾಳು ಮಾಡಿ, ವರ್ಷಾನುಗಟ್ಟಲೆ ನಾಗರಿಕರಿಗೆ ಸಂಕಷ್ಟ ನೀಡುವ ಯೋಜನೆಗಳಾಗಲಿವೆ' ಎಂದು ಬಿಬಿಎಂಪಿಯ ಆಡಳಿತ ಪಕ್ಷದ ಮಾಜಿ ನಾಯಕ ಪದ್ಮನಾಭರೆಡ್ಡಿ ಹೇಳಿದರು.

'ಅಧಿಕಾರಿಗಳ ಕ್ರಿಮಿನಲ್ ಅಪರಾಧ'

ಎನ್‌.ಆರ್. ರಮೇಶ್

'ಜೆ.ಸಿ. ರಸ್ತೆಯಲ್ಲಿ ಇತ್ತೀಚೆಗೆ ತಾನೆ ₹80 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಮುಗಿದಿದೆ. ಅದೇ ರಸ್ತೆಯಲ್ಲಿ ಮೇಲ್ಸೇತುವೆ ಕಾಮಗಾರಿ ನಡೆಸಲು ಬಿ–ಸ್ಮೈಲ್ ಅಧಿಕಾರಿಗಳು ಮುಂದಾಗಿದ್ದಾರೆ. ನಾಗರಿಕರ ಹಣವನ್ನು ಈ ರೀತಿ ವ್ಯರ್ಥ ಮಾಡುವುದು ಕ್ರಿಮಿನಲ್ ಅಪರಾಧ. ಇಂತಹವರಿಗೆ ತಕ್ಕ ಶಿಕ್ಷೆ ಆಗಬೇಕು. ಸರ್ಕಾರಕ್ಕೆ ವೈಟ್ ಟಾಪಿಂಗ್ ಬಗ್ಗೆ ಮಾಹಿತಿ ಇದ್ದರೂ, ಅಲ್ಲೇ ಮೇಲ್ಸೇತುವೆ ನಿರ್ಮಿಸಲು ಅನುಮತಿ ನೀಡಿರುವುದು ಖಂಡನಾರ್ಹ. ಈ ಬಗ್ಗೆ ಹೋರಾಟ ಮಾಡುತ್ತೇವೆ' ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ತಿಳಿಸಿದರು.

ಸುದ್ದಿ 2 ನಿಮಿಷ

ದ್ವಿಭಾಷಾ ಸೂತ್ರದಿಂದ ಅನನುಕೂಲ:ಅಶೋಕ

ಬೆಂಗಳೂರು: ಶಾಲೆಗಳಲ್ಲಿ ದ್ವಿಭಾಷಾ ಸೂತ್ರ ಜಾರಿ ಮಾಡಿದರೆ ಅದರಿಂದ ವಿದ್ಯಾರ್ಥಿಗಳಿಗೆ ಅನನುಕೂಲವೇ ಹೆಚ್ಚು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಯಲ್ಲಿ ಅಂಕದ ಬದಲಿಗೆ ಗ್ರೇಡ್ ನೀಡುವ ತರಾತುರಿಯ ಕ್ರಮ ತೆಗೆದುಕೊಂಡಿದ್ದು ತುಘಲಕ್ ಆಡಳಿತಕ್ಕೆ ಸಾಕ್ಷಿ ಎಂದು ಟೀಕಿಸಿದರು.

'ನಾನೂ ಕನ್ನಡಾಭಿಮಾನಿ, ಕನ್ನಡ ಪರ ಹೋರಾಟ ಮಾಡಿ ಪೊಲೀಸರ ಲಾಠಿ ಪ್ರಹಾರದಲ್ಲಿ ಏಟು ತಿಂದವನೇ. ಆದರೆ, ಸರ್ಕಾರ ಹಿಂದಿ ವಿಷಯದಲ್ಲಿ ನಡೆದುಕೊಂಡ ರೀತಿ ಸರಿ ಇಲ್ಲ. ಯಾರೊಂದಿಗೂ ಚರ್ಚಿಸದೇ, ದಿಢೀರ್ ತೀರ್ಮಾನ ತೆಗೆದುಕೊಳ್ಳುವ ಮೂಲಕ ಚೆಲ್ಲಾಟ ಆಡಿದೆ' ಎಂದು ಕಿಡಿಕಾರಿದರು.

'ಶಾಲಾ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರ ಇದ್ದರೆ ಹೆಚ್ಚು ಸೂಕ್ತ. ತ್ರಿಭಾಷಾ ಸೂತ್ರ ಕೈಬಿಟ್ಟರೆ ಉರ್ದು ಶಾಲೆ ಮಕ್ಕಳು ಕನ್ನಡ ಕಲಿಯುವುದರಿಂದ ವಂಚಿತರಾಗುತ್ತಾರೆ' ಎಂದು ಅಶೋಕ ಹೇಳಿದರು.

ಬಿಜೆಪಿಗೆ ಮುಸ್ಲಿಮರ ಬೆಂಬಲ: 'ದಾವಣಗೆರೆಯಲ್ಲಿ ಮುಸ್ಲಿಮರಿಗೆ ಅನ್ಯಾಯವಾಗಿರುವುದಕ್ಕೆ ಮುಸ್ಲಿಂ ಮುಖಂಡರು ಕಾಂಗ್ರೆಸ್ ವಿರುದ್ಧ ಮಾತನಾಡುತ್ತಿದ್ದಾರೆ. ಸಚಿವ ಜಮೀರ್ ಅಹಮದ್ ಅವರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರ ಸಂಪೂರ್ಣ ಗೊಂದಲದಲ್ಲಿದೆ' ಎಂದರು.

'ಅಂಬೇಡ್ಕರ್ ಜೀವನ ಸ್ಫೂರ್ತಿ'

ಕೆ.ಆರ್.ಪುರ: 'ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವ, ಆದರ್ಶಗಳನ್ನು ಕಾಲೇಜು ವಿದ್ಯಾರ್ಥಿಗಳು ಅಳವಡಿಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು' ಎಂದು ಕೆ.ಆರ್.ಪುರ ಪದವಿ ಕಾಲೇಜಿನ ಪ್ರಾಂಶುಪಾಲೆ ನಳಿನಿ ಆರ್. ತಿಳಿಸಿದರು.

ಕೆ.ಆರ್.ಪುರ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಚಾಲಕ ಎಂ.ಸತೀಶ್ ಮಾತನಾಡಿ, 'ಅಂಬೇಡ್ಕರ್ ಅವರ ಹೋರಾಟ, ಶಿಕ್ಷಣ, ಸಂಘಟನೆ ಮತ್ತು ಮಹಿಳಾ ಸಬಲೀಕರಣ, ಹಿಂದೂ ಕೋಡ್ ಬಿಲ್ ಬಗ್ಗೆ ಅರಿತುಕೊಳ್ಳಬೇಕು' ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತ ಬೆಳಚಿಕ್ಕನ ಹಳ್ಳಿ ಶ್ರೀನಾಥ್, ಪ್ರಾಧ್ಯಾಪಕರಾದ ವಿವೇಕ್ ಐ. ಸರಿಕಾರ, ಲಕ್ಷ್ಮೀದೇವಮ್ಮ, ಎಚ್.ಪಿ. ರಾಜೇಶ್ವರಿ, ಬಿ.ಎಂ.ನಾಗರಾಜು ಭಾಗವಹಿಸಿದ್ದರು.

'ಉತ್ಸವ ಪ್ರಯಾಣ' ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್‌ನಲ್ಲಿ 'ಉತ್ಸವ ಪಯಣ'ವು ಉದ್ಘಾಟನೆಗೊಂಡಿತು.

ಸಂಗೀತ ನಿರ್ದೇಶಕ ಗುರುಕಿರಣ್ ಶೆಟ್ಟಿ, ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ಚೈತ್ರ ಜೆ. ಆಚಾರ್ ಅವರು ಪಾಲ್ಗೊಂಡು ಸಮಾರಂಭದ ಮೆರುಗು ಹೆಚ್ಚಿಸಿದರು. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಉಪ ಪ್ರಾಂಶುಪಾಲರು ಹಾಜರಿದ್ದರು.

ವಿಶೇಷವಾಗಿ ಸಿಇಟಿಯಲ್ಲಿ 1000 ರ‍್ಯಾಂಕ್ ಒಳಗೆ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ರಕ್ಷಣಾ ಇಲಾಖೆ ನೌಕರರ ಮಕ್ಕಳಿಗೆ ಶೇಕಡ 100 ಬೋಧನಾ ಶುಲ್ಕ ವಿನಾಯಿತಿ ಘೋಷಿಸಲಾಯಿತು. ಜೊತೆಗೆ, ಓಪನ್ ಹೌಸ್ ಪ್ರಾಜೆಕ್ಟ್ ಪ್ರದರ್ಶನದ ವಿಜೇತರಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಎರಡು ದಿನ ವಿವಿಧ ಕಾಲೇಜು ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಳ್ಳಲಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ ಪರಿಶೀಲನಾ ಸಭೆಯಲ್ಲಿ ಶರಣಪ್ರಕಾಶ್ ಪಾಟೀಲ

'ಔಷಧ–ಐಸಿಯು ಕೊರತೆ ನಿವಾರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ, ಅಸಮರ್ಪಕ ಐಸಿಯು ನಿರ್ವಹಣೆ ಮತ್ತು ಸ್ವಚ್ಛತೆ ಕಾಪಾಡದಿರುವ ಬಗ್ಗೆ ನಿರಂತರ ದೂರುಗಳು ಬರುತ್ತಿವೆ. ಇದೇ ರೀತಿ ಮುಂದುವರಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ ಎಚ್ಚರಿಕೆ ನೀಡಿದರು.

ಶುಕ್ರವಾರ ಇಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಪರಿಶೀಲನಾ ಸಭೆಯಲ್ಲಿ ಔಷಧ ಹಾಗೂ ಐಸಿಯು ಹಾಸಿಗೆಗಳ ಲಭ್ಯತೆ ಸೇರಿದಂತೆ ವಿವಿಧ ಮಾಹಿತಿಗಳನ್ನು ಅಧಿಕಾರಿಗಳಿಂದ ಪಡೆದ ಅವರು, 'ಔಷಧ ಖರೀದಿ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಡೆಸಲು ಆಸ್ಪತ್ರೆ ಮುಖ್ಯಸ್ಥರಿಗೆ ಈಗಾಗಲೇ ಜವಾಬ್ದಾರಿ ನೀಡಲಾಗಿದೆ' ಎಂದರು.

'ಔಷಧ ದಾಸ್ತಾನು ಖಾಲಿಯಾಗುವವರೆಗೆ ಏಕೆ ಕಾಯುತ್ತಾರೆ? ಎಲ್ಲ ಸರ್ಕಾರಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರು ಕನಿಷ್ಠ ಮೂರು ತಿಂಗಳ ಮುಂಚಿತವಾಗಿ ಔಷಧ ಖರೀದಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಬೇಕು' ಎಂದು ಅವರು ಸೂಚಿಸಿದರು.

'ಐಸಿಯು ಹಾಸಿಗೆಗಳ ಕೊರತೆಯ ಬಗ್ಗೆಯೂ ಸಾಕಷ್ಟು ದೂರುಗಳು ಬಂದಿವೆ. ಹೆಚ್ಚುವರಿ ಐಸಿಯು ಹಾಸಿಗೆಗಳಿಗಾಗಿ, 10 ಅಂತಸ್ತಿನ ವಿಕ್ಟೋರಿಯಾ ಆಸ್ಪತ್ರೆ ಕಟ್ಟಡದಲ್ಲಿ ಮಹಡಿಯನ್ನು ಗೊತ್ತುಪಡಿಸಬೇಕು' ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ಮತ್ತು ನಿರ್ದೇಶಕಿ ಡಾ.ಬಿ.ಎಲ್. ಸುಜಾತಾ ರಾಥೋಡ್ ಅವರಿಗೆ ಸೂಚಿಸಿದರು.

'ಹೊಸ ಕಟ್ಟಡವನ್ನು ಮೇ 2ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ' ಎಂದು ಮಾಹಿತಿ ನೀಡಿದ ಅವರು, 'ಇಲಾಖೆಯ ಎಂಜಿನಿಯರಿಂಗ್ ವಿಭಾಗವು ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಮೇ ಅಂತ್ಯದವರೆಗೆ ಗಡುವು ನೀಡಲಾಗಿದೆ' ಎಂದು ತಿಳಿಸಿದರು.

ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ವೈದ್ಯಕೀಯ ಸಂಸ್ಥೆ ಹಾಗೂ ಆಸ್ಪತ್ರೆಗಳ ಮುಖ್ಯಸ್ಥರು

'ಪಿಡಿಒಗಳಿಗೆ ಸ್ಥಳೀಯ ಸಮಸ್ಯೆಗಳ ಅರಿವೇ ಇಲ್ಲ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಹಲವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳೆಷ್ಟು? ಸ್ಥಳೀಯ ಸಮಸ್ಯೆಗಳೇನು ಎಂಬುದರ ಅರಿವು ಇಲ್ಲ. ಖಾತೆ, ಭೂ ವ್ಯಾಜ್ಯಗಳು ಹಾಗೂ ಅದರಿಂದ ಬರುವ ಆದಾಯಗಳಿಗೆ ಸೀಮಿತರಾಗಿದ್ದಾರೆ ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ಮಾಜಿ ಅಧ್ಯಕ್ಷರು ಹಾಗೂ ಮುಖಂಡರು ದೂರಿದರು.

ನೀರಿನ ಸಮಸ್ಯೆ ಹಾಗೂ ಇತರೆ ಕುಂದು ಕೊರತೆಗಳ ಬಗ್ಗೆ ಶಾಸಕ ಎಸ್.ಟಿ. ಸೋಮಶೇಖರ್ ನೇತೃತ್ವದಲ್ಲಿ ನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸಮಸ್ಯೆಗಳನ್ನು ಮುಖಂಡರು ಮುಂದಿಟ್ಟರು.

'ಜಲಜೀವನ್ ಮಿಷನ್ ಹಳ್ಳ ಹಿಡಿದಿದೆ. ಅರ್ಧಂಬರ್ಧ ಕಾಮಗಾರಿ ಮಾಡಲಾಗಿದೆ. ಈ ಯೋಜನೆಗಾಗಿ ಅಗೆಯಲಾದ ರಸ್ತೆಗಳು ಗುಂಡಿಗಳಾಗಿವೆ. ಹಲವೆಡೆ ನೀರಿನ ಸಂಪರ್ಕ ನೀಡದೆ ತೊಂದರೆ ಉಂಟು ಮಾಡಲಾಗುತ್ತಿದೆ' ಎಂದು ಅಲವತ್ತುಕೊಂಡರು.

ತಾವರೆಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಚರಂಡಿ ಸ್ವಚ್ಛತೆ ಕಾಮಗಾರಿ ಪೂರ್ಣಗೊಳಿಸದೆ ಬಿಲ್ ಪಡೆಯಲಾಗಿದೆ. ರಾಮೋಹಳ್ಳಿ ಗ್ರಾಮ ಹಾಗೂ ಅಗರ ಪಂಚಾಯಿತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೈಸ್ ಸಂಸ್ಥೆ ಗೋಮಾಳ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಟ್ಯಾಂಕ್ ನಿರ್ಮಾಣಕ್ಕೆ ಅನುವು ಮಾಡಿಕೊಡುತ್ತಿಲ್ಲ, ಶೀಘ್ರವೇ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, 'ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಕುಡಿಯುವ ನೀರು ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಕೆಟ್ಟಿರುವ ಕೊಳವೆಬಾವಿಗಳನ್ನು ಸರಿಪಡಿಸಬೇಕು. ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಟ್ಯಾಂಕರ್ ಮೂಲಕ ನೀರನ್ನು ಮನೆ ಮನೆಗೆ ತಲುಪಿಸಬೇಕು' ಎಂದು ಸೂಚಿಸಿದರು.

ಪಿಡಿಒಗಳು ಕಚೇರಿಯಲ್ಲಿ ಕುಳಿತು ಸಮಸ್ಯೆ ಆಲಿಸಿದರೆ ಬಹುತೇಕ ನಾಗರಿಕ ಬವಣೆಗಳಿಗೆ ಪಂಚಾಯಿತಿ ವ್ಯಾಪ್ತಿಯಲ್ಲೇ ಪರಿಹಾರ ದೊರಕಲಿದೆ. ಕ್ಷೇತ್ರದ ಜನರ ಸಮಸ್ಯೆ ಹೇಳಲು ಬಂದಾಗ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಬೇಕು ಎಂದರು.

ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಮಹಾಲಕ್ಷ್ಮಿಪುರದ ಎರಡನೇ ಹಂತದಲ್ಲಿ ನಿರ್ಮಾಣವಾಗಿರುವ ಜೋಯಾಲುಕ್ಕಾಸ್ ನೂತನ ಮಳಿಗೆಯನ್ನು ಸಂಸ್ಥೆಯ ಅಧ್ಯಕ್ಷ ಜಾಯ್ ಆಲುಕ್ಕಾಸ್ ಅವರು ಶುಕ್ರವಾರ ಉದ್ಘಾಟಿಸಿದರು. ಕಾರ್ಯನಿರ್ವಾಹಕ ನಿರ್ದೇಶಕರಾದ ಆಂಥೋನಿ ಜೋಸ್, ಥಾಮಸ್ ಮ್ಯಾಥ್ಯೂ, ಮಾಜಿ ಶಾಸಕ ಕೇಶವ ಮೂರ್ತಿ, ಮುಖ್ಯ ಕಾರ್ಯಾಚರಣೆ ಅಧಿಕಾರಿ ಹೆನ್ರಿ ಜಾರ್ಜ್, 'ರಿಟೇಲ್ ಹೆಡ್' ರಾಜೇಶ್ ಕೃಷ್ಣನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

14 ಜಿಟಿಟಿಸಿ ಅಭಿವೃದ್ಧಿಗೆ ₹140 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ 14 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳಿಗೆ (ಜಿಟಿಟಿಸಿ) ಅಗತ್ಯವಿರುವ ಮೂಲಸೌಕರ್ಯಗಳ ಸೃಷ್ಟಿ, ಯಂತ್ರೋಪಕರಣ ಮತ್ತು ಸಲಕರಣೆಗಳ ಖರೀದಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದಕ್ಕಾಗಿ ನಬಾರ್ಡ್ ₹140 ಕೋಟಿ ಅನುದಾನ ಪಡೆಯಲು ಅನುಮೋದನೆ ನೀಡಲಾಗಿದೆ ಎಂದು ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಮುಖ ತೀರ್ಮಾನಗಳು:

- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿವಿಧ ಕಾರ್ಯಕ್ರಮಗಳಿಗೆ ಅವಶ್ಯವಿರುವ ರಾಸಾಯನಿಕಗಳು, ರೋಗ ಪತ್ತೆ ಕಿಟ್‌ಗಳು, ಪರಿಕರಗಳು ಮತ್ತು ಉಪಕರಣಗಳ ಖರೀದಿಗೆ 15 ನೇ ಹಣಕಾಸು ಆಯೋಗದ ಅನುದಾನದ ಉಳಿತಾಯದಲ್ಲಿ ₹180.24 ಕೋಟಿ ಬಳಸಲು ಒಪ್ಪಿಗೆ
- ಸುಪ್ರೀಂ ಕೋರ್ಟ್ 2026ರ ಫೆಬ್ರುವರಿ 26 ರಂದು ನೀಡಿರುವ ಆದೇಶದಂತೆ ಸಾರಿಗೆ ಇಲಾಖೆಯಲ್ಲಿನ 16 ಮಂದಿ ಮೋಟಾರು ನಿರೀಕ್ಷಕರ ಹುದ್ದೆಗೆ ಏಪ್ರಿಲ್ 1 ರಂದು ಆದೇಶ ಹೊರಡಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ
- ಕಾರವಾರ ವಿಮಾನ ನಿಲ್ದಾಣದ ಅಭಿವೃದ್ಧಿ ಕಾರ್ಯವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ವರ್ಗಾಯಿಸಲು ಅನುಮೋದನೆ
- ಬೆಂಗಳೂರಿನಲ್ಲಿ ಜೈವಿಕ ತಂತ್ರಜ್ಞಾನಕ್ಕಾಗಿ ಕೃತಕ ಬುದ್ಧಿಮತ್ತೆ ಉತ್ಕೃಷ್ಟತಾ ಕೇಂದ್ರವನ್ನು ₹20 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಒಪ್ಪಿಗೆ
- ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಆಸ್ಪತ್ರೆಯ ನವೀಕರಣ ಕಾಮಗಾರಿಯನ್ನು ₹14 ಕೋಟಿ ಹಾಗೂ ಬಾಗೇಪಲ್ಲಿಯಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆಯ ಉನ್ನತೀಕರಣ ಕಾಮಾಗಾರಿ ₹10 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಒಪ್ಪಿಗೆ
- ಜಲ್ ಜೀವನ್ ಮಿಷನ್ ವಿಸ್ತರಿತ ಹಂತದಲ್ಲಿ ಪುನರಚಿತ ಜಲ ಜೀವನ್ ಮಿಷನ್ 2.0 ಅನ್ನು ಜಾರಿಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮಧ್ಯೆ ತಿಳಿವಳಿಕೆ ಒಡಂಬಡಿಕೆ ಮಾಡಿಕೊಳ್ಳಲು ಅನುಮೋದನೆ
- ಯಾದಗಿರಿ ತಾಲ್ಲೂಕು ಹತ್ತಿಕುಣಿ ಕ್ಲಸ್ಟರ್ ಯೋಜನೆ(₹72 ಕೋಟಿ) ಮತ್ತು ಸಿಂಧನೂರು ತಾಲ್ಲೂಕು ತುಂಗಭದ್ರಾ ಎಡದಂಡೆ ಕಾಲುವೆ ವಿತರಣಾ ನಾಲೆ (₹139 ಕೋಟಿ) ಸೇರಿದಂತೆ ಎರಡು ಕ್ಲಸ್ಟರ್ ಯೋಜನೆಗಳಿಗೆ ಒಪ್ಪಿಗೆ ನೀಡಿದ್ದು, ಈ ಯೋಜನೆಗಳ ಒಟ್ಟು ಮೊತ್ತ ₹139.25 ಕೋಟಿ

'ತ್ಯಾಜ್ಯ ಗುತ್ತಿಗೆದಾರರ ವಿರುದ್ಧ ಕ್ರಮ'

ಬೆಂಗಳೂರು: ತ್ಯಾಜ್ಯ ವಿಲೇವಾರಿಯಲ್ಲಿ ತೃಪ್ತಿಕರವಾಗಿ ಕೆಲಸ ಮಾಡದ ಗುತ್ತಿಗೆದಾರರಿಗೆ ನೋಟಿಸ್ ನೀಡಿ, ಅವರನ್ನು ವಜಾಗೊಳಿಸಿ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಸೂಚಿಸಿದರು. ಘನತ್ಯಾಜ್ಯ ಸಮಸ್ಯೆ ಹೆಚ್ಚಾಗಿರುವ ಕಾರಣ ಘನತ್ಯಾಜ್ಯ ನಿರ್ವಹಣಾ ವಿಭಾಗದ ಹಿರಿಯ ಅಧಿಕಾರಿಗಳೊಂದಿಗೆ ಆಯುಕ್ತರು ಸಭೆ ನಡೆಸಿದರು. ರಸ್ತೆಗಳಲ್ಲಿ ಕಸ ಎಸೆಯುವವರಿಗೆ ಭಾರಿ ಪ್ರಮಾಣದಲ್ಲಿ ದಂಡ ವಿಧಿಸಲು ನಿರ್ದೇಶನ ನೀಡಿದರು.

ಏಕಬಳಕೆಯ ಪ್ಲಾಸ್ಟಿಕ್ ಮೇಲಿನ ನಿಷೇಧವನ್ನು ಜಾರಿಗೆ ತರಲು ಅಂಗಡಿ ಮುಗ್ಗಟ್ಟುಗಳ ಮೇಲೆ ಆಗಿಂದಾಗ್ಗೆ ದಾಳಿ ಮಾಡಲು ಸೂಚಿಸಿದರು.

ನಗರದಲ್ಲಿ ಇಂದು

ವಜ್ರ ಮಹೋತ್ಸವ ಆಚರಣೆ ಸಂಭ್ರಮ, ಚೈತ್ರದ ಚಿಗುರು- ಮಕ್ಕಳ ಬೇಸಿಗೆ ಶಿಬಿರ: ಮಧುಚೈತ್ರ ವಿ.ಎಂ., ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಬೆಳಿಗ್ಗೆ 9.30ರಿಂದ

ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದ ಅಧ್ಯಕ್ಷರು ಮತ್ತು ಸದಸ್ಯರು 22ನೇ ದ್ವೈವಾರ್ಷಿಕ ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದ ಉದ್ಘಾಟನೆ: ಸೂರ್ಯಕಾಂತ್, ಅತಿಥಿಗಳು: ಸಿದ್ದರಾಮಯ್ಯ, ಬಿ.ವಿ.ನಾಗರತ್ನ, ಅರವಿಂದ್ ಕುಮಾರ್, ಅಧ್ಯಕ್ಷತೆ: ವಿಭು ಬಖ್ರು, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10

ಸೂರ್ಯಕಾಂತ್

ವಾರ್ಷಿಕ ಆರನೇ ಘಟಿಕೋತ್ಸವ: ಅತಿಥಿಗಳು: ಬಿ.ರಮೇಶ್, ಉಮಾ ರಾಮಕೃಷ್ಣನ್, ಅಧ್ಯಕ್ಷತೆ: ಎಸ್.ಎಸ್. ನಾಗಾನಂದ್, ಆಯೋಜನೆ: ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 10

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, 'ವರ್ಣ ಪಲ್ಲಟ' ನಾಟಕ ಪ್ರದರ್ಶನ: ವಿಶೇಷ ಉಪನ್ಯಾಸ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಬಿ.ಸಿ. ನಾಗೇಂದ್ರಕುಮಾರ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 10.30

ಕರ್ನಾಟಕ ಲೋಕಾಯುಕ್ತದ ನಾಲ್ಕು ದಶಕಗಳ ಸಾರ್ಥಕ ಪಯಣ: ಉದ್ಘಾಟನೆ: ಸೂರ್ಯಕಾಂತ್, ಅತಿಥಿಗಳು: ಅರವಿಂದ್ ಕುಮಾರ್, ಬಿ.ಎಸ್. ಪಾಟೀಲ, ಕೆ.ಎನ್. ಫಣೀಂದ್ರ, ಬಿ.ವೀರಪ್ಪ, ಆಯೋಜನೆ: ಕರ್ನಾಟಕ ಲೋಕಾಯುಕ್ತ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 2.30ರಿಂದ

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಜಯಮಾಲಾ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಜೈನ ಸಾಹಿತ್ಯ ಸಿರಿ, 'ನಾಗಚಂದ್ರ ಕವಿಯ ಪಂಪ ರಾಮಾಯಣದ ವೈಶಿಷ್ಟ್ಯ ಒಂದು ನೋಟ'ದ ಉಪನ್ಯಾಸ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಕಠಾರಿ ವಿಜಯ ಕುಮಾರ್ ಪಿ., ಉಪಸ್ಥಿತಿ: ಮಮತಾ ಕಾಂತರಾಜ್, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್, ಚಕ್ರೇಶ್ವರಿ ಮಹಿಳಾ ಸಮಾಜ, ಸ್ಥಳ: ಶ್ರೀಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಜಯನಗರ ಮೂರನೇ ಬಡಾವಣೆ, ಸಂಜೆ 4.15ರಿಂದ

ವಸುಂಧರ, ಪರಮಶಿವಯ್ಯ ದತ್ತಿ ಹಸ್ತಪ್ರತಿ ಮತ್ತು ತಾಳೆಗರಿ ಅಧ್ಯಯನ ಪುರಸ್ಕಾರ ಪ್ರದಾನ: ಆರ್. ಲಕ್ಷ್ಮೀನಾರಾಯಣ, ಪ್ರಶಸ್ತಿ ಸ್ವೀಕರಿಸುವವರು: ರೋಹಿತ ಈಶ್ವರ್, ಅತಿಥಿ: ವಸುಂಧರ ಪರಮಶಿವಯ್ಯ, ಆಯೋಜನೆ ಮತ್ತು ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಎಸ್‌ವಿಎನ್ ವಾರ್ಷಿಕ ಸಂಗೀತೋತ್ಸವ: ಗಾಯನ: ರೂಪಾ ಶ್ರೀಕಾಂತ್, ಪಿಟೀಲು: ಕಾರ್ತಿಕೇಯ ಆರ್., ಮೃದಂಗ: ಅನಿರುದ್ಧ ವಾಸುದೇವ್, ಗಾಯನ: ಸಂಗೀತಾ ಕಟ್ಟಿ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ರಾಜೇಂದ್ರ ನಾಕೋಡ್, ಆಯೋಜನೆ: ಶ್ರೀರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ: ಎಸ್‌ವಿಎನ್ ಸ್ಮಾರಕ ಸಭಾಂಗಣ, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಕನಕಪುರ ರಸ್ತೆ, ಮಧ್ಯಾಹ್ನ 3.15ರಿಂದ



ಸಂಗೀತಾ ಕಟ್ಟಿ

ಕೆ.ವಿ.ನೇತ್ರಾವತಿ ಅವರ 'ಜೀವನಾವೆ', ಕೆ. ಶರೀಫಾ ಅವರ 'ಸತಿಯೆಂಬ ಶಬುದಾ', ಚಾಂದನಿ ಅವರ 'ಇಟ್ಟಿಗೆ ಗೂಡಿನ ಕಾವು' ಪುಸ್ತಕಗಳ ಬಿಡುಗಡೆ ಮತ್ತು ಅಂಬೇಡ್ಕರ್ ಹಬ್ಬ: ಪುಸ್ತಕ ಬಿಡುಗಡೆ: ರೇವತಿ, ಪುಸ್ತಕದ ಕುರಿತು: ದು. ಸರಸ್ವತಿ, ಟಿ. ಪದ್ಮಶ್ರೀ, ಸಿರಿಗೌರಿ, ಧನಲಕ್ಷ್ಮಿ ಸಿ., ಆಯೋಜನೆ: ಕೌದಿ ಪ್ರಕಾಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅಪೂರ್ವ ಹೆಮ್ಮಿಗೆ ಅರುಣ್ ಮತ್ತು ತಂಡ, ಕರ್ನಾಟಕ ಸಂಗೀತ ಕಛೇರಿ: ಮೈಸೂರು ನಾಗರಾಜ್, ಮೈಸೂರು ಮಂಜುನಾಥ್, ನೈವೇಲಿ ವೆಂಕಟೇಶ್, ಪ್ರಮತ್ ಕಿರಣ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಸಮನ್ವಯ ಆರ್ಟ್ಸ್ ಫೆಸ್ಟಿವಲ್: ಭರತನಾಟ್ಯ ಪ್ರದರ್ಶನ: ಆರ್. ನಾಗಸ್ವರ, ಜಯಶೀಲ ವಿನೋದ್, ಅತಿಥಿಗಳು: ಆರ್.ವಿ. ರಾಘವೇಂದ್ರ, ರಂಗಶ್ರೀ, ಆಯೋಜನೆ: ಶ್ರೀರಾಜರಾಜೇಶ್ವರಿ ಕಲಾನಿಕೇತನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಜಿಟಿಎನ್ ಶತಮಾನೋತ್ಸವ ಸಂಗಮ: ಭಾಷಣಕಾರರು: ನಾಗೇಶ ಹೆಗಡೆ, ಸಂಗೀತ ಕಛೇರಿ: ಗಾಯನ: ಟಿ.ಎಂ. ಕೃಷ್ಣ, ಪಿಟೀಲು: ಅಕ್ಕರೈ ಸ್ವರ್ಣಲತಾ, ಖಂಜೀರಾ: ಅನಿರುದ್ಧ ಅತ್ರೇಯ, ಮೃದಂಗ: ಚಾರು ಹರಿಹರನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಸಂಜೆ 5.30ರಿಂದ

33ನೇ ಶ್ರೀರಾಮನವಮಿ ಸಂಗೀತೋತ್ಸವ: 'ಸೂಜಿ ಮಲ್ಲಿಗೆ' ನಾಟಕ ಪ್ರದರ್ಶನ: ಪ್ರಸ್ತುತಿ: ಕಲಾಗಂಗೋತ್ರಿ ತಂಡ, ಸಾಹಿತ್ಯ: ಸಚೇತನ್ ಭಟ್, ನಿರ್ದೇಶನ: ಸಿದ್ಧಾರ್ಥ್ ಭಟ್, ನಿರ್ವಹಣೆ: ಬಿ.ವಿ. ರಾಜಾರಾಮ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5.30ರಿಂದ

ನಾಡು–ನುಡಿಗೆ ದುಡಿದ ಸಾರಿಗೆ ಸಂಸ್ಥೆಯ ಕನ್ನಡ ಪರಿಚಾರಕರಿಗೆ ಅಭಿನಂದನೆ: ಅಭಿನಂದಿಸುವವರು: ಎಲ್.ಎನ್. ಮುಕುಂದರಾಜ್, ಅಭಿನಂದನಾ ನುಡಿ: ಸಂತೋಷ್ ಹಾನಗಲ್, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಪ್ರಾಸ್ತಾವಿಕ ನುಡಿ: ಕೆ.ಎಸ್. ಪ್ರಭುಸ್ವಾಮಿ, ಉಪಸ್ಥಿತಿ: ಕೆ.ಎಸ್.ಎಂ. ಹುಸೇನ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

'ಶ್ರೀ ಪ್ರಹ್ಲಾದ ಚರಿತೆ' ಕಥಾಪ್ರಸಂಗ: ರವೀಂದ್ರ ನರಹರಿ, ವೇಮಗಲ್ ನಾರಾಯಣಸ್ವಾಮಿ, ಆಯೋಜನೆ: ಡೆಸ್ಟಿನೇಷನ್ ಹೆರಿಟೇಜ್, ಸ್ಥಳ: ಶ್ರೀಜಯರಾಮ ಸೇವಾ ಮಂಡಲಿ, ಎಂಟನೇ ಬ್ಲಾಕ್, ಜಯನಗರ, ಸಂಜೆ 6

ವೀಕೆಂಡ್ ನಾಟಕೋತ್ಸವ: 'ಮಾಯಾ ದ್ವೀಪ' ನಾಟಕ ಪ್ರದರ್ಶನ: ಪ್ರಸ್ತುತಿ: ನೆನಪು ಟ್ರಸ್ಟ್, ನಿರ್ದೇಶನ: ಪುನೀತ್ ರಂಗಾಯಣ, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಜಿಲ್ಲಾ ಆಸ್ಪತ್ರೆಯಲ್ಲಿ ಹಿಡಿತ ಸಾಧಿಸಲು ಯತ್ನಿಸಿದ್ದ ನಕಲಿ ಐಎಎಸ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬಂಧನದಲ್ಲಿರುವ ನಕಲಿ ಐಎಎಸ್ ಅಧಿಕಾರಿ ಮಿಥುನ್, ಮೂರು ತಿಂಗಳ ಹಿಂದಷ್ಟೆ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಸಿಬ್ಬಂದಿ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದ್ದ ಎನ್ನಲಾಗಿದೆ. ಅಸಲಿ ಅಧಿಕಾರಿ ಎಂದು ನಂಬಿದ್ದ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಎಚ್.ವಿ. ಚಂದ್ರಶೇಖರ್ ಅವರಿಂದ ಪೊಲೀಸರು ಶುಕ್ರವಾರ ಹೇಳಿಕೆ ದಾಖಲಿಸಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ನಡೆದ ಸಭೆಯಲ್ಲಿ ಮಿಥುನ್ ಕುಳಿತಿರುವ ಚಿತ್ರಗಳು, ಬಸವತತ್ವ ಪೀಠದ ಸಮಾವೇಶದಲ್ಲಿ ಸಿರಿಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಸನ್ಮಾನಿಸಿರುವ ಚಿತ್ರಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಮತ್ತೊಂದೆಡೆ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿ, 'ನಕಲಿ ಅಧಿಕಾರಿಯನ್ನು ಮೆಡಿಕಲ್ ಶಾಪ್ ಮಾಲೀಕರಿಗೆ ಡಾ. ಚಂದ್ರಶೇಖರ್ ಪರಿಚಯ ಮಾಡಿಸಿದ್ದರಿಂದ ₹41 ಲಕ್ಷದಷ್ಟು ವಂಚನೆಯಾಗಿದೆ. ಔಷಧಿ ಸರಬರಾಜು ಮಾಡುವ ಗುತ್ತಿಗೆ ಪಡೆಯಲು ಚಂದ್ರಶೇಖರ್ ಅವರನ್ನೇ ನಂಬಿ ಮೆಡಿಕಲ್ ಶಾಪ್ ಮಾಲೀಕ ಹಣ ಕೊಟ್ಟಿದ್ದಾರೆ. ಚಂದ್ರಶೇಖರ್ ಅವರನ್ನು ಅಮಾನತು ಮಾಡಬೇಕು' ಎಂದು ಆಗ್ರಹಿಸಿದರು.

'ಜಿಲ್ಲಾ ಆಸ್ಪತ್ರೆಯ ಅಧಿಕಾರಿ ಅಥವಾ ಸಿಬ್ಬಂದಿಯೊಂದಿಗೆ ಮಿಥುನ್ ಸಭೆ ನಡೆಸಿಲ್ಲ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ' ಎಂದು ಚಿಕ್ಕಮಗಳೂರು ವೈದ್ಯಕೀಯ ಕಾಲೇಜಿನ ಡೀನ್ ಡಾ. ಹರೀಶ್ ಸ್ಪಷ್ಟಪಡಿಸಿದರು.

ಔಷಧಿ ಅಂಗಡಿ ಮಾಲೀಕ ಎಸ್.ಜಿ. ಸತೀಶ್ ನೀಡಿರುವ ದೂರು ಆಧರಿಸಿ ಬೆಂಗಳೂರಿನ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಚಂದ್ರಶೇಖರ್ ಕೂಡ ಠಾಣೆಗೆ ಹೋಗಿ ಶುಕ್ರವಾರ ಹೇಳಿಕೆ ನೀಡಿದ್ದಾರೆ.

ಕೆಂಪೇಗೌಡ ಜಯಂತಿ: ಪಾಲಿಕೆಗಳಿಂದ ಹಣ

ಜಯಂತಿ, ಭವನ, ಪ್ರಾಧಿಕಾರಕ್ಕೆ ಕೋಟ್ಯಂತರ ಹಣ ನೀಡಲು ಆದೇಶ

● ಆರ್.ಮಂಜುನಾಥ್

ಮುಖ್ಯಾಂಶಗಳು

- ಐದು ನಗರ ಪಾಲಿಕೆಗಳ ಬಜೆಟ್‌ಗೆ ಸರ್ಕಾರ ಅನುಮೋದನೆ
- ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿಗೆ ನಗರ ಪಾಲಿಕೆಯಿಂದ ಹಣ
- ಮೊತ್ತ ನಿಗದಿಪಡಿಸಿದ ನಗರಾಭಿವೃದ್ಧಿ ಇಲಾಖೆ

ಬೆಂಗಳೂರು: ಐದು ನಗರ ಪಾಲಿಕೆಗಳ ಬಜೆಟ್‌ಗೆ ಅನುಮೋದನೆ ನೀಡುವ ಜೊತೆಗೆ, ರಾಜ್ಯದಾದ್ಯಂತ ನಡೆಯುವ ಕೆಂಪೇಗೌಡ ಜಯಂತಿ ಆಚರಣೆ, ಭವನ ನಿರ್ಮಾಣ, ಪಾರಂಪರಿಕ ತಾಣಗಳ ಅಭಿವೃದ್ಧಿಗೆ ಪ್ರಾಧಿಕಾರಕ್ಕೆ ಹಣ ನೀಡುವಂತೆ ಸರ್ಕಾರ ಸೂಚಿಸಿದೆ.

ರಾಜ್ಯ ಎಲ್ಲ ತಾಲ್ಲೂಕುಗಳಲ್ಲಿ ನಡೆಯುವ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ, ಬೆಂಗಳೂರು ವಕೀಲರ ಸಂಘದ ಭವನ ನಿರ್ವಹಣೆ, ತುಮಕೂರು, ಮಾಗಡಿಯಲ್ಲಿ ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿಗೆ ನಗರ ಪಾಲಿಕೆಗಳು ಹಣ ನೀಡಬೇಕೆಂದು ಮೊತ್ತವನ್ನು ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

ರಾಜ್ಯ ಸರ್ಕಾರ ಪ್ರತಿ ವರ್ಷ ನೀಡುವ ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯ ₹3 ಸಾವಿರ ಕೋಟಿ ಅನುದಾನದಲ್ಲಿ, ₹2,199 ಕೋಟಿಯನ್ನು ಐದು ನಗರ ಪಾಲಿಕೆಗಳಿಗೆ ಹಂಚಿಕೆ ಮಾಡಿದ್ದು, ಉಳಿದ ಹಣದಲ್ಲಿ, ₹600 ಕೋಟಿಯನ್ನು ಬಿ-ಸ್ಮೈಲ್ ಸಂಸ್ಥೆಗೆ ಹಾಗೂ ಬಿಎಸ್‌ಡಬ್ಲ್ಯುಎಂಎಲ್‌ಗೆ ₹200.01 ಕೋಟಿಯನ್ನು ಹಂಚಿಕೆ ಮಾಡಲಾಗಿದೆ. ರಾಜ್ಯ ಹಣಕಾಸು ಆಯೋಗದ ₹250 ಕೋಟಿ ವಿಶೇಷ ಅನುದಾನವನ್ನು ನಾಲ್ಕು ನಗರ ಪಾಲಿಕೆಗಳಿಗೆ ಹಂಚಿಕೆ ಮಾಡಲಾಗಿದೆ.

ವಾರ್ಡ್‌ಗೆ ₹2.5 ಲಕ್ಷ: ಐದು ನಗರ ಪಾಲಿಕೆಗಳು ಪ್ರತಿ ವಾರ್ಡ್‌ಗಳ ನಿರ್ವಹಣೆಗೆ ತಲಾ ₹5 ಲಕ್ಷವನ್ನು ಬಜೆಟ್‌ನಲ್ಲಿ ಮೀಸಲಿರಿಸಿದ್ದವು. ಅದನ್ನು ಪರಿಷ್ಕರಿಸಿರುವ ನಗರಾಭಿವೃದ್ಧಿ ಇಲಾಖೆ, ಪ್ರತಿ ವಾರ್ಡ್‌ಗೆ ₹2.5 ಲಕ್ಷಕ್ಕೆ ಮಿತಿಗೊಳಿಸಿದೆ.

ಐದು ನಗರ ಪಾಲಿಕೆಗಳ ಪರವಾಗಿ ಬಿ-ಸ್ಮೈಲ್ ವತಿಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ ವಿಳಂಬ ಮಾಡದೆ, ವಾಸ್ತವಿಕ ಪ್ರಗತಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಬೇಕು. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತಕ್ಕೂ (ಬಿಎಸ್‌ಡಬ್ಲ್ಯುಎಂ-ಎಲ್) ಅನುದಾನವನ್ನು ಪ್ರತಿ ತಿಂಗಳು ವರ್ಗಾವಣೆ ಮಾಡಬೇಕು ಎಂದು ಸೂಚಿಸಲಾಗಿದೆ.

ಬಿಬಿಎಂಪಿ ಅವಧಿಯಲ್ಲಿ ಉಸ್ತುವಾರಿ ಸಚಿವರ ವಿವೇಚನಾ ನಿಧಿಯಡಿ ₹360 ಕೋಟಿ ನಿಗದಿಪಡಿಸಲಾಗಿತ್ತು. ಈ ಅನುದಾನದಲ್ಲಿ ₹298.40 ಕೋಟಿಯನ್ನು ಬಿಎಸ್‌ಡಬ್ಲ್ಯುಎಂಎಲ್‌ಗೆ ಹಂಚಿಕೆ ಮಾಡಿ, ಕ್ರಿಯಾಯೋಜನೆಗೆ ಅನುಮತಿ ನೀಡಲಾಗಿತ್ತು. ಈ ಕಾಮಗಾರಿಗಳಿಗೆ ಈ ಸಾಲಿನಲ್ಲಿ ಪ್ರತಿ ನಗರ ಪಾಲಿಕೆ ₹59.68 ಕೋಟಿಯನ್ನು ಪ್ರತ್ಯೇಕವಾಗಿ ಬಿಎಸ್‌ಡಬ್ಲ್ಯುಎಂಎಲ್‌ಗೆ ಬಿಡುಗಡೆ ಮಾಡಬೇಕು.

ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳ ಪಾವತಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ನಗರ ಪಾಲಿಕೆಗಳು ಬಜೆಟ್‌ನಲ್ಲಿ ತಲಾ ₹85 ಕೋಟಿ ಮೀಸಲಿರಿಸಿದ್ದವು. ಈ ಮೊತ್ತವನ್ನು ₹75 ಕೋಟಿಗೆ ಮಿತಿಗೊಳಿಸಿ ಆದೇಶಿಸಲಾಗಿದೆ.

ವಿಧಾನಸೌಧದ ಮುಂದೆ ಇರುವ ಕೆಂಪೇಗೌಡ ಪ್ರತಿಮೆ

₹48 ಲಕ್ಷ	ರಾಜ್ಯ ಎಲ್ಲ ತಾಲ್ಲೂಕುಗಳಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ ಪ್ರತಿ ನಗರ ಪಾಲಿಕೆಯಿಂದ ಹಣ
₹1 ಲಕ್ಷ	ಬೆಂಗಳೂರು ಅಡ್ವೊಕೇಟ್ ಅಸೋಸಿಯೇಷನ್, ಕಾವೇರಿ ಭವನ ಅವರಿಗೆ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸಲು ಪ್ರತಿ ನಗರ ಪಾಲಿಕೆಯಿಂದ ಹಣ
₹1 ಕೋಟಿ	ಬಂಗಳೂರು ವಕೀಲರ ಸಂಘದ ನಿರ್ವಹಿಸುವ ಕೆಂಪೇಗೌಡ ವಕೀಲರ ತರಬೇತಿ ಭವನಕ್ಕೆ ಪ್ರತಿ ನಗರ ಪಾಲಿಕೆಯಿಂದ ಹಣ
₹2 ಕೋಟಿ	ತುಮಕೂರು ಜಿಲ್ಲೆಯ ಕುಣಿಗಲ್‌ನ ಹುತ್ತರಿದುರ್ಗದಲ್ಲಿರುವ ನಾಡಪ್ರಭು ಕೆಂಪೇಗೌಡ ಸ್ಮಾರಕಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಪ್ರತಿ ನಗರ ಪಾಲಿಕೆಯಿಂದ ಹಣ
₹6 ಕೋಟಿ	ಮಾಗಡಿ ತಾಲ್ಲೂಕು ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿಗಾಗಿ ಪ್ರತಿ ನಗರ ಪಾಲಿಕೆಯಿಂದ ಹಣ
₹10 ಕೋಟಿ	ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಟೌನ್ ಪ್ಲಾನಿಂಗ್ ನಿರ್ಮಾಣಕ್ಕೆ ಪ್ರತಿ ನಗರ ಪಾಲಿಕೆಯಿಂದ ಹಣ

ರಾಜ್ಯ ಹಣಕಾಸು ಆಯೋಗದ ವಿಶೇಷ ಅನುದಾನ

ಪಾಲಿಕೆ	ಮೊತ್ತ
ಪಶ್ಚಿಮ	₹50 ಕೋಟಿ
ಉತ್ತರ	₹75 ಕೋಟಿ
ದಕ್ಷಿಣ	₹25 ಕೋಟಿ
ಕೇಂದ್ರ	₹100 ಕೋಟಿ
ಒಟ್ಟು	₹250 ಕೋಟಿ

ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ ಅನುದಾನ

ಪಾಲಿಕೆ	ಮೊತ್ತ
ಪೂರ್ವ	₹298.10 ಕೋಟಿ
ಪಶ್ಚಿಮ	₹667.74 ಕೋಟಿ
ಉತ್ತರ	₹429.27 ಕೋಟಿ
ದಕ್ಷಿಣ	₹429.27 ಕೋಟಿ
ಕೇಂದ್ರ	₹375.61 ಕೋಟಿ
ಒಟ್ಟು	₹2,199.99 ಕೋಟಿ

ಜಾಗತಿಕ ಪಾಲುದಾರಿಕೆಗೆ ಒಲವು

ವ್ಯಾಪಾರ, ಆವಿಷ್ಕಾರ ಸಹಯೋಗಕ್ಕೆ ರಾಜ್ಯ ಆಸಕ್ತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ನವದೆಹಲಿ: 'ತಂತ್ರಜ್ಞಾನದ ಜೊತೆಗೆ ವ್ಯಾಪಾರ, ಆವಿಷ್ಕಾರ, ಜನರ ಸಹಯೋಗ ಹಾಗೂ ವಿಶ್ವದೊಂದಿಗಿನ ಪಾಲುದಾರಿಕೆಗೆ ಕರ್ನಾಟಕ ಆಸಕ್ತಿ ಹೊಂದಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನವದೆಹಲಿಯಲ್ಲಿ ಶುಕ್ರವಾರ ನಡೆದ 'ಬ್ರಿಡ್ಜ್ ಟು ಬೆಂಗಳೂರು': ವಿವಿಧ ದೇಶಗಳ ರಾಯಭಾರಿಗಳು ಹಾಗೂ ರಾಜತಾಂತ್ರಿಕರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕರ್ನಾಟಕವು ಜಾಗತಿಕ ಆವಿಷ್ಕಾರ ಕೇಂದ್ರ ಮತ್ತು ಹೂಡಿಕೆಯ ಆದ್ಯತಾ ತಾಣವಾಗಿರುವುದನ್ನು ಪ್ರಸ್ತಾಪಿಸಿದ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್, 'ಬೆಂಗಳೂರು ಕೇವಲ ಭೇಟಿ ನೀಡುವ ನಗರವಲ್ಲ. ಕನಸುಗಳನ್ನು ಕಟ್ಟಿಕೊಳ್ಳುವ, ಭವಿಷ್ಯ ರೂಪಿಸುವ ನಗರವಾಗಿದೆ. ಎಲ್ಲರನ್ನೂ, ಎಲ್ಲದನ್ನೂ ಸ್ವಾಗತಿಸುವ ಅದರ ಮುಕ್ತ ಧೋರಣೆ, ಸದೃಢ ಪರಿಸರ ವ್ಯವಸ್ಥೆ ಮತ್ತು ಉತ್ತಮ ಜೀವನಮಟ್ಟದಿಂದ ಜಾಗತಿಕ ಪ್ರತಿಭೆ, ಆವಿಷ್ಕಾರ ಹಾಗೂ ಹೂಡಿಕೆಗಳನ್ನು ನಿರಂತರವಾಗಿ ಸೆಳೆಯುತ್ತಾ, ಅವಕಾಶಗಳ ನಗರವಾಗಿ ಮುಂದುವರಿಯುತ್ತಿದೆ' ಎಂದರು.

ಆವಿಷ್ಕಾರ ಕ್ಷೇತ್ರದಲ್ಲಿನ ಬೆಳವಣಿಗೆ ಮತ್ತು ಅಂತರರಾಷ್ಟ್ರೀಯ ಪಾಲುದಾರಿಕೆ ಕುರಿತು ಮಾತನಾಡಿದ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, 'ಕರ್ನಾಟಕವು ಬಂಡವಾಳ ಹೂಡಿಕೆಗಷ್ಟೇ ಸೀಮಿತವಾದ 'ಸುಪ್ತ ಪಾಲುದಾರಿಕೆ'ಯಲ್ಲಿ ಆಸಕ್ತಿ ಹೊಂದಿರದೆ, ದೀರ್ಘಾವಧಿಯ, ನಿರ್ದಿಷ್ಟ ಫಲಿತಾಂಶ ಆಧಾರಿತ ನಾವೀನ್ಯದ ಸಹಯೋಗಗಳನ್ನು ಕಾರ್ಯಗತಗೊಳಿಸಲು ನೆರವಾಗುವ ಪಾಲುದಾರರ ಹುಡುಕಾಟದಲ್ಲಿ ಇದೆ' ಎಂದರು.

'ಕರ್ನಾಟಕವು ತಂತ್ರಜ್ಞಾನ ಕೇಂದ್ರದಿಂದ ಜಾಗತಿಕ ನಾವೀನ್ಯತೆಯ ಪ್ರಮುಖ ಪಾಲುದಾರ ತಾಣವಾಗಿ ಅಭಿವೃದ್ಧಿಗೊಂಡಿದ್ದು, ನೀತಿ- ನಿರೂಪಣೆಯ ನೆರವು, ನವೋದ್ಯಮಗಳನ್ನು ಜಾಗತಿಕ ಮಟ್ಟಕ್ಕೆ ಬೆಳೆಸಲು ಅಗತ್ಯ ಬೆಂಬಲ, ಸಂಶೋಧನಾ ಸಹಯೋಗ ಮತ್ತು ಮಾರುಕಟ್ಟೆ ಲಭ್ಯತೆ ಅವಕಾಶಗಳನ್ನು ಒದಗಿಸಿದೆ. ಈ ಮೂಲಕ, ಹೂಡಿಕೆದಾರರು ಮತ್ತು ಉದ್ಯಮಿಗಳಿಗೆ ಆಕರ್ಷಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ ಎಂದು ವಿವಿಧ ದೇಶಗಳ ರಾಜತಾಂತ್ರಿಕರು ಬಣ್ಣಿಸಿದರು.

ಸಂವಾದ ಕಾರ್ಯಕ್ರಮದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ ಪಾಟೀಲ ಮತ್ತು ವಿವಿಧ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು. 45 ರಾಯಭಾರಿಗಳು ಮತ್ತು ಹೈಕಮಿಷನರ್‌ಗಳು ಸೇರಿದಂತೆ 80ಕ್ಕೂ ಹೆಚ್ಚು ದೇಶಗಳ ಹಿರಿಯ ರಾಜತಾಂತ್ರಿಕ ಪ್ರತಿನಿಧಿಗಳು ಅನಿಸಿಕೆಗಳನ್ನು ಹಂಚಿಕೊಂಡರು.

ಸಂವಾದದಲ್ಲಿ ಪ್ರಿಯಾಂಕ್ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಎಂ.ಬಿ.ಪಾಟೀಲ ಭಾಗವಹಿಸಿದರು

'ಹೃದ್ರೋಗ ಚಿಕಿತ್ಸೆಗೆ ಬೆಂಗಳೂರು ಉತ್ತಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೃದ್ರೋಗಕ್ಕೆ ಒಳಗಾದವರಿಗೆ ನಗರದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಚಿಕಿತ್ಸೆ ನೀಡಲಾಗುತ್ತಿದೆ. ಇದರಿಂದಾಗಿ ಹೃದಯ ಚಿಕಿತ್ಸೆಯಲ್ಲಿ ಬೆಂಗಳೂರು ಪ್ರಮುಖ ಚಿಕಿತ್ಸಾ ಕೇಂದ್ರವಾಗಿ ಜಾಗತಿಕ ಮಟ್ಟದಲ್ಲೂ ಗುರುತಿಸಿಕೊಳ್ಳುತ್ತಿದೆ' ಎಂದು ನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್‌ನ ಹೃದ್ರೋಗ ತಜ್ಞ ಡಾ.ಸಂಜಯ್ ಮೆಹ್ರೋತ್ರ ಅಭಿಪ್ರಾಯಪಟ್ಟರು.

ಹೃದ್ರೋಗ ತಜ್ಞರು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು 'ಅತ್ಯಾಧುನಿಕ ಚಿಕಿತ್ಸಾ ವಿಧಾನಗಳಾದ 'ಟಿಎವಿಆರ್' (ಟ್ರಾನ್ಸ್ ಕ್ಯಾತಿಟರ್ ಅಯೋರ್ಟಿಕ್ ವಾಲ್ವ್ ರಿಪ್ಲೇಸ್‌ಮೆಂಟ್) ಮತ್ತು 'ಟಿಎಂವಿಆರ್' (ಟ್ರಾನ್ಸ್‌ಕ್ಯಾತಿಟರ್ ಮಿಟ್ರಲ್ ವಾಲ್ವ್ ರಿಪ್ಲೇಸ್‌ಮೆಂಟ್) ಅನ್ನು ಇಲ್ಲಿ ಬಳಸಲಾಗುತ್ತಿದೆ. ಈ ವಿಧಾನಗಳು ತೆರೆದ ಹೃದಯ ಚಿಕಿತ್ಸೆಗಳಿಲ್ಲದೆ, ಸಂಕೀರ್ಣ ಸಮಸ್ಯೆಗಳನ್ನೂ ಪರಿಹರಿಸುತ್ತಿವೆ. ಯುವಕರು, ವೃದ್ಧರಿಗೂ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ' ಎಂದು ಹೇಳಿದರು.

'ಈ ಹಿಂದೆ ಹೃದಯದ ಕವಾಟ ಚಿಕಿತ್ಸೆ ವಿಫಲವಾಗಿದ್ದ ರೋಗಿಯೊಬ್ಬರಿಗೆ ಹೊಸ ವಿಧಾನದ ಮೂಲಕ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಗಿದೆ. ರಕ್ತ ಪರಿಚಲನೆಗೆ ಸಹಕರಿಸುವ ಅತ್ಯುತ್ತಮ ಹೃದಯ ಕವಾಟಗಳನ್ನು ರೋಬೋಟಿಕ್ ತಂತ್ರಜ್ಞಾನ ಬಳಸಿ ಅಳವಡಿಸಲಾಯಿತು. ಈ ವಿಧಾನದಿಂದ ರೋಗಿಗಳು ಅಲ್ಪಾವಧಿಯಲ್ಲಿ ಚೇತರಿಸಿಕೊಂಡು ತೆರಳುತ್ತಿದ್ದಾರೆ. ಪ್ರಮುಖ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಚಿಕಿತ್ಸಾ ವೆಚ್ಚ ಕಡಿಮೆ ಇದೆ' ಎಂದು ವಿವರಿಸಿದರು.

'ದೇಶದಲ್ಲಿ ಹೃದಯ ಸಂಬಂಧಿ ಕಾಯಿಲೆಗೆ ಸುರಕ್ಷಿತ, ಸುಧಾರಿತ ಚಿಕಿತ್ಸೆ ನೀಡುವ ಬೆಂಗಳೂರಿನ ಸಾಮರ್ಥ್ಯವು ಭಾರತದ ಹೃದ್ರೋಗ ಚಿಕಿತ್ಸಾ ಕ್ಷೇತ್ರದ ಭವಿಷ್ಯವನ್ನೇ ರೂಪಿಸುತ್ತಿದೆ. ಹೃದ್ರೋಗ ತಜ್ಞರು, ಶಸ್ತ್ರಚಿಕಿತ್ಸಕರು, ಅರಿವಳಿಕೆ ತಜ್ಞರು ತಂಡವಾಗಿ ಕೆಲಸ ಮಾಡಿ ಚಿಕಿತ್ಸೆ ಸುಲಭಗೊಳಿಸುತ್ತಿದ್ದಾರೆ' ಎಂದರು.

'ದೇಶದಲ್ಲಿ ಚಿಕ್ಕ ವಯಸ್ಸಿನಲ್ಲೇ ಹೃದಯ ಸಂಬಂಧಿ ಕಾಯಿಲೆಗಳಿಗೆ ಒಳಪಡುತ್ತಿರುವವರ ಸಂಖ್ಯೆ ಏರಿಕೆಯಾಗಿದೆ. ಚಿಕಿತ್ಸೆ ನಂತರ ದೀರ್ಘಕಾಲ ಬದುಕುತ್ತಿದ್ದಾರೆ. ವೈದ್ಯರು ಮುಂದಿನ 20ರಿಂದ 30 ವರ್ಷ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಚಿಕಿತ್ಸಾ ಯೋಜನೆ ರೂಪಿಸುತ್ತಿದ್ದಾರೆ. ಅಮೆರಿಕ, ಚೀನಾ ಸಹಿತ ಹಲವು ದೇಶಗಳಿಗೆ ಹೋಲಿಸಿದರೆ ಭಾರತದ ಆರೋಗ್ಯ ಸೇವೆಯಲ್ಲಿ ಇನ್ನಷ್ಟು ಸುಧಾರಣೆಯಾಗಬೇಕಿದೆ. ಆರೋಗ್ಯ ವಲಯದ ಮೂಲಸೌಕರ್ಯ ವೃದ್ಧಿಗೆ ಒತ್ತು ನೀಡಬೇಕಿದೆ' ಎಂದು ಹೇಳಿದರು.



ಅತ್ಯಾಧುನಿಕ ಹೃದಯ ಕವಾಟು ಪ್ರದರ್ಶಿಸಿದ ಬೆಂಗಳೂರು ನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್‌ನ ಹೃದ್ರೋಗತಜ್ಞ ಡಾ.ಸಂಜಯ್ ಮೆಹ್ರೋತ್ರ

ಬಿಬಿಸಿ: ಗ್ರಾಮಗಳಿಗೆ ಭೇಟಿ ನೀಡಿ, ಸಭೆ ನಡೆಸಿ ರೈತರಿಗೆ ಜಾಗೃತಿ; ಕಾನೂನು ಹೋರಾಟಕ್ಕೂ ನಿರ್ಧಾರ

'ಸಂವಿಧಾನ ಸೂತ್ರದ ಪರಿಹಾರ'ಕ್ಕೆ ಅಭಿಯಾನ

● ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ 'ಸಂಧಾನ ಸೂತ್ರದ ಪರಿಹಾರ'ದ ಬದಲು 'ಸಂವಿಧಾನ ಸೂತ್ರದ ಪರಿಹಾರ' ನೀಡುವಂತೆ ಅಭಿಯಾನ ಆರಂಭಿಸಲಾಗಿದೆ. ಪಿ.ಆರ್.ಆರ್. ರೈತ ಹಾಗೂ ನಿವೇಶನದಾರರ ಸಂಘದ ನೇತೃತ್ವದಲ್ಲಿ ಗ್ರಾಮಗಳಿಗೆ ಭೇಟಿ ನೀಡಿ, ಭೂಮಿ ಕಳೆದುಕೊಳ್ಳುತ್ತಿರುವ ರೈತರ ಜತೆ ಸಭೆ ನಡೆಸಿ, ಜಾಗೃತಿ ಮೂಡಿಸುವ ಕಾರ್ಯ ನಡೆಯುತ್ತಿದೆ.

ಬಿಬಿಸಿ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿಗದಿಪಡಿಸಿರುವ ಪರಿಹಾರ ದರಕ್ಕೆ ವಿರೋಧ ವ್ಯಕ್ತಪಡಿಸಿರುವ ರೈತರು, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

74 ಕಿ.ಮೀ. ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಿಸಲು ತುಮಕೂರು ರಸ್ತೆಯಿಂದ ಹೊಸೂರು ರಸ್ತೆವರೆಗೆ 2,580 ಎಕರೆ ಜಮೀನನ್ನು ಭೂಸ್ವಾಧೀನ ಮಾಡಲಾಗುತ್ತಿದೆ. ಭೂಮಿ ಕಳೆದುಕೊಳ್ಳುವ ಭೂ ಮಾಲೀಕರಿಗೆ ಪ್ರಾಧಿಕಾರವು ನೀಡಿರುವ ಐದು ಪರಿಹಾರ ಆಯ್ಕೆ ರೈತ ವಿರೋಧಿಯಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಶೇಕಡ 90ರಷ್ಟು ರೈತರು ಬಿಡಿಎ ನಿಗದಿ ಪಡಿಸಿರುವ ಪರಿಹಾರ ಒಪ್ಪಿಕೊಂಡಿಲ್ಲ. ರೈತರನ್ನು ಬೆದರಿಸಿ ಸಂಧಾನ ಪತ್ರಕ್ಕೆ ಸಹಿ ಹಾಕಿಸಿಕೊಳ್ಳಲಾಗುತ್ತಿದೆ. ಉದ್ಯಮಿಗಳು, ರಾಜಕಾರಣಿಗಳು ಮತ್ತು ಜಮೀನು ನೀಡಿ ಪರಿಹಾರ ಪಡೆದುಕೊಂಡಿದ್ದಾರೆ. ಒಂದು, ಎರಡು ಗುಂಟೆ ಜಮೀನು ಹೊಂದಿರುವವರು ಮಾತ್ರ ಒಪ್ಪಿದ್ದಾರೆ' ಎಂದು ಪಿ.ಆರ್.ಆರ್. ರೈತ ಹಾಗೂ ನಿವೇಶನದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ಮಾಹಿತಿ ನೀಡಿದರು.

'ಸಂವಿಧಾನ ಸೂತ್ರದ ಪರಿಹಾರ' ಒದಗಿಸುವಂತೆ ಅಭಿಯಾನ ಆರಂಭಿಸಲಾಗಿದೆ. ಗ್ರಾಮಗಳಿಗೆ ಭೇಟಿ ನೀಡಿ ರೈತರ ಮನವರಿಕೆ ಮಾಡಲಾಗುತ್ತಿದೆ. ಡಿಪಿಆರ್ ಸಹ ಸಿದ್ಧಗೊಂಡಿಲ್ಲ. ಅಗತ್ಯ ಬಿದ್ದರೆ ಸುಪ್ರೀಂ ಕೋರ್ಟ್ ಮೊರೆಹೋಗಲಾಗುವುದು. ಅದರ ವೆಚ್ಚಕ್ಕಾಗಿ 'ಕ್ರೌಡ್ ಫಂಡಿಂಗ್' ಮೂಲಕ ಹಣ ಸಂಗ್ರಹಿಸಲಾಗುವುದು' ಎಂದು ವಿವರಿಸಿದರು.

'ಕೆಐಎಡಿಬಿ ಮತ್ತು ಕೆಎಚ್‌ಬಿ ಕಾಯ್ದೆಗೆ ತಿದ್ದುಪಡಿ ಮಾಡಿಕೊಂಡಿವೆ. ಆದರೆ, ಬಿಡಿಎ ಇದಕ್ಕೆ ಮುಂದಾಗಿಲ್ಲ. 20 ಸಾವಿರ ಕುಟುಂಬಗಳ ಜೀವನ ಪ್ರಶ್ನೆ. 1894ರಲ್ಲಿ ಬ್ರಿಟಿಷರು ರೂಪಿಸಿದ ಕಾನೂನಿನಡಿ ನೀಡುವ ಪರಿಹಾರ ಯಾರಿಗೆ ಬೇಕು? ಉದಾಹರಣೆಗೆ ಬೆಂಗಳೂರು ಪೂರ್ವ ತಾಲ್ಲೂಕಿನ ಕೊಡತಿ ಗ್ರಾಮದಲ್ಲಿ ಕೆಐಎಡಿಬಿ ಎಕರೆಗೆ ₹40 ಕೋಟಿ ಪರಿಹಾರ ನೀಡಿದೆ. ಆದರೆ, ಬಿಡಿಎ ಎಕರೆಗೆ ₹5 ಕೋಟಿ ಪರಿಹಾರ ನಿಗದಿ ಮಾಡಿದೆ. ಇದು ಯಾವ ನ್ಯಾಯ' ಎಂದು ರೈತ ಕೃಷ್ಣ ಮುಲ್ಲೂರು ಪ್ರಶ್ನಿಸಿದರು.

'ಜಮೀನು ನೀಡುವವರಿಗೆ ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. 1976ರ ಬಿಡಿಎ ಕಾಯ್ದೆಯ ಸೆಕ್ಷನ್ 27ರ ಪ್ರಕಾರ, ಯಾವುದೇ ಯೋಜನೆ ಕಾರ್ಯಗತಗೊಳ್ಳದಿದ್ದರೆ ಅದು ಸ್ವಯಂ ರದ್ದಾಗುತ್ತದೆ. ಈ ಯೋಜನೆ 2005-06ರಲ್ಲಿ ಘೋಷಣೆಯಾದರೂ ಜಾರಿಗೆ ಬಂದಿಲ್ಲ' ಎಂದು ವರ್ತೂರಿನ ಜಗದೀಶ್ ರೆಡ್ಡಿ ತಿಳಿಸಿದರು.

'ಈ ಯೋಜನೆಯ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆ ನಡೆಯುತ್ತಿದ್ದರೂ ಬಿಡಿಎ ಅಧಿಕಾರಿಗಳು ರೈತರಿಗೆ ನೋಟಿಸ್ ನೀಡುವ ಮೂಲಕ ಬಲವಂತವಾಗಿ ಸಂಧಾನ ಸೂತ್ರ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ. ಭೂಮಿಯ ನೈಜ ಮೌಲ್ಯವನ್ನು ಕಡಿಮೆ ಮಾಡಲಾಗಿದೆ' ಎಂದರು.

'ವರ್ತೂರು ಹೋಬಳಿಯ ಸೋರಹುಣಸೆ ಗ್ರಾಮದಲ್ಲಿ 3 ಎಕರೆ 29 ಗುಂಟೆ ಜಮೀನಿಗೆ ₹3.70 ಕೋಟಿ ಪರಿಹಾರವನ್ನು ಬಿಡಿಎ ನಿಗದಿ ಮಾಡಲಾಗಿದೆ. ಇದೇ ಗ್ರಾಮದಲ್ಲಿ ಖಾಸಗಿಯವರು 1 ಗುಂಟೆ ಜಾಗವನ್ನು ₹1.4 ಕೋಟಿಗೆ ಖರೀದಿಸಿದ್ದಾರೆ. ಹಲವು ವರ್ಷಗಳಿಂದ ಜಮೀನು ಮಾರಾಟ ಮಾಡಲಾಗದೆ, ಅಭಿವೃದ್ಧಿಪಡಿಸಲು ಆಗದ ಸ್ಥಿತಿಯಲ್ಲಿದ್ದೇವೆ' ಎಂದು ರೈತ ಬೈಯಣ್ಣ ಬೇಸರ ವ್ಯಕ್ತಪಡಿಸಿದರು.

ಪರಿಹಾರ ಇತ್ಯರ್ಥಪಡಿಸದೆ ಕಾಮಗಾರಿ ಬೇಡ

ಬಿಬಿಸಿ (ಪಿಆರ್‌ಆರ್-1) ಯೋಜನೆಯ ಮೊದಲ ಹಂತ ಅನುಷ್ಠಾನಕ್ಕೆ ತರುವ ಸಂಬಂಧ ಬಿಡಿಎ ಆಹ್ವಾನಿಸಿರುವ ಟೆಂಡರ್‌ಗೆ ರೈತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'18 ವರ್ಷದ ಹಿಂದೆ ಭೂಸ್ವಾಧೀನ ಮಾಡಿಕೊಂಡಿರುವ ಪಿಆರ್ ಆರ್ (ಈಗ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-ಬಿಬಿಸಿ) ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ಕಾನೂನು ಪಾಲಿಸಿಲ್ಲ. ಹಲವು ಬಾರಿ ಯೋಜನೆ ವಿನ್ಯಾಸ, ಮಾರ್ಗ ಹಾಗೂ ಇತರೆ ಅಂಶಗಳನ್ನು ಬದಲಿಸಲಾಗಿದೆ. ರೈತರಿಗೆ ಪರಿಹಾರ ಪ್ರಕರಣ ಇತ್ಯರ್ಥ ಪಡಿಸದೆ ಕಾಮಗಾರಿ ಜಾರಿಗೆ ಆತುರ ತೋರಿಸುತ್ತಿರುವುದು ಏಕೆ' ಎಂದು ಬಿಡಿಎ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

'ಶೇಕಡ 70–80 ಜಮೀನು ಸ್ವಾಧೀನ ಪಡೆದ ಬಳಿಕವೇ ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿ ಉಪಮುಖ್ಯಮಂತ್ರಿ ಹೇಳಿದ್ದರು. ಆದರೆ, ಈ ಹಿಂದೆ ರೈತರಿಗೆ ಪರಿಹಾರ ವಿತರಿಸಲು ಬಲವಂತವಾಗಿ ಒಪ್ಪಿಗೆ ಪತ್ರಗಳಿಗೆ ಸಹಿ ಹಾಕಿಸಿಕೊಂಡಿದ್ದರ ವಿರುದ್ಧ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಭೂ ಪರಿಹಾರ ಪ್ರಕರಣಗಳನ್ನು ಇತ್ಯರ್ಥ ಪಡಿಸುವವರೆಗೂ ಕಾಮಗಾರಿ ಆರಂಭಿಸಬಾರದು ಎಂದು ಬಿಡಿಎ ಹಾಗೂ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಪಿಆರ್‌ಆರ್-1ಕ್ಕೆ ಕರೆದಿರುವ ಟೆಂಡರ್ ಕಾನೂನು ಬಾಹಿರವಾಗಿದೆ. ಪರಿಷ್ಕೃತ ಡಿಪಿಆರ್ ಇಲ್ಲ, ಅರಣ್ಯ ಇಲಾಖೆ ಅನುಮತಿ ಪಡೆದಿಲ್ಲ. ಅಸ್ತಿತ್ವವೇ ಇಲ್ಲದ ಯೋಜನೆಗೆ ಟೆಂಡರ್ ಕರೆದಿರುವುದು ಅಧಿಕಾರ ದುರುಪಯೋಗ, ಸಾರ್ವಜನಿಕ ಹಣದ ದುರ್ಬಳಕೆ ಹಾಗೂ ಭ್ರಷ್ಟಾಚಾರಕ್ಕೆ ಕಾರಣವಾಗಲಿದೆ ಎಂದು ಹೇಳಿದ್ದಾರೆ.

ಪಿ.ಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘದ ನೇತೃತ್ವದಲ್ಲಿ ಸಂವಿಧಾನ ಸೂತ್ರದ ಪರಿಹಾರ ಅಭಿಯಾನ ಆರಂಭಗೊಂಡಿದೆ.

ಆತುರದ ಕ್ರಮ ಸರಿಯಲ್ಲ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ನವದೆಹಲಿ: ದಾವಣಗೆರೆ ಉಪಚುನಾವಣೆ ಬಳಿಕ ಕಾಂಗ್ರೆಸ್‌ನ ಮುಸ್ಲಿಂ ನಾಯಕರ ವಿರುದ್ಧ ಆತುರದಲ್ಲಿ ತೆಗೆದುಕೊಂಡ ಕ್ರಮ ಸರಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದಾವಣಗೆರೆ ಚುನಾವಣೆ ನಂತರ ನಡೆಯುತ್ತಿರುವ ಘಟನೆಗಳು ಒಳ್ಳೆಯ ಬೆಳವಣಿಗೆ ಅಲ್ಲ. ಸಚಿವ ಜಮೀರ್ ಅಹಮದ್ ಖಾನ್ ಪಕ್ಷದ ಹಿರಿಯ ನಾಯಕ. ಸಚಿವ ಸಂಪುಟದ ಹಿರಿಯ ಸದಸ್ಯರು. ಅವರ ರಾಜೀನಾಮೆ ವದಂತಿ ಸುದ್ದಿ ಹಿಂದೆ ಪಟ್ಟಭದ್ರರ ಹಿತಾಸಕ್ತಿ ಇದೆ. ಈ ವದಂತಿಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಬೇಕು' ಎಂದು ಅವರು ಆಗ್ರಹಿಸಿದರು.

'ಪಕ್ಷ ವಿರೋಧಿ ಚಟುವಟಿಕೆ ಮಾಡಿದರೆ ಪರಿಶೀಲನೆಗೆ ಶಿಸ್ತು ಸಮಿತಿ ಇದೆ. ಮೊದಲು ಶಿಸ್ತು ಸಮಿತಿಗೆ ದೂರು ಸಲ್ಲಿಸಬೇಕು. ಪ್ರತಿಯೊಬ್ಬರಿಗೂ ಟಿಕೆಟ್ ಕೇಳುವ ಅಧಿಕಾರ ಇದೆ. ಮುಸ್ಲಿಮರು ಟಿಕೆಟ್ ಕೇಳಿದ್ದರಲ್ಲಿ ತಪ್ಪಿಲ್ಲ. ಈ ಬೆಳವಣಿಗೆ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳಿರಬಹುದು' ಎಂದರು.

ಹರಿಪ್ರಸಾದ್

'ಪ್ರಜಾಪ್ರಭುತ್ವದ ವ್ಯವಸ್ಥೆಯ ಕರಾಳ ದಿನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾರಿ ಶಕ್ತಿ ವಂದನಾ ಕಾಯ್ದೆಗೆ ಸೋಲುಂಟಾಗಿರುವುದು ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಯ ಕರಾಳ ದಿನವಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.



ಬಿ.ವೈ. ವಿಜಯೇಂದ್ರ

'ಸಂವಿಧಾನದ ಆಶಯ, ಪ್ರಜಾಪ್ರಭುತ್ವದ ನೈಜ ಉದ್ದೇಶವನ್ನು ಸ್ವಾತಂತ್ರ್ಯ ನಂತರದಿಂದಲೂ ಮೆಟ್ಟಿ ನಿಲ್ಲುವುದು, ಸರ್ವಾಧಿಕಾರ ಮೆರೆಯುವುದು, ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವುದು ಕಾಂಗ್ರೆಸ್ ಸಂಸ್ಕೃತಿಯಾಗಿದೆ. ಲಕ್ಷಾಂತರ ಜನರ ತ್ಯಾಗ-ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿದ್ದು, ಅದನ್ನು ಸ್ವೇಚ್ಛಾಚಾರದಿಂದ ಕಾಂಗ್ರೆಸ್ ಬಳಸಿಕೊಂಡಿದೆ' ಎಂದು ಹೇಳಿದ್ದಾರೆ.

'ಸದ್ಯ ದೇಶದ ರಾಜಕೀಯ ಭೂಪಟದಲ್ಲಿ ಅಸ್ತಿತ್ವಕ್ಕಾಗಿ ತಿಣುಕಾಡುತ್ತಿರುವ ಕಾಂಗ್ರೆಸ್ ತನ್ನದೇ ಮನಃಸ್ಥಿತಿಯ ಇತರ ಪಕ್ಷಗಳನ್ನು ಕಟ್ಟಿಕೊಂಡು 'ಇಂಡಿ' ಕೂಟದ ಹೆಸರಿನಲ್ಲಿ ಸ್ತ್ರೀಕುಲದ ಹಕ್ಕನ್ನು ಇಂದು ಲೋಕಸಭೆಯಲ್ಲಿ ಹಿಂಡಿ ಹಾಕಿದೆ. ದುಶ್ಯಾಸನ, ರಾವಣರ ಸಂಸ್ಕೃತಿ ನೆನಪಿಸುವ ರೀತಿಯಲ್ಲಿ ಇಂದು ಸಂಸತ್ತಿನಲ್ಲಿ ನಡೆದುಕೊಂಡ ಈ ಪಕ್ಷಗಳು ಅಂಬೇಡ್ಕರ್ ಅವರ ಆಶಯ ಮತ್ತು ಬಸವಣ್ಣ ಪ್ರತಿಪಾದಿಸಿದ ಲಿಂಗ ಸಮಾನತೆ ಹತ್ತಿಕ್ಕಲು ಯತ್ನಿಸಿವೆ' ಎಂದು ದೂರಿದ್ದಾರೆ.

ಮಹಿಳಾ ಪರ ಆಶಯಗಳ ಸೋಲು: ಅಶೋಕ

ಬೆಂಗಳೂರು: 'ಶಾಸನ ರಚನೆ ಮತ್ತು ನೀತಿ ನಿರೂಪಣೆಯಲ್ಲಿ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ನೀಡಲು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಐತಿಹಾಸಿಕ ಅವಕಾಶವನ್ನು ಕಾಂಗ್ರೆಸ್ ನೇತೃತ್ವದ 'ಇಂಡಿ' ಮೈತ್ರಿಕೂಟ ಅಡ್ಡಗಟ್ಟಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

'ಇದು ಯಾವುದೇ ಪಕ್ಷದ ಸೋಲಲ್ಲ, ಯಾವುದೇ ಸರ್ಕಾರಕ್ಕಾದ ಹಿನ್ನಡೆಯೂ ಅಲ್ಲ. ಇದು ದೇಶದ ಕೋಟ್ಯಂತರ ಮಹಿಳೆಯರ ಆಶಯಗಳ ಸೋಲು' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪಕ್ಷಾತೀತ ಕರೆಗೆ ಸ್ಪಂದಿಸದೇ ಮಹಿಳಾ ಸಬಲೀಕರಣಕ್ಕೆ ಕೊಡಲಿ ಪೆಟ್ಟು ಕೊಟ್ಟ ಪಕ್ಷಗಳ ಮಹಿಳಾ ವಿರೋಧಿ ಧೋರಣೆಗೆ ದೇಶ ಇವತ್ತು ಸಾಕ್ಷಿಯಾಗಿದೆ. ಭಾರತದ ಸ್ವಾಭಿಮಾನಿ ಮಹಿಳೆಯರು ಇದನ್ನು ಮರೆಯುವುದೂ ಇಲ್ಲ, ಕ್ಷಮಿಸುವುದೂ ಇಲ್ಲ' ಎಂದು ಹೇಳಿದ್ದಾರೆ.

ಆರ್. ಅಶೋಕ

ಕೆಪಿಸಿಸಿ ಕಚೇರಿ ಮುಂಭಾಗ ಮಹಿಳಾ ಕಾಂಗ್ರೆಸ್‌ನಿಂದ ಪ್ರತಿಭಟನೆ

ಕ್ಷೇತ್ರ ಪುನರ್ ವಿಂಗಡಣೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಮೀಸಲಾತಿ ಹೆಸರಲ್ಲಿ ಕೇಂದ್ರ ಸರ್ಕಾರ ಮಹಿಳೆಯರಿಗೆ ಅನ್ಯಾಯ ಮಾಡುತ್ತಿದೆ. ಕ್ಷೇತ್ರ ಮರುವಿಂಗಡಣೆ ನೆಪದಲ್ಲಿ ಕರ್ನಾಟಕಕ್ಕೆ ವಂಚನೆ ಎಸಗುತ್ತಿದೆ ಎಂದು ಮಹಿಳಾ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷೆ ಸೌಮ್ಯ ರೆಡ್ಡಿ ದೂರಿದರು.

ಕೇಂದ್ರ ಸರ್ಕಾರದ ವಿರುದ್ಧ ಕೆಪಿಸಿಸಿ ಕಚೇರಿ ಮುಂಭಾಗ ಮಹಿಳಾ ಕಾಂಗ್ರೆಸ್ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಅವರು, 'ಶಾಸನಸಭೆಗಳಲ್ಲಿ ಮೀಸಲಾತಿ ಒದಗಿಸಲು ಹೊರಟಿರುವ ಬಿಜೆಪಿ, ಮಹಿಳಾ ಮೀಸಲಾತಿ ಅನುಷ್ಠಾನವನ್ನು ಕ್ಷೇತ್ರಗಳ ಮರುವಿಂಗಡಣೆಯೊಂದಿಗೆ ತಳುಕು ಹಾಕುತ್ತಿದೆ. ಆ ಮೂಲಕ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಭಾರಿ ಅನ್ಯಾಯ ಮಾಡುತ್ತಿದೆ' ಎಂದು ಆರೋಪಿಸಿದರು.

'ಕ್ಷೇತ್ರಗಳ ಮರುವಿಂಗಡಣೆ ಕಾರ್ಯವನ್ನು ಮುಂದೂಡಬೇಕು. ಎಲ್ಲ ರಾಜ್ಯಗಳು, ರಾಜಕೀಯ ಪಕ್ಷಗಳ ಜತೆ ಚರ್ಚೆ ನಡೆಸಿ ಯಾವುದೇ ಒಳ ಕಾರ್ಯಸೂಚಿಗಳಿಲ್ಲದೇ, ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು. ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಫಲಕಗಳನ್ನು ಪ್ರದರ್ಶಿಸಿ, ಧಿಕ್ಕಾರ ಕೂಗಿದರು.

ಮಹಿಳಾ ಮೀಸಲಾತಿ, ಕ್ಷೇತ್ರ ಮರು ವಿಂಗಡಣೆ ನೆಪದಲ್ಲಿ ಕೇಂದ್ರ ಸರ್ಕಾರ ವಂಚನೆ ಮಾಡುತ್ತಿದೆ ಎಂದು ಆರೋಪಿಸಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು

'ನಮ್ ಮನೆ ಕೆಲಸ ಮಾಡ್ಕೊಡಿ ಅಂತಿದ್ದೀನಾ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ದಾಖಲೆ ಸ್ಕ್ಯಾನಿಂಗ್ ಬಗ್ಗೆ ಅಸಡ್ಡೆ ತೋರುತ್ತಿರುವ ತಹಶೀಲ್ದಾರ್‌ಗಳ ವಿರುದ್ಧ ಮಾತಿನ ಚಾಟಿ ಬೀಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, 'ಏನ್ ನಮ್ ಮನೆ ಕೆಲಸ ಮಾಡ್ಕೊಡಿ ಅಂತಿದ್ದಿನಾ? ಅಥವಾ ಇದು ನಮ್ ಕೆಲಸ ಅಲ್ಲ ಅಂತ ನೀವೇ ಬೋರ್ಡ್ ಹಾಕ್ಕೊಳ್ಳಿ' ಎಂದು ಗದರಿದರು.

ವಿಕಾಸಸೌಧದಿಂದ ವಿಡಿಯೊ ಸಂವಾದದ ಮೂಲಕ ರಾಜ್ಯದ ಎಲ್ಲ ತಹಶೀಲ್ದಾರ್‌ಗಳ ತಿಂಗಳ ಪ್ರಗತಿ ಪರಿಶೀಲನೆ ನಡೆಸಿದರು. ಉತ್ತಮವಾಗಿ ಕಾರ್ಯನಿರ್ವಹಿಸಿದ ತಹಶೀಲ್ದಾರ್‌ಗಳ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು.

'ದಿನಕ್ಕೆ ಸರಾಸರಿ 12 ಸಾವಿರ ಪುಟಗಳ ಸ್ಕ್ಯಾನ್ ಮಾಡಬೇಕು ಎಂಬುದು ಗುರಿ. ಕೆಲವು ತಾಲ್ಲೂಕುಗಳಲ್ಲಿ ಸ್ಕ್ಯಾನಿಂಗ್ ಎಂಟು ಸಾವಿರ ಪುಟ ದಾಟುತ್ತಿಲ್ಲ. ಸ್ಕ್ಯಾನಿಂಗ್ ಕೆಲಸಕ್ಕೆ ಪ್ರತಿ ತಾಲ್ಲೂಕಿಗೆ ತಲಾ 8 ಜನ ಡೇಟಾ ಆಪರೇಟರ್ ನೀಡಿದರೂ ಕೆಲವು ತಾಲ್ಲೂಕುಗಳಲ್ಲಿ ಪ್ರಗತಿ ಕುಂಠಿತವಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಅಸಮರ್ಪಕ ಉತ್ತರ ನೀಡಿದ ಗದಗ ಜಿಲ್ಲೆ ಶಿರಹಟ್ಟಿ ತಹಶೀಲ್ದಾರ್‌ಗೆ ತರಾಟೆಗೆ ತೆಗೆದುಕೊಂಡರು.

'ಮಲೆನಾಡು ಪ್ರದೇಶಗಳಾದ ಚಿಕ್ಕಮಗಳೂರು, ಕೊಡಗು ಹಾಗೂ ಹಿಂದುಳಿದ ಜಿಲ್ಲೆಗಳಾದ ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಸ್ಕ್ಯಾನಿಂಗ್ ಕೆಲಸ ಪೂರ್ಣ ಮುಗಿದಿದೆ. ಆದರೆ, ಬೆಂಗಳೂರು ನಗರ, ಶ್ರೀರಂಗಪಟ್ಟಣ, ಮದ್ದೂರು, ಪಾಂಡವಪುರ, ಮೈಸೂರಿನ ಇತರೆ ತಾಲ್ಲೂಕುಗಳಲ್ಲಿ ಈ ಕೆಲಸ ಏಕೆ ಸಾಧ್ಯವಿಲ್ಲ' ಎಂದು ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

'ಬೆಳ್ತಂಗಡಿ, ಮೂಡಬಿದಿರೆ, ಪುತ್ತೂರು, ಚಳ್ಳಕೆರೆ, ಕಂಪ್ಲಿ, ಸಿರಗುಪ್ಪ ಸೇರಿ 60 ತಾಲ್ಲೂಕುಗಳಲ್ಲಿ ನಿಗದಿತ ಗುರಿಯನ್ನೂ ಮೀರಿ ದಿನಕ್ಕೆ 20 ಸಾವಿರ ಪುಟ ಸ್ಕ್ಯಾನ್ ಮಾಡುತ್ತಿದ್ದಾರೆ. ಹೊನ್ನಾವರದಲ್ಲಿ ದಿನಕ್ಕೆ 40 ಸಾವಿರ ಪುಟ ಸ್ಕ್ಯಾನ್ ಮಾಡಲಾಗುತ್ತಿದೆ. ಹೀಗೆ ಬೇರೆ ತಾಲ್ಲೂಕಿನಲ್ಲಿ ಸಾಧ್ಯವಾಗಿರುವುದು, ಇತರರಿಂದ ಏಕೆ ಸಾಧ್ಯವಿಲ್ಲ' ಎಂದು ಅವರು ಪ್ರಶ್ನಿಸಿದರು.

'ನಾಲ್ಕೂ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರು ಕಡಿಮೆ ಸ್ಕ್ಯಾನ್ ಆಗುತ್ತಿರುವ ತಾಲ್ಲೂಕುಗಳ ಮೇಲೆ ನಿಗಾವಹಿಸಲಾಗುವುದು. ಇಡೀ ರಾಜ್ಯದಲ್ಲಿ ಚಾಮರಾಜನಗರ ಅತ್ಯಂತ ಕಳಪೆ ಸಾಧನೆ ಮಾಡಿದೆ' ಎಂದು ಕಿಡಿಕಾರಿದರು.

ಕೃಷ್ಣಬೈರೇಗೌಡ

ಕನ್ನಡದಲ್ಲಿ ವ್ಯವಹರಿಸಿ: ಮಹೇಶ ಜೋಶಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಜತೆಗೆ ಕನ್ನಡದಲ್ಲಿಯೇ ಪತ್ರ ವ್ಯವಹಾರ ನಡೆಸುವಂತೆ ಕಸಾಪ ಅಧ್ಯಕ್ಷ ಸ್ಥಾನದಿಂದ ವಜಾಗೊಂಡಿರುವ ಮಹೇಶ ಜೋಶಿ ಅವರಿಗೆ ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ. ದಯಾನಂದ ಮನವಿ ಮಾಡಿದ್ದಾರೆ.

ಮಹೇಶ ಜೋಶಿ

'ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜನಪದದ ಜತೆಗೆ, ಕನ್ನಡ–ಕನ್ನಡಿಗ–ಕರ್ನಾಟಕದ ರಕ್ಷಣೆ ಮತ್ತು ಅಭಿವೃದ್ಧಿಗೆ ಕಸಾಪ ಶ್ರಮಿಸುತ್ತಿದೆ. ಮಾಹಿತಿ ಹಕ್ಕಿನಡಿ ನೀವು ಪರಿಷತ್ತಿಗೆ ನೂರಾರು ಅರ್ಜಿಗಳನ್ನು ಮತ್ತು ವಿಚಾರಣೆಗೆ ಸಂಬಂಧಿಸಿದ ಉತ್ತರಗಳನ್ನು ಆಂಗ್ಲಭಾಷೆಯಲ್ಲಿ ಸಲ್ಲಿಸುತ್ತಿರುವಿರಿ. ಅವುಗಳಿಗೆ ಉತ್ತರಿಸಲು ನಮ್ಮ ಕಚೇರಿಯಲ್ಲಿ ಕಾಯಂ ಸಿಬ್ಬಂದಿ ಇಲ್ಲದಿರುವುದರಿಂದ, ಕಾರ್ಯನಿರ್ವಹಿಸುತ್ತಿರುವವರೂ ಆಂಗ್ಲ ಭಾಷೆಯಲ್ಲಿ ತಜ್ಞತೆ ಹೊಂದಿಲ್ಲದ ಕಾರಣ ಅರ್ಥೈಸಿಕೊಂಡು ಉತ್ತರಿಸಲು ಕಷ್ಟವಾಗುತ್ತಿದೆ' ಎಂದು ಆಡಳಿತಾಧಿಕಾರಿ ಹೇಳಿದ್ದಾರೆ.

'ತಾವು ಕನ್ನಡದಲ್ಲಿಯೇ ಪತ್ರ ವ್ಯವಹಾರ ಮಾಡಿದರೆ ಅನುಕೂಲ ವಾಗುತ್ತದೆ' ಎಂದಿದ್ದಾರೆ.

ನಸೀರ್ ಅಹಮ್ಮದ್ ಪರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೋಲಾರ: ವಿಧಾನ ಪರಿಷತ್ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ನಸೀರ್ ಅಹಮದ್ ಅವರಿಗೆ ಆಗಿರುವ ಅನ್ಯಾಯ ಸರಿಪಡಿಸಿ ವಾಪಸ್ ರಾಜಕೀಯ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ಮುಸ್ಲಿಂ ಸಮುದಾಯದ ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಮಧ್ಯಾಹ್ನ ನಮಾಜ್ ನಡೆಸಿದ ಬಳಿಕ ನಗರದ ಟಿಪ್ಪು ಸುಲ್ತಾನ್ ರಸ್ತೆಯಲ್ಲಿನ ಬಿಲಾಲ್ ಮಸೀದಿ ಮುಂದೆ ಸೇರಿದ ಸಮುದಾಯದ ಮುಖಂಡರು ಭಿತ್ತಿಪತ್ರ ಹಿಡಿದು, 'ನಸೀರ್ ಅಹಮದ್ ಸಾಬ್ ನೀವು ಮುಂದೆ ಹೋಗಿ, ನಿಮ್ಮ ಜೊತೆ ನಾವಿದ್ದೇವೆ' ಎಂಬ ಘೋಷಣೆ ಕೂಗಿದರು. ರಸ್ತೆ ತಡೆದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಪ್ಸರ್ ಮಾತನಾಡಿ, 'ಸಂವಿಧಾನ ಉಳಿಸುವ ಏಕೈಕ ಪಕ್ಷ ಕಾಂಗ್ರೆಸ್. ಪಕ್ಷದ ವಿರುದ್ಧ ಪ್ರತಿಭಟನೆ ನಡೆಸುತ್ತಿಲ್ಲ. ನಮ್ಮ ಹಕ್ಕು ಕೇಳುತ್ತಿದ್ದೇವೆ. ಸಮಾಜಕ್ಕೆ ಅನ್ಯಾಯವಾಗಿದೆ. ನಮ್ಮೆಲ್ಲರ ಮುಖಂಡ ನಸೀರ್ ವಿರುದ್ಧ ಕ್ರಮ ಕೈಗೊಂಡಿರುವುದು ಸರಿ ಅಲ್ಲ. ಪಕ್ಷದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿರುವ ಅವರಿಗೆ ನ್ಯಾಯ ಸಿಗಬೇಕೆಂದು ಮನವಿ ಮಾಡುತ್ತಿದ್ದೇವೆ' ಎಂದರು.

ಬಾಲ್ಯವಿವಾಹ ತಡೆಗೆ ಜಿಲ್ಲಾಧಿಕಾರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ಏಪ್ರಿಲ್ 20ರಂದು ನಗರದಲ್ಲಿ ಬಾಲ್ಯವಿವಾಹ ನಡೆಯುವ ಸಂಭವ ಇರುವುದರಿಂದ ಮುಂಜಾಗ್ರತೆ ವಹಿಸುವಂತೆ ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿವಿಧ ಇಲಾಖೆ, ವಾರ್ಡ್ ಮಟ್ಟದಲ್ಲಿ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳನ್ನು ನೇಮಿಸಲಾಗಿದೆ. ಉದಾಸೀನ ತೋರುವ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಬಾಲ್ಯ ವಿವಾಹ ನಡೆಸಿಕೊಡುವ ಧಾರ್ಮಿಕ ಮುಖಂಡರು ಪುರೋಹಿತರು, ಪಾಲ್ಗೊಳ್ಳುವ ಸಂಬಂಧಿಕರು, ಸಾಮೂಹಿಕ ವಿವಾಹ ಆಯೋಜಿಸಿದವರು, ವಧು-ವರರ ಪೋಷಕರಲ್ಲದೇ ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲರಿಗೂ ಬಾಲ್ಯವಿವಾಹ ನಿಷೇಧ ಕಾಯ್ದೆಯ ಚೌಕಟ್ಟಿನಲ್ಲಿ ಶಿಕ್ಷೆ ವಿಧಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಬಾಲ್ಯವಿವಾಹದ ಮಾಹಿತಿ ದೊರೆತಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅಥವಾ ಪೊಲೀಸ್ ಸಹಾಯವಾಣಿ ಸಂಖ್ಯೆ 112ಕ್ಕೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ, ಕೇಂದ್ರ: 08354-295345, ಪೂರ್ವ: 080-29904132, ಪಶ್ಚಿಮ: 080-22076833, ಉತ್ತರ: 080-28461452, ದಕ್ಷಿಣ: 080-23442233 ಮಾಹಿತಿ ನೀಡುವಂತೆ ಮನವಿ ಮಾಡಿದ್ದಾರೆ.

ಶತಮಾನದ ಶಾಲೆ: ಬಲವರ್ಧನೆಗೆ 31 ಶಿಫಾರಸು

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಶಾಲಾ ಶಿಕ್ಷಣ ಇಲಾಖೆಗೆ ವರದಿ ಸಲ್ಲಿಕೆ • ಪಾರಂಪರಿಕ ಶಾಲೆಗಳೆಂದು ಘೋಷಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಶತಮಾನ ಕಂಡ ಶಾಲೆಗಳ ಕುರಿತು ಸಿದ್ಧಪಡಿಸಿದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಇಂತಹ 3,222 ಶಾಲೆಗಳ ಉಳಿವು ಹಾಗೂ ಬಲವರ್ಧನೆಗೆ 31 ಶಿಫಾರಸು ಮಾಡಿದೆ.

ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು 206 ಪುಟಗಳಿರುವ ವರದಿಯನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದರು. ಕೆ.ಪಿ. ಸುರೇಶ್ ಅವರು ಈ ವರದಿ ಸಿದ್ಧಪಡಿಸಿದ್ದಾರೆ.

'ಶತಮಾನ ಕಂಡ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ರಾಜ್ಯ ಸರ್ಕಾರ ಘೋಷಿಸಬೇಕು. ಅವುಗಳಲ್ಲಿ ನಾಡಿನ ಹಲವಾರು ಮಹನೀಯರು ಓದಿದ್ದಾರೆ. ಮಿರ್ಜಾ ಇಸ್ಮಾಯಿಲ್, ಸರ್.ಎಂ. ವಿಶ್ವೇಶ್ವರಯ್ಯ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಡಿ.ವಿ. ಗುಂಡಪ್ಪ, ಮೊಳಹಳ್ಳಿ ಶಿವರಾವ್, ಕಾರ್ನಾಡ್ ಸದಾಶಿವರಾವ್, ದಿನಕರ ದೇಸಾಯಿ, ಗೌರೀಶ್ ಕಾಯ್ಕಿಣಿ, ಆಲೂರು ವೆಂಕಟರಾಯರು, ದ.ರಾ. ಬೇಂದ್ರೆ, ಕುವೆಂಪು, ಶಾಂತವೇರಿ ಗೋಪಾಲಗೌಡ, ಜಿ.ಎಸ್. ಶಿವರುದ್ರಪ್ಪ, ಪ್ರೊ. ಎಂ.ಸಿ. ನಂಜುಂಡಸ್ವಾಮಿ, ಜೀ.ಶಂ. ಪರಮಶಿವಯ್ಯ, ಉತ್ತಂಗಿ ಚನ್ನಪ್ಪ, ಯು.ಆರ್. ಅನಂತಮೂರ್ತಿ, ಜನರಲ್ ಕೆ.ಎಂ. ಕಾರ್ಯಪ್ಪ, ದೇವರಾಜ ಅರಸು, ಎಸ್. ಬಂಗಾರಪ್ಪ, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ ಮೊದಲಾದ ಧೀಮಂತರು ಓದಿದ ಶಾಲೆಗಳನ್ನಾದರೂ ಸರ್ಕಾರ ಅಭಿವೃದ್ಧಿ ಮಾಡಬೇಕು' ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಸರ್ಕಾರವು ಕನಿಷ್ಠ ಜಿಲ್ಲೆಗೊಂದರಂತೆ 31 ಶಾಲೆಗಳನ್ನು ಪಾರಂಪರಿಕ ಶಾಲೆಗಳನ್ನಾಗಿ ರೂಪಿಸಬೇಕು. ಅಲ್ಲಿಗೆ ಬರುವ ಮಕ್ಕಳಿಗೆ ಮಹನೀಯರ ಸಾಧನೆಗಳನ್ನು ಪರಿಚಯಿಸಬೇಕು. ಆ ಶಾಲೆ ಯಾರ ಹೆಸರಲ್ಲಿದೆಯೋ ಅವರ ಕುರಿತಾದ ಒಂದು ಸಣ್ಣ ವಸ್ತು ಸಂಗ್ರಹಾಲಯವೂ ಇರಬೇಕು. ಆಗ ಅಲ್ಲಿ ಓದುವ ಮಕ್ಕಳಿಗೆ ಪರಂಪರೆಯ ಅರಿವಾಗುತ್ತದೆ. ಆಧುನಿಕ, ಜಾತ್ಯತೀತ ಶಿಕ್ಷಣ ನೀಡುವ ಆಶಯದ ಈ ಶಾಲೆಗಳು ರಾಜ್ಯದ ಇತಿಹಾಸದ ಅಸ್ಮಿತೆಯ ಭಾಗವಾಗಬೇಕು' ಎಂದು ವರದಿ ಶಿಫಾರಸು ಮಾಡಿದೆ.

ಆಡಳಿತಾತ್ಮಕ ಶಿಫಾರಸು: 'ಶತಮಾನ ಕಂಡ ಶಾಲೆಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಇಲಾಖೆಯಲ್ಲಿ ಒಂದು ಪ್ರತ್ಯೇಕ ಕೋಶ ಸ್ಥಾಪಿಸಬೇಕು. ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಈ ಶತಮಾನ ಕಂಡ ಶಾಲೆಗಳ ಸಮಗ್ರ ಅಧ್ಯಯನ ಕೈಗೊಳ್ಳಬೇಕು. ಈ ಶಾಲೆಗಳ ಚರಿತ್ರೆಯ ಹಿನ್ನೆಲೆಯಲ್ಲಿ ಜಿಲ್ಲೆ, ತಾಲ್ಲೂಕುಗಳಲ್ಲಿ ಶಾಲಾ ಪರಂಪರೆ ಕುರಿತ ಪ್ರತ್ಯೇಕ ದಾಖಲಾತಿ, ಪ್ರದರ್ಶನ, ಪ್ರಕಟಣೆಗಳನ್ನು ಕೈಗೊಳ್ಳಬೇಕು' ಎಂದು ಹೇಳಲಾಗಿದೆ.

'2019ರ ಸುತ್ತೋಲೆಯಲ್ಲೇ ಶತಮಾನ ಕಂಡ ಶಾಲೆಯ ಚರಿತ್ರೆ ಇತ್ಯಾದಿ ವಿವರಗಳನ್ನೊಳಗೊಂಡ ಪುಸ್ತಕ ಅಥವಾ ವಿಡಿಯೊ ಮಾಡಬೇಕೆಂದು ತಿಳಿಸಲಾಗಿದೆ. ಆದ್ದರಿಂದ ಈ ಸಲಹೆಯನ್ನು ಅಂಗೀಕರಿಸಿ, ಪ್ರತಿ ಶಾಲೆಯ ಪರಂಪರೆಯ ವಿವರಗಳನ್ನೊಳಗೊಂಡ ಪ್ರಕಟಣೆಗಳನ್ನು ಹೊರಡಿಸಬೇಕು. ಅವುಗಳು ಜಾಲತಾಣವೊಂದರ ಮೂಲಕ ಆಸಕ್ತರಿಗೆ ದೊರೆಯುವಂತೆ ಮಾಡಬೇಕು. ಶೈಕ್ಷಣಿಕ ಇತಿಹಾಸವು ಅಧ್ಯಯನ ಯೋಗ್ಯವೆಂದು ಶಿಕ್ಷಣ ಇಲಾಖೆ ಭಾವಿಸಬೇಕು' ಎಂದು ಶಿಫಾರಸು ಮಾಡಲಾಗಿದೆ.



ಪುರುಷೋತ್ತಮ ಬಿಳಿಮಲೆ ಅವರು ವರದಿಯ ಪ್ರತಿಯನ್ನು ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಹಾಗೂ ಕೆ.ಪಿ. ಸುರೇಶ್ ಉಪಸ್ಥಿತರಿದ್ದರು

'ಶಾಲೆಗಳಿಗೆ ಐತಿಹಾಸಿಕ ಮಹತ್ವ'

ಶತಮಾನ ಕಂಡ ಶಾಲೆಗಳಿಗೆ ಐತಿಹಾಸಿಕ ಮಹತ್ವವಿದೆ. ಅವು ಅವಕಾಶ ವಂಚಿತ ಸಮುದಾಯಗಳಿಗೆ ಆಧುನಿಕ ಶಿಕ್ಷಣದ ಮೂಲಕ ಬಿಡುಗಡೆಯ ದಾರಿ ತೋರಿವೆ. ಸಾಮಾಜಿಕ ಬದಲಾವಣೆಯ ಹರಿಕಾರರು ನಡಸಿದ ಅಭಿಯಾನದ ಮೂರ್ತ ಸ್ವರೂಪವೇ ಈ ಶಾಲೆಗಳು. ನಾಲ್ಕು ತಲೆಮಾರುಗಳ ಬಳಿಕ ಆ ಶಾಲೆಗಳು ತನ್ನ ಅರ್ಥಪೂರ್ಣತೆಯನ್ನು ಕಳೆದುಕೊಂಡು, ಅಂಚಿಗೆ ಸರಿಯುವುದೆಂದರೆ ನಮ್ಮ ಪರಂಪರೆಯ ಆಶಯಕ್ಕೆ ಊನ ಬಂದಿದೆ ಎಂದರ್ಥ. ಜಾಗತೀಕರಣದ ವೇಗೋತ್ಕರ್ಷದಲ್ಲಿ ಅವು ಅಪ್ರಸ್ತುತವಾಗದಂತೆ ಉಳಿಸಿ ಬೆಳೆಸುವುದು ಪ್ರಜಾಸತ್ತಾತ್ಮಕ ಸರ್ಕಾರದ ಸಾಂವಿಧಾನಿಕ ಜವಾಬ್ದಾರಿ. ಈ ಶಾಲೆಗಳನ್ನು ಪುನಶ್ಚೇತನಗೊಳಿಸುವುದು ಸಂವಿಧಾನಕ್ಕೆ ಸಲ್ಲಿಸುವ ಗೌರವ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

ಪ್ರಮುಖ ಶಿಫಾರಸುಗಳು

- ಶಿಕ್ಷಣ ಇಲಾಖೆಗೆ ತನ್ನ ವಿಶಿಷ್ಟ ಶಾಲೆಗಳ ಚಾರಿತ್ರಿಕ ಮಹತ್ವ ಮತ್ತು ಪರಂಪರೆಯ ಮೌಲ್ಯದ ಬಗ್ಗೆ ಅರಿವಿರುವ ಯಾವ ಪುರಾವೆಯೂ ಇಲ್ಲ. ಈ ನಿಟ್ಟನಲ್ಲಿ ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿ ಕಚೇರಿಗಳಲ್ಲಿ ಶತಮಾನ ಕಂಡ ಶಾಲೆಗಳ ಬಗ್ಗೆ ನಿರ್ದಿಷ್ಟ ಅಧಿಕಾರಿಯೊಬ್ಬರನ್ನು ನಿಯೋಜಿಸಬೇಕು
- ಶತಮಾನ ಕಂಡ ಉನ್ನತ ಪ್ರಾಥಮಿಕ ಶಾಲೆಗಳಿಗೆ ವಿಜ್ಞಾನದ ಪ್ರಯೋಗಾಲಯ, ಇತಿಹಾಸ, ಪರಿಸರದ ವಸ್ತು ಸಂಗ್ರಹಾಲಯವನ್ನು ಒದಗಿಸಬೇಕು. ಇವುಗಳನ್ನು ವಿಶೇಷ ಆದ್ಯತಾ ಶಾಲೆಗಳಾಗಿ ಪರಿಗಣಿಸಿ, ಅಗತ್ಯ ಶಿಕ್ಷಕರ ಕಾಯಂ ನೇಮಕಾತಿಗೆ ಕ್ರಮವಹಿಸಬೇಕು
- ಇಂತಹ ಶಾಲೆಗಳ ಸಂಖ್ಯೆ ಏರುತ್ತಲೇ ಇದ್ದು, ಅವುಗಳ ಗುರುತಿಸುವಿಕೆ ಮತ್ತು ಅಭಿವೃದ್ಧಿ ನಿರಂತರ ಆಡಳಿತಾತ್ಮಕ ಪ್ರಕ್ರಿಯೆಯಾಗಬೇಕು
- ಈ ಶಾಲೆಗಳ ವ್ಯಾಪ್ತಿಯಲ್ಲಿ ಖಾಸಗಿ ಶಾಲೆಗೆ ಅನುಮತಿ ನೀಡುವ ಪ್ರಕ್ರಿಯೆ ಬಗ್ಗೆ ಸಾರ್ವಜನಿಕ ಚರ್ಚೆಯಾಗಬೇಕು

ವರದಿ ಸಿದ್ಧಪಡಿಸುವ ವೇಳೆ ಕಂಡುಬಂದ ಅಂಶಗಳು

- ಶತಮಾನ ಕಂಡ ಶಾಲೆಗಳಿಗೆ ಹಿಂದೆ ಸರ್ಕಾರವು ಸುಮಾರು ₹ 25 ಕೋಟಿ ಬಿಡುಗಡೆ ಮಾಡಿದ್ದರಿಂದ 240 ಶಾಲೆಗಳು ಅಭಿವೃದ್ಧಿಯಾಗಿವೆ. ಆದರೆ, ಈ ಯೋಜನೆ ಮುಂದುವರಿಯಲಿಲ್ಲ
- ಕಳೆದ ಹತ್ತು ವರ್ಷಗಳಲ್ಲಿ ಮುಚ್ಚಿ ಹೋದ ಸರ್ಕಾರಿ ಶಾಲೆಗಳ ಹಿಂದಿರುವ ಕಾರಣಗಳ ಬಗ್ಗೆ ಯಾವುದೇ ಗಂಭೀರ ಅಧ್ಯಯನಗಳು ನಡೆದಿಲ್ಲ. ವರದಿಗಳೂ ಲಭ್ಯವಿಲ್ಲ
- ಸಾವಿರಾರು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕುಸಿತ ಕಂಡಿದೆ. ಇದಕ್ಕಿರುವ ಕಾರಣಗಳನ್ನು ಆಳವಾಗಿ ಪರಿಶೀಲಿಸಲಾಗಿಲ್ಲ. ಖಾಸಗಿ ಶಾಲೆಗಳಿಗೆ ಅನುಮತಿ ನೀಡುವಲ್ಲಿ ಶಿಕ್ಷಣ ಇಲಾಖೆ, ಅಳಿವಿನಂಚಿನಲ್ಲಿರುವ ಶಾಲೆಗಳ ಹಿತಾಸಕ್ತಿಯನ್ನು ಗಮನಿಸಿದಂತಿಲ್ಲ
- ಇತ್ತೀಚೆಗೆ ದ್ವಿಭಾಷಾ ಮಾಧ್ಯಮವನ್ನು ಸಾವಿರಾರು ಶಾಲೆಗಳಲ್ಲಿ ಆರಂಭಿಸಲಾಗಿದ್ದು, ಇದು ಶಾಲಾ ದಾಖಲಾತಿಯಲ್ಲಿ ಸುಧಾರಣೆಗೆ ಕಾರಣವಾಗಿದೆ
- ಹಲವಾರು ಶಾಲೆಗಳಲ್ಲಿ ದಾಖಲಾತಿ ಆಯಾ ತರಗತಿಗಳಲ್ಲಿ ಒಂದಂಕಿಗೆ ಬಂದಿದ್ದು, ಇವು ಮುಂದಿನ ವರ್ಷಗಳಲ್ಲಿ ಮುಚ್ಚಿ ಹೋಗುವ ಸಾಧ್ಯತೆ ನಿಚ್ಚಳವಾಗಿದೆ

ಶತಮಾನ ಕಂಡ ಅಧಿಕ ಶಾಲೆಗಳಿರುವ ಶೈಕ್ಷಣಿಕ ಜಿಲ್ಲೆಗಳು

ಜಿಲ್ಲೆ	ಶಾಲೆಗಳ ಸಂಖ್ಯೆ
ವಿಜಯಪುರ	250
ಚಿಕ್ಕೋಡಿ	242
ಬೆಳಗಾವಿ	238
ಹಾವೇರಿ	225
ಧಾರವಾಡ	202

ದ್ವಿತೀಯ ಪಿಯು ಪರೀಕ್ಷೆ–2 ನೋಂದಣಿಗೆ ಏ.18ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–2 ತೆಗೆದುಕೊಳ್ಳುವ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳುವ ಅವಧಿಯನ್ನು ಏ.18ರವರೆಗೆ ವಿಸ್ತರಿಸಲಾಗಿದೆ.

ಅನುತ್ತೀರ್ಣರಾದವರು, ಪುನರಾವರ್ತಿತರು, ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಅಭ್ಯರ್ಥಿಗಳಿಗೆ ಆನ್‌ಲೈನ್, ಆಯಾ ಕಾಲೇಜುಗಳಲ್ಲಿ ಭೌತಿಕವಾಗಿ ಅರ್ಜಿ ಸಲ್ಲಿಸಲು ಏ.17ರವರೆಗೆ ಅವಕಾಶ ನೀಡಲಾಗಿತ್ತು. ವಿದ್ಯಾರ್ಥಿಗಳ ಕೋರಿಕೆಯಂತೆ ನೋಂದಣಿ ದಿನಾಂಕವನ್ನು ಒಂದು ದಿನ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಾಲಿ ಮಾಹಿತಿ ನೀಡಿದ್ದಾರೆ.

ಏ.30 ರಿಂದ ಪರೀಕ್ಷೆ ಆರಂಭ: ದ್ವಿತೀಯ ಪಿಯು ಪರೀಕ್ಷೆ–2 ಏ.30ರಿಂದ ಮೇ 13ರವರೆಗೆ ನಡೆಯಲಿದೆ. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವವರು ಪ್ರತಿ ವಿಷಯಕ್ಕೆ ₹175 ಪಾವತಿಸಬೇಕು.

ಚಂದನ ವಾಹಿನಿಯಲ್ಲಿ 'ರೈತ ರತ್ನ' ರಿಯಾಲಿಟಿ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಇಲಾಖೆ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ದೂರದರ್ಶನ ಚಂದನ ವಾಹಿನಿಯು ರೈತ ಸಾಧಕರನ್ನು ನಾಡಿನ ಜನರಿಗೆ ಪರಿಚಯಿಸಲು 'ರೈತ ರತ್ನ' ರಿಯಾಲಿಟಿ ಶೋ ರೂಪಿಸಿದೆ. ಏಪ್ರಿಲ್ 18 ರಿಂದ ಪ್ರತಿ ಶನಿವಾರ ಸಂಜೆ 6 ರಿಂದ 7 ಗಂಟೆವರೆಗೆ ಪ್ರಸಾರವಾಗಲಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಸರಣಿಯ ಮೊದಲ ಆವೃತ್ತಿಯಲ್ಲಿ 26 ಪ್ರಗತಿಪರ ರೈತರನ್ನು ಸಾಧಕ ಕುರ್ಚಿಯ ಮೇಲೆ ಕೂರಿಸಿ, ಅವರ ಜತೆಗೆ ಮಾತುಕತೆ ನಡೆಸಲಾಗುತ್ತದೆ. ವಿಶಿಷ್ಟ ಕೃಷಿ ಕಾರ್ಯಚಟುವಟಿಕೆಗಳು, ರೈತರ ಆವಿಷ್ಕಾರ, ರೈತ ಕುಟುಂಬದ ಸದಸ್ಯರು, ಸಂಬಂಧಿಗಳು, ಸ್ನೇಹಿತರು, ಸ್ಥಳೀಯ ಜನ ಹಂಚಿಕೊಂಡ ಅನಿಸಿಕೆಗಳು ಕಾರ್ಯಕ್ರಮಕ್ಕೆ ಮೆರಗು ನೀಡಲಿವೆ' ಎಂದು ತಿಳಿಸಿದರು.

'ಪ್ರತಿ ವಾರ ಆಯ್ದ ಒಬ್ಬ ಮಾದರಿ ರೈತ, ರೈತ ಮಹಿಳೆಯ ಕುಟುಂಬಸ್ಥರು, ಒಡನಾಡಿಗಳನ್ನು ಆಹ್ವಾನಿಸಿ ರೈತನ ಸಾಧನೆಯ ಬಗ್ಗೆ ಬೆಳಕು ಚೆಲ್ಲಲಾಗುತ್ತದೆ. ಇದು ಟಿ.ಆರ್.ಪಿ ಆಧಾರಿತ ಕಾರ್ಯಕ್ರಮವಲ್ಲ. ರೈತರ ಬವಣೆಗಳನ್ನು ಅನಾವರಣಗೊಳಿಸುವ ನೈಜ ಸರಣಿಯಾಗಿದೆ' ಎಂದರು.

ಚಂದನ ವಾಹಿನಿಯ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಎಚ್.ಎನ್. ಆರತಿ ಮಾತನಾಡಿ, 'ಈ ಸರಣಿಯಲ್ಲಿ ಪಾಲ್ಗೊಳ್ಳುವ 26 ರೈತ ಸಾಧಕರಲ್ಲಿ ಮೂವರನ್ನು 'ರೈತ ರತ್ನ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗುತ್ತದೆ' ಎಂದು ಹೇಳಿದರು.

ದಾವಣಗೆರೆ: ಕಾಂಗ್ರೆಸ್ ನಾಯಕರ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದಲ್ಲಿ ಮುಸ್ಲಿಂ ಮುಖಂಡರ ವಿರುದ್ಧ ತೆಗೆದುಕೊಂಡ ಕ್ರಮಗಳ ನಂತರ ಕಾಂಗ್ರೆಸ್ ನಾಯಕರ ನಡುವೆ ಆರಂಭವಾಗಿರುವ ವಾಗ್ವಾದ ಶುಕ್ರವಾರವೂ ಮುಂದುವರಿದಿದೆ.

ನಸೀರ್ ಅಹಮದ್ ಅವರನ್ನು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ವಜಾಗೊಳಿಸಿರುವುದು, ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷದಿಂದ ಅಮಾನತು ಮಾಡಿದ ಪ್ರಕರಣ, ಮುಖ್ಯಮಂತ್ರಿ ಮೌನ ಕುರಿತು ಶಾಸಕ ಕೆ.ಎನ್.ರಾಜಣ್ಣ ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಾರೆಲ್ಲ ಪಕ್ಷಕ್ಕೆ ನಿಷ್ಠೆಯಿಂದ ಇರುತ್ತಾರೆಯೋ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಪಕ್ಷ ಬೆಳೆಯಬೇಕು. ಬಡವರಿಗೆ ಅನುಕೂಲ ವಾಗಬೇಕು ಎನ್ನುವವರಿಗೇ ಅನ್ಯಾಯವಾಗುತ್ತಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಗುರುತಿಸಿಕೊಂಡಿರುವ ಬಣದವರನ್ನೇ ಗುರಿಯಾಗಿಸಲಾಗುತ್ತಿದೆ. ಅವರ ಪರ ಸಿದ್ದರಾಮಯ್ಯ ಅವರೇ ಗಟ್ಟಿಯಾಗಿ ನಿಲ್ಲುತ್ತಿಲ್ಲ. ಮುಖ್ಯಮಂತ್ರಿಗೆ ಯಾವ ಯೋಚನೆ ಇದೆಯೋ ಗೊತ್ತಿಲ್ಲ. ಇಂತಹ ಅಸಹಾಯಕತೆ, ತಟಸ್ಥ ನೀತಿ ಅವರಿಂದ ನಿರೀಕ್ಷಿಸಿರಲಿಲ್ಲ' ಎಂದು ತಿಳಿಸಿದರು.

ಜಾರಕಿಹೊಳಿ–ಡಿಕೆಶಿ ಭೇಟಿ

ದಾವಣಗೆರೆ ಉಪ ಚುನಾವಣೆಯ ನಂತರದ ಬೆಳವಣಿಗೆಗಳ ಕುರಿತು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ–ಡಿ.ಕೆ.ಶಿವಕುಮಾರ್ ಶುಕ್ರವಾರ ಭೇಟಿಯಾಗಿ ಕೆಲ ಸಮಯ ಚರ್ಚೆ ನಡೆಸಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಜಾರಕಿಹೊಳಿ, 'ಅಬ್ದುಲ್ ಜಬ್ಬಾರ್ ಅಮಾನತು ಬಗ್ಗೆ ಚರ್ಚೆ ಮಾಡಿದೆವು. ದಲಿತರು, ಅಲ್ಪಸಂಖ್ಯಾತರು ಕಾಂಗ್ರೆಸ್ ವೋಟ್ ಬ್ಯಾಂಕ್. ಸಮರ್ಥನೆಗೆ ಜಬ್ಬಾರ್ ಅವರಿಗೂ ಅವಕಾಶ ನೀಡಬೇಕು. ಅಮಾನತು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದ್ದೇನೆ' ಎಂದರು.

ಜಾರಕಿಹೊಳಿ ಭೇಟಿ ಕುರಿತು ವಿಭಿನ್ನ ಹೇಳಿಕೆ ನೀಡಿದ ಶಿವಕುಮಾರ್, 'ಕಾಂಗ್ರೆಸ್ ಪಕ್ಷವನ್ನು 2028ಕ್ಕೆ ಮತ್ತೆ ಅಧಿಕಾರಕ್ಕೆ ತರುವ ಬಗ್ಗೆ, ಬೆಂಗಳೂರು ಸಂಚಾರ ದಟ್ಟಣೆ ಕುರಿತು ಚರ್ಚೆ ಮಾಡಿದೆವು' ಎಂದರು.

> **ಪಕ್ಷಕ್ಕೆ ಹಾನಿಯಾಗುವ ಕೆಲಸ ಯಾರೇ ಮಾಡಿದರೂ ಶಿಸ್ತುಕ್ರಮ ಸಹಜ. ಅದು ಯಾರೇ ಆಗಿರಲಿ, ಎಂತಹ ದೊಡ್ಡ ವ್ಯಕ್ತಿಯೇ ಆಗಿರಲಿ ಪಕ್ಷಕ್ಕಿಂತ ದೊಡ್ಡವರಲ್ಲ. ಜಾತಿ, ಧರ್ಮದ ಲೇಪ ಹಚ್ಚುವುದು ಸೂಕ್ತ ಅಲ್ಲ**
> **ಎಚ್.ಸಿ.ಬಾಲಕೃಷ್ಣ,** ಕಾಂಗ್ರೆಸ್ ಶಾಸಕ

> **ಪಕ್ಷ ವಿರೋಧಿ ಚಟುವಟಿಕೆಗಾಗಿ ವಜಾಗೊಂಡಿರುವ ಮುಖಂಡರ ಪರ ಧ್ವನಿ ಎತ್ತಿರುವ ಮುಸ್ಲಿಂ ಧರ್ಮ ಗುರುಗಳಿಗೆ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಡಲಾಗುವುದು**
> **ಸಲೀಂ ಅಹಮದ್,** ಆಡಳಿತ ಪಕ್ಷದ ಮುಖ್ಯಸಚೇತಕ, ವಿಧಾನಪರಿಷತ್

ಸಿ.ಎಂ ಗುಂಪು ಅಂಥ ಬೋರ್ಡ್ ಹಾಕಿದ್ದಾರಾ: ಡಿ.ಕೆ. ಶಿವಕುಮಾರ್ ಪ್ರಶ್ನೆ

'ಕಾಂಗ್ರೆಸ್‌ನಲ್ಲಿ ಯಾರಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಂಪು ಅಂಥ ಬೋರ್ಡ್ ಹಾಕಿಕೊಂಡಿದ್ದಾರಾ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಶಾಸಕ ಕೆ.ಎನ್.ರಾಜಣ್ಣ ಅವರ ಟೀಕೆಗಳಿಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ, ನಾನು ಒಟ್ಟಿಗೇ ಇದ್ದೇವೆ. ಪ್ರತಿದಿನ ಜತೆಯಲ್ಲೇ ಕೂರುತ್ತೇವೆ, ಚರ್ಚಿಸುತ್ತೇವೆ. ಗುಂಪುಗಳು ಎನ್ನುವುದೇ ಇಲ್ಲ. ಕಾಂಗ್ರೆಸ್‌ನ ಎಲ್ಲ 139 ಶಾಸಕರು ನನ್ನ ಹಾಗೂ ಸಿದ್ದರಾಮಯ್ಯ ಅವರ ಶಾಸಕರೇ ಆಗಿದ್ದಾರೆ' ಎಂದರು.

'ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹಮದ್ ಅವರ ವಿರುದ್ಧ ಹೈಕಮಾಂಡ್ ನಾಯಕರ ಸೂಚನೆಯಂತೆ ಕ್ರಮ ಕೈಗೊಳ್ಳಲಾಗಿದೆ. ಯಾವುದೇ ವೈಯಕ್ತಿಕ ವಿಚಾರಗಳು ಇಲ್ಲ. ಕೆಲವು ಕೆಲಸಗಳನ್ನು ಪಕ್ಷದ ನಾಯಕರ ಮಾರ್ಗದರ್ಶನದಂತೆ ಮಾಡಬೇಕಾಗುತ್ತದೆ. ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಬೇಕಾಗುತ್ತದೆ' ಎಂದು ಹೇಳಿದರು.

ಸಿ.ಎಂ ಬಣ ಗುರಿ ಮಾಡಿ ಕ್ರಮ: ರಾಜಣ್ಣ

'ಪಕ್ಷದ ನೀತಿಯ ವಿರುದ್ಧವಾಗಿ ನಡೆದುಕೊಂಡವರೊಬ್ಬರು ಸಿದ್ದರಾಮಯ್ಯ ಬಣದವರನ್ನೇ ಗುರಿ ಮಾಡಿ ಕ್ರಮ ಜರುಗಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ಕೆ.ಎನ್. ರಾಜಣ್ಣ ಅವರು ಶಿವಕುಮಾರ್ ಹೆಸರು ಹೇಳದೇ ಟೀಕಿಸಿದರು.

'ಪ್ರಯಾಗ್ ರಾಜ್‌ನಲ್ಲಿ ಮುಳುಗಿದರೆ ಬಡತನ ಹೋಗುತ್ತದೆಯೇ ಎಂದು ಎಐಸಿಸಿ ಅಧ್ಯಕ್ಷರು ಹೇಳಿದ್ದರು. ಇಲ್ಲಿನ ನಾಯಕರು ಅಲ್ಲಿಗೆ ಹೋಗಿ ಮುಳುಗಿ ಬಂದರು. ರಾಹುಲ್ ಗಾಂಧಿ ಯಾರು ಎಂದು ಕೇಳಿದವರ ಜತೆ ವೇದಿಕೆ ಹಂಚಿಕೊಂಡರು. ರಾಹುಲ್ ಆಹ್ವಾನ ಪತ್ರಿಕೆ ನಿರಾಕರಿಸಿದವರ ಮನೆಯ ಮದುವೆಯಲ್ಲಿ ಭಾಗವಹಿಸಿದ್ದರು' ಎಂದು ಅವರು ಹರಿಹಾಯ್ದರು.

ಎಸ್.ಸಡಗೋಪನ್ ಅಧ್ಯಕ್ಷತೆಯ ತಜ್ಞರ ಸಮಿತಿ ಶಿಫಾರಸು

ತಾಂತ್ರಿಕ ಶಿಕ್ಷಣ: ಕಂಪ್ಯೂಟರ್ ಸೈನ್ಸ್‌ಗೆ ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಂತ್ರಿಕ ಶಿಕ್ಷಣದಲ್ಲಿ ಕಂಪ್ಯೂಟರ್ ಸೈನ್ಸ್ ಆಧಾರಿತ ಕೋರ್ಸ್‌ಗಳ ಪ್ರವೇಶಕ್ಕೆ ಮಿತಿ ನಿಗದಿ ಮಾಡಬೇಕು ಎಂದು ಬೆಂಗಳೂರು ಐಐಐಟಿ ಮಾಜಿ ನಿರ್ದೇಶಕ ಎಸ್. ಸಡಗೋಪನ್ ಅಧ್ಯಕ್ಷತೆಯ ತಜ್ಞರ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಮಿತಿಯು ತನ್ನ ವರದಿಯನ್ನು ಶುಕ್ರವಾರ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಿದೆ. ಯಾವುದೇ ಶಿಕ್ಷಣ ಸಂಸ್ಥೆ ಕಂಪ್ಯೂಟರ್ ಸೈನ್ಸ್ ಒಳಗೊಂಡ ಐದು ಕೋರ್ಸ್‌ಗಳು ಹಾಗೂ ಒಟ್ಟು 900 ಸೀಟುಗಳನ್ನು ಮೀರಬಾರದು ಎಂದು ಹೇಳಿದೆ.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ಒಂದೇ ಕೋರ್ಸ್‌ಗೆ ಪ್ರವೇಶ ಪಡೆಯುವುದನ್ನು ತಡೆಯಲು ನಿಯಂತ್ರಣ ಹೇರಬೇಕು. ಇಲ್ಲದಿದ್ದರೆ ತಾಂತ್ರಿಕ ಶಿಕ್ಷಣದಲ್ಲಿ ಸೃಷ್ಟಿಯಾಗಿರುವ ಕಂಪ್ಯೂಟರ್ ಸೈನ್ಸ್ ಬೇಡಿಕೆಯು ಭವಿಷ್ಯದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗದ ಅವಕಾಶಗಳ ಮೇಲೆ ಗಂಭೀರ ಪರಿಣಾಮ ಬೀರಬಹುದು ಎಂದು ಸಮಿತಿ ಹೇಳಿದೆ.

ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳಿಗೆ ಮಿತಿ ಹಾಕುವ ಜತೆಗೆ ಮೆಕ್ಯಾನಿಕಲ್, ಸಿವಿಲ್, ಆಟೋಮೊಬೈಲ್ ಮತ್ತಿತರ ವಿಭಾಗಗಳಲ್ಲೂ ಕೃತಕ ಬುದ್ಧಿಮತ್ತೆ (ಎಐ) ಇತರೆ ಕೋರ್ಸ್‌ಗಳನ್ನು ಸೇರ್ಪಡೆ ಮಾಡಬೇಕು. ಈ ನಿಯಮಗಳನ್ನು ಖಾಸಗಿ ವಿಶ್ವವಿದ್ಯಾಲಯಗಳು, ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲೂ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಶಿಫಾರಸು ಮಾಡಿದೆ.

ಗುಣಮಟ್ಟದ ಮಾನದಂಡಗಳು: 300ಕ್ಕೂ ಹೆಚ್ಚು ಸೀಟುಗಳಿರುವ ಶಾಖೆಗಳಿಗೆ ಎರಡು ವರ್ಷಗಳೊಳಗೆ ಎನ್‌ಬಿಎ ಮಾನ್ಯತೆ ಕಡ್ಡಾಯ, ನಿಯಮ ಉಲ್ಲಂಘಿಸಿದ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಅಧಿಕಾರ ನೀಡಬೇಕು. ಖಾಸಗಿ ವಿಶ್ವವಿದ್ಯಾಲಯಗಳಿಗೆ ಎರಡು ವರ್ಷಕ್ಕೊಮ್ಮೆ ಪರಿಶೀಲನೆ ಮಾಡಬೇಕು. 2025-26ನೇ ಸಾಲಿನಲ್ಲಿ ಕಂಪ್ಯೂಟರ್ ಸೈನ್ಸ್‌ಗೆ ಹೆಚ್ಚು ಸೀಟುಗಳನ್ನು ಭರ್ತಿ ಮಾಡಿದ್ದ ಪ್ರೆಸಿಡೆನ್ಸಿ, ಸಪ್ತಗಿರಿ ಮತ್ತು ದಯಾನಂದ ಸಾಗರ್ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಕೋರ್ಸ್‌ಗಳ ಸೀಟುಗಳನ್ನು ಪುನರ್‌ರಚನೆ ಹಂಚಿಕೆ ಮಾಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಯಾವುದೇ ಶಾಖೆಯಲ್ಲಿ ಶೇ 40ಕ್ಕಿಂತ ಹೆಚ್ಚು ಸೀಟು ಉಳಿದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರವೇಶ ಅವಧಿ ವಿಸ್ತರಿಸಬೇಕು. ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಪ್ರತಿ ಮೂರು ವರ್ಷಕ್ಕೊಮ್ಮೆ ಮರುಪರಿಶೀಲನೆ ನಡೆಸಬೇಕು ಎಂದು ವರದಿ ಹೇಳಿದೆ.

ಪ್ರಮುಖ ಶಿಫಾರಸುಗಳು

- 2026-27ಸಾಲಿನಿಂದಲೇ ಕಂಪ್ಯೂಟರ್ ಸೈನ್ಸ್ ಸೀಟುಗಳಲ್ಲಿ ಶೇ 17 ಕಡಿತ
- ಉಳಿಕೆ ಸೀಟುಗಳನ್ನು ಕೋರ್ ಹಾಗೂ ಕೃತಕ ಬುದ್ಧಿಮತ್ತೆ ವಿಭಾಗಕ್ಕೆ ವರ್ಗಾವಣೆ
- ಇತರೆ ಕೋರ್ಸ್‌ಗಳಲ್ಲೂ ಎಐ ಪಠ್ಯಕ್ರಮ ಅಳವಡಿಕೆ
- ಎಲ್ಲಾ ಪದವಿಯಲ್ಲೂ ವಿಶ್ಲೇಷಣಾ ಸಾಧನವಾಗಿ ಮಷೀನ್ ಲರ್ನಿಂಗ್ ಕೋರ್ಸ್
- 2027-28ರಿಂದ ಪ್ರತಿ ಸೆಮಿಸ್ಟರ್‌ನಲ್ಲೂ ಪ್ರಾಯೋಗಿಕ ಲ್ಯಾಬ್ ಕಡ್ಡಾಯ
- ಹೊಸ ಸಂಸ್ಥೆಗಳಿಗೆ ಪ್ರತಿ ಕೋರ್ಸ್‌ಗೆ 60 ಸೀಟು ನಿಗದಿ
- ಪ್ರತಿವರ್ಷ 60 ಸೀಟುಗಳ ಹೆಚ್ಚಳ (ಗರಿಷ್ಠ 180 ಸೀಟುಗಳು)

ಶಿಕ್ಷಕರ ಬಡ್ತಿ ಅರ್ಹತಾ ಪರೀಕ್ಷೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಉದ್ದೇಶದಿಂದ, ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ನಡೆಸಬೇಕಿದ್ದ ಅರ್ಹತಾ ಪರೀಕ್ಷೆಯ ದಿನಾಂಕವನ್ನು ಮುಂದೂಡಲಾಗಿದೆ.

ಬಡ್ತಿ ಅರ್ಹತಾ ಪರೀಕ್ಷೆಗಳು ಆಯಾ ಶೈಕ್ಷಣಿಕ ವಿಭಾಗೀಯ ಕೇಂದ್ರಗಳಲ್ಲಿ ಇದೇ ಏಪ್ರಿಲ್ 21ರಿಂದ 24ರವರೆಗೆ ನಡೆಯಬೇಕಿತ್ತು. ಆದರೆ, ಜನಗಣತಿ ಕಾರ್ಯಕ್ಕೆ ಬಹುತೇಕ ಶಿಕ್ಷಕರು ನಿಯೋಜನೆಯಾಗಿರುವ ಕಾರಣ ಪರೀಕ್ಷೆ ಮುಂದೂಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ಹೇಳಿದೆ.

ಸರ್ಕಾರಿ ಪ್ರೌಢಶಾಲೆಗಳಿಗೆ ನೇಮಕವಾಗಿದ್ದ ಸಹ ಶಿಕ್ಷಕರಿಗೆ ಸ್ನಾತಕೋತ್ತರ ಪದವಿ ಆಧಾರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಬಡ್ತಿ ನೀಡಲಾಗುತ್ತಿತ್ತು. ಪಿಯು ಕಾಲೇಜುಗಳಲ್ಲಿ 34 ವಿಷಯಗಳ ಉಪನ್ಯಾಸಕರ ಹುದ್ದೆಗಳಿದ್ದು, ಪ್ರೌಢಶಾಲಾ ಶಿಕ್ಷಕರು ಯಾವ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರೋ, ಆ ವಿಷಯಗಳ ಉಪನ್ಯಾಸಕರಾಗಿ ಬಡ್ತಿ ಪಡೆದಿದ್ದರು. ನಂತರ ಬಡ್ತಿ ನಿಯಮಕ್ಕೆ ತಿದ್ದುಪಡಿ ತಂದು ಪರೀಕ್ಷೆ ನಡೆಸಿ, ಬಡ್ತಿ ನೀಡಲು ನಿರ್ಧರಿಸಲಾಗಿತ್ತು.

ಪ್ರೌಢಶಾಲೆಯ ಸಹ ಶಿಕ್ಷಕರಿಗೆ ಉಪನ್ಯಾಸಕ ಹುದ್ದೆಗೆ ಬಡ್ತಿ ನೀಡಲು ನಿಗದಿಪಡಿಸಿರುವ ಅರ್ಹತಾ ಪರೀಕ್ಷಾ ದಿನಾಂಕವನ್ನು ಮುಂದೂಡುವಂತೆ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಕೆ.ವಿವೇಕಾನಂದ ಅವರನ್ನು ಒಳಗೊಂಡ ವಿಶೇಷ ಸದನ ಸಮಿತಿ ಸೂಚಿಸಿತ್ತು.

ತಡೆ ಆದೇಶ ರದ್ದು: ಅಬಕಾರಿ ಇ–ಹರಾಜು ಹಾದಿ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಣಗೊಳ್ಳದ, ರದ್ದಾದ ಮತ್ತು ಮುಟ್ಟುಗೋಲು ಹಾಕಿಕೊಂಡ ಅಬಕಾರಿ ಪರವಾನಗಿಗಳನ್ನು ನಿಗದಿತ ಮೀಸಲಾತಿಗೆ ಅನುಗುಣವಾಗಿ ಇ-ಹರಾಜು ಮಾಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಅನುಮತಿ ನೀಡಿದೆ. ಇದರಿಂದಾಗಿ ಕಳೆದ ನವೆಂಬರ್‌ನಿಂದ ಸ್ಥಗಿತಗೊಂಡಿದ್ದ 569 ಪರವಾನಗಿಗಳ ಇ-ಹರಾಜಿನ ಹಾದಿ ಸುಗಮವಾಗಿದೆ.

ಇ-ಹರಾಜು ಪ್ರಕ್ರಿಯೆಗೆ ಏಕಸದಸ್ಯ ನ್ಯಾಯಪೀಠ ತಡೆ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅಬಕಾರಿ ಪರವಾನಗಿ ಇ-ಹರಾಜಿಗೆ ತಡೆ ನೀಡಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಪಡಿಸಿದೆ.

'ನವೀಕರಣಗೊಳ್ಳದೆ ಲ್ಯಾಪ್ಸ್ ಆಗಿರುವ ಪರವಾನಗಿಗಳನ್ನು ಮಾತ್ರ ಹರಾಜು ಮಾಡಲು ಉದ್ದೇಶಿಸಲಾಗಿದೆ ಎಂದು ಸರ್ಕಾರದ ಪರ ವಕೀಲರು ಹೇಳಿದ್ದಾರೆ. ಉದ್ದೇಶಿತ ನಿಯಮ 12ರ ಸಿಂಧುತ್ವವನ್ನು ಏಕಸದಸ್ಯ ಪೀಠದ ಮುಂದೆ ಬಗೆಹರಿಸಿಕೊಳ್ಳಲು ಸೂಚಿಸಲಾಗಿದೆ. ನಿಯಮಗಳ ಜಾರಿಗೆ ಮಧ್ಯಂತರ ತಡೆ ಅನಗತ್ಯವಾಗಿದೆ. ಆಕ್ಷೇಪಾರ್ಹ ನಿಯಮಗಳು ಮೇಲ್ನೋಟಕ್ಕೆ ಅಮಾನ್ಯವಾಗಿವೆ ಎಂಬ ಏಕಸದಸ್ಯ ಪೀಠದ ನಿಲುವನ್ನು ಒಪ್ಪಲಾಗದು. ಆದ್ದರಿಂದ, ಮೇಲ್ಮನವಿಯನ್ನು ಮಾನ್ಯ ಮಾಡಲಾಗುತ್ತಿದೆ. ಏಕಸದಸ್ಯ ಪೀಠದ ಮಧ್ಯಂತರ ಆದೇಶವನ್ನು ರದ್ದುಗೊಳಿಸಲಾಗುತ್ತಿದೆ' ಎಂದು ವಿಭಾಗೀಯ ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಸ್ಥಗಿತಗೊಂಡಿದ್ದ 477 ಸಿಎಲ್-2ಎ ಚಿಲ್ಲರೆ ಮದ್ಯ ಮಾರಾಟ ಮಳಿಗೆ ಮತ್ತು 92 ಸಿಎಲ್-9ಎ ರಿಫ್ರೆಶ್ ರೂಮ್ ಸನ್ನದು ಸೇರಿದಂತೆ ಒಟ್ಟು 569 ಪರವಾನಗಿಗಳನ್ನು 2026ರ ಜನವರಿ 13ರಿಂದ 20ರವರೆಗೆ ಹರಾಜು ಹಾಕಲು ದಿನಾಂಕ ನಿಗದಿ ಮಾಡಿ 2025ರ ನವೆಂಬರ್‌ನಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು.

ಈ ಅಧಿಸೂಚನೆ ಪ್ರಶ್ನಿಸಿ ಹುಬ್ಬಳ್ಳಿಯ ಶಾಂತಾಬಾಯಿ, ಮೈಸೂರಿನ ಎಸ್.ಗುರುಸ್ವಾಮಿ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 2025ರ ನ.25ರಂದು ಇ-ಹರಾಜಿಗೆ ತಡೆ ನೀಡಿತ್ತು.

ವಿದ್ಯುತ್ ದರ ಏರಿಕೆ ಬಿಸಿ

ಒಂದನೇ ಪುಟದಿಂದ...

ಈಗ 2024–25ನೇ ಸಾಲಿನಲ್ಲಿ ಬಳಸಿದ ವಿದ್ಯುತ್‌ಗೆ ಹೆಚ್ಚುವರಿ ಹಣ ವಸೂಲಿ ಮಾಡುತ್ತಿರುವುದರಿಂದ, ಮೇ ತಿಂಗಳ ಬಿಲ್‌ನ ಮೊತ್ತದಲ್ಲಿ ಬೆಸ್ಕಾಂ ಮತ್ತು ಚೆಸ್ಕಾಂ ವ್ಯಾಪ್ತಿಯ ಗ್ರಾಹಕರಿಗೆ ಭಾರಿ ಹೊರೆಬೀಳಲಿದೆ.

ಹೀಗಾಗಿ, ಗ್ರಾಹಕರಿಗೆ ಮೇ ತಿಂಗಳಲ್ಲಿ ಒಮ್ಮೆಗೆ 'ಡಬಲ್ ಶಾಕ್' ಆಗಲಿದೆ. ವಾರ್ಷಿಕ ಪರಿಷ್ಕರಣೆಯಿಂದ ಒಂದೆಡೆ ಬಿಲ್ ಹೆಚ್ಚಾಗಲಿದ್ದರೆ, ಮತ್ತೊಂದೆಡೆ 2024–25ನೇ ಸಾಲಿನ ಹೆಚ್ಚುವರಿ ಮೊತ್ತವನ್ನೂ ಪಾವತಿಸಬೇಕಾಗುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಸಲ್ಲಿಸಿದ್ದ 2024–25ನೇ ಸಾಲಿನ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿ ಸುಮಾರು ₹4,900 ಕೋಟಿ ಆದಾಯ ಖೋತಾ ಆಗಿದೆ ಎಂದು ಪ್ರಸ್ತಾಪಿಸಲಾಗಿತ್ತು. ಅದನ್ನು ತುಂಬಿಸಿಕೊಡುವ ಉದ್ದೇಶದಿಂದ ಆಯೋಗವು ಹೆಚ್ಚುವರಿಯಾಗಿ ಗ್ರಾಹಕರಿಂದ ಹಣ ಸಂಗ್ರಹಿಸಲು ಎರಡು ಕಂಪನಿಗಳಿಗೆ ಅನುಮತಿ ನೀಡಿ ಶುಕ್ರವಾರ ಆದೇಶ ಹೊರಡಿಸಿದೆ.

ಈ ವರ್ಷದ ಮೇ ತಿಂಗಳಿನಿಂದ 2027ರ ಏಪ್ರಿಲ್‌ವರೆಗೆ, ಅಂದರೆ ಒಂದು ವರ್ಷದವರೆಗೆ ಈ ಹಣವನ್ನು ಗ್ರಾಹಕರಿಂದ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. 2024ರ ಏಪ್ರಿಲ್‌ನಿಂದ 2025ರ ಮಾರ್ಚ್‌ವರೆಗೆ ಬಳಸಿರುವ ವಿದ್ಯುತ್‌ಗೆ ಅನುಗುಣವಾಗಿ ಎಲ್ಲ ವರ್ಗದ ಗ್ರಾಹಕರು ಹೆಚ್ಚುವರಿಯಾಗಿ ಹಣ ಪಾವತಿಸಬೇಕಾಗುತ್ತದೆ.

ಮೇ ತಿಂಗಳ 1ನೇ ತಾರೀಖಿನಿಂದ ನೀಡುವ ಬಿಲ್‌ನಿಂದಲೇ ಇದು ಜಾರಿಯಾಗಲಿದೆ. ಹೆಚ್ಚುವರಿ ಹಣವನ್ನು ಬಿಲ್‌ನಲ್ಲಿ ಪ್ರತ್ಯೇಕವಾಗಿ ನಮೂದಿಸಲಾಗುತ್ತದೆ. ಕಂಪನಿಗಳು ಸಹ ಇದನ್ನು ಪ್ರತ್ಯೇಕ ಆದಾಯ ಎಂಬುದಾಗಿ ಪರಿಗಣಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಕಳೆದ ವರ್ಷದ ಮಾರ್ಚ್‌ನಲ್ಲಿ ದರ ಪರಿಷ್ಕರಣೆ ಮಾಡಿದಾಗ ಕೆಇಆರ್‌ಸಿ ಅಂದಾಜು ಮಾಡಿದ್ದ ಲೆಕ್ಕಾಚಾರಕ್ಕಿಂತ ವೆಚ್ಚ ಹೆಚ್ಚಾಗಿದ್ದರೆ, ಆದಾಯದಲ್ಲಿ ಖೋತಾ ಆಗಿದೆ. ಇದರ ನಡುವೆ ಸಮತೋಲನ ಕಾಪಾಡಲು ದರ ಪರಿಷ್ಕರಣೆ ಮಾಡುವ ಅಗತ್ಯವಿದೆ ಎಂದು ಎಸ್ಕಾಂಗಳು ಕೆಇಆರ್‌ಸಿಗೆ ಸಲ್ಲಿಸಿದ್ದ ವರದಿಯಲ್ಲಿ ಉಲ್ಲೇಖಿಸಿದ್ದವು. ಖೋತಾ ಹಣದ ಲೆಕ್ಕಾಚಾರವನ್ನು ಆಯೋಗ ಪೂರ್ಣವಾಗಿ ಒಪ್ಪದೆ ಇದ್ದರೂ, ಬಹುತೇಕ ವಿಷಯಗಳಲ್ಲಿ ಸಮ್ಮತಿ ಸೂಚಿಸಿದೆ.

ಬಾಡಿಗೆದಾರರಿಗೆ ಕಿರಿಕಿರಿ

'ಬೆಸ್ಕಾಂ ಮತ್ತು ಚೆಸ್ಕಾಂ ವ್ಯಾಪ್ತಿಯಲ್ಲಿ 2024–25ನೇ ಸಾಲಿನಲ್ಲಿ ಬಳಸಿರುವ ವಿದ್ಯುತ್‌ಗೆ, ಈಗ ಹೆಚ್ಚುವರಿ ಹಣ ವಸೂಲಿ ಮಾಡುವುದರಿಂದ ಬಾಡಿಗೆ ಮನೆಗಳಲ್ಲಿ ಇರುವ ಗ್ರಾಹಕರಿಗೆ ಕಿರಿಕಿರಿಯಾಗಲಿದೆ. ಆಗ ಬಾಡಿಗೆ ಮನೆಯಲ್ಲಿ ಇದ್ದವರು ಈಗ ಬದಲಾಗಿರುತ್ತಾರೆ. ಹೊಸದಾಗಿ ಬಾಡಿಗೆಗೆ ಬಂದಿರುವವರು ಈಗ ಹೆಚ್ಚುವರಿ ಹಣವನ್ನು ಪಾವತಿಸಬೇಕಾಗಿರುವುದರಿಂದ ಸಮಸ್ಯೆ ಎದುರಾಗಲಿದೆ' ಎಂದು ಗ್ರಾಹಕರೊಬ್ಬರು ತಿಳಿಸಿದರು.

'ಸಾಮಾನ್ಯವಾಗಿ ಬಾಡಿಗೆದಾರರೇ ವಿದ್ಯುತ್ ಬಿಲ್ ಪಾವತಿಸುತ್ತಾರೆ. ಮನೆಯ ಮಾಲೀಕರು ಪಾವತಿಸುವುದಿಲ್ಲ. ಮೇ ತಿಂಗಳಿಂದ ಹೆಚ್ಚುವರಿ ಹಣ ವಸೂಲಿ ಮಾಡಲು ಮುಂದಾದಾಗ, ಬಾಡಿಗೆದಾರರು ಎರಡು ವರ್ಷಗಳ ಹಿಂದಿನ ಹಣವನ್ನು ನಾವು ಈಗ ಯಾಕೆ ನೀಡಬೇಕು ಎಂದು ತಕರಾರು ತೆಗೆಯುತ್ತಾರೆ. ಮಾಲೀಕರು ಮತ್ತು ಬಾಡಿಗೆದಾರರ ಮಧ್ಯೆ ಇದು ಸಂಘರ್ಷಕ್ಕೆ ಎಡೆಮಾಡಿಕೊಡಲಿದೆ' ಎಂದು ಅಭಿಪ್ರಾಯಪಟ್ಟರು.

ಕಂಪನಿವಾರು ಯೂನಿಟ್ ದರ ಹೆಚ್ಚಳ (ಪೈಸೆಗಳಲ್ಲಿ)

ಬೆಸ್ಕಾಂ	56
ಚೆಸ್ಕಾಂ	15

ಗ್ರಾಹಕರಿಗೆ ವಾಪಸ್ ಮಾಡಬೇಕಾದ ಹಣ (ಪೈಸೆಗಳಲ್ಲಿ)

ಮೆಸ್ಕಾಂ	9
ಹೆಸ್ಕಾಂ	10
ಜೆಸ್ಕಾಂ	10

ಚೆನ್ನೈ, ಗುಂತಕಲ್ ವಿಭಾಗದಲ್ಲಿ ಪ್ರಾದೇಶಿಕ ಭಾಷೆ ಬಳಕೆ • ನೈರುತ್ಯ ರೈಲ್ವೆಯಲ್ಲಿ ಸಿಗದ ಅವಕಾಶ

ಕನ್ನಡಕ್ಕೆ ಆದ್ಯತೆ ಕೊಡದ ನೈರುತ್ಯ ರೈಲ್ವೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನೈರುತ್ಯ ರೈಲ್ವೆಯಲ್ಲಿ ಕನ್ನಡ ಭಾಷೆಗೆ ಆದ್ಯತೆ ಸಿಕ್ಕಿಲ್ಲ. ಇನ್ನು ಮುಂದೆ ರೈಲ್ವೆ ಆಂತರಿಕ ಪರೀಕ್ಷೆಗಳು ಕನ್ನಡದಲ್ಲೇ ನಡೆಯಲಿವೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವರು ಹೇಳಿಕೆ ನೀಡುತ್ತಿದ್ದರೂ, ನಿಯಮ ಪ್ರಕಾರ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಪರೀಕ್ಷೆ ಬರೆಯಬಹುದು ಎಂದು ಹೇಳುತ್ತಿರುವ ಅಧಿಕಾರಿಗಳು ಕನ್ನಡಕ್ಕೆ ಅವಕಾಶ ನೀಡುತ್ತಿಲ್ಲ.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಲ್ಲಿ ಗೂಡ್ಸ್ ರೈಲು ನಿರ್ವಾಹಕರು, ಶೇ 15 ಎಲ್‌ಡಿಸಿಯ ಕೋಟಾದಡಿ (ಮುಂಬಡ್ತಿ) 73 ಹುದ್ದೆಗಳನ್ನು ತುಂಬಲು 2024ರ ಆಗಸ್ಟ್ 1ರಂದು ಅಧಿಸೂಚನೆ ಹೊರಡಿಸಲಾಗಿತ್ತು. ರೈಲ್ವೆ ಸಿಬ್ಬಂದಿ ಪರೀಕ್ಷೆ ಬರೆದು ಮುಂಬಡ್ತಿ ಪಡೆದು ಈ ಹುದ್ದೆಗಳಿಗೆ ಹೋಗುವ ಪ್ರಕ್ರಿಯೆ ಇದಾಗಿದ್ದು, ಟ್ರೈನ್ ಕ್ಲರ್ಕ್, ಶಂಟಿಂಗ್ ಮಾಸ್ಟರ್, ಪಾಯಿಂಟ್ಸ್‌ಮನ್, ಟಿಕೆಟ್ ತಪಾಸಣೆಕಾರರು, ವಾಣಿಜ್ಯ ಸಹಾಯಕ ಹುದ್ದೆಗಳಲ್ಲಿರುವವರು, ಮೂರು ವರ್ಷ ಸೇವಾವಧಿ ಪೂರೈಸಿದವರು ಈ ಹುದ್ದೆಗೆ ಅರ್ಜಿ ಸಲ್ಲಿಸಿ ಪರೀಕ್ಷೆ ಬರೆಯಬಹುದಿತ್ತು.

ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು. ಕನ್ನಡದಲ್ಲಿಯೂ ಅವಕಾಶ ನೀಡಬೇಕು ಎಂದು ಡಿಸೆಂಬರ್‌ನಲ್ಲಿ ಸಚಿವ ವಿ. ಸೋಮಣ್ಣ ಸೂಚನೆ ನೀಡಿದ್ದರು. ಅದರಂತೆ ಕನ್ನಡದಲ್ಲೂ ಅವಕಾಶ ನೀಡಲಾಯಿತು. 2025ರ ಫೆಬ್ರುವರಿಯಲ್ಲಿ ಪರೀಕ್ಷೆ ನಡೆದಿತ್ತು. ಆದರೆ, ಆಡಳಿತಾತ್ಮಕ ಕಾರಣ ನೀಡಿ ಫಲಿತಾಂಶ ರದ್ದು ಮಾಡಲಾಗಿತ್ತು.

ಹುದ್ದೆಗಳ ಸಂಖ್ಯೆ ಹೆಚ್ಚಿಸಿ ಇದೇ ಪರೀಕ್ಷೆಯನ್ನು 2025ರ ಡಿಸೆಂಬರ್‌ನಲ್ಲಿ ನಡೆಸಲಾಗಿತ್ತು. ಕನ್ನಡದಲ್ಲಿ ಸಿದ್ಧತೆ ಮಾಡಿಕೊಂಡು ಸಿಬ್ಬಂದಿ ಹೋಗಿದ್ದರೂ, ಅಲ್ಲಿ ಕನ್ನಡ ಭಾಷೆಗೆ ಅವಕಾಶ ಇರಲಿಲ್ಲ. ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಮಾತ್ರ ಬರೆಯಬೇಕಿತ್ತು. ಇದು ಮಾಧ್ಯಮಗಳಲ್ಲಿ ಪ್ರಕಟವಾಗಿ, ಕನ್ನಡಪರ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿತ್ತು. 'ಕಣ್ತಪ್ಪಿನಿಂದ ಹೀಗಾಗಿದೆ. ಮರು ಪರೀಕ್ಷೆ ನಡೆಸಿ ಸರಿಪಡಿಸಲಾಗುವುದು' ಎಂದು ಆಗ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದರು. ಆದರೆ, ಮರು ಪರೀಕ್ಷೆ ನಡೆದಿಲ್ಲ. ಅದೇ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ ಎಂದು ನೈರುತ್ಯ ರೈಲ್ವೆಯ ಕನ್ನಡ ಅಭ್ಯರ್ಥಿಗಳು ಮಾಹಿತಿ ನೀಡಿದರು.

ಇಂಗ್ಲಿಷ್, ಹಿಂದಿ ಅಲ್ಲದೇ ಪ್ರಾದೇಶಿಕ ಭಾಷೆಗಳಲ್ಲಿಯೂ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ರೈಲ್ವೆ ಮಂಡಳಿಯು 1992ರಲ್ಲಿ ಆದೇಶ ಹೊರಡಿಸಿತ್ತು. ಚೆನ್ನೈ ರೈಲ್ವೆಯಲ್ಲಿ ಇದು ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿದೆ. ಗುಂತಕಲ್ ವಿಭಾಗದಲ್ಲಿ ಇತ್ತೀಚೆಗೆ ತೆಲುಗಿನಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಆದರೆ, ಕರ್ನಾಟಕದಲ್ಲಿ ನೈರುತ್ಯ ರೈಲ್ವೆಯು ಅವಕಾಶ ನೀಡುತ್ತಿಲ್ಲ ಎಂದು ಕನ್ನಡಿಗ ಅಭ್ಯರ್ಥಿಗಳು ದೂರಿದರು.

ನೈರುತ್ಯ ರೈಲ್ವೆಯಲ್ಲಿ ಈಗಾಗಲೇ ಶೇ 95ರಷ್ಟು ಅಧಿಕಾರಿಗಳು, ಸಿಬ್ಬಂದಿ ಅನ್ಯಭಾಷೆಯವರೇ ಇದ್ದಾರೆ. ಇದು ಹೀಗೆ ಮುಂದುವರಿದರೆ ಡಿ ಗ್ರೂಪ್ ಹೊರತುಪಡಿಸಿ ಎಲ್ಲಿಯೂ ಕನ್ನಡಿಗರು ಇಲ್ಲದಂತಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ

> **ರೈಲ್ವೆ ಮಂಡಳಿಯ ಆದೇಶದಂತೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪರೀಕ್ಷೆ ನಡೆಸಲು ಮಾತ್ರ ಅವಕಾಶವಿದೆ. ಕನ್ನಡದಲ್ಲಿಯೂ ಅವಕಾಶ ನೀಡುವ ಬಗ್ಗೆ ಮಂಡಳಿಗೆ ಬರೆದಿದ್ದೇವೆ**
> **ಅಶುತೋಷ್ ಕುಮಾರ್ ಸಿಂಗ್,** ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ

ಕನ್ನಡ ಕಡೆಗಣಿಸಿದರೆ ರೈಲ್ವೆಗೆ ಮುತ್ತಿಗೆ

'ಕೇಂದ್ರ ಸಚಿವರಾದ ವಿ. ಸೋಮಣ್ಣ, ಪ್ರಲ್ಹಾದ ಜೋಶಿ ಅವರೊಂದಿಗೆ ಮಾತನಾಡಿದ್ದೇನೆ. ರೈಲ್ವೆಯಲ್ಲಿ ಕನ್ನಡ ಕಡೆಗಣನೆಯನ್ನು ನೀವು ತಡೆಯದೇ ಹೋದರೆ ಎಲ್ಲ ರೈಲುಗಳನ್ನು ಬಂದ್ ಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜೊತೆಗೆ ಮಾತನಾಡುವುದಾಗಿ ಹೇಳಿದ್ದಾರೆ. ಕನ್ನಡ ಭಾಷೆಗೆ ಅವಕಾಶ ನೀಡಿಯೇ ಪರೀಕ್ಷೆಗಳನ್ನು ನಡೆಸಬೇಕು. ಕೆಲವು ತಿಂಗಳ ಹಿಂದೆ ಕನ್ನಡ ಬಿಟ್ಟು ನಡೆಸಿದ ಪರೀಕ್ಷೆಯ ಫಲಿತಾಂಶ ರದ್ದುಗೊಳಿಸಿ ಮರುಪರೀಕ್ಷೆ ನಡೆಸಬೇಕು' ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ತಿಳಿಸಿದರು.

ಸಿಬ್ಬಂದಿಯ ಮುಂಬಡ್ತಿ ಪರೀಕ್ಷೆ ಮಾತ್ರವಲ್ಲ, ರೈಲ್ವೆಯ ಯಾವುದೇ ನೇಮಕಾತಿ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡಬೇಕು. ಎರಡು ಮೂರು ದಿನಗಳಲ್ಲಿ ರಕ್ಷಣಾ ವೇದಿಕೆಯ ಸಭೆ ಕರೆದು ಚರ್ಚೆ ಮಾಡಲಾಗುವುದು. ಕನ್ನಡ ಕಡೆಗಣಿಸಿದರೆ ರೈಲ್ವೆ ಇಲಾಖೆಗೆ ಮುತ್ತಿಗೆ ಹಾಕಲಾಗುವುದು ಎಂದು ಹೇಳಿದರು.

ಮಳೆ: ಸಿಡಿಲು ಬಡಿದು ಕುರಿಗಾಹಿ ಸಾವು

ಕಲ್ಯಾಣ ಕರ್ನಾಟಕದ ವಿವಿಧೆಡೆ ವರ್ಷಧಾರೆ ಜೋರು ಗಾಳಿಗೆ ಬೆಳೆಹಾನಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 41 ಡಿಗ್ರಿ ಸೆಲ್ಸಿಯಸ್ ದಾಟಿದ ತಾಪ
- ಸುರಿದ ಲಘು ಮಳೆ ಜನರು ನಿರಾಳ

ಕಲಬುರಗಿ: ಬಿಸಿಲಿನಿಂದ ತತ್ತರಿಸಿದ್ದ ಕಲ್ಯಾಣ ಕರ್ನಾಟಕದ ವಿವಿಧೆಡೆ ಶುಕ್ರವಾರ ಸುರಿದ ಮಳೆ ತುಸು ತಂಪೆರೆದಿದೆ.

ಕೊಪ್ಪಳ ತಾಲ್ಲೂಕಿನ ಜಬ್ಬಲಗುಡ್ಡ ಗ್ರಾಮದಲ್ಲಿ ಗುರುವಾರ ರಾತ್ರಿ ಸಿಡಿಲು ಬಡಿದು ಕುರಿಗಾಹಿ ಕರಿಯಪ್ಪ ದ್ಯಾಮಣ್ಣ ಮ್ಯಾದ್ನೇರಿ (35) ಮೃತಪಟ್ಟಿದ್ದಾರೆ. ಗಂಗಾವತಿ ತಾಲ್ಲೂಕಿನಲ್ಲಿ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಮಳೆಯಾಗಿದೆ. ಸಿದ್ದಿಕೇರಿ ಗ್ರಾಮದ ಜಮೀನಿನಲ್ಲಿ ಕಟ್ಟಿದ್ದ 6 ಆಕಳುಗಳು ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿವೆ.

ಕಲಬುರಗಿಯಲ್ಲಿ ಶುಕ್ರವಾರ ದಿನವಿಡೀ ಪ್ರಖರ ಬಿಸಿಲಿತ್ತು. ಸಂಜೆ ಹೊತ್ತಿಗೆ ಆಗಸದಲ್ಲಿ ಮೋಡಗಳು ದಟ್ಟೈಸಿದವು. ಬಳಿಕ ಮಿಂಚು–ಬಿರುಗಾಳಿ ಸಹಿತ ಕಲಬುರಗಿ ನಗರ, ಚಿಂಚೋಳಿ, ಕಾಳಗಿ ಸೇರಿದಂತೆ ಹಲವೆಡೆ ಮಳೆಯಾಗಿದೆ.

ಚಿಂಚೋಳಿ ತಾಲ್ಲೂಕಿನ ಭೂಂಯಾರ (ಕೆ) ಗ್ರಾಮದಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಕಾಳಗಿಯಲ್ಲಿ ಬಿರುಗಾಳಿಗೆ ರಟಕಲ್ ವಿರಕ್ತಮಠದ ಕಾರ್ಯಕ್ರಮಕ್ಕಾಗಿ ಹಾಕಿದ್ದ ಪೆಂಡಾಲ್ ಮಗುಚಿದೆ. ಕಲಬುರಗಿಯಲ್ಲಿ ಬಸವ ಜಯಂತಿ ಕಾರ್ಯಕ್ರಮಕ್ಕಾಗಿ ಹಾಕಿದ್ದ ವಿದ್ಯುದ್ದೀಪಗಳ ಕಂಬವೊಂದು ನೆಲಕ್ಕೆ ವಾಲಿದ್ದರಿಂದ ಕೆಲಕಾಲ ವಾಹನಗಳ ಸಂಚಾರಕ್ಕೆ ತೊಡಕಾಯಿತು.

ಮಳೆ ತಂದಿತು ಹರ್ಷ

ಹೊಸಪೇಟೆ (ವಿಜಯನಗರ): ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬಿಸಿಲಿನ ಝಳ ತೀವ್ರಗೊಂಡು ಶುಕ್ರವಾರ 41 ಡಿಗ್ರಿ ಸೆಲ್ಸಿಯಸ್ ತಲುಪಿತು. ಸಂಜೆ ಕೆಲವೆಡೆ ಮಳೆಯಾದ ಕಾರಣ ಜನ ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಬಳ್ಳಾರಿ–ವಿಜಯನಗರ ಜಿಲ್ಲೆಗಳ ಗಡಿಭಾಗದಲ್ಲಿರುವ ತೋರಣಗಲ್ ಪ್ರದೇಶದಲ್ಲಿ ಹಾಗೂ ವಿಜಯನಗರ ಜಿಲ್ಲೆಯ ಹೊಸಪೇಟೆ, ಮರಿಯಮ್ಮನಹಳ್ಳಿ, ಹೂವಿನಹಡಗಲಿ ಭಾಗದಲ್ಲಿ ಲಘುವಾಗಿ ಮಳೆ ಸುರಿಯಿತು. ಈ ಪೈಕಿ ತೋರಣಗಲ್, ಮರಿಯಮ್ಮನಹಳ್ಳಿಯಲ್ಲಿ ಅರ್ಧ ಗಂಟೆ ಮಳೆಯಾಯಿತು. ಹೀಗಾಗಿ ಬಿಸಿಲಿನ ಬಸವಳಿದಿದ್ದ ಜನರು ಸ್ವಲ್ಪ ನಿರಾಳರಾದರು.

ಕಳೆದ ವರ್ಷ ಮಾರ್ಚ್ ತಿಂಗಳಿಂದಲೂ ಆಗಾಗ ಮಳೆ ಸುರಿಯುತ್ತಿತ್ತು, ಹೀಗಾಗಿ ಕಡು ಬೇಸಿಗೆಯ ಸುಡುಬಿಸಿಲಿನ ಅನುಭವ ಅಷ್ಟಾಗಿ ಆಗಿರಲಿಲ್ಲ. ಈ ವರ್ಷ ಇದುವರೆಗೆ ಮಳೆ ಸುರಿಯದ ಕಾರಣ ಎಲ್ಲೆಡೆ ಬಿಸಿಲಿನ ಝಳ ತೀವ್ರಗೊಂಡಿತ್ತು, ಹೊಸಪೇಟೆ ನಗರದಲ್ಲಿ ಇದೇ ಮೊದಲ ಬಾರಿಗೆ ಎರಡು ಸಿಗ್ನಲ್‌ಗಳಲ್ಲಿ ವಾಹನ ಸವಾರರಿಗೆ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ. ತಂಪು ಪಾನೀಯ, ಕಲ್ಲಂಗಡಿ ಹಣ್ಣುಗಳ ವ್ಯಾಪಾರ ಭರ್ಜರಿಯಾಗಿ ನಡೆದಿದೆ. ಇಂತಹ ಸನ್ನಿವೇಶದಲ್ಲೇ ಮಳೆಯ ಸಿಂಚನವಾಗಿದೆ.

‘ಹೊಸಪೇಟೆ ಸೇರಿ ಜಿಲ್ಲೆಯ ಹಲವೆಡೆ ಕೃಷಿ ಕೊಯ್ಲು ಮುಗಿದಿದೆ. ಈ ಹಂತದಲ್ಲಿ ಮಳೆ ಸುರಿದರೆ ಯಾರಿಗೂ ತೊಂದರೆ ಇಲ್ಲ. ಆದರೆ, ಬಲವಾಗಿ ಗಾಳಿ ಬೀಸಿದರೆ ಕೆಲವು ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗುವ ಸಾಧ್ಯತೆ ಇದೆ. ಭತ್ತ, ಕಬ್ಬು ನಾಟಿಗೆ ಬಹಳಷ್ಟು ಪ್ರಯೋಜನ ಇದೆ’ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಮನೋಹರ್ ತಿಳಿಸಿದರು.

ಕಲಬುರಗಿ ನಗರದಲ್ಲಿ ಶುಕ್ರವಾರ ಸಂಜೆ ಸುರಿದ ಮಳೆಯಲ್ಲಿ ಸಾಗಿದ ವಾಹನಗಳು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

‘ಪಶ್ಚಿಮಘಟ್ಟ ರಕ್ಷಣೆಗೆ ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಪಶ್ಚಿಮ ಘಟ್ಟದ ನದಿಕಣಿವೆಗಳ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ವಿಶೇಷ ಸಮಗ್ರ ಯೋಜನೆ ಪ್ರಕಟಿಸಬೇಕು. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕುರಿತು ಸ್ಥಳ ಸಮೀಕ್ಷೆ ನಡೆಸಿದ ಕೇಂದ್ರ ವನ್ಯಜೀವಿ ಮಂಡಳಿ ತಜ್ಞರ ಸಮಿತಿ ಶಿಫಾರಸುಗಳನ್ನು ಜಾರಿಗೊಳಿಸಬೇಕು’ ಎಂದು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಆಗ್ರಹಿಸಿದರು.

‘ಶರಾವತಿ ಕೊಳ್ಳ ಪ್ರದೇಶವು ಪರಿಸರ ಸೂಕ್ಷ್ಮ ಪ್ರದೇಶವಾಗಿದೆ. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಅವಕಾಶ ನೀಡಬಾರದು. ಯೋಜನೆಯಿಂದ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಕೇಂದ್ರ ವನ್ಯಜೀವಿ ಮಂಡಳಿ ವಿಜ್ಞಾನಿಗಳು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದಾರೆ. ಹೀಗಿದ್ದರೂ ರಾಜ್ಯ ಸರ್ಕಾರವು ಹಠಕ್ಕೆ ಬಿದ್ದು ಯೋಜನೆ ಅನುಷ್ಠಾನಕ್ಕೆ ಮುಂದಾಗುತ್ತಿದೆ’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

‘ಬೇಡ್ತಿ, ಅಘನಾಶಿನಿ ನದಿ ತಿರುವು ಯೋಜನೆಗಳು ಪಶ್ಚಿಮ ಘಟ್ಟಕ್ಕೆ ಮಾರಕವಾಗಿದ್ದು, ವಿಸ್ತೃತಾ ಯೋಜನಾ ವರದಿ ತಯಾರಿಕೆಗೆ ತಡೆ ನೀಡಬೇಕು. ಪಶ್ಚಿಮ ಘಟ್ಟದಲ್ಲಿ ನದಿ ತಿರುವು ಯೋಜನೆಗಳು ಜಾರಿಯಾದರೆ ಅರಣ್ಯ ನಾಶವಾಗುತ್ತದೆ. ಭೂಕುಸಿತ ಸಂಭವಿಸುತ್ತದೆ. ರೈತರು, ಮೀನುಗಾರರು ನಿರಾಶ್ರಿತರಾಗುವರು’ ಎಂದರು. ‘ಪಶ್ಚಿಮ ಘಟ್ಟದ ಪ್ರಾಮುಖ್ಯ ಮತ್ತು ನದಿಗಳ ಕೊಡುಗೆಗಳ ಬಗ್ಗೆ ಬಯಲುಸೀಮೆ ಜನರಿಗೆ ಸಮಗ್ರ ಮಾಹಿತಿ ನೀಡುತ್ತೇವೆ. ಹುಬ್ಬಳ್ಳಿಯಲ್ಲಿ ಸ್ವರ್ಣವಲ್ಲೀ ಸ್ವಾಮೀಜಿ ನೇತೃತ್ವದಲ್ಲಿ ಶೀಘ್ರವೇ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು. ಏಪ್ರಿಲ್ 20ರಂದು ಶಿರಸಿಯಲ್ಲಿ ಸಭೆ ನಡೆಸಿ ವಿಜ್ಞಾನಿಗಳ ಅಭಿಪ್ರಾಯ ಪಡೆಯಲಾಗುವುದು’ ಎಂದರು.

> **ವಿಜ್ಞಾನಿಗಳ, ಸಮಿತಿಗಳ ವರದಿ ಮೀರಿ ಸರ್ಕಾರ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅನುಷ್ಠಾನಕ್ಕೆ ಮುಂದಾದರೆ, ಕೋರ್ಟ್ ಮೊರೆ ಹೋಗುತ್ತೇವೆ**
> **ಬಸವರಾಜ ಪಾಟೀಲ,** ಅಧ್ಯಕ್ಷ, ಸ್ವಾಭಿಮಾನ ಆಂದೋಲನ ಸಮಿತಿ

> **ಉತ್ತರ ಕನ್ನಡ ಜಿಲ್ಲೆ ಧಾರಣಾ ಸಾಮರ್ಥ್ಯ ಕಳೆದುಕೊಂಡಿದೆ. ಯೋಜನೆ ಅನುಷ್ಠಾನಕ್ಕೆ ಅವಕಾಶ ಇಲ್ಲ. ಸರ್ಕಾರವೇ ಕಾನೂನು ಉಲ್ಲಂಘಿಸುತ್ತಿರುವುದು ಅಕ್ಷಮ್ಯ**
> **ಅನಂತ ಹೆಗಡೆ ಆಶೀಸರ,** ಅಧ್ಯಕ್ಷ, ಬೇಡ್ತಿ ಅಘನಾಶಿನಿ ಸಂರಕ್ಷಣಾ ಸಮಿತಿ

ಚುಟುಕು ಸುದ್ದಿ

ಬಲಮುರಿ, ಎಡಮುರಿ ತಾಣ ಪ್ರವೇಶ ನಿರ್ಬಂಧ

ಬಲಮುರಿ ಪ್ರಕೃತಿ ತಾಣದ ಬಳಿ ಕಾವೇರಿ ನದಿಗೆ ಇಳಿಯದಂತೆ ಬ್ಯಾರಿಕೇಡ್ ಹಾಕಲಾಗಿದೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಪ್ರವಾಸಿಗರು ನೀರಿನಲ್ಲಿ ಮುಳುಗಿ ಮೃತಪಡುವ ಪ್ರಕರಣಗಳು ಹೆಚ್ಚುತ್ತಿರುವುದರಿಂದ ತಾಲ್ಲೂಕಿನ ಬಲಮುರಿ ಮತ್ತು ಎಡಮುರಿ ತಾಣಗಳಿಗೆ ಪ್ರವೇಶ ನಿರ್ಬಂಧಿಸಿ ತಹಶೀಲ್ದಾರ್ ಚೇತನಾ ಯಾದವ್ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ.

ಏ.16ರ ಬೆಳಿಗ್ಗೆ 6ರಿಂದಲೇ ನಿಷೇಧಾಜ್ಞೆ ಅನ್ವಯವಾಗಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ ಎಂದು ತಿಳಿಸಿದ್ದಾರೆ. 2015ರಿಂದ ಇದುವರೆಗೆ 79 ಮಂದಿ ಮೃತಪಟ್ಟಿದ್ದಾರೆ. ಹಾಗಾಗಿ ನಿಷೇಧಾಜ್ಞೆ ಜಾರಿ ಮಾಡಬೇಕು’ ಎಂದು ಕೆಆರ್‌ಎಸ್ ಠಾಣೆ ಪೊಲೀಸರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದರು.

‘ಸಮೀಪದ ಕಾರೇಕುರ ಬಳಿ ಕಾವೇರಿ ನದಿ ತೀರದಲ್ಲಿಯೂ ಅವಘಡಗಳು ಸಂಭವಿಸುತ್ತಿದ್ದು, ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಬೇಕು’ ಎಂದು ರೈತ ಮುಖಂಡ ಬೆಳಗೊಳ ವಿಷಕಂಠು ಒತ್ತಾಯಿಸಿದ್ದಾರೆ.

ಮಗುವಿನ ಅಂಗಾಂಗ ದಾನ ಮಾಡಿದ ಪೋಷಕರು

ಅನ್ವಿಕ್

ಕುಶಾಲನಗರ (ಕೊಡಗು ಜಿಲ್ಲೆ): ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಮಿದುಳು ನಿಷ್ಕ್ರಿಯವಾಗಿ ಮಗುವನ್ನು ಕಳೆದುಕೊಂಡ ದುಃಖದಲ್ಲೂ ಪೋಷಕರು ಆ ಮಗುವಿನ ಕಿಡ್ನಿ ಹಾಗೂ ಕಣ್ಣುಗಳನ್ನು ದಾನ ಮಾಡಿದ್ದಾರೆ.

ಚಿಕ್ಕಅಳುವಾರ ಗ್ರಾಮದ ರಜಿತ್–ರಮ್ಯಾ ದಂಪತಿಯ ಪುತ್ರ ಅನ್ವಿಕ್ (4 ವರ್ಷ) ರಸ್ತೆ ಅಪಘಾತದಲ್ಲಿ ಗಾಯಗೊಂಡು ಮೃತಪಟ್ಟಿದ್ದ. ಈತ ಯಡವನಾಡು ಗ್ರಾಮದಲ್ಲಿ ತಾತ ಹರಗ ತಿಮ್ಮಯ್ಯ ಮತ್ತು ಅಜ್ಜಿಯೊಂದಿಗೆ ವಾಸವಿದ್ದ.

ಸೋಮವಾರ ಅಜ್ಜಿಯೊಂದಿಗೆ ಸೋಮವಾರಪೇಟೆಗೆ ಹೋಗಿ ವಾಪಸ್ ಬಸ್‌ನಲ್ಲಿ ಬಂದು ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿ ಹೊಡೆದಿತ್ತು. ತಲೆಗೆ ತೀವ್ರ ಪೆಟ್ಟಾಗಿದ್ದರಿಂದ ನಾಲ್ಕು ದಿನಗಳಿಂದ ಆತನಿಗೆ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಬಾಲಕ ಗುರುವಾರ ರಾತ್ರಿ ಮೃತಪಟ್ಟಿದ್ದ.

ಲಂಚ: ಇಬ್ಬರ ಬಂಧನ

ವಿಜಯಪುರ: ಪೆಟ್ರೋಲ್ ಬಂಕ್ ತೆರೆಯಲು ಸ್ಥಳದ ನಕ್ಷೆಗೆ ಅನುಮೋದನೆ ನೀಡಲು ಶುಕ್ರವಾರ ₹ 15 ಸಾವಿರ ಲಂಚ ಪಡೆದ ಆರೋಪದ ಮೇಲೆ ಜಿಲ್ಲಾಧಿಕಾರಿ ಕಚೇರಿಯ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಅರವಿಂದ ಪವಾರ ಮತ್ತು ಕಂಪ್ಯೂಟರ್ ಆಪರೇಟರ್ ಅಯೂಬ್ ತೊನಶ್ಯಾಳ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಚನಾನಂದ ಶ್ರೀ ಹೇಳಿಕೆ ಪಡೆದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನಿಯೋಗ

ಮಕ್ಕಳ ಮೇಲೆ ದೌರ್ಜನ್ಯ: ಪರಿಶೀಲನೆ

ಪ್ರಜಾವಾಣಿ ವಾರ್ತೆ

ಹರಿಹರ: ಪಂಚಮಸಾಲಿ ಗುರುಪೀಠದ ವಸತಿ ನಿಲಯದಲ್ಲಿದ್ದ ಮಕ್ಕಳ ಮೇಲೆ ವಚನಾನಂದ ಶ್ರೀ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪ ಕುರಿತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಸದಸ್ಯರು ಶುಕ್ರವಾರ ಗುರುಪೀಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಧ್ಯಾಹ್ನ ಮಠಕ್ಕೆ ಭೇಟಿ ನೀಡಿದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಮಂಜುಳಾ ಮಹೇಶ್ ಹಾಗೂ ಮೂವರು ಸದಸ್ಯರ ನಿಯೋಗ, ಆರೋಪದ ಕುರಿತು ಶ್ರೀಗಳಿಗೆ ತಿಳಿಸಿ ಮಾಹಿತಿ ಪಡೆದರು. ಮಕ್ಕಳು ವಾಸಿಸುತ್ತಿದ್ದ ಕೊಠಡಿ, ಗುರು ನಿವಾಸ, ಭೋಜನಾಲಯ ಮತ್ತಿತರ ಸ್ಥಳಗಳಿಗೆ ತೆರಳಿದ ನಿಯೋಗ ಸಮಗ್ರ ಪರಿಶೀಲನೆ ನಡೆಸಿತು.

‘ಸ್ವಾಮೀಜಿ ಹೊಡೀತಾರೆ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ, ಹುಷಾರಿಲ್ಲದಾಗ ಔಷಧಿ ಕೊಡುವುದಿಲ್ಲ’ ಎಂದು ಮಕ್ಕಳು ಸಮಿತಿಗೆ ದೂರು ನೀಡಿದ್ದಾರೆ. ಈ ಸಂಬಂಧ ವಚನಾನಂದ ಶ್ರೀ ಸೇರಿದಂತೆ ಮಠದಲ್ಲಿರುವ ಇತರರ ಹೇಳಿಕೆ ಪಡೆದಿದ್ದು, ವರದಿಯನ್ನು ಮೇಲಧಿಕಾರಿಗಳಿಗೆ ಕಳಿಸಿ ಅವರ ಸೂಚನೆಯಂತೆ ದೂರು ದಾಖಲಿಸುವ ಬಗ್ಗೆ ತೀರ್ಮಾನಿಸಲಾಗುವುದು’ ಎಂದು ಮಂಜುಳಾ ಮಹೇಶ್ ಸುದ್ದಿಗಾರರಿಗೆ ತಿಳಿಸಿದರು.

ಕಾಲವೇ ಉತ್ತರಿಸಲಿದೆ: ‘ಆಗಿದ್ದೆಲ್ಲ ಒಳ್ಳೆಯದಕ್ಕೆ, ಆಗುತ್ತಿರುವುದು ಒಳ್ಳೆಯದಕ್ಕೆ, ಮುಂದಾಗುವುದು ಒಳ್ಳೆಯದಕ್ಕಾಗಿ’ ಎಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ್ದಾಗಿ ಭಗವದ್ಗೀತೆಯಲ್ಲೇ ಉಲ್ಲೇಖವಿದೆ. ಹಾಗೆಯೇ, ‘ಬಾರದು ಬಪ್ಪದು, ಬಪ್ಪದು ತಪ್ಪದು’ ಎಂದು ಬಸವಣ್ಣ ಹೇಳಿದ್ದಾರೆ ಎಂದು ತಮ್ಮ ಮೇಲಿರುವ ಆರೋಪದ ಕುರಿತು ಶ್ರೀಗಳು ಪ್ರತಿಕ್ರಿಯೆ ನೀಡಿದರು.

‘ನಾವು ದೇವರಲ್ಲ. ಬದಲಿಗೆ, ಸಾಧಕರು. ದೇವರ ದಾರಿಯಲ್ಲಿ ನಡೆಯುವವರು. ಇದು ಧರ್ಮ ಮತ್ತು ಅಧರ್ಮದ ನಡುವಿನ ಯುದ್ಧ. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯವರು ಪರಿಶೀಲನೆ ನಡೆಸಿದ್ದಾರೆ. ಅವರಿಗೆ ಮಾಹಿತಿ ನೀಡಲಾಗಿದೆ. ಕಾಲವೇ ಎಲ್ಲಕ್ಕೂ ಉತ್ತರಿಸಲಿದೆ’ ಎಂದರು.

‘ಹರಿಹರದ ಪೀಠಕ್ಕೆ ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀಗಳನ್ನು ಕರೆಯಿಸಬೇಕೆಂಬ ಕೂಗು ಭಕ್ತರಿಂದ ವ್ಯಕ್ತವಾಗುತ್ತಿದೆಯಲ್ಲ?’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಮಠಾಧೀಶರೆಲ್ಲಾ ಒಂದೇ. ನಾನು ಸನ್ಯಾಸ ಸ್ವೀಕರಿಸಿದ ನಂತರ ಕೂಡಲಸಂಗಮ ಗುರುಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸನ್ಯಾಸ ಸ್ವೀಕರಿಸಿದ್ದಾರೆ’ ಎಂದರು.

ದಾವಣಗೆರೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು ಹರಿಹರದ ಪಂಚಮಸಾಲಿ ಗುರುಪೀಠಕ್ಕೆ ಶುಕ್ರವಾರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು

ನಿಂದನೆ ಆರೋಪ: ತಿಮರೋಡಿ ವಿರುದ್ಧ ಎಫ್‌ಐಆರ್

ಮಂಗಳೂರು: ಯಕ್ಷ ಪ್ರಹಸನವೊಂದರಲ್ಲಿ ಭಾಗವಹಿಸಿದ ಕಲಾವಿದರನ್ನು ಮತ್ತು ಕಲಾವಿದರೊಬ್ಬರ ತಾಯಿಯನ್ನು ಅವಾಚ್ಯ ಪದಗಳಿಂದ ನಿಂದಿಸಿದ ಆರೋಪದ ಮೇರೆಗೆ ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಪುತ್ತೂರು ಗ್ರಾಮಾಂತರ ಠಾಣೆ ಮತ್ತು ಮಹಿಳಾ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿವೆ.

‘ಬುರುಡೆ ಗ್ಯಾಂಗ್’ ಹೆಸರಿನ ಪ್ರಹಸನ ವಾಹಿನಿಯೊಂದರಲ್ಲಿ ಕಳೆದ ವರ್ಷ ನವೆಂಬರ್‌ನಲ್ಲಿ ಪ್ರಸಾರವಾಗಿತ್ತು. ಇದಕ್ಕೆ ಸಂಬಂಧಿಸಿ ಸುಂದರ ರೈ ಮಂದಾರ, ಪ್ರಜ್ವಲ್ ಕುಮಾರ್ ಮತ್ತು ದಿನೇಶ್ ಕೊಡಪದವು ಅವರಿಗೆ ಕರೆ ಮಾಡಿ ಮಹೇಶ್ ಶೆಟ್ಟಿ ನಿಂದಿಸಿದ್ದಾರೆ ಎಂದು ದೂರು ನೀಡಲಾಗಿತ್ತು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುಂದರ ರೈ ಮಂದಾರ, ‘ಪ್ರಜ್ವಲ್ ಕುಮಾರ್‌ಗೆ ಕರೆ ಮಾಡಿ ಅವರ ತಾಯಿಯ ಬಗ್ಗೆ ಮಾತನಾಡಿದ್ದಕ್ಕೆ ಮಹಿಳಾ ಠಾಣೆಗೆ ಹಾಗೂ ನನಗೆ ಕರೆ ಮಾಡಿ ಕೆಟ್ಟದಾಗಿ ಮಾತನಾಡಿದ್ದಕ್ಕೆ ಗ್ರಾಮಾಂತರ ಠಾಣೆಗೆ ದೂರು ನೀಡಲಾಗಿತ್ತು. ಎಫ್‌ಐಆರ್ ದಾಖಲಾಗಿದೆ’ ಎಂದರು.

ಬೆಂಕಿಯಿಂದ ಬಾಲಕನ ರಕ್ಷಣೆ

ಯಾದಗಿರಿ: ವಿಆರ್‌ಎಲ್ ಬಸ್– ಕಾರು ನಡುವೆ ಶುಕ್ರವಾರ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿ ಸಿಲುಕಿ ಗಾಯಗೊಂಡಿದ್ದ ಬಾಲಕ ವಿರಾಟ್‌ನನ್ನು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಕಲಬುರಗಿ ಜಿಲ್ಲಾ ವಿಪತ್ತು ನಿರ್ವಹಣಾ ಪರಿಣತ ಉಮೇಶ ಬಿರಾದಾರ ರಕ್ಷಿಸಿದ್ದಾರೆ.

‘ಕಾರಿನ ಗ್ಲಾಸ್ ಒಡೆದು, ನಾಲ್ವರ ಮೃತ ದೇಹಗಳನ್ನು ಹೊರತೆಗೆದು ಕಾಲು ಮುರಿದು ಬಿದ್ದಿದ್ದ ಬಾಲಕನನ್ನು ಎತ್ತಿಕೊಂಡು ಆಸ್ಪತ್ರೆಗೆ ಕಳುಹಿಸಿದೆ’ ಎಂದು ಉಮೇಶ ‘ಪ್ರಜಾವಾಣಿ’ಗೆ ತಿಳಿಸಿದರು. ‘ಕಾರಿನಲ್ಲಿದ್ದ ಉಳಿದ ದೇಹಗಳನ್ನು ತೆಗೆಯುವ ವೇಳೆಗೆ ಬೆಂಕಿಯ ಕೆನ್ನಾಲಿಗೆ ವ್ಯಾಪಿಸಿಕೊಂಡಿತು. ಬಸ್ ಚಾಲಕ ಡಿಕ್ಕಿಯ ಬಳಿಕ ಬಸ್ ಅನ್ನು ಹಿಂದಕ್ಕೆ ತೆಗೆದುಕೊಂಡಿದ್ದರೆ ಮೃತ ದೇಹಗಳ ದಹನ ತಡೆಯಬಹುದಿತ್ತು’ ಎಂದರು.

ಬಾಲಕಿ ಮೇಲೆ ಅತ್ಯಾಚಾರ: ನೆರವಾದವರಿಗೂ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ



ಕೊಪ್ಪಳ: ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗೆ ಸಹಾಯ ಮಾಡಿದ ಆರೋಪ ಸಾಬೀತಾಗಿದ್ದು ಪಂಜಾಬ್‌ನ ನಾಲ್ವರಿಗೆ ಇಲ್ಲಿನ ಪೋಕ್ಸೊ ನ್ಯಾಯಾಲಯದ ನ್ಯಾಯಾಧೀಶರು 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ.

ತಾಲ್ಲೂಕಿನ ಗ್ರಾಮವೊಂದರಲ್ಲಿ ಬಾಲಕಿಯ ಮನೆ ಸಮೀಪ ವಾಸವಾಗಿದ್ದ ಪಂಜಾಬ್‌ನ ಸರವಣ್ ಸಿಂಗ್ ಒಂದು ವರ್ಷದಿಂದ ಬಾಲಕಿ ಮನೆಗೆ ಹೋಗಿ ಆಕೆಯೊಂದಿಗೆ ಸಲುಗೆ ಬೆಳೆಸಿಕೊಂಡು ಪ್ರೀತಿಸುವುದಾಗಿ ಹೇಳುತ್ತಿದ್ದ. 2020ರಲ್ಲಿ ಬಾಲಕಿಯನ್ನು ಬೆದರಿಸಿ ಪಂಜಾಬ್‌ಗೆ ಕರೆದುಕೊಂಡು ಹೋಗಿದ್ದ.

ಬಾಲಕಿಯನ್ನು ಪಂಜಾಬ್‌ಗೆ ಕರೆದುಕೊಂಡು ಹೋಗಲು ಸರವಣ್ ಸಿಂಗ್‌ಗೆ ಅದೇ ರಾಜ್ಯದ ಜೋಬನ್ ಸಿಂಗ್ ನೆರವಾಗಿದ್ದ. ಕೃತ್ಯಕ್ಕೆ ನೆರವಾಗಿದ್ದ ಇನ್ನುಳಿದ ಅಪರಾಧಿಗಳಾದ ಜಸ್ವಂತ್ ಸಿಂಗ್, ಸರಬ್ಜೀತ್ ಸಿಂಗ್ ಮತ್ತು ಜಗತಾರ್ ಸಿಂಘ್ ಸೇರಿಕೊಂಡು ಬಾಲಕಿಯ ವಯಸ್ಸು 20 ವರ್ಷ ಎಂದು ನ್ಯಾಯಾಲಯದಲ್ಲಿ ಅಫಿಡವಿಟ್ ಮಾಡಿಸಿ ಪಂಜಾಬ್‌ನಲ್ಲಿ ಮದುವೆ ಮಾಡಿಸಿದ್ದರು. ಬಳಿಕ ಅಮೃತಸರ ಪಟ್ಟಣದಲ್ಲಿ ಕೊಠಡಿ ಬಾಡಿಗೆ ಪಡೆದು ಸರವಣ್ ಸಿಂಗ್ ಬಾಲಕಿ ಮೇಲೆ ಅತ್ಯಾಚಾರ ಮಾಡಿದ್ದ.

ಘಟನೆ ಕುರಿತು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ವಿಚಾರಣಾ ಸಮಯದಲ್ಲಿ ಸರವಣ್ ಸಿಂಗ್ ಮೃತಪಟ್ಟಿದ್ದ. ನ್ಯಾಯಾಧೀಶರಾದ ಕುಮಾರ ಡಿ.ಕೆ. ಅವರು ಅಪರಾಧಿಗಳಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ತಲಾ ₹20 ಸಾವಿರ ದಂಡ ವಿಧಿಸಿ ಆದೇಶ ನೀಡಿದ್ದಾರೆ. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು.

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
ಖಾದಿ ಭವನ, ನಂ.10, ಜಸ್ಮಾ ಭವನ ರಸ್ತೆ, ಬೆಂಗಳೂರು–52
ನಂ:ಖಾಮಂ/ಸಾಮಾನ್ಯ–01/88/2025–26/2026–27 ದಿನಾಂಕ: 16.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಟೆಂಡರ್ ಸಂಖ್ಯೆ:(KSKVIB/2026-27/IND0002)
ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ರಿಟ್ರಾಕ್ಟಬಲ್ ಶೆಲ್ವಿಂಗ್ ಘಟಕದ ಪೂರೈಕೆ ಮತ್ತು ಸ್ಥಾಪನೆ ಹಾಗೂ ದಾಖಲೆ ಸಂಗ್ರಹಣೆಗೆ ಬಳಸುವ ಪಾಲಿಪ್ರೊಪಿಲೀನ್ ಕರಗೇಟೆಡ್ ಬಾಕ್ಸ್‌ಗಳ ಸರಬರಾಜು ಮತ್ತು ಅಳವಡಿಕೆ ಹಾಗೂ ಇ–ಪರಿವರ್ತನೆ ಪರಿಹಾರದ ಅನುಸ್ಥಾಪನೆ ಮತ್ತು ನಿಯೋಜನೆ ಕುರಿತು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಇ–ಟೆಂಡರ್ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:30.04.2026 ರಂದು 17.00 ಗಂಟೆಯವರೆಗೆ ಆಗಿದ್ದು, ಹೆಚ್ಚಿನ ವಿವರಗಳಿಗೆ http://kppp.karnataka.gov.in ವೀಕ್ಷಿಸಬಹುದು.
ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
DIPR/CP/221/KAVITA/2026-27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆವಿಕಂರವರು ಕೆಳಕಂಡ ಸಾಮಗ್ರಿಗಳ ಖರೀದಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ	ವಿಚಾರಣೆ ಸಂಖ್ಯೆ
1	3x400 ಚ.ಮಿ.ಮೀ ಹೆಚ್‌ಟಿಯುಜಿ ಕೇಬಲ್‌ಗಳ ಖರೀದಿ	BESCOM/2026-27/IND0233
2	3x95 + 1x70 + 1x16 ಚ.ಮಿ.ಮೀ ಎಲ್‌ಟಿಎಬಿ ಕೇಬಲ್‌ಗಳ ಖರೀದಿ	BESCOM/2026-27/IND0234

ಬಿಡ್ ದಾಖಲೆಗಳು ದೊರೆಯುವ ದಿನಾಂಕ: 21.04.2026 ರಿಂದ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.05.2026ರ 17:00 ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: 22.05.2026ರ 17:15 ಗಂಟೆಗೆ.
ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿ ಸಂಖ್ಯೆ +91–8046010000 +91–8068948777, 09240214000 & 09240214001 ಗಳಿಂದ ಅಥವಾ support@eprochelpdesk.com ಗೆ ಇಮೇಲ್ ಮಾಡಿ ಹೆಚ್ಚಿನ ಮಾಹಿತಿಗಳನ್ನು ಪಡೆಯಬಹುದು.
ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಖರೀದಿ ಶಾಖೆ, ಬೆವಿಕಂ, 2ನೇ ಮಹಡಿ, ಕೆ.ಆರ್. ವೃತ್ತ, ಬೆಂಗಳೂರು – 560 001.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 560029
ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: KWB/TEC/CE(B)/Channapatna 2nd Stage UGD /41/2026-27, Dated: 16.04.2026
ಕಾಮಗಾರಿಯ ಹೆಸರು: ಚನ್ನಪಟ್ಟಣ ನಗರಕ್ಕೆ 2ನೇ ಹಂತದ ಒಳಚರಂಡಿ ವ್ಯವಸ್ಥೆ ಒದಗಿಸಲು (ಡಿಬಿಓಟಿ ಮಾದರಿ) ಮೂಲಕ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (1 ವರ್ಷಗಳ ಡಿಎಲ್‌ಪಿ ಸೇರಿದಂತೆ) ಕಾಮಗಾರಿಯ ಟೆಂಡರ್.
ಇಂಡೆಂಟ್ ಸಂಖ್ಯೆ: KUWSDB/2026-27/WS/Work_INDENT502
ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್:https://kppp.karnataka.gov.inನಲ್ಲಿ ಪಡೆಯಬಹುದು.
ಸಹಿ/– ಮುಖ್ಯ ಅಭಿಯಂತರರು (ಬೆಂ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ಡಿಐಪಿಆರ್/ಸಿಪಿ/242/ಸಿಸಿಎಲ್/2026–27

VTPC KARNATAKA ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿ.ಟಿ.ಪಿ.ಸಿ)
(ರಾಜ್ಯ ಸರ್ಕಾರದ ರಫ್ತು ಉತ್ತೇಜನ ಸಂಸ್ಥೆ)
ವಿಟಿಪಿಸಿ ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು–560001
ದೂ: 080–22860644 / 9483534444,
ಇಮೇಲ್: vtpckarnataka@gmail.com ವೆಬ್‌ಸೈಟ್: https://vtpc.karnataka.gov.in
ಸಂಖ್ಯೆ:ವಿಟಿಪಿಸಿ/ಸನಿ/ಜಿಐಪೆವಿಲಿಯನ್/2026–27 ದಿನಾಂಕ16.04.2026
ಟೆಂಡರ್ ಪ್ರಕಟಣೆ
ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ರಲ್ಲಿನ International Bay ನಲ್ಲಿ ಸ್ಥಾಪಿಸಲಾಗುತ್ತಿರುವ ಕರ್ನಾಟಕ ಪೆವಿಲಿಯನ್‌ನ ಒಳವಿನ್ಯಾಸ ಕಾಮಗಾರಿಗಳನ್ನು ಕೈಗೊಳ್ಳುವ ನಿರ್ಮಾಣ ಸಂಸ್ಥೆಯನ್ನು ಆಯ್ಕೆ ಮಾಡುವ ಬಗ್ಗೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿಟಿಪಿಸಿ) ಸಂಸ್ಥೆಯು ರಾಜ್ಯದಿಂದ ಅಂತರರಾಷ್ಟ್ರೀಯ ವ್ಯಾಪಾರವನ್ನು ಉತ್ತೇಜಿಸುವ ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿರುತ್ತದೆ. ಈ ಸಂಸ್ಥೆಯ ವತಿಯಿಂದ **ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ರಲ್ಲಿರುವ International Bay ನಲ್ಲಿ ಸ್ಥಾಪಿಸಲಾಗುತ್ತಿರುವ ಕರ್ನಾಟಕ ಪೆವಿಲಿಯನ್ ಒಳವಿನ್ಯಾಸ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಮಾಣ ಸಂಸ್ಥೆಯನ್ನು** ಇ–ಟೆಂಡರ್ ಮೂಲಕ ಆಯ್ಕೆ ಮಾಡಲು ಅಪೇಕ್ಷಿಸಿದೆ. ಅರ್ಹತಾ ಮಾನದಂಡಗಳು, ಕೆಲಸದ ವ್ಯಾಪ್ತಿ ಮತ್ತು ಇತರೆ ನಿಯಮ ಮತ್ತು ನಿಬಂಧನೆಗಳನ್ನು ಹೊಂದಿರುವ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಟೆಂಡರನ್ನು http://kppp.karnataka.gov.in ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ:18.05.2026 ಸಂಜೆ 5.00 ಗಂಟೆ. ವಿಟಿಪಿಸಿ ಸಂಸ್ಥೆಯು ಯಾವುದೇ ಕಾರಣವನ್ನು ನೀಡದೇ ಟೆಂಡರ್ ರದ್ದುಪಡಿಸುವ / ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.
ಸಹಿ/– ನಿರ್ದೇಶಕರು (ರಫ್ತು) ಹಾಗೂ ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಉಚ್ಚ ನ್ಯಾಯಾಲಯ,
ಬೆಂಗಳೂರು–560001
ಸಂಖ್ಯೆ: ಹೆಚ್ ಸಿಆರ್‌ಬಿ/ಸಿಜೆಆರ್–9/2026 ದಿನಾಂಕ : 16.04.2026
ಸಂಕ್ಷಿಪ್ತ ಅಧಿಸೂಚನೆ
ಕರ್ನಾಟಕ ನ್ಯಾಯಾಂಗ ಸೇವೆಗಳಲ್ಲಿ 90 ಸಿವಿಲ್ ನ್ಯಾಯಾಧೀಶರ ಹುದ್ದೆಗಳ ನೇರ ನೇಮಕಾತಿಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿ ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಸೂಚನೆ ಹೊರಡಿಸಿದೆ. ಈ ಹುದ್ದೆಯ ವೇತನ ಶ್ರೇಣಿ ರೂ. 77,840 – ರೂ. 1,36,520. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.05.2026 ರಾತ್ರಿ 11.59 ರವರೆಗೆ ನಿಗದಿಪಡಿಸಲಾಗಿದೆ.
ಅರ್ಹ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣ https://judiciary.karnataka.gov.in/ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಇತರೆ ಯಾವುದೇ ರೀತಿ ವಿಧಾನಗಳಲ್ಲಿ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಅಧಿಸೂಚನೆ ಮತ್ತು ಇತರ ವಿವರಗಳು ಮೇಲೆ ತಿಳಿಸಿದ ಪೋರ್ಟಲ್‌ನಲ್ಲಿ ಹಾಗೂ ಕರ್ನಾಟಕ ರಾಜ್ಯ ಪತ್ರದಲ್ಲಿ (ಇ–ಗೆಜೆಟ್) ದೊರೆಯುತ್ತದೆ. ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ಮೊದಲು ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಅನುಸರಿಸತಕ್ಕದ್ದು.
ಸಹಿ/– (ಕೆ.ಎಸ್. ಭರತ್ ಕುಮಾರ್)
ಮಹಾವಿಲೇಖನಾಧಿಕಾರಿ ಹಾಗೂ ಕಾರ್ಯದರ್ಶಿ, ಸಿವಿಲ್ ನ್ಯಾಯಾಧೀಶರುಗಳ ನೇಮಕಾತಿ ಸಮಿತಿ, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
DIPR/CP/222/Zen/2026-27

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 009.
ದೂ: 080–22341230/35 E-mail: bmicapa@gmail.com
ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–02/106/2025–26/93 ದಿನಾಂಕ:16.04.2026
ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]
ಅರ್ಜಿದಾರರಾದ ಶ್ರೀ ಸಿ.ವಿ.ಚಂದ್ರ ಸಾಗರ್ ಬಿನ್ ಎ.ಸಿ.ಚಂದ್ರ ಇವರು ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಬೆಳಕೆರೆ ಗ್ರಾಮದ ಸರ್ವೆ ಸಂಖ್ಯೆ:159/2ರ 06ಎ–12ಗು ಜಮೀನಿನಲ್ಲಿ ವ್ಯವಸಾಯ ವಲಯದಲ್ಲಿ ಬರುವ 04ಎ–11ಗು (ಒಟ್ಟು 0ಎ–05ಗು ಕಲ್ಲುಮರಟಿ ಖರಾಬಿನ ಪೈಕಿ ವ್ಯವಸಾಯ ವಲಯದಲ್ಲಿರುವ 0ಎ–$2^{1}/_{2}$ಗು ಕಲ್ಲುಮರಟಿ ಖರಾಬು ಮತ್ತು 0ಎ–13ಗು ಜಾಗೋ ಜೌಗು ಖರಾಬು ಸೇರಿಸಿಕೊಂಡು) ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ "**ವಾಣಿಜ್ಯ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1) ಈ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಆದಾಯ ಬರುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/–
ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು
ಡಿಐಪಿಆರ್/ಸಿಪಿ/232/ಸಿಸಿಎಲ್/2026–27

RUDSET Institute
Rural Development and Self Employment Training Institute
Pioneer in Rural Entrepreneurship Development
Ujire, Beltangady, Dakshina Kannada Dist - 574 240 Karnataka
Ph: 9480081097 / 7358660444
Sealed tenders are invited from eligible and qualified bidders under Two-Bid System for Supply, Installation, Testing and Commissioning (SITC) of **Solar Rooftop Panels at RUDSETI buildings** located at various places across the State of Karnataka. Interested bidders meeting the eligibility criteria may download the detailed Request for Proposal (RFP) from the **websites: viz.www.rudsetitraining.org, www.canarabank.com, www.eprocure.gov.in** Last Date for Submission of Tenders **07.05.2026** up to 3.00 P.M. All further communications, corrigendam, and amendments, if any, shall be published only on the above-mentioned websites.
Date : 18.04.2026
Sd/-, Executive Director

भारतीय प्रबंध संस्थान बेंगलूर
INDIAN INSTITUTE OF MANAGEMENT BANGALORE
तेजस्वि नावधीतमस्तु
NOTICE INVITING TENDER
Tender No: IIMB/CAO/2026-27/02
Sealed Bids on open tender are invited for “Appointment of Licensee for lease of Night Canteen at Indian Institute of Management Bangalore, Bannerghatta Road, Bangalore”. The tender document can be downloaded from the institute website at the URL Link: https://www.iimb.ac.in/tender_notices
Chief Administrative Officer

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ಬನೀಯೋ)
5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009
ಐ.ಎಫ್.ಟಿ ಸಂಖ್ಯೆ: ಬೆಂಜಮಂ/ಮುಅ(ಬನೀಯೋ)/ಉಮುಅ(ಬನೀಯೋ)/ತಾಂಸ/68/2026–27 ದಿನಾಂಕ: 16.04.2026
ಟೆಂಡರ್‌ಗಾಗಿ ಆಹ್ವಾನ (2ನೇ ಕರೆ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ **ಬಯೋರೆಮಿಡಿಯೇಷನ್ ಮೆಥೆಡ್ ಬಳಸಿಕೊಂಡು ಕೆರೆಯ (ಲೇಕ್) ನೀರಿನ ಗುಣಮಟ್ಟವನ್ನು ಸುಧಾರಿಸುವ ಕಾಮಗಾರಿಗಾಗಿ** ಟೆಂಡರುಗಳನ್ನು ಆಹ್ವಾನಿಸಿದೆ.
ಟೆಂಡರ್‌ಗಿಟ್ಟ ಮೊತ್ತ: **ರೂ.397.58 ಲಕ್ಷಗಳು.**
ಬಿಡ್ ಭದ್ರತಾ ಮೊತ್ತ: **ರೂ.5.96 ಲಕ್ಷಗಳು.**
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:**24.04.2026** ರಂದು ಸಂಜೆ **5:30 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27.04.2026** ರಂದು ಬೆಳಿಗ್ಗೆ **11:00 ಗಂಟೆಗೆ** ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://kppp.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–
ಮುಖ್ಯ ಅಭಿಯಂತರರು (ಬಳಸಿದ ನೀರಿನ ಯೋಜನೆ)
ಡಿಐಪಿಆರ್/ಸಿಪಿ/237/ಸಿಸಿಎಲ್/2026–27

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)
ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ–577222
ನಂಭಕಾಶಿ/ಇಂ,ವಿಭಾಗ/ತಾಂಶಾಖೆ/ಮರು ಟೆಂಡರ್/2026–27/19
ದಿನಾಂಕ: 15.04.2026
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (IFT - 02/2026-27)
Head of Account :- 2705-115
ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ–1999, ನಿಯಮಗಳು–2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ 2026–27 (ದಿನಾಂಕ: 01.04.2026 ರಿಂದ 31.03.2027 ರವರೆಗೆ) ನೇ ಸಾಲಿಗೆ ಆಡಳಿತಾಧಿಕಾರಿಗಳು, ಭದ್ರಾ ಕಾಡಾ, ಶಿವಮೊಗ್ಗ, ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರ್ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಸಿದ್ದಾಪುರ ಮತ್ತು ಕೃಷಿ ಮತ್ತು ಸಹಕಾರ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಅಧ್ಯಕ್ಷರ ಆಪ್ತ ಶಾಖೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಕೆಲವೊಂದು ಹುದ್ದೆಗಳಿಗೆ ಕೊರತೆಯಿರುವ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಮಾನವ ಶಕ್ತಿ ಸಂಸ್ಥೆಯಿಂದ ನೇಮಿಸಿಕೊಳ್ಳುವಲ್ಲಿ ವಿವರವಾದ ಸ್ಪರ್ಧಾತ್ಮಕ ಅಲ್ಪಾವಧಿ ಮರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆ.ಪಿಪಿ–ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 15.04.2026 ರಿಂದ ದಿ: 24.04.2026 ರವರೆಗೆ. **2.** ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 24.04.2026 ಸಂಜೆ 04.30 ಗಂಟೆವರೆಗೆ **3.** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 27.04.2026 ಬೆಳಿಗ್ಗೆ 11.30 ಗಂಟೆಗೆ **4.** ಆರ್ಥಿಕ ಬಿಡ್ ತೆರೆಯುವ ದಿ: 28.04.2026 ಮಧ್ಯಾಹ್ನ 12.30 ಗಂಟೆಯ ನಂತರ
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.karnataka.gov.in ನಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/88/04/99

ಸುರಕ್ಷಿತ ಚಾರಣಕ್ಕೆ ಎಸ್‌ಒಪಿ ಜಾರಿ

ಅರಣ್ಯ ಇಲಾಖೆಯ ಅನುಮೋದಿತ 44 ಚಾರಣ ಪಥಗಳಿಗೆ ಅನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿರುವ ಅನುಮೋದಿತ ಚಾರಣ ಪಥಗಳಲ್ಲಿ ಚಾರಣ ನಡೆಸುವಾಗ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ), ಇಲಾಖೆಯು ಜಾರಿಗೆ ತಂದಿದೆ.

ಅರಣ್ಯ ಇಲಾಖೆಯ ಅನುಮೋದಿತ 44 ಚಾರಣ ಪಥಗಳಲ್ಲಿ, ಚಾರಣ ಕೈಗೊಳ್ಳುವ ವೇಳೆ ಮಾರ್ಗದರ್ಶಕರು ಇರುವುದನ್ನು ಕಡ್ಡಾಯಗೊಳಿಸಿರುವ ಈ ಎಸ್‌ಒಪಿಯನ್ನು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಶುಕ್ರವಾರ ಬಿಡುಗಡೆ ಮಾಡಿದರು.

‘ಕೊಡಗಿನ ತಡಿಯಾಂಡಮೋಳ್ ಪರ್ವತ ಚಾರಣದ ವೇಳೆ ಕೇರಳದ ಯುವತಿ ನಾಪತ್ತೆಯಾಗಿ, ಮೂರು ದಿನಗಳ ನಂತರ ಪತ್ತೆಯಾಗಿದ್ದರು. ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ನಾಪತ್ತೆಯಾಗಿದ್ದ ಬಾಲಕಿ ನಂತರ, ಶವವಾಗಿ ಪತ್ತೆಯಾಗಿದ್ದಳು. ಈ ಎರಡೂ ಘಟನೆಗಳ ಕಾರಣಕ್ಕೆ, ಚಾರಣಿಗರ ಸುರಕ್ಷೆ ಗಮನದಲ್ಲಿ ಇರಿಸಿಕೊಂಡು ಈ ಎಸ್‌ಒಪಿ ರೂಪಿಸಲಾಗಿದೆ’ ಎಂದರು ಈಶ್ವರ ಬಿ.ಖಂಡ್ರೆ ಹೇಳಿದರು.

‘ಅನುಮೋದಿತ ಚಾರಣ ಪಥಗಳಲ್ಲಿ, ‘ಅರಣ್ಯ ವಿಹಾರ’ ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಂಡವರಿಗಷ್ಟೇ ಚಾರಣ ನಡೆಸಲು ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿ ಚಾರಣಿಗರ ಮೊಬೈಲ್‌ನಲ್ಲಿ ಅರಣ್ಯ ಇಲಾಖೆಯ ಪಥದರ್ಶಕ ಆ್ಯಪ್ ಅನ್ನು ಅಳವಡಿಸಿಕೊಳ್ಳುವುದು ಕಡ್ಡಾಯ. ಎಸ್‌ಒಪಿ ಪಾಲಿಸದವರ ವಿವರವನ್ನು ಕಪ್ಪುಪಟ್ಟಿಗೆ ಸೇರಿಸಲು ಆ್ಯಪ್‌ನಲ್ಲಿ ಅವಕಾಶವಿದೆ. ಅಂತಹವರು ಚಾರಣ ಕೈಗೊಳ್ಳುವುದನ್ನು ನಿರ್ಬಂಧಿಸಲಾಗುತ್ತದೆ’ ಎಂದು ‘ಪ್ರಜಾವಾಣಿ’ಯ ಪ್ರಶ್ನೆಗೆ ಉತ್ತರಿಸಿದರು.

‘ಎಸ್‌ಒಪಿ ಪಾಲಿಸದೆ ಚಾರಣಿಗರು ಅಪಾಯಕ್ಕೆ ತುತ್ತಾದರೆ, ಸಂಬಂಧಿತ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಹೊಣೆ ಮಾಡಿ ಕ್ರಮ ಜರುಗಿಸಲಾಗುತ್ತದೆ. ಎಸ್‌ಒಪಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲು ಮೂರರಿಂದ ನಾಲ್ಕು ವಾರಗಳಾಗಬಹುದು’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಮೂಲಸೌಕರ್ಯಕ್ಕೆ ಒತ್ತು: ಚಾರಣ ಪಥಗಳಲ್ಲಿ ಚಾರಣಿಗರ ಸುರಕ್ಷತೆಗಾಗಿ ಹಲವು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಎಸ್‌ಒಪಿ ಹೇಳುತ್ತದೆ. ಮೂಲ ಶಿಬಿರದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ವಿಶ್ರಾಂತಿ ಕೊಠಡಿ ಇರಬೇಕು. ಚಾರಣದ ಹಾದಿಯಲ್ಲಿ ಪ್ರತಿ 200 ಮೀಟರ್‌ಗೆ ಒಂದು ಗುರುತನ್ನು ಲಗತ್ತಿಸಬೇಕು. ಪ್ರತಿ ಎರಡು ಕಿ.ಮೀ. ಅಂತರದಲ್ಲಿ ಒಂದು ವಿಶ್ರಾಂತಿ ತಾಣ ನಿರ್ಮಿಸಬೇಕು ಎಂಬ ವಿವರ ಎಸ್‌ಒಪಿಯಲ್ಲಿ ಇದೆ.

ಚಾರಣ ಪಥಗಳಿಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು ಸಚಿವ ಈಶ್ವರ ಖಂಡ್ರೆ ಶುಕ್ರವಾರ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

ಚಾರಣಿಗರಿಗೆ ನಿಯಮ

- ಬೆಂಕಿ ಹೊತ್ತಿಸುವಂತಹ ಸಾಧನ, ಬೆಂಕಿ ಪೊಟ್ಟಣ, ಪಟಾಕಿ, ಸಿಗರೇಟ್‌ಗಳನ್ನು ಒಯ್ಯಬಾರದು
- ಪ್ರತಿಯೊಬ್ಬರು ಕನಿಷ್ಠ 2 ಲೀಟರ್‌ನಷ್ಟು ನೀರು ಮತ್ತು ಲಘು ತಿನಿಸು ಒಯ್ಯಬೇಕು
- ಕಾಡಿನ ಪರಿಸರದ ಮಧ್ಯೆ ಎದ್ದು ಕಾಣುವಂತ ಜಾಕೆಟ್/ಟಿ-ಶರ್ಟ್ ಧರಿಸಬೇಕು
- ತಮಗಿರುವ ಆರೋಗ್ಯದ ಸಮಸ್ಯೆಗಳ ಬಗ್ಗೆ ಮಾರ್ಗದರ್ಶಕರಿಗೆ ಮಾಹಿತಿ ನೀಡಿರಬೇಕು
- ಚಾರಣದ ವೇಳೆ ಪ್ರತಿ ಚಾರಣಿಗರಿಗೂ ಒಂದು ವಿಶಲ್ ನೀಡಲಾಗುತ್ತದೆ. ಚಾರಣಿಗರು ತಮ್ಮ ಗುಂಪಿನಿಂದ ದೂರವುಳಿದ ಅಥವಾ ನಾಪತ್ತೆಯಾದ ಸಂದರ್ಭದಲ್ಲಿ ಅದನ್ನು ಬಳಸಬಹುದು
- ಚಾರಣ ಪಥದಿಂದ ಆಚೆಗೆ ಹೋಗುವಂತಿಲ್ಲ. ಚಾರಣ ಆರಂಭವಾಗಿ ಮುಗಿಯುವವರೆಗೂ ಮಾರ್ಗದರ್ಶಕನ ಸೂಚನೆಗಳನ್ನು ಪಾಲಿಸುವುದು ಕಡ್ಡಾಯ
- ಚಾರಣದ ವೇಳೆ ಅಬ್ಬರದ ಸಂಗೀತ ಹಾಕಬಾರದು. ಅಂತಹ ಸಾಧನಗಳನ್ನು ಬಳಸಬಾರದು. ಕ್ಯಾಮೆರಾಗಳನ್ನು ಬಳಸಲು ಅವಕಾಶವಿದ್ದು, ಫ್ಲ್ಯಾಶ್‌ಗಳ ಬಳಕೆಗೆ ನಿರ್ಬಂಧವಿದೆ

ಮಾರ್ಗದರ್ಶಕ ಕಡ್ಡಾಯ

ಪ್ರತಿ ಚಾರಣದ ವೇಳೆ ಅರಣ್ಯ ಇಲಾಖೆಯಿಂದ ನಿಯೋಜಿತರಾದ ಮಾರ್ಗದರ್ಶಕ ಚಾರಣಿಗರ ಗುಂಪಿನೊಂದಿಗೆ ಇರುವುದನ್ನು ಎಸ್‌ಒಪಿ ಕಡ್ಡಾಯ ಮಾಡಿದೆ. ಕರ್ನಾಟಕ ಪರಿಸರ ಪ್ರವಾಸೋದ್ಯಮ ಮಂಡಳಿಯಿಂದ ತರಬೇತಿ ಪಡೆದ, ಸ್ಥಳೀಯ ಯುವಕರನ್ನು ಮಾರ್ಗದರ್ಶಕರಾಗಿ ನಿಯೋಜನೆ ಮಾಡಲಾಗುತ್ತದೆ.

- ಪ್ರತಿ 10 ಚಾರಣಿಗರಿಗೆ ಒಬ್ಬ ಮಾರ್ಗದರ್ಶಕ ಇರುವುದು ಕಡ್ಡಾಯ. 10ಕ್ಕಿಂತ ಕಡಿಮೆ ಚಾರಣಿಗರು ಇದ್ದರೂ, ಮಾರ್ಗದರ್ಶಕ ಚಾರಣದುದ್ದಕ್ಕೂ ಅವರೊಂದಿಗೆ ಇರಬೇಕು
- ಮೂಲ ಶಿಬಿರದಲ್ಲಿ ಚಾರಣಿಗರಿಗೆ ಎಸ್‌ಒಪಿ ಕುರಿತ ವಿವರಣೆ ನೀಡಬೇಕು. ಪ್ರತಿ ಚಾರಣಿಗರೂ ತಮ್ಮ ಫೋನ್‌ಗಳಲ್ಲಿ ಆಫ್‌ಲೈನ್ ಜಿಪಿಎಸ್ ನಕ್ಷೆ ಮತ್ತು ಇಲಾಖೆಯ ಪಥದರ್ಶಕ ಆ್ಯಪ್ ಅಳವಡಿಸಿಕೊಳ್ಳುವುದು ಕಡ್ಡಾಯ
- ಮಾರ್ಗದರ್ಶಕನ ಬಳಿ ಜಿಪಿಎಸ್ ಅಳವಡಿಸಿರುವ ವಾಕಿಟಾಕಿ ಇರಲಿದೆ. ಪ್ರತಿ ಅರ್ಧ ಗಂಟೆಗೊಮ್ಮೆ ಮಾರ್ಗದರ್ಶಕನು, ತಮ್ಮ ಗುಂಪುನಲ್ಲಿರುವ ಚಾರಣಿಗರ ಸಂಖ್ಯೆಯನ್ನು ಖಾತರಿಪಡಿಸಿಕೊಳ್ಳಬೇಕು ಮತ್ತು ಆ ಬಗ್ಗೆ ಮೂಲ ಶಿಬಿರಕ್ಕೆ ವಾಕಿಟಾಕಿ ಮೂಲಕ ಮಾಹಿತಿ ನೀಡಬೇಕು
- ಒಂದು ತಾಸಿಗೂ ಹೆಚ್ಚು ಅವಧಿಯಲ್ಲಿ ಮಾರ್ಗದರ್ಶಕನು ಮೂಲ ಶಿಬಿರಕ್ಕೆ ಮಾಹಿತಿ ನೀಡದೇ ಇದ್ದರೆ, ಇಲಾಖೆ ಸಿಬ್ಬಂದಿ ಸ್ವತಃ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬೇಕು. ಅಚಾತುರ್ಯಗಳು ನಡೆದಿದ್ದರೆ, ಕೂಡಲೇ ಕಾರ್ಯಾಚರಣೆ ನಡೆಸಬೇಕು
- ತುರ್ತು ಸ್ಥಿತಿಯಲ್ಲಿ ಬಳಸಲು ಟಾರ್ಚ್, ಹೆಡ್‌ಲ್ಯಾಂಪ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಮತ್ತು ಔಷಧಗಳು ಮಾರ್ಗದರ್ಶಕನ ಬಳಿ ಇರಬೇಕು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ:ಮುಇಂವಿ/ಟಿಮತ್ತುಪಿ/ಅಇಂ(ವಿ)–1/2/2026–27/474–503 ದಿನಾಂಕ:17.04.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆಗಳು ಮತ್ತು ಕಾಮಗಾರಿಗಳ ವಿವರ

1. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3611

ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ಕಾಮಗಾರಿ–ಎ:ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ **ಶಾಣಪ್ಪನಹಳ್ಳಿಯಲ್ಲಿ** 2x20 ಎಂ.ವಿ.ಎ, 66/11 ಕೆ.ವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ NRS ದೊಡಬಳ್ಳಾಪುರ ದೇವನಹಳ್ಳಿ 2 ಮಾರ್ಗದಿಂದ **1.06ಕಿಮೀ** ಉದ್ದಕ್ಕೆ 66ಕೆವಿ, 1000sqmm ಭೂಗತ ಕೇಬಲ್ ಲಿಲೋ(LILO) ಮಾರ್ಗ ನಿರ್ಮಾಣ

ಕಾಮಗಾರಿ–ಬಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ **ಎಂ.ಸತ್ಯವಾರದಲ್ಲಿ** 2x20 ಎಂ.ವಿ.ಎ, 66/11 ಕೆ.ವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66 ಕೆವಿ ಏಕರಾಜಪುರ–ಬೂದಿಗೆರೆ ಡಿಸಿ ಮಾರ್ಗದಿಂದ **0.965 ಕಿಮೀ** ಉದ್ದಕ್ಕೆ 66ಕೆವಿ, 1000sqmm ಭೂಗತ ಕೇಬಲ್ ಲಿಲೋ(LILO)ಮಾರ್ಗ ನಿರ್ಮಾಣ

2. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3610

ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ಕಾಮಗಾರಿ–ಎ: ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ **ಕಾರಹಳ್ಳಿಯಲ್ಲಿ** 2x20ಎಂವಿಎ, 66/11ಕೆವಿ ಉಪಕೇಂದ್ರ ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ NRS-ದೊಡ್ಡಬಳ್ಳಾಪುರ–ವಿಜಯಪುರ SC ಮಾರ್ಗದಿಂದ **1.205ಕಿಮೀ** ಉದ್ದಕ್ಕೆ 66ಕೆವಿ, 1000sqmm ಕೇಬಲ್ LILO ಮಾರ್ಗ ನಿರ್ಮಾಣ

ಕಾಮಗಾರಿ–ಬಿ: ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ 220/66ಕೆವಿ ಹಗದೂರು(ವೈಟ್‌ಫೀಲ್ಡ್) ಜಿಐಎಸ್ ಉಪಕೇಂದ್ರದಿಂದ 66/11ಕೆವಿ **ಸೋರಹುಣಸೆ** ಉಪಕೇಂದ್ರಕ್ಕೆ **5.82ಕಿಮೀ** ಉದ್ದಕ್ಕೆ 66ಕೆವಿ, 1000sqmm ಕೇಬಲ್‌ನ ಪರ್ಯಾಯ ಮಾರ್ಗ ನಿರ್ಮಾಣ ಹಾಗೂ 66/11ಕೆವಿ ಸೋರಹುಣಸೆ ಉಪಕೇಂದ್ರದಲ್ಲಿ ಒಂದು 66ಕೆವಿ ಟರ್ಮಿನಲ್ ಬೇ ನಿರ್ಮಾಣ.

3. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3621

ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ಕಾಮಗಾರಿ–ಎ: ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ 66/11ಕೆವಿ **ಚೊಕ್ಕಸಂದ್ರ** ಉಪಕೇಂದ್ರದಿಂದ 66/11ಕೆವಿ ದೊಮ್ಮಸಂದ್ರ ಉಪಕೇಂದ್ರಕ್ಕೆ 2.6 ಕಿ.ಮೀ. ಉದ್ದಕ್ಕೆ **66ಕೆವಿ, 1000 sqmm. ಎಸ್ ಸಿ ಭೂಗತ** ಕೇಬಲನ್ನು ಒದಗಿಸುವ ಮೂಲಕ 66/11ಕೆವಿ ಚೊಕ್ಕಸಂದ್ರ ಉಪಕೇಂದ್ರಕ್ಕೆ ಪರ್ಯಾಯ ವಿದ್ಯುತ್ ಸಂಪರ್ಕ ಒದಗಿಸುವುದು ಹಾಗೂ ಹಾಲಿಯಿರುವ 66/11ಕೆವಿ ಚೊಕ್ಕಸಂದ್ರ ಉಪಕೇಂದ್ರ ಮತ್ತು 66/11ಕೆವಿ ದೊಮ್ಮಸಂದ್ರ ಉಪಕೇಂದ್ರದಲ್ಲಿ ತಲಾ ಒಂದು ಸಂಖ್ಯೆಯ **66ಕೆವಿ ಟರ್ಮಿನಲ್ ಬೇ** ನಿರ್ಮಾಣ ಮತ್ತು ಹಾಲಿಯಿರುವ 66/11ಕೆವಿ ದೊಮ್ಮಸಂದ್ರ ಉಪಕೇಂದ್ರದ ಆವರಣದಲ್ಲಿ ಪ್ರಸ್ತಾವಿತ ಟರ್ಮಿನಲ್ ಬೇ 66ಕೆವಿ ಸ್ವಿಚ್‌ಯಾರ್ಡ್ ಮೂಲಕ ಹಾದುಹೋಗುವ 66ಕೆವಿ ಓವರ್‌ಹೆಡ್ ಮಾರ್ಗವನ್ನು **0.17** ಕಿ.ಮೀ. ಉದ್ದಕ್ಕೆ 66ಕೆವಿ, 1000 sqmm. ಭೂಗತ ಕೇಬಲ್ ಮಾರ್ಗಕ್ಕೆ ಮಾರ್ಪಡಿಸುವುದು.

ಕಾಮಗಾರಿ–ಬಿ: ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನ **ಸರ್ಕಾರಿ ಉತ್ತನಹಳ್ಳಿಯಲ್ಲಿ** 2x20 ಎಂವಿಎ, 66/11ಕೆವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66 ಕೆವಿ ಡಿಕೆ ಮೈದಾನ–ಕಡಕೊಳ ಎಸ್‌ಸಿ ಮಾರ್ಗದಿಂದ **2.756 ಕಿ.ಮೀ.** ಉದ್ದಕ್ಕೆ 66ಕೆವಿ 630 sqmm. ಭೂಗತ, ಕೇಬಲ್ ಲಿಲೋ ಮಾರ್ಗದ ನಿರ್ಮಾಣ.

4. ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್3631

ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನ **ಕೊಳಗುಂದ ಗೇಟ್ (ಸಾವಂತನಹಳ್ಳಿ)** ನಲ್ಲಿ 2x20ಎಂವಿಎ, 110/11ಕೆವಿ ಉಪಕೇಂದ್ರವನ್ನು ಸಂಬಂಧಿತ **0.122 ಕಿ.ಮೀ**ಗಳ ಉದ್ದದ 110ಕೆವಿ ಲಿಲೋ ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು..

5. ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್3632

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ **ಕೆಂಬುತಗೆರೆ (ಅಮೃತೇಶ್ವರನಹಳ್ಳಿ)** ಯಲ್ಲಿ 2x20ಎಂವಿಎ, 66/11ಕೆವಿ ಉಪಕೇಂದ್ರವನ್ನು ಸಂಬಂಧಿತ **1.541ಕಿ.ಮೀ**ಗಳ ಉದ್ದದ 66ಕೆವಿ ಲಿಲೋ ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು.

6. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3630

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ **ಮಾಚಗೊಂಡನಹಳ್ಳಿಯಲ್ಲಿ** 2x20ಎಂವಿಎ, 66/11ಕೆವಿ ಉಪಕೇಂದ್ರವನ್ನು ಸಂಬಂಧಿತ **0.457 ಕಿ.ಮೀ**ಗಳ ಉದ್ದದ 66ಕೆವಿ ಲಿಲೋ ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು

7. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3627

ಬೀದರ್ ಜಿಲ್ಲೆ, ಭಾಲ್ಕಿ ತಾಲ್ಲೂಕು **ಭಾಲ್ಕಿ (North) ಯಲ್ಲಿ** 2X20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.701ಕಿ.ಮೀ. ಗಳ ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು

8. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3628

ಸಂಯೋಜಿತ ಪ್ಯಾಕೇಜ್‌ನ ಅಡಿಯಲ್ಲಿ ವರ್ಕ್–ಎ: ಬೀದರ್ ಜಿಲ್ಲೆ, ಭಾಲ್ಕಿ ತಾಲ್ಲೂಕು, ಅಹಮದಾಬಾದ್‌ನಲ್ಲಿ 1X20ಎಂವಿಎ, 110/33ಕೆವಿ ಮತ್ತು 2X20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ **0.237ಕಿ.ಮೀ.** ಗಳ ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗದೊಂದಿಗೆ ನಿರ್ಮಿಸುವುದು.

ವರ್ಕ್–ಬಿ: ಬೀದರ್ ಜಿಲ್ಲೆ, ಹುಮ್ನಾಬಾದ್ ತಾಲ್ಲೂಕಿನಲ್ಲಿ ಹಾಲಿಯಿರುವ **110ಕೆವಿ ಮನ್ನ–ಎ–ಖೇಲಿ–ಚಿಂಚೋಳಿ** ಪ್ರಸರಣ ಮಾರ್ಗದಿಂದ ಹಾಲಿಯಿರುವ **110/11ಕೆವಿ ನಿರ್ನ ವಿದ್ಯುತ್ ಉಪಕೇಂದ್ರ**ದವರೆಗೆ **1.406 ಕಿ.ಮೀ** ಗಳ ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ಸ್ಥಾಪಿಸುವುದು ಹಾಗೂ **02** ಸಂಖ್ಯೆಗಳ 110ಕೆವಿ ಟರ್ಮಿನಲ್ ಬೇಗಳನ್ನು 110ಕೆವಿ ನಿರ್ನ ವಿದ್ಯುತ್ ಉಪಕೇಂದ್ರದಲ್ಲಿ ಸ್ಥಾಪಿಸುವುದು.

9. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3625

ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕು, **ತೆಕ್ಕಲಕೋಟೆ (ಕೊಂಚಿಗೇರಿ) ಗ್ರಾಮದಲ್ಲಿ, 2X100 ಎಂವಿಎ, 220/110ಕೆವಿ ಮತ್ತು 1X10ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು** ಸಂಬಂಧಿತ **220ಕೆವಿ – 59.887 ಕಿ.ಮೀ**ಗಳು ಮತ್ತು **110ಕೆವಿ – 56.252ಕಿ.ಮೀ**ಗಳ ಉದ್ದದ ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು ಹಾಗೂ ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕಿನ ಸೋಮಸಮುದ್ರ ಉಪಕೇಂದ್ರದಲ್ಲಿ **02** ಸಂಖ್ಯೆಗಳ 220ಕೆವಿ ಟರ್ಮಿನಲ್ ಬೇಗಳು, ಸಿಂಧನೂರು ಉಪಕೇಂದ್ರದಲ್ಲಿ **02** ಸಂಖ್ಯೆಗಳ 220ಕೆವಿ ಟರ್ಮಿನಲ್ ಬೇಗಳು, ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕಿನ ಸಿರಿಗೇರಿ ಕ್ರಾಸ್ ಉಪಕೇಂದ್ರದಲ್ಲಿ **02** ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳು, ಸಿರುಗುಪ್ಪ ಉಪಕೇಂದ್ರದಲ್ಲಿ **01** ಸಂಖ್ಯೆಯ 110ಕೆವಿ ಟರ್ಮಿನಲ್ ಬೇ ಮತ್ತು ಬಳ್ಳಾರಿ ಜಿಲ್ಲೆ, ಕುರುಗೋಡು ತಾಲ್ಲೂಕಿನ ಕುರುಗೋಡು ಉಪಕೇಂದ್ರದಲ್ಲಿ **01** ಸಂಖ್ಯೆಯ ಟರ್ಮಿನಲ್ ಬೇ ಅನ್ನು ನಿರ್ಮಿಸುವುದು.

10. ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3622

ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆಯ **ಬೆಳಗಟ್ಟದಲ್ಲಿ** 2X20ಎಂ.ವಿ.ಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು 220/66/11ಕೆವಿ ಚಿತ್ರದುರ್ಗ ಉಪಕೇಂದ್ರದಿಂದ ಪ್ರಸ್ತಾವಿತ 66/11ಕೆವಿ ಬೆಳಘಟ್ಟ ವಿದ್ಯುತ್ ಉಪಕೇಂದ್ರಕ್ಕೆ MC/DC ಟವರ್‌ಗಳ ಮೇಲೆ 66ಕೆವಿ ಡಿಸಿ (DC) ಲೈನ್ ನಿರ್ಮಾಣ, ಹಾಲಿಯಿರುವ MC ಟವರ್‌ಗಳ ಕ್ರಾಸ್ ಆರ್ಮ್ ಅನ್ನು (ಗುಣೂರು ವರೆಗೆ) ಬಳಸಿಕೊಂಡು, **11.394 ಕಿ.ಮೀ** ಗಳ ದೂರಕ್ಕೆ ಆ ಆ್ಯಂಪಸಿಟಿ 700 ಆ್ಯಂಪ್ಸ್ ಕಂಡಕ್ಟರ್‌ನ ಹೆಚ್ ಪಿ ಸಿ ಯಿಂದ (HPC) ಹಾಲಿಯಿರುವ ಕೊಯೊಟ್ (Coyote) ವಾಹಕವನ್ನು ಬದಲಾಯಿಸುವುದು ಮತ್ತು ಪ್ರಸ್ತಾವಿತ 66/11 ಕೆವಿ ಬೆಳಘಟ್ಟ ವಿದ್ಯುತ್ ಉಪಕೇಂದ್ರದಿಂದ MC/DC ಟವರ್‌ಗಳ ಮೇಲೆ **0.210** ಕಿ.ಮೀ ಗಳ ದೂರಕ್ಕೆ 66ಕೆವಿ ಎಸ್ ಸಿ (SC) ಲಿಂಕ್ ಲೈನ್ ನಿರ್ಮಾಣ ಮತ್ತು 220/66/11ಕೆವಿ ಚಿತ್ರದುರ್ಗ ಉಪಕೇಂದ್ರದಲ್ಲಿ 01 ಸಂಖ್ಯೆಯ 66ಕೆವಿ ಟರ್ಮಿನಲ್ ಬೇ ಯನ್ನು ನಿರ್ಮಿಸುವುದು.

11.ಕೆಪಿಟಿಸಿಎಲ್/2026–27/ಟಿಎಲ್/ವರ್ಕ್_ಇಂಡೆಂಟ್3629

ಧಾರವಾಡ ತಾಲ್ಲೂಕು ಮತ್ತು ಜಿಲ್ಲೆಯ ಹಾಲಿಯಿರುವ 110/11ಕೆವಿ ಹೆಬ್ಬಳ್ಳಿ ವಿದ್ಯುತ್ ಉಪಕೇಂದ್ರದಿಂದ 110/11ಕೆವಿ ಮೊರಬ ವಿದ್ಯುತ್ ಉಪಕೇಂದ್ರದವರೆಗೆ (Panther) ಪ್ಯಾಂಥರ್ ವಾಹಕ ಬಳಸಿ **110ಕೆವಿ (SC) ಎಸ್‌ಸಿ** ಪ್ರಸರಣ ಮಾರ್ಗದ ನಿರ್ಮಾಣ ಹಾಗೂ 110/11ಕೆವಿ **ಮೊರಬ** ಮತ್ತು ಹೆಬ್ಬಳ್ಳಿ ವಿದ್ಯುತ್ ಉಪಕೇಂದ್ರಗಳಲ್ಲಿ ತಲಾ ಒಂದು ಸಂಖ್ಯೆಯ 110ಕೆವಿ ಟರ್ಮಿನಲ್ ಬೇ ನಿರ್ಮಿಸುವುದು.

12.ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3623

ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ **ಹಿರೇಖೇಡದಲ್ಲಿ** 2x20MVA, 110/11kV ಉಪ ಕೇಂದ್ರವನ್ನು ಸಂಬಂಧಿತ **7.212ಕಿ.ಮಿಗಳ** ಉದ್ದದ 110ಕೆವಿ ಡಿ.ಸಿ(ಲಿಲೋ) ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ “ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ” ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ **ದಿನಾಂಕ 18.04.2026 ರಂದು 15:00 ಗಂಟೆ** ಅಥವಾ ನಂತರದಿಂದ ಕ್ರ.ಸಂ (1) ರಿಂದ (5) ರ ಕಾಮಗಾರಿಗಳಿಗೆ ಮತ್ತು **ದಿನಾಂಕ 23.04.2026 ರಂದು 15:00 ಗಂಟೆ** ಅಥವಾ ನಂತರದಿಂದ ಕ್ರ.ಸಂ (6) ರಿಂದ (12) ರ ಕಾಮಗಾರಿಗಳಿಗೆ ಪಡೆಯಬಹುದು. ಬಿಡ್ ಸಲ್ಲಿಕೆಯ **ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು**. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್)
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ,
9ನೇ ಮಹಡಿ, ಇಂಧನ ಭವನ, ಎ.ಆರ್.ವೃತ್ತ, ಬೆಂಗಳೂರು–560 009.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ –1, 1ನೇ ಮಹಡಿ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು –560052.

ಸಂಖ್ಯೆ: ಡಿಜಿಎಂ–1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್–1/2026–27 ದಿನಾಂಕ : 16.04.2026

ಟೆಂಡರ್ ಆಹ್ವಾನ (ಐಎಫ್‌ಟಿ) ಕರೆ–3 (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–1, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಬಿಎಸ್‌ಡಬ್ಲ್ಯೂಎಂಎಲ್, 5 ವರ್ಷಗಳ ಅವಧಿಗೆ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ತ್ಯಾಜ್ಯ ಸಂಗ್ರಹಕರು / ಸ್ವಸಹಾಯ ಗುಂಪುಗಳು/ ಸರ್ಕಾರೇತರ ಸಂಸ್ಥೆಗಳು/ ಸಿ & ಟಿ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (ಎಂದರೆ **https://kppp.karnataka.gov.in**) ಬಿಡ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರು ಬಿಡ್ ದಾಖಲೆಯಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ ದಾಖಲೆಗಳಲ್ಲಿ ಕಾಣಬಹುದು.

ಸೂಚನೆ: (1) ಬಿಡ್ ಪೂರ್ವ ಪ್ರಶ್ನೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 21.04.2026 ರಂದು ಸಂಜೆ 17.30 ಗಂಟೆಯವರೆಗೆ.** (2) ಬಿಡ್ ಪೂರ್ವ ಸಭೆಯು **ದಿನಾಂಕ 22.04.2026 ರಂದು ಮಧ್ಯಾಹ್ನ 12:00 ಗಂಟೆಗೆ** ಸಿಇ & ಸಿಜಿಎಂ (ಟೆಕ್) ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು ರವರ ಕಚೇರಿಯಲ್ಲಿ ನಡೆಯಲಿದೆ. (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 27.04.2026 ರಂದು ಸಂಜೆ 16.00 ಗಂಟೆಯವರೆಗೆ. (4)** ಬಿಡ್ ತೆರೆಯುವ **ದಿನಾಂಕ: 28.04.2026 ರಂದು 16.30 ಗಂಟೆಗೆ.**

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/225/ಎಸ್‌ಎಸ್‌ಸಿ/2026–27

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

KEONICS ISO 9001 : 2008

ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020

ದೂರವಾಣಿ: +91-80-22225645 | info@keonics.com | www.keonics.in

ಸಂಗ್ರಾಹಣಾ ಸಲಹೆಗಾರರ ನೇಮಕಾತಿ ಅಧಿಸೂಚನೆ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ಸಂಸ್ಥೆಯನ್ನು ಕರ್ನಾಟಕ ರಾಜ್ಯದಲ್ಲಿ ವಿದ್ಯುನ್ಮಾನ ಉದ್ಯಮಗಳನ್ನು ಉತ್ತೇಜಿಸಲು ಹಾಗೂ ಈ ಉದ್ಯಮಗಳನ್ನು ಎಲ್ಲಾ ಕಾಲದಲ್ಲೂ ಮುಂಚೂಣಿಯಲ್ಲಿಟ್ಟು ಜನಸಾಮಾನ್ಯರಿಗೆ ಮಾಹಿತಿ ತಂತ್ರಜ್ಞಾನ ಶಿಕ್ಷಣ ಹರಡುವ, ರಾಜ್ಯದ ಇ–ಆಡಳಿತ ಸೇವೆಗಳನ್ನು ಒದಗಿಸುವ ಮೂಲ ಉದ್ದೇಶವನ್ನಿಟ್ಟುಕೊಂಡು 1976ರಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಕಿಯೋನಿಕ್ಸ್ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಸೇವೆಗಳಾದ ಐಸಿಟಿ ವಸ್ತುಗಳು, ಐಸಿಟಿ ಸೇವೆಗಳು, ಐಸಿಟಿ ಸಲಹೆಗಾರಿಕೆ, ಐಟಿ ಮೂಲ ಸೌಕರ್ಯ ಮತ್ತು ಐಸಿಟಿ ತರಬೇತಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಿಯೋನಿಕ್ಸ್ ಸಂಸ್ಥೆಯು ತನ್ನ ಸಂಗ್ರಹಣ ವಿಭಾಗವನ್ನು ಉದಯೋನ್ಮುಖ ತಂತ್ರಜ್ಞಾನಗಳು ಹಾಗೂ ಅಭಿವೃದ್ಧಿಯಾಗುತ್ತಿರುವ ಕೈಗಾರಿಕಾ ಅವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ಬಲಪಡಿಸಿ ಪರಿವರ್ತನೆಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ. ಆದುದರಿಂದ ಕಿಯೋನಿಕ್ಸ್ **ಒಂದು (01) ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ** ಸಂಗ್ರಹಣಾ ಸಲಹೆಗಾರರನ್ನು ನೇಮಿಸಿಕೊಳ್ಳಲು ತೀರ್ಮಾನಿಸಿದೆ. ವೇತನ/ಗೌರವ ಧನವು ಸಂಸ್ಥೆಯ ಮಾನದಂಡಗಳ ಪ್ರಕಾರ ಇರುತ್ತದೆ.

Sl. No.	Designation & Number of Posts	Minimum Educational Qualification	Minimum Experience
1	Procurement Consultant (02 post)	• B.Sc/ BE/ B.Tech/ M. Tech/ MCA/ MBA/ M Com. • Degree/ Diploma/ Certification in Public Procurement.	• 10 Years of total experience. • 5 years of public procurement experience in Govt Department/ PSU • Knowledge of the KTPP Acts, Rules and Karnataka e-Procurement Portal. • Detailed job description can be found in **www.keonics.com**

ಮೇಲ್ಕಾಣಿಸಿದ ಹುದ್ದೆಗೆ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು **ದಿನಾಂಕ 04ನೇ ಮೇ 2026ರ ಒಳಗಾಗಿ** ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್‌ನವರಿಗೆ ಇಮೇಲ್ ಮೂಲಕ ಸಲ್ಲಿಸುವುದು. ಅರ್ಜಿಯೊಂದಿಗೆ ತಮ್ಮ ವಿವರವಾದ curriculum vitae, ಸ್ವಯಂ ದೃಢೀಕೃತ ವಿದ್ಯಾರ್ಹತೆಗಳ ನಕಲು ಪ್ರತಿಗಳು ಹಾಗೂ ಸಂಬಂಧಿಸಿದ ಅನುಭವ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು. ಅರ್ಜಿ ಸಲ್ಲಿಸುವವರು ತಮ್ಮ ಸಹಿಯೊಂದಿರುವ ಅರ್ಜಿಯನ್ನು PDF ಸ್ವರೂಪದಲ್ಲಿ info@keonics.comಗೆ ಕಳುಹಿಸುವಂತೆ ಸೂಚಿಸಲಾಗಿದೆ. ಹುದ್ದೆಯ ವಿವರ (Job Description) ಮತ್ತು ನಿಯಮಾವಳಿ (Terms of Reference) ಗಳನ್ನು ಕಿಯೋನಿಕ್ಸ್‌ನ ಪೋರ್ಟಲ್ (https://www.keonics.in) ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಬೆಂಗಳೂರು

DIPR/CP/227/SA/2026-27

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ–ಮೇಲ್ : eepredkpl@gmail.com

ಸಂಖ್ಯೆ : ಪಂ.ರಾ.ಇಂ./ವಿ.ಕೊ./ತಾ.ಶಾ./ಸ.ಇಂ./ಟೆಂಡರ್/2026–27/140 ದಿನಾಂಕ : 16–04–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1, 2, 3 ಮತ್ತು 4 ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ / ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ **“http://kppp.karnataka.gov.in ಪೋರ್ಟಲ್”** ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025–26 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ಮೂಲಕ ಸೌಕರ್ಯ ಅಭಿವೃದ್ಧಿ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಿಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು **“http://kppp.karnataka.gov.in ಪೋರ್ಟಲ್”** ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

1) ಕುಕನೂರು ತಾಲೂಕಿನ ಕುದುರಿಮೋತಿ ಗ್ರಾಮದ ಮಸೀದಿಯಿಂದ ಮುರಾರ್ಜಿ ವಸತಿ ಶಾಲೆವರೆಗೆ ರಸ್ತೆ ಬದಿಯಲ್ಲಿ ಚರಂಡಿ ನಿರ್ಮಾಣ. CALL-2.INDENT NO: 20963, ಟೆಂಡರಗಿಟ್ಟ ಮೊತ್ತ : ರೂ. 111.09 ಲಕ್ಷ, ಇ.ಎಂ.ಡಿ. : ರೂ. 167000.00. ಕಾಲಾವಧಿ : 06 ತಿಂಗಳು.

ಟೆಂಡರ್ ವಿವರ : 1) ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 21–04–2026 ಸಮಯ 10.00 ಗಂಟೆ ನಂತರದಿಂದ 30–04–2026 ಸಮಯ 16.00 ಗಂಟೆವರೆಗೆ, 2) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 21–04–2026 ಸಮಯ 11.00 ಗಂಟೆ ನಂತರದಿಂದ 30–04–2026 ಸಮಯ 16.30 ಗಂಟೆವರೆಗೆ, 3) ಟೆಂಡರ್ ತೆರೆಯುವ ದಿನಾಂಕ : 02–05–2026 ಕಚೇರಿ ಸಮಯದಲ್ಲಿ, 4) ಕೆ.ಡಬ್ಲ್ಯೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರ ದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು

ಸಾಮಾನ್ಯ ಸೂಚನೆಗಳು : **1)** ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. **2)** ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. **3)** ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ : **http://kppp.karnataka.gov.in** ಪೋರ್ಟಲ್‌ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಟಿಪ್ಪಣಿ : ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/39/ಮಣಿಪಾಲ್/2026–27

ಯಾಣ ಭೂಪಾರಂಪರಿಕ ತಾಣ: ಜಿಎಸ್‌ಐ ನಿರ್ಣಯ

ಪ್ರಜಾವಾಣಿ ವಾರ್ತೆ

ಕಾರವಾರ: ಪ್ರಾಕೃತಿಕ ವೈಶಿಷ್ಟ್ಯದ ಯಾಣ ಪ್ರದೇಶವನ್ನು ರಾಷ್ಟ್ರೀಯ ಭೂಪಾರಂಪರಿಕ ತಾಣ ಎಂದು ಘೋಷಿಸಲು ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ ಸಂಸ್ಥೆ (ಜಿಎಸ್‌ಐ) ತನ್ನ 176ನೇ ಸಂಸ್ಥಾಪನಾ ದಿನಾಚರಣೆ ಸಂದರ್ಭದಲ್ಲಿ ನಿರ್ಧರಿಸಿದೆ.

‘2,700 ದಶಲಕ್ಷ ವರ್ಷಗಳ ಹಿಂದೆ ಸುಣ್ಣದ ಕಲ್ಲಿನ ರಚನೆಯಂತಹ ಬಂಡೆಗಳಿಂದ ರಚನೆಯಾದ ಅಪರೂಪದ ತಾಣವಾದ ಯಾಣ ಭೂ ಸಂರಕ್ಷಣೆ, ಭೂ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ರವಾಸೋದ್ಯಮ ತಾಣವಾಗಿಸಲು ರಾಷ್ಟ್ರೀಯ ಮಹತ್ವದ ಭೂಪಾರಂಪರಿಕ ತಾಣ ಎಂದು ಘೋಷಿಸಲು ನಿರ್ಧರಿಸಲಾಗಿದೆ’ ಎಂದು ಜಿಎಸ್‌ಐ ಏ.13ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ತಿಳಿಸಿದೆ.

‘ಯಾಣದಲ್ಲಿರುವ ಗುಹೆಗಳ ಸುಣ್ಣದ ಕಲ್ಲಿನ ರಚನೆಗಳು ಭೂದೃಶ್ಯದ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ನೈಸರ್ಗಿಕ ಪ್ರಯೋಗಾಲಯದಂತಿವೆ. ಈ ಸ್ಥಳವು ಹೆಚ್ಚಿನ ಭೌಗೋಳಿಕ ಮತ್ತು ಶೈಕ್ಷಣಿಕ ಮೌಲ್ಯವನ್ನು ಹೊಂದಿದ್ದು, ಜೀವವೈವಿಧ್ಯ ಸಮೃದ್ಧ ಪಶ್ಚಿಮ ಘಟ್ಟಗಳಲ್ಲಿ ಹುದುಗಿರುವ ಭೂರೂಪಗಳ ನಿಧಾನ ಭೂವೈಜ್ಞಾನಿಕ ಪ್ರಕ್ರಿಯೆಗಳ ಶಕ್ತಿಯನ್ನು ಪ್ರದರ್ಶಿಸುತ್ತವೆ. ಇಲ್ಲಿನ ಶಿಲೆಗಳನ್ನು ರಕ್ಷಿಸುವುದು, ಸಂರಕ್ಷಿಸುವುದು ಮತ್ತು ನಿರ್ವಹಿಸುವುದು ಅವಶ್ಯಕವಾಗಿದೆ. ಮುಂದಿನ ಪೀಳಿಗೆಯ ಜ್ಞಾನಕ್ಕಾಗಿ ಇಂತಹ ತಾಣದ ಸಂರಕ್ಷಣೆ ತುರ್ತು ಅಗತ್ಯ’ ಎಂದು ಜಿಎಸ್‌ಐ ಹೇಳಿದೆ.

‘ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ, ಮೂಲಸೌಕರ್ಯಗಳಿಗೆ ಬಲ ಬರಬಹುದು. ಗಣಿಗಾರಿಕೆ ನಡೆಸಿ ಪರಿಸರಕ್ಕೆ ಧಕ್ಕೆ ತರುವ ಚಟುವಟಿಕೆಗಳಿಗೆ ಕಡಿವಾಣ ಬೀಳಬಹುದು’ ಎಂದು ಸ್ಥಳೀಯ ಜಿ.ಎಂ.ಶೆಟ್ಟಿ ಪ್ರತಿಕ್ರಿಯಿಸಿದ್ದಾರೆ.

ಫ್ಲೈ 91: ಹುಬ್ಬಳ್ಳಿಯಿಂದ ಬೆಂಗಳೂರು, ಹೈದರಾಬಾದ್‌ಗೆ ವಿಮಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿಯಿಂದ ಬೆಂಗಳೂರು ಮತ್ತು ಹೈದರಾಬಾದ್‌ಗೆ ಫ್ಲೈ91 ಪ್ರಾದೇಶಿಕ ವಿಮಾನಯಾನ ಸಂಸ್ಥೆ ಶುಕ್ರವಾರದಿಂದ ವಿಮಾನ ಹಾರಾಟ ಆರಂಭಿಸಿದೆ.

ಹುಬ್ಬಳ್ಳಿಯಿಂದ ಪ್ರತಿದಿನ ರಾತ್ರಿ 8.35ಕ್ಕೆ ಹೊರಟು ರಾತ್ರಿ 9.55ಕ್ಕೆ ಹೈದರಾಬಾದ್ ತಲುಪಲಿದೆ. ಅಲ್ಲಿಂದ ಮಧ್ಯಾಹ್ನ 3ಕ್ಕೆ ಹೊರಟು 4.30ಕ್ಕೆ ಹುಬ್ಬಳ್ಳಿ ತಲುಪಲಿದೆ. ಹುಬ್ಬಳ್ಳಿಯಿಂದ ಪ್ರತಿದಿನ ಸಂಜೆ 4.55ಕ್ಕೆ ಹೊರಡುವ ವಿಮಾನ ಬೆಂಗಳೂರಿಗೆ ಸಂಜೆ 6.15ಕ್ಕೆ ತಲುಪಲಿದೆ. ಅಲ್ಲಿಂದ 6.15ಕ್ಕೆ ಹೊರಟು ಪುನಃ ಹುಬ್ಬಳ್ಳಿಗೆ ರಾತ್ರಿ 8.15ಕ್ಕೆ ಬರಲಿದೆ.

‘ಎರಡು ಮತ್ತು ಮೂರನೇ ಹಂತದ ನಗರವನ್ನು ಸಂಪರ್ಕಿಸುವ ನಿಟ್ಟಿನಲ್ಲಿ ಫ್ಲೈ91 ವಿಮಾನ ಹುಬ್ಬಳ್ಳಿಯಿಂದ ಕಾರ್ಯಾಚರಣೆ ಆರಂಭಿಸಿದೆ. ಹುಬ್ಬಳ್ಳಿಯು ಉತ್ತರ ಕರ್ನಾಟಕದ ಪ್ರಮುಖ ವ್ಯಾಪಾರ, ಶಿಕ್ಷಣ ಮತ್ತು ಕೈಗಾರಿಕಾ ಕೇಂದ್ರವಾಗಿರುವುದರಿಂದ, ಹೈದರಾಬಾದ್ ಮತ್ತು ಬೆಂಗಳೂರಿನಂತಹ ನಗರಗಳಿಗೆ ವಿಮಾನ ಸಂಪರ್ಕ ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗಿದೆ’ ಎಂದು ಫ್ಲೈ 91 ವಿಮಾನ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮನೋಜ್ ಚಾಕೋ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಪೇಜಾವರ ಶ್ರೀ ಚಾತುರ್ಮಾಸ್ಯ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ 39ನೇ ಚಾತುರ್ಮಾಸ್ಯ ನವದೆಹಲಿಯ ಶಾಖಾ ಮಠದಲ್ಲಿ ನಡೆಯಲಿದೆ.

ಈ ನಿಮಿತ್ತ ಪೂರ್ವಭಾವಿ ಸಮಾಲೋಚನಾ ಸಭೆ ವಸಂತ್ ಕುಂಜ್‌ನಲ್ಲಿ ಶಾಖಾ ಮಠದಲ್ಲಿ ಗುರುವಾರ ಸಂಜೆ ನಡೆಯಿತು. ಹಿರಿಯ ವಕೀಲ ಅಲೋಕ್ ಕುಮಾರ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಛುಗ್ ಉಪಸ್ಥಿತರಿದ್ದು, ‘ವರ್ತಮಾನದಲ್ಲಿ ಕಾಣುತ್ತಿರುವ ಹಿಂದೂ ಪರ ಉತ್ಸಾಹಗಳಿಗೆ ಬಹಳ ದೊಡ್ಡ ವಿರೋಧಿ ಶಕ್ತಿಗಳ ಸವಾಲುಗಳೂ ಇವೆ. ಆದರೆ, ಅವೆಲ್ಲವನ್ನೂ ಹಿಮ್ಮೆಟ್ಟಿಸಿ ಈ ಉತ್ಸಾಹ ಕಾಯ್ದುಕೊಂಡು ಬಹಳಷ್ಟನ್ನು ಸಾಧಿಸಬೇಕಾಗಿದೆ. ಅದಕ್ಕಾಗಿ ಪೇಜಾವರ ಮಠದ ಶ್ರೀಗಳೂ ಸೇರಿದಂತೆ ದೇಶದ ಸಂತರ ಮಾರ್ಗದರ್ಶನ ಅತ್ಯಂತ ಅವಶ್ಯಕ’ ಎಂದರು.

ಚಾತುರ್ಮಾಸ್ಯದ ವಿವರಗಳನ್ನು ನವದೆಹಲಿ ಕೇಂದ್ರೀಯ ಸಂಸ್ಕೃತ ವಿವಿ ಕುಲಪತಿ ಡಾ. ಶ್ರೀನಿವಾಸ ಆಚಾರ್ಯ ವರಖೇಡಿ ನೀಡಿದರು.

ಪೇಜಾವರ ಸ್ವಾಮೀಜಿ ಆಶೀರ್ವಚನ ನೀಡಿದರು. ಚಾತುರ್ಮಾಸ್ಯ ಸಂಯೋಜನ ಸಮಿತಿಯ ಅಧ್ಯಕ್ಷರಾಗಿ ಅಲೋಕ್ ಕುಮಾರ್ ಅವರನ್ನು ನೇಮಿಸಲಾಯಿತು.

ಪ್ರವಾಸಿ ವಾಹನ ಪರವಾನಗಿಗೆ ಕೇಂದ್ರದಿಂದ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಪ್ರವಾಸಿ ಪರವಾನಗಿ (ಎಐಟಿಪಿ) ನಿಯಮಗಳನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ ತಿದ್ದುಪಡಿ ಮಾಡಿದ್ದು, ಹೊರ ರಾಜ್ಯಗಳ ಪ್ರಯಾಣದ ಗರಿಷ್ಠ ಅವಧಿ 60 ದಿನಗಳಿಗೆ ಸೀಮಿತಗೊಳಿಸಿದೆ.

ಒಂದು ರಾಜ್ಯದಲ್ಲಿ ನೋಂದಣಿಯಾದ ವಾಹನಗಳು ಮೊದಲು ಹೊರ ರಾಜ್ಯಗಳಲ್ಲಿ 90 ದಿನ ಇರಬಹುದಿತ್ತು. ಅದರಲ್ಲಿ 30 ದಿನ ಕಡಿತಗೊಳಿಸಲಾಗಿದೆ. ಪ್ರಯಾಣವು ಮೂಲ ರಾಜ್ಯದಲ್ಲೇ ಆರಂಭವಾಗಿ ಕೊನೆಗೊಳ್ಳಬೇಕು. ಜಿಪಿಎಸ್ ಟ್ರ್ಯಾಕರ್ ಮೂಲಕ ಮೇಲ್ವಿಚಾರಣೆ ಮಾಡಲಾಗುವುದು ಎಂದು ತಿದ್ದುಪಡಿ ಹೇಳಿದೆ.

ಪ್ರತಿ ಎಐಟಿಪಿ ಹೊಂದಿರುವ ವಾಹನದಲ್ಲಿ ಟ್ರ್ಯಾಕಿಂಗ್ ಸಾಧನ ಕಡ್ಡಾಯವಾಗಿ ಇರಬೇಕು. ಸಂಚಾರವನ್ನು ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ. ಪಾವತಿಸದ ಟೋಲ್ ಅನ್ನು ಬಳಕೆದಾರರ ಶುಲ್ಕ ಎಂದು ಸೇರಿಸಲಾಗುವುದು. ಟೋಲ್ ಬಾಕಿ ಇದ್ದರೆ ಪರವಾನಗಿ ನೀಡುವ ಮೊದಲು ಪಾವತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ.

ತಪಾಸಣೆ ಸಮಯದಲ್ಲಿ ಪ್ರವಾಸಿ ವಾಹನ ನಿರ್ವಾಹಕರು ಅಗತ್ಯ ವಿವರ ಹೊಂದಿರಬೇಕು. ಪ್ರಯಾಣದ ಆರಂಭ ಸ್ಥಳ, ತಲುಪುವ ಸ್ಥಳ, ಮಾರ್ಗ ಹಾದು ಹೋಗುವ ರಾಜ್ಯಗಳ ವಿವರ ಇರಬೇಕು. ಎಐಟಿಪಿ ವಾಹನಗಳನ್ನು ಸ್ಟೇಜ್ ಕ್ಯಾರೇಜ್ ಆಗಿ ಬಳಸಲು ಅವಕಾಶ ಇಲ್ಲ. ಪಟ್ಟಿಯಲ್ಲಿ ಇಲ್ಲದ ಪ್ರವಾಸಿಗರನ್ನು ಹತ್ತಿಸಲು ಅಥವಾ ಇಳಿಸಲು ಅವಕಾಶವಿಲ್ಲ.

ಹಳೇ ಅಂಶಗಳು: ಪರವಾನಗಿಯನ್ನು ವಾಹನ ನೋಂದಾಯಿಸಿದ ರಾಜ್ಯದ ಸಾರಿಗೆ ಪ್ರಾಧಿಕಾರದಿಂದ ಪಡೆಯಬೇಕು. ತ್ರೈಮಾಸಿಕ, ವಾರ್ಷಿಕ ಮಾನ್ಯತೆ ಇರಬೇಕು. ಯಾವುದೇ ಬಾಕಿ ಚಲನ್ ಇರಬಾರದು. ಎಲ್ಲ ದಾಖಲೆಗಳು ಮಾನ್ಯವಾಗಬೇಕು ಮುಂತಾದ ಹಳೆಯ ನಿಯಮಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಮಹಿಳಾ ಮೀಸಲು: ವಾಕ್ಸಮರ

ಉತ್ತರ–ದಕ್ಷಿಣ ವಿಭಜನೆ ಬಯಸುವ ವಿಪಕ್ಷ: ಅಮಿತ್ ಶಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ಷೇತ್ರ ಮರುವಿಂಗಡಣೆ ದಕ್ಷಿಣ ಭಾರತದ ವಿರೋಧಿ ಅಲ್ಲ. ವಿರೋಧ ಪಕ್ಷಗಳು ಉತ್ತರ–ದಕ್ಷಿಣ ವಿಭಜನೆ ಬಯಸುತ್ತಿವೆ. ಈ ವಿಷಯದಲ್ಲಿ ಸುಳ್ಳು ಸಂಕಥನ ಸೃಷ್ಟಿಸುತ್ತಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂಡಿಯಾ ಮೈತ್ರಿಕೂಟದ ವಿರುದ್ಧ ವಾಗ್ದಾಳಿ ನಡೆಸಿದರು.

ಮೂರು ಮಸೂದೆಗಳ ಕುರಿತು ಲೋಕಸಭೆಯಲ್ಲಿ ಎರಡು ದಿನಗಳ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರ ನೀಡಿದ ಅವರು, 'ಕ್ಷೇತ್ರ ಮರುವಿಂಗಡಣೆಯಿಂದಾಗಿ ವಿಶೇಷವಾಗಿ ದಕ್ಷಿಣದ ರಾಜ್ಯಗಳೂ ಸೇರಿದಂತೆ ಯಾವುದೇ ರಾಜ್ಯಕ್ಕೆ ನಷ್ಟ ಆಗುವುದಿಲ್ಲ. ಪ್ರತಿಯೊಂದು ರಾಜ್ಯಕ್ಕೂ ಸಂಸತ್ತಿನಲ್ಲಿ ನ್ಯಾಯಯುತ ಪ್ರಾತಿನಿಧ್ಯ ಸಿಗಲಿದೆ' ಎಂದರು.

'ಲೋಕಸಭೆಯಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಕೇರಳ - ಈ ಐದು ರಾಜ್ಯಗಳ ಬಲವು ಪ್ರಸ್ತುತ 129ರಷ್ಟಿದೆ. ಇದು ಶೇಕಡ 23.76ರಷ್ಟು. ಕ್ಷೇತ್ರಗಳ ಸಂಖ್ಯೆ ಶೇ 50ರಷ್ಟು ಹೆಚ್ಚಳವಾದ ಬಳಿಕ ಐದು ರಾಜ್ಯಗಳಲ್ಲಿ ಸದಸ್ಯರ ಸಂಖ್ಯೆ 195 ಆಗಲಿದೆ. ಪಾಲು ಶೇ 23.87 ಆಗಲಿದೆ. ಮರುವಿಂಗಡಣೆಯಿಂದ ಯಾರಿಗೂ ನಷ್ಟ ಆಗುವುದಿಲ್ಲ' ಎಂದು ಅವರು ಪುನರುಚ್ಚರಿಸಿದರು.

'ನನಗೆ ಒಂದು ಗಂಟೆ ಸಮಯ ನೀಡಿ. ಮಸೂದೆಯ ಅಧಿಕೃತ ತಿದ್ದುಪಡಿ ಸಿದ್ಧವಾಗಿದೆ. ಎಲ್ಲ ರಾಜ್ಯಗಳಿಗೆ ಶೇ 50 ಸೀಟು ಹೆಚ್ಚಳ ಮಾಡುವುದನ್ನು ಮಸೂದೆಯಲ್ಲಿ ಉಲ್ಲೇಖ ಮಾಡುತ್ತೇವೆ. ಇದರಲ್ಲಿ ಮುಚ್ಚುಮರೆ ಮಾಡಲು ಏನಿಲ್ಲ. ನಾವು ಯಾವುದೇ ತಪ್ಪು ಮಾಡುತ್ತಿಲ್ಲ. ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರಕ್ಕೆ ಸಹಕಾರ ನೀಡಿ' ಎಂದು ಅವರು ಮನವಿ ಮಾಡಿದರು.

ಆಗ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್ ಮಧ್ಯಪ್ರವೇಶಿಸಿ, 'ಮಹಿಳಾ ಮೀಸಲಾತಿ ಮಸೂದೆಗೆ ನಾವು ಸಹಕಾರ ನೀಡುತ್ತೇವೆ. ಈ ಮಸೂದೆಯಲ್ಲಿ ಸರ್ಕಾರ ಎರಡು ಬದಲಾವಣೆಗಳನ್ನು ಮಾಡಬೇಕು. ಈ ಮಸೂದೆಯನ್ನು ಕ್ಷೇತ್ರ ಮರುವಿಂಗಡಣೆಯಿಂದ ಪ್ರತ್ಯೇಕಿಸಬೇಕು' ಎಂದು ಆಗ್ರಹಿಸಿದರು.

'20 ಲಕ್ಷಕ್ಕೂ ಹೆಚ್ಚು ಮತದಾರರಿರುವ 127 ಲೋಕಸಭಾ ಸ್ಥಾನಗಳಿವೆ. ಒಬ್ಬ ಸಂಸದರು ಇಷ್ಟೊಂದು ಜನರೊಂದಿಗೆ ಹೇಗೆ ವ್ಯವಹರಿಸಬಹುದು ಮತ್ತು ಅವರ ಅಗತ್ಯಗಳನ್ನು ಹೇಗೆ ಪೂರೈಸಬಹುದು?' ಎಂದು ಶಾ ಪ್ರಶ್ನಿಸಿದರು. ಕ್ಷೇತ್ರ ಮರುವಿಂಗಡಣೆಯನ್ನು ವಿರೋಧಿಸುವವರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸ್ಥಾನ ಹೆಚ್ಚಳವನ್ನು ವಿರೋಧಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.

'ನಾವು ಏನೇ ಮಾಡಿದರೂ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ನಿರಂತರವಾಗಿ ವಿರೋಧಿಸುತ್ತಲೇ ಬಂದಿವೆ. ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಪಡಿಸಿದ್ದೇವೆ. ಕಾಂಗ್ರೆಸ್‌ನವರು ವಿರೋಧಿಸಿದ್ದಾರೆ. ನಾವು ವಾಯು ದಾಳಿ ಮತ್ತು ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿದ್ದೇವೆ. ಅದನ್ನೂ ವಿರೋಧಿಸಿದ್ದಾರೆ. ನಾವು ರಾಮಮಂದಿರ ನಿರ್ಮಿಸಿದ್ದೇವೆ. ಅವರು ಅದನ್ನು ವಿರೋಧಿಸಿದ್ದಾರೆ' ಎಂದು ಟೀಕಿಸಿದರು.

'ಧರ್ಮಾಧಾರಿತ ಮೀಸಲಾತಿ ನೀಡುವುದು ಸಂವಿಧಾನ ಬಾಹಿರ. ನಾವು ಎಂದಿಗೂ ಅಂತಹ ಮೀಸಲಾತಿ ನೀಡುವುದಿಲ್ಲ ಅಥವಾ ಇತರರು ಹಾಗೆ ಮಾಡಲು ನಾವು ಬಿಡುವುದಿಲ್ಲ' ಎಂದು ಶಾ ಗುಡುಗಿದರು.

'ವಿರೋಧ ಪಕ್ಷಗಳಿಗೆ ಜಾತಿ ಗಣತಿ ಬಗ್ಗೆ ಕಾಳಜಿ ಇಲ್ಲ. ಸತತವಾಗಿ ಚುನಾವಣೆಗಳಲ್ಲಿ ಸೋತ ಬಳಿಕ ಅವರಿಗೆ ಜಾತಿ ಗಣತಿಯ ಬಗ್ಗೆ ಅತೀವ ಪ್ರೀತಿ ಉಂಟಾಗಿದೆ. ಜನರನ್ನು ಗೊಂದಲಕ್ಕೆ ತಳ್ಳಿ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಈ ಕನಸು ಈಡೇರಲು ಸಾಧ್ಯವಿಲ್ಲ' ಎಂದು ಅವರು ಹೇಳಿದರು.

ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಹಾಗೂ ಎಸ್‌ಸಿ, ಎಸ್‌ಟಿ ಸ್ಥಾನಗಳ ಹೆಚ್ಚಳಕ್ಕೆ ವಿಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ವಿಪಕ್ಷಗಳ ಕೂಟಕ್ಕೆ ದೇಶದ ಮಹಿಳೆಯರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಅವರು ಎಚ್ಚರಿಸಿದರು.

ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲಾದ ಬಳಿಕ ಬಿಜೆಪಿ ಸಂಸದೆಯರು ಸಂಸತ್ ಹೊರಗೆ ಶುಕ್ರವಾರ ಪ್ರತಿಭಟಿಸಿದರು — ಪಿಟಿಐ ಚಿತ್ರ

ಚುನಾವಣಾ ನಕ್ಷೆ ಬದಲಿಸುವ ದುಷ್ಟ ಗುರಿ: ರಾಹುಲ್

ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ ಕುರಿತು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಈ ಮಸೂದೆಯು ದಕ್ಷಿಣ, ಈಶಾನ್ಯ ಮತ್ತು ಸಣ್ಣ ರಾಜ್ಯಗಳ ಪ್ರಾತಿನಿಧ್ಯ ಕಸಿದುಕೊಳ್ಳುವ ಮೂಲಕ ದೇಶದ ಚುನಾವಣಾ ನಕ್ಷೆ ಬದಲಾಯಿಸುವ ಗುರಿ ಹೊಂದಿರುವ ರಾಷ್ಟ್ರ ವಿರೋಧಿ ಕೃತ್ಯ' ಎಂದು ಆರೋಪಿಸಿದರು.

ಮೂರು ಮಸೂದೆಗಳ ಕುರಿತು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಮಸೂದೆಯು ಹಿಂದುಳಿದ ವರ್ಗಗಳು, ದಲಿತರು, ಬುಡಕಟ್ಟು ಜನಾಂಗದವರು ಮತ್ತು ಅಲ್ಪಸಂಖ್ಯಾತರನ್ನು ಅಧಿಕಾರದಿಂದ ದೂರವಿಡುವ ಉದ್ದೇಶ ಹೊಂದಿದೆ ಎಂದು ಟೀಕಿಸಿದರು.

ಮಹಿಳಾ ಮೀಸಲಾತಿಗೂ ಈ ಮಸೂದೆಗೂ ಸಂಬಂಧ ಇಲ್ಲ. ಕೆಲವು ರಾಜ್ಯಗಳು ಮತ್ತು ಜನರ ಪ್ರಾತಿನಿಧ್ಯ ಕಡಿಮೆ ಮಾಡುವ ಮೂಲಕ ಮೋದಿ ಸರ್ಕಾರವು ಅಧಿಕಾರದಲ್ಲಿ ಉಳಿಯುವ ಗುರಿ ಹೊಂದಿದೆ ಎಂದರು.

ಇಬ್ಬರಿಗೂ ಪತ್ನಿ ಸಮಸ್ಯೆ ಇಲ್ಲ

ಇದೇ ವೇಳೆ, ಪ್ರಧಾನಿ ಹಾಗೂ ತಮ್ಮ ಸಾಮ್ಯತೆ ಬಗ್ಗೆ ಉಲ್ಲೇಖಿಸಿದ ರಾಹುಲ್ ಗಾಂಧಿ, 'ಪ್ರಧಾನಿ ಹಾಗೂ ನನಗೆ ಪತ್ನಿಯ ಸಮಸ್ಯೆ ಇಲ್ಲ. ಹೀಗಾಗಿ, ಹೆಂಡತಿಯರಿಂದ ಬರುವ ನೇರ ಮಾಹಿತಿ ನಮಗೆ ಸಿಗುವುದಿಲ್ಲ. ಆದರೆ, ತಾಯಿ ಹಾಗೂ ಸಹೋದರಿಯರಿಂದ ಸಾಕಷ್ಟು ಪಾಠ ಕಲಿತಿದ್ದೇವೆ' ಎಂದರು.

'ಭಾರತದ ಮಹಿಳೆಯರನ್ನು ಬಳಸಿಕೊಂಡು ಹಾಗೂ ಅವರ ಹಿಂದೆ ಅಡಗಿಕೊಂಡು ದೇಶದ ಚುನಾವಣೆ ನಕ್ಷೆಯ ಬದಲಾಯಿಸುವ ಪ್ರಯತ್ನವಿದು. ಇದು ನಾಚಿಕೆಗೇಡಿನ ಕೃತ್ಯ. 2023ರಲ್ಲೇ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೆ ಬಂದಿದೆ. ಅದರ ಅನುಷ್ಠಾನಕ್ಕೆ ಸರ್ಕಾರ ವಿಳಂಬ ಮಾಡುತ್ತದೆ. ಈ ಕಾಯ್ದೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು. 2023ರ ಕಾನೂನನ್ನು ಮರಳಿ ತಂದರೆ ಅದರ ಅನುಷ್ಠಾನಕ್ಕೆ ಸಹಾಯ ಮಾಡುತ್ತೇವೆ' ಎಂದು ಅವರು ಭರವಸೆ ನೀಡಿದರು.

'ಈ ಮಸೂದೆಗಳು ಬಿಜೆಪಿಯ ಭೀತಿಯ ಪ್ರತಿಕ್ರಿಯೆ' ಎಂದು ಕರೆದ ರಾಹುಲ್, 'ಯಾವುದೇ ಬೆಲೆ ತೆತ್ತಾದರೂ ದೇಶದ ಚುನಾವಣಾ ನಕ್ಷೆ ಬದಲಾಯಿಸುವ ಹಾಗೂ ಮಹಿಳಾ ಪರ ಎಂಬ ಸಂದೇಶ ಕಳುಹಿಸಲು ಪ್ರಧಾನಿ ಬಯಸಿದ್ದರಿಂದ ಈ ಮಸೂದೆಗಳನ್ನು ಮಂಡಿಸಲಾಗಿದೆ' ಎಂದು ಲೇವಡಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಬಳಿಕ ರಾಹುಲ್ ಭಾಷಣಕ್ಕೆ ಬಿಜೆಪಿ ಸಂಸದರು ಅಡ್ಡಿಪಡಿಸಿದರು. ಜನರ ಅಧಿಕಾರ ಹಾಗೂ ಪ್ರಾತಿನಿಧ್ಯವನ್ನು ಕಸಿದುಕೊಳ್ಳುವ ಸರ್ಕಾರದ ಪ್ರಯತ್ನವನ್ನು ವಿರೋಧ ಪಕ್ಷ ಸೋಲಿಸುತ್ತದೆ ಎಂದು ರಾಹುಲ್ ಹೇಳಿದರು.

ಬಾಲಾಕೋಟ್ ದಾಳಿ, ನೋಟು ರದ್ದತಿ ಮತ್ತು ಆಪರೇಷನ್ ಸಿಂಧೂರ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಮೋದಿ ಅವರನ್ನು ರಾಹುಲ್ ಟೀಕಿಸಿದರು. ಈ ಮಾತಿಗೆ ಆಡಳಿತ ಪಕ್ಷದ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರಾಹುಲ್ ಹೇಳಿಕೆಯನ್ನು ಕಡತದಿಂದ ತೆಗೆದು ಹಾಕಬೇಕು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಆಗ್ರಹಿಸಿದರು. ಭಾರತದ ಜನರನ್ನು ರಾಹುಲ್ ಅವಮಾನಿಸಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಹುಲ್, 'ಬಿಜೆಪಿ ನಾಯಕರ ಮನಸ್ಸಿನಲ್ಲಿ ಮೂಲಭೂತ ಗೊಂದಲವಿದೆ. ಅವರು ತಾವೇ ಭಾರತ ಎಂದು ಭಾವಿಸುತ್ತಿದ್ದಾರೆ. ಆದರೆ, ಅವರು ಭಾರತವಲ್ಲ. ಭಾರತದ ಜನರು ಬೇರೆಯೇ ಆಗಿದ್ದಾರೆ. ತಾವೇ ಸಶಸ್ತ್ರ ಪಡೆಗಳೆಂದು ಬಿಜೆಪಿ ನಾಯಕರು ಭಾವಿಸಿದ್ದಾರೆ, ಅವರು ಅಲ್ಲ. ಅವರದ್ದು ಒಂದು ರಾಜಕೀಯ ಸಂಘಟನೆ. ನಾವು ಭಾರತದ ಜನರ ಮೇಲೆ ಅಥವಾ ಸಶಸ್ತ್ರ ಪಡೆಗಳ ಮೇಲೆ ದಾಳಿ ಮಾಡುತ್ತಿಲ್ಲ. ನಾವು ಬಿಜೆಪಿ ನಾಯಕರ ಮೇಲೆ ದಾಳಿ ಮಾಡುತ್ತಿದ್ದೇವೆ. ಜನರ ಹಿಂದೆ ಅಡಗಿಕೊಳ್ಳುವುದನ್ನು ನಿಲ್ಲಿಸಿ ಮತ್ತು ಚರ್ಚೆಗೆ ಬನ್ನಿ' ಎಂದು ಸವಾಲು ಎಸೆದರು.

ಸ್ಟಾಲಿನ್ ನಿಲುವು ದಕ್ಷಿಣ ಭಾರತದ ಅಭಿಪ್ರಾಯವಲ್ಲ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇರಿಸಿರುವ ಹೆಜ್ಜೆ ಐತಿಹಾಸಿಕ ಎಂದು ಬಣ್ಣಿಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, 'ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ಪಕ್ಷಗಳ ವಾದಗಳು ಭಯ ಹುಟ್ಟಿಸುವ ರೀತಿಯಲ್ಲಿವೆ' ಎಂದು ಕಳವಳ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಶುಕ್ರವಾರ ಮಹಿಳಾ ಮೀಸಲು ಮಸೂದೆಯನ್ನು ಬೆಂಬಲಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಸುಧಾರಣೆಗಳಿಗೆ ವ್ಯವಸ್ಥಿತವಾಗಿ ತಡೆಯೊಡ್ಡುತ್ತಿದೆ. ಈ ಮಸೂದೆಯನ್ನು ಬೆಂಬಲಿಸುವುದನ್ನು ಬಿಟ್ಟು ಜನರನ್ನು ದಾರಿತಪ್ಪಿಸುವ ಸಂಕಥನಗಳನ್ನು ಸೃಷ್ಟಿಸುತ್ತಿದೆ. ಕಾಂಗ್ರೆಸ್ ಸೃಷ್ಟಿಸುತ್ತಿರುವ ಗೊಂದಲಗಳಿಗೆ ಅರ್ಥವಿಲ್ಲ. ಅವುಗಳನ್ನು ಜನರು ನಂಬುವುದಿಲ್ಲ' ಎಂದರು.

ಮಸೂದೆಯ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತೆಗೆದುಕೊಂಡ ನಿಲುವು ದಕ್ಷಿಣದ ಎಲ್ಲ ರಾಜ್ಯಗಳ ಅಭಿಪ್ರಾಯವಲ್ಲ ಎಂದು ಅವರು ಹೇಳಿದರು.

ಕಾಂಗ್ರೆಸ್ ಮತ್ತು ಡಿಎಂಕೆ ಮೈತ್ರಿಯನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ ಅವರು, 'ರಾಹುಲ್ ಗಾಂಧಿ ಅವರು ಕೆಲ ದಿನಗಳ ಹಿಂದೆ, ತಾವು ಸ್ಟಾಲಿನ್ ಅವರ ಕಿರಿಯ ಸಹೋದರ ಎಂದು ಹೇಳಿಕೊಂಡಿದ್ದರು. ಆದರೆ, ವಿಧಾನಸಭೆ ಕ್ಷೇತ್ರಗಳ ಹಂಚಿಕೆ ನಂತರ ಹಿರಿಯ ಸಹೋದರ ಕಿರಿಯ ಸಹೋದರನ ಮೇಲೆ ಮುನಿಸಿಕೊಂಡಂತೆ ಕಾಣುತ್ತಿದೆ. ಆದರೂ ಕಿರಿಯ ಸಹೋದರ ಈಗಲೂ ಹಿರಿಯ ಸಹೋದರನಿಂದ ಪ್ರೀತಿಯನ್ನು ನಿರೀಕ್ಷೆ ಮಾಡುತ್ತಿರುವಂತೆ ತೋರುತ್ತಿದೆ' ಎಂದು ವ್ಯಂಗ್ಯವಾಡಿದರು.

1995ರಲ್ಲಿ ಎಚ್.ಡಿ. ದೇವೇಗೌಡರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಆಶಯವನ್ನು ಪ್ರಪ್ರಥಮ ಬಾರಿಗೆ ಪ್ರಸ್ತಾಪಿಸಿದ್ದರು ಎಂಬುದನ್ನು ಸ್ಮರಿಸಿದ ಅವರು, ದೇವೇಗೌಡರು ಆ ನಂತರ 1996ರಲ್ಲಿ ಪ್ರಧಾನಿಯಾಗಿ ಸಂಸತ್ತಿನಲ್ಲಿ ಈ ಮಹಿಳಾ ಮೀಸಲು ಮಸೂದೆಯನ್ನು ಮಂಡಿಸಿದ್ದರು. ಆದರೆ, ರಾಜಕೀಯ ಬೆಂಬಲದ ಕೊರತೆಯಿಂದಾಗಿ ಮಸೂದೆಗೆ ಅಂಗೀಕಾರ ಸಿಗಲಿಲ್ಲ' ಎಂದರು.

ತಮಿಳುನಾಡು ದೆಹಲಿಯನ್ನು ಸೋಲಿಸಿದೆ: ಸ್ಟಾಲಿನ್

ಚೆನ್ನೈ (ಪಿಟಿಐ): 'ತಮಿಳುನಾಡು ದೆಹಲಿಯನ್ನು ಸೋಲಿಸಿದೆ' ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಶುಕ್ರವಾರ ಹೇಳಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆ ಮತ್ತು ಲೋಕಸಭಾ ಕ್ಷೇತ್ರಗಳನ್ನು ಹೆಚ್ಚಿಸುವ ಮಸೂದೆಯು ಲೋಕಸಭೆಯಲ್ಲಿ ಸೋತಿದ್ದನ್ನು ಉಲ್ಲೇಖಿಸಿ, ಮಸೂದೆಯ ಪ್ರತಿಗಳಿಗೆ ಬೆಂಕಿ ಇಡುವ ಫೋಟೊವನ್ನು ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ಏಪ್ರಿಲ್ 23ರಂದು ದೆಹಲಿ ಮತ್ತು ಅದಕ್ಕೆ ಬೆಂಬಲ ನೀಡುವ ಸೇವಕರ ಅಹಂಕಾರವನ್ನು ಹುಟ್ಟಡಗಿಸುತ್ತೇವೆ' ಎಂದು ಹೇಳಿದ್ದಾರೆ.



ರಾಜ್ಯಸಭೆಯ ಉಪಸಭಾಪತಿ ಆಯ್ಕೆಯ ಸಂದರ್ಭ ಸಭಾನಾಯಕ ಜೆ.ಪಿ. ನಡ್ಡಾ ಅವರು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೆರವಾದರು. ಹರಿವಂಶ್, ಕಿರಣ್ ರಿಜಿಜು, ಎಚ್‌.ಡಿ. ದೇವೇಗೌಡ, ಕುಮಾರಸ್ವಾಮಿ ಇದ್ದಾರೆ

ರಾಜ್ಯಸಭಾ ಉಪಸಭಾಪತಿಯಾಗಿ ಹರಿವಂಶ್ ಪುನರಾಯ್ಕೆ

ನವದೆಹಲಿ (ಪಿಟಿಐ): ನಾಮನಿರ್ದೇಶಿತ ಸದಸ್ಯ ಹರಿವಂಶ್ ಅವರು ರಾಜ್ಯಸಭೆಯ ಉಪಸಭಾಪತಿಯಾಗಿ ಸತತ ಮೂರನೇ ಬಾರಿ ಅವಿರೋಧವಾಗಿ ಶುಕ್ರವಾರ ಆಯ್ಕೆಯಾದರು.

ಸಭಾನಾಯಕ ಜೆ.ಪಿ. ನಡ್ಡಾ ಅವರು ಹರಿವಂಶ್ ಅವರನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡಲು ಸದನದಲ್ಲಿ ನಿರ್ಣಯ ಮಂಡಿಸಿದರು. ಬಿಜೆಪಿಯ ಎಸ್. ಫಾಂಗ್ನೋನ್ ಕೋನ್ಯಾಕ್ ಅನುಮೋದಿಸಿದರು. ಧ್ವನಿಮತದಿಂದ ನಿರ್ಣಯವನ್ನು ಅಂಗೀಕರಿಸಲಾಯಿತು.

ಹರಿವಂಶ್ ಅವರನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡಲು ಒಟ್ಟು ಐದು ನಿರ್ಣಯ ಮಂಡಿಸಲಾಯಿತು.

'ರಾಜ್ಯಸಭೆಯ ಉಪಸಭಾಪತಿಯನ್ನಾಗಿ ಹರಿವಂಶ್ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ನಿರ್ಣಯಗಳನ್ನು ಅಂಗೀಕರಿಸಿದ ನಂತರ ಸಭಾಪತಿ (ಉಪರಾಷ್ಟ್ರಪತಿ) ಸಿ.ಪಿ. ರಾಧಾಕೃಷ್ಣನ್ ಅವರು ಘೋಷಿಸಿದರು.

ನಿರ್ಣಯ ಅಂಗೀಕಾರದ ಸಂದರ್ಭದಲ್ಲಿ ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್ ಪಕ್ಷದ ಸಂಸದರು ದಿಢೀರ್ ಪ್ರತಿಭಟಿಸಿ, ಸಭಾತ್ಯಾಗ ಮಾಡಿದರು.

ಮಹಿಳಾ ಮೀಸಲಾತಿ ಜಾರಿ ಕುರಿತ ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ಕುಟುಕಿದ ಶಶಿ ತರೂರ್

'ಮುಳ್ಳುತಂತಿಯಿಂದ ಸುತ್ತಿದ ಉಡುಗೊರೆ'

ನವದೆಹಲಿ(ಪಿಟಿಐ): 'ಶಾಸನಸಭೆಗಳಲ್ಲಿ ಮೀಸಲಾತಿ ಒದಗಿಸುವ ಮೂಲಕ ದೇಶದ ಮಹಿಳೆಯರಿಗೆ 'ನ್ಯಾಯ'ವೆಂಬ ಉಡುಗೊರೆ ನೀಡುತ್ತಿರುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ. ಆದರೆ, ಮಹಿಳಾ ಮೀಸಲಾತಿ ಅನುಷ್ಠಾನವನ್ನು ಕ್ಷೇತ್ರಗಳ ಮರುವಿಂಗಡಣೆಯೊಂದಿಗೆ ತಳುಕು ಹಾಕಲಾಗಿದೆ. ಹೀಗಾಗಿ, ಮೋದಿಯವರು ಈ ಉಡುಗೊರೆಯನ್ನು ಮುಳ್ಳುತಂತಿಯೊಳಗೆ ಸುತ್ತಿ ಕೊಡುತ್ತಿದ್ದಾರೆ' ಎಂದು ಕಾಂಗ್ರೆಸ್‌ನ ಶಶಿ ತರೂರ್ ಶುಕ್ರವಾರ ಕುಟುಕಿದ್ದಾರೆ.

ಲೋಕಸಭೆಯಲ್ಲಿ ಮಂಡನೆಯಾದ ಮೂರು ಮಸೂದೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳ ಪುನರ್‌ವಿಂಗಡಣೆಯು 'ರಾಜಕೀಯ ಅಮಾನ್ಯೀಕರಣ'ವೇ ಆಗಿದೆ' ಎಂದು ಟೀಕಿಸಿದರು.

> ಕ್ಷೇತ್ರಗಳ ಮರುವಿಂಗಡಣೆ ಕುರಿತ ಯಾವುದೇ ಪ್ರಯತ್ನವು ಹಲವು ತೊಡಕುಗಳಿಂದ ತುಂಬಿರಲಿದ್ದು, ಅದು ದೇಶದ ಒಕ್ಕೂಟ ವ್ಯವಸ್ಥೆಯನ್ನು ಹಾಳುವ ಮಾಡುವ ಅಪಾಯವಿದೆ
> **ಶಶಿ ತರೂರ್,** ಕಾಂಗ್ರೆಸ್ ಸಂಸದ

'ಕ್ಷೇತ್ರಗಳ ಮರುವಿಂಗಡಣೆ ಕಾರ್ಯವನ್ನು ಮುಂದೂಡಬೇಕು. ಇಂತಹ ಕ್ರಮಗಳ ಮೂಲಕ 'ಹೊಸ ಭಾರತ'ದತ್ತ ಕೈಗೊಳ್ಳುವ ನಮ್ಮ ಪಯಣವು ಭಾರತವನ್ನು ಅಸಂಘಟಿತ ರಾಷ್ಟ್ರವನ್ನಾಗಿಸಬಾರದು' ಎಂದು ಪ್ರತಿಪಾದಿಸಿದರು.

'ಕ್ಷೇತ್ರಗಳ ಮರುವಿಗಂಡಣೆ ಅನೇಕ ವಿಚಾರಗಳನ್ನು ಒಳಗೊಂಡಿದೆ. ಈ ಕುರಿತು ಎಲ್ಲ ರಾಜ್ಯಗಳು, ರಾಜಕೀಯ ಪಕ್ಷಗಳು, ನಾಗರಿಕ ಸಂಘಟನೆಗಳು ಸೇರಿ ಎಲ್ಲ ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆ ಅಗತ್ಯ. ಈ ವಿಚಾರದಲ್ಲಿ ಅವಸರ ಸಲ್ಲ' ಎಂದರು.

'ಕ್ಷೇತ್ರಗಳ ಮರುವಿಂಗಡಣೆ ಎಲ್ಲ ರಾಜ್ಯಗಳ ಹಿತಾಸಕ್ತಿಗಳನ್ನು ರಕ್ಷಿಸುವಂತಿರಬೇಕು. ಇದಕ್ಕಾಗಿ ಜಂಟಿ ಸಂಸದೀಯ ಸಮಿತಿ ರಚನೆ, ಮಸೂದೆಯ ಕ್ರಮಬದ್ಧ ಪರಿಶೀಲನೆ ಸೇರಿ ಎಲ್ಲ ಕಾರ್ಯವಿಧಾನಗಳನ್ನು ಅನುಸರಿಸಬೇಕು' ಎಂದೂ ತರೂರ್ ಆಗ್ರಹಿಸಿದರು.

'ದೇವಿ ಕಾಳಿಯ ಬಣ್ಣ ಕಪ್ಪು...'

ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ತರುವುದನ್ನು ವಿರೋಧಿಸಿ ತಮಿಳುನಾಡಿನಲ್ಲಿ ಡಿಎಂಕೆ ಕೈಗೊಂಡಿದ್ದ ಪ್ರತಿಭಟನೆ ಕುರಿತು ಟೀಕಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಕ್ಷದ ಸದಸ್ಯೆ, ಸಂಸದೆ ಕನಿಮೊಳಿ ಅವರು ತಿರುಗೇಟು ನೀಡಿದ ಪ್ರಸಂಗ ಲೋಕಸಭೆಯಲ್ಲಿ ಶುಕ್ರವಾರ ನಡೆಯಿತು.

ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ವಿರೋಧಿಸಿ ಡಿಎಂಕೆ ನಡೆಸಿದ್ದ ಪ್ರತಿಭಟನೆ ಪ್ರಸ್ತಾಪಿಸಿದ ಮೋದಿ,'ಯಾವುದೇ ಒಳ್ಳೆಯ ಕೆಲಸ ಆರಂಭಿಸುವ ಮುನ್ನ ದೃಷ್ಟಿ ಬೊಟ್ಟು (ಕಾಲಾ ಟೀಕಾ) ಇಡುವ ಸಂಪ್ರದಾಯ ಇದೆ. ಡಿಎಂಕೆ ಮುಖಂಡರು ಹಾಗೂ ಕಾರ್ಯಕರ್ತರು ಕಪ್ಪು ಬಟ್ಟೆ ಧರಿಸಿ ಪ್ರತಿಭಟಿಸಿದ್ದಾರೆ. ಇದು ಮಹಿಳಾ ಮೀಸಲಾತಿ ಕಾಯ್ದೆ ಅನುಷ್ಠಾನಕ್ಕೆ ಕೆಟ್ಟ ದೃಷ್ಟಿ ತಾಗದಂತೆ ಮಾಡಲಿದೆ' ಎಂದು ವಿಪಕ್ಷಗಳಿಗೆ ತಿವಿದಿದ್ದರು.

ಮಸೂದೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಕನಿಮೊಳಿ, 'ದೇವಿ ಕಾಳಿಯ ಬಣ್ಣವೂ ಕಪ್ಪು. ಹಿಂದುತ್ವವನ್ನು ಸಮರ್ಥಿಸುವ ನಾಯಕರಿಗೆ ದೇವಿ ಕಾಳಿಯ ನೆನಪಿಲ್ಲ ಎಂಬುದು ಆಶ್ಚರ್ಯ ತರುತ್ತದೆ' ಎಂದು ತಿರುಗೇಟು ನೀಡಿದರು.

'ಡಿಎಂಕೆಯ ಬೌದ್ಧಿಕ ನಾಯಕ ಪೆರಿಯಾರ್ ಅವರ ಬಣ್ಣವೂ ಕಪ್ಪು. ಅವರು ನ್ಯಾಯ ಸಿಗುವವರೆಗೆ ಹೋರಾಡುವುದನ್ನು ನಮಗೆ ಕಲಿಸಿದ್ದಾರೆ. ಈ ವಿಚಾರವಾಗಿ ತಮಿಳುನಾಡು ಕೊನೆಯವರೆಗೂ ಹೋರಾಡಲಿದೆ' ಎಂದು ಗುಡುಗಿದರು.

ಎನ್‌ಡಿಎ ನಡೆಗೆ 'ಇಂಡಿಯಾ' ಬೇಲಿ

ಒಂದನೇ ಪುಟದಿಂದ...

ಮುಜುಗರ ತಪ್ಪಿಸಿಕೊಳ್ಳಲು ಸರ್ಕಾರದ ಮುಂದೆ ಮೂರು ಆಯ್ಕೆಗಳಿದ್ದವು– ಮಸೂದೆಯನ್ನು ಹೆಚ್ಚಿನ ಚರ್ಚೆಗಾಗಿ ಸಂಸದೀಯ ಸಮಿತಿಗೆ ಕಳುಹಿಸುವುದು ಅಥವಾ ಮಸೂದೆಯನ್ನು ಹಿಂತೆಗೆದುಕೊಳ್ಳುವುದು ಅಥವಾ ವಿಪಕ್ಷಗಳ ಸದಸ್ಯರು ಗೈರಾಗುವಂತೆ ನೋಡಿಕೊಳ್ಳುವುದು.

ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ವಿಧಾನಸಭೆಗಳ ಚುನಾವಣೆಗೆ ಕೆಲವೇ ದಿನಗಳು ಉಳಿದಿರುವಾಗ, 'ಇಂಡಿಯಾ ಬಣವು ಮಹಿಳಾ ವಿರೋಧಿ' ಎಂಬ ಸಂಕಥನ ಸೃಷ್ಟಿಸುವ ಮಾರ್ಗವನ್ನು ಬಿಜೆಪಿ ಆಯ್ದುಕೊಂಡಿತು. ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಅಡೆತಡೆಗಳನ್ನು ಸೃಷ್ಟಿಸುತ್ತಿದೆ ಎಂದು ಆರೋಪಿಸಿತು.

'ವಿರೋಧಿಸುವವರು ಮಹಿಳಾ ಮತದಾರರ ಕೋಪ ಎದುರಿಸಬೇಕಾಗುತ್ತದೆ' ಎಂದು ಗೃಹ ಸಚಿವ ಅಮಿತ್ ಶಾ ಎಚ್ಚರಿಸಿದರು. 'ಮಸೂದೆ ಅಂಗೀಕಾರದ ಶ್ರೇಯಸ್ಸು ನೀವೇ ಪಡೆದುಕೊಳ್ಳಿ. ನಾನು ಖಾಲಿ ಚೆಕ್ ನೀಡುತ್ತೇನೆ' ಎಂದು ಮೋದಿ ಓಲೈಸಿದರು. ಶಾ ಅವರದ್ದು ಅದಕ್ಕೆ ವಿಭಿನ್ನ ಮಾರ್ಗ. ಮಸೂದೆಗೆ ಸೋಲಾಗುವುದು ಖಚಿತವಾಗುತ್ತಿದ್ದಂತೆ ವಿಪಕ್ಷಗಳ ವಿರುದ್ಧ ಹೆಚ್ಚು ಆಕ್ರಮಣಕಾರಿಯಾದರು.

ಅಪರೂಪದ ಒಗ್ಗಟ್ಟು ಪ್ರದರ್ಶಿಸಿದ ಇಂಡಿಯಾ ಮೈತ್ರಿಕೂಟವು ಈ ಮಸೂದೆಯನ್ನು ಸೋಲಿಸಿಯೇ ತಿರುವುದಾಗಿ ಅಧಿವೇಶನಕ್ಕೆ ಮುನ್ನವೇ ಶಪಥ ಮಾಡಿತ್ತು. ನವದೆಹಲಿಯಲ್ಲಿ ಮಂಗಳವಾರ ನಡೆದ ವಿರೋಧ ಪಕ್ಷದ ಸಭೆಯಲ್ಲಿ ರಾಹುಲ್ ಗಾಂಧಿ, 'ಮತದಾನದಿಂದ ಗೈರಾಗುವುದು ಎಂದರೆ ಪರೋಕ್ಷವಾಗಿ ಮಸೂದೆಯನ್ನು ಅಂಗೀಕರಿಸಲು ಬಿಜೆಪಿಗೆ ಸಹಾಯ ಮಾಡಿದಂತೆ' ಎಚ್ಚರಿಸಿದ್ದು ವಿರೋಧ ಪಕ್ಷಗಳನ್ನು ಹುರಿದುಂಬಿಸಿತು.

ಪ್ರಚಾರದಲ್ಲಿ ನಿರತರಾಗಿರುವ ಟಿಎಂಸಿಯ 28 ಸಂಸದರು ಸದನಕ್ಕೆ ಹಾಜರಾಗಲು ಮತ್ತು ಮತದಾನದಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆಯೇ ಎಂಬುದು ವಿಪಕ್ಷ ಕೂಟದಲ್ಲಿ ಕಳವಳಕ್ಕೆ ಕಾರಣವಾಗಿತ್ತು. ಮಮತಾ ಬ್ಯಾನರ್ಜಿ ಅವರ ನಿರ್ಣಾಯಕ ಬೆಂಬಲ ಪಡೆಯುವಲ್ಲಿ ರಾಹುಲ್ ಜಾಣ್ಮೆ ತೋರಿದರು. ಜತೆಗೆ, ಇನ್ನೆರಡು ಗಂಟೆಗಳಲ್ಲಿ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸೋಲಿಸಿಯೇ ತೀರುತ್ತೇವೆ ಎಂದು ಸದನದಲ್ಲಿ ಅಬ್ಬರಿಸಿದರು.

ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಘೋರ ಅನ್ಯಾಯವಾಗಲಿದೆ ಎಂದು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಎಚ್ಚರಿಸಿದರು. ಇದಕ್ಕೆ ಮೈತ್ರಿಕೂಟದ ನಾಯಕರು ಧ್ವನಿಗೂಡಿಸಿದರು. ಮಹಿಳಾ ಮೀಸಲಾತಿ ಮಸೂದೆಯಲ್ಲಿ ಹಿಂದುಳಿದ ವರ್ಗದವರಿಗೆ ಕೋಟಾ ನೀಡಬೇಕು ಎಂದು ಸಮಾಜವಾದಿ ಪಕ್ಷ ಪಟ್ಟು ಹಿಡಿಯಿತು. 2027ರ ಆರಂಭದಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಹೀಗಾಗಿ, ಬಿಜೆಪಿ ವಿರುದ್ಧ ಅಖಿಲೇಶ್ ಯಾದವ್ ದಾಳಿಯನ್ನು ತೀವ್ರಗೊಳಿಸಿದರು. ಚುನಾವಣಾ ಪ್ರಚಾರದ ಸಂದರ್ಭದಲ್ಲೇ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಮಸೂದೆಯ ಪ್ರತಿ ಸುಟ್ಟು ಆಕ್ರೋಶ ಹೊರ ಹಾಕಿದರು. ದಕ್ಷಿಣದ ರಾಜ್ಯಗಳಿಗೆ ಆಗುವ ಅನ್ಯಾಯ ಸಹಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು. ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆ ಆಗುವುದಿಲ್ಲ ಎಂದು ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ಕೊಟ್ಟರು.

ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆಯ ಸೋಲಿಗೆ ಏನು ಕಾರಣ?

- ಮಸೂದೆಯ ದೋಷ
- ಮೀಸಲಾತಿ ಜಾರಿ ಬಗ್ಗೆ ಅಸ್ಪಷ್ಟತೆ
- ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಚನ್ನಿ ವಿರುದ್ಧದ ತನಿಖೆಗೆ ಅನುಮತಿ ಕೇಳಿದ ದಳ

ಚಂಡೀಗಢ (ಪಿಟಿಐ): ಗೋವಾದಲ್ಲಿನ ಸರ್ಕಾರಿ ಆಸ್ತಿಯನ್ನು ಅಗ್ಗದ ದರಕ್ಕೆ ಭೋಗ್ಯಕ್ಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ, ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ವಿರುದ್ಧ ತನಿಖೆ ನಡೆಸಲು ಪಂಜಾಬ್ ವಿಚಕ್ಷಣ ದಳವು ರಾಜ್ಯ ಸರ್ಕಾರದಿಂದ ಅನುಮತಿ ಕೇಳಿದೆ.

'ಮರುವಿಂಗಡಣೆಯಿಂದ ದೇಶ ಛಿದ್ರ'

ಕೂಚ್ ಬೆಹಾರ್ (ಪಶ್ಚಿಮ ಬಂಗಾಳ) (ಪಿಟಿಐ): ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕ್ಷೇತ್ರಗಳ ಮರುವಿಂಗಡಣೆ ಮಸೂದೆಯನ್ನು ಅಂಗೀಕರಿಸುವುದಕ್ಕಾಗಿ ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ವಿಚಾರವನ್ನು ಒಂದು ನೆಪವಾಗಿ ಬಳಸುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರ ಆರೋಪಿಸಿದ್ದಾರೆ.

'ಬಿಜೆಪಿಯು ಕ್ಷೇತ್ರ ಮರುವಿಂಗಡಣೆ ಮಸೂದೆ ಮೂಲಕ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು 850ಕ್ಕೆ ಹೆಚ್ಚಿಸಲು ಯತ್ನಿಸುತ್ತಿದೆ. ಇಂತಹ ಯಾವುದೇ ಪ್ರಯತ್ನವು ದೇಶವನ್ನು ತುಂಡುತುಂಡಾಗಿ ವಿಭಜಿಸುತ್ತದೆ' ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು,'ಕೇಂದ್ರ ಸರ್ಕಾರದ ಈ ಪ್ರಯತ್ನವನ್ನು ಟಿಎಂಸಿ ವಿರೋಧಿಸಲಿದೆ' ಎಂದು ಎಚ್ಚರಿಸಿದರು.

ರಾಹುಲ್ ವಿರುದ್ಧ ಅಲಹಾಬಾದ್ ಹೈಕೋರ್ಟ್‌ನಿಂದ ನಿರ್ದೇಶನ

ದ್ವಿಪೌರತ್ವ ವಿವಾದ; ಎಫ್‌ಐಆರ್ ದಾಖಲಿಸಿ

ಲಖನೌ (ಪಿಟಿಐ): ದ್ವಿಪೌರತ್ವ ವಿವಾದಕ್ಕೆ ಸಂಬಂಧಿಸಿದಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಶುಕ್ರವಾರ ಆದೇಶಿಸಿದೆ.

ಎಫ್‌ಐಆರ್ ದಾಖಲಾದ ನಂತರ ರಾಜ್ಯ ಸರ್ಕಾರವು ಈ ಪ್ರಕರಣದ ತನಿಖೆ ನಡೆಸಲು ಕೇಂದ್ರದ ತನಿಖಾ ಸಂಸ್ಥೆಗಳ ಸಹಾಯ ಪಡೆಯಬಹುದು ಎಂದು ತಿಳಿಸಿದೆ.

ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಎಸ್. ವಿಘ್ನೇಶ್ ಶಿಶಿರ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಲಖನೌನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈ ವರ್ಷದ ಜನವರಿ 28ರಂದು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಭಾಷ್ ವಿದ್ಯಾರ್ಥಿ ನೇತೃತ್ವದ ನ್ಯಾಯಪೀಠವು ಎಫ್‌ಐಆರ್ ದಾಖಲಿಸುವಂತೆ ಆದೇಶ ನೀಡಿದೆ.

ಪೌರತ್ವದ ವಿಷಯಕ್ಕೆ ಸಂಬಂಧಿಸಿ ತೀರ್ಪು ನೀಡಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಕ್ಷಮ ಪ್ರಾಧಿಕಾರವಲ್ಲ ಎಂದು ಅರ್ಜಿ ವಜಾಗೊಳಿಸಿದ ವೇಳೆ ವಿಚಾರಣಾ ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು.

ರಾಹುಲ್ ಗಾಂಧಿ ದ್ವಿಪೌರತ್ವ ಹೊಂದಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಿಸಿ, ವಿಸ್ತೃತವಾಗಿ ತನಿಖೆ ನಡೆಸುವಂತೆ ಕೋರಿ ಕರ್ನಾಟಕದ ಬಿಜೆಪಿ ಕಾರ್ಯಕರ್ತ ವಿಘ್ನೇಶ್ ಅವರು ಅರ್ಜಿ ಸಲ್ಲಿಸಿದ್ದರು. ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), ಅಧಿಕೃತ ರಹಸ್ಯ ಕಾಯ್ದೆ, ವಿದೇಶಿಯರ ಕಾಯ್ದೆ ಹಾಗೂ ಪಾಸ್‌ಪೋರ್ಟ್ ಕಾಯ್ದೆಯನ್ನು ರಾಹುಲ್ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದ್ದರು.

ಆರಂಭದಲ್ಲಿ ವಿಘ್ನೇಶ್ ಅವರು ರಾಯ್ ಬರೇಲಿಯಲ್ಲಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ನಂತರ ಅರ್ಜಿದಾರರು ಮಾಡಿದ ಮನವಿಯಂತೆ, 2025ರ ಡಿಸೆಂಬರ್ 17ರಂದು ಹೈಕೋರ್ಟ್ ಈ ಪ್ರಕರಣವನ್ನು ಲಖನೌಗೆ ವರ್ಗಾಯಿಸಿತ್ತು. 2026ರ ಜ. 28ರಂದು ಲಖನೌನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಈ ಅರ್ಜಿಯನ್ನು ವಜಾಗೊಳಿಸಿತ್ತು. ಇದಾದ ಬಳಿಕ ಹೈಕೋರ್ಟ್ ಮೆಟ್ಟಿಲೇರಿದ್ದರು.

2023ರ ಕಾಯ್ದೆ ಜಾರಿಗೆ ಏ.16ರಂದು ಅಧಿಸೂಚನೆ ಪ್ರಕಟ

ವಿಪಕ್ಷಗಳಿಂದ ಕೇಂದ್ರಕ್ಕೆ ತರಾಟೆ

ನವದೆಹಲಿ(ಪಿಟಿಐ): ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ಕಲ್ಪಿಸಲು 2023ರಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಿದ್ದ ಮಸೂದೆಯ ಜಾರಿಗೆ ಕೇಂದ್ರ ಕಾನೂನು ಸಚಿವಾಲಯ ಏ.16ರಂದು ಅಧಿಸೂಚನೆ ಹೊರಡಿಸಿದೆ. ಇದೇ ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದದ್ದಕ್ಕೆ ಲೋಕಸಭೆ ಶುಕ್ರವಾರ ಸಾಕ್ಷಿಯಾಯಿತು.

ಕಲಾಪ ಆರಂಭಗೊಳ್ಳುತ್ತಿರುವಂತೆಯೇ ಈ ವಿಚಾರ ಪ್ರಸ್ತಾಪಿಸಿ ಕೇಂದ್ರ ಸರ್ಕಾರದ ವಿರುದ್ಧ ಚಾಟಿ ಬೀಸಿದ ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, 'ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ–2026 ಅನ್ನು ಮಂಡನೆ ಮಾಡಲಾಗಿದ್ದು, ಈಗ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ, 2023ರಲ್ಲಿ ಅಂಗೀಕರಿಸಲಾದ ಮಹಿಳಾ ಮೀಸಲಾತಿ ಕಾಯ್ದೆ ಜಾರಿ ಕುರಿತು ಗುರುವಾರ ರಾತ್ರಿ 10ರ ಹೊತ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ' ಎಂದು ತರಾಟೆಗೆ ತೆಗೆದುಕೊಂಡರು.

'ಅಧಿಸೂಚನೆ ಅಗತ್ಯ ಇತ್ತು'

ಇದಕ್ಕೂ ಮುನ್ನ, ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿ ಕಲ್ಪಿಸಲು 2023ರಲ್ಲಿ ಸಂವಿಧಾನಕ್ಕೆ ತರಲಾಗಿದ್ದ ತಿದ್ದುಪಡಿಯ ಕಾಯ್ದೆಯ ಜಾರಿ ಕುರಿತು ಅಧಿಸೂಚನೆ ಹೊರಡಿಸುವ ಅಗತ್ಯದ ಬಗ್ಗೆ ಅಧಿಕಾರಿಯೊಬ್ಬರು ವಿವರಣೆ ನೀಡಿದರು.

'ಯಾವುದೇ ಒಂದು ಕಾನೂನು ಜಾರಿಯೇ ಆಗದಿದ್ದಲ್ಲಿ ಅದಕ್ಕೆ ತಿದ್ದುಪಡಿ ತರುವುದಾದರೂ ಹೇಗೆ? ಈ ಕಾರಣಕ್ಕೆ 2023ರ ಕಾಯ್ದೆ ಏಪ್ರಿಲ್ 16ರಿಂದ ಜಾರಿಗೆ ಬರುವ ಕುರಿತು ಅಧಿಸೂಚನೆ ಹೊರಡಿಸಲಾಗಿದೆ' ಎಂದು ಅಧಿಕಾರಿ ವಿವರಿಸಿದ್ದಾರೆ.

ಇದೇ ವಿಚಾರ ಪ್ರಸ್ತಾಪಿಸಿದ ಡಿಎಂಕೆ ಸಂಸದೆ ಕನಿಮೊಳಿ, 'ಮುಖ್ಯ ಕಾನೂನು ಜಾರಿ ಕುರಿತಂತೆ ಅಧಿಸೂಚನೆ ಹೊರಡಿಸಿದ ಬಳಿಕ, ಅದೇ ಕಾನೂನಿಗೆ ತಿದ್ದುಪಡಿ ತರುವ ಮಸೂದೆ ಕುರಿತು ಚರ್ಚೆ ನಡೆಸುವುದು ಎಷ್ಟು ಸರಿ' ಎಂದು ಅಚ್ಚರಿ ವ್ಯಕ್ತಪಡಿಸಿದರು.

ಈ ಮಾತಿಗೆ ದನಿಗೂಡಿಸಿದ ಕಾಂಗ್ರೆಸ್‌ನ ಸಂಸದ ಹಿಬಿ ಈಡೆನ್, 'ಮಹಿಳಾ ಮೀಸಲಾತಿ ಕಾಯ್ದೆಯನ್ನು ಪಕ್ಷ ಬೆಂಬಲಿಸುತ್ತದೆ. ಆದರೆ, ಇದನ್ನು ಕ್ಷೇತ್ರಗಳ ಮರುವಿಂಗಡಣೆಯೊಂದಿಗೆ ಬೆಸೆಯುವುದಕ್ಕೆ ವಿರೋಧ ಇದೆ' ಎಂದರು.

ಜೆಎಂಎಂನ ಮಹುವಾ ಮಾಜಿ, ಸಿಪಿಐನ ಸಂತೋಷ್ ಕುಮಾರ್, ಟಿಎಂಸಿಯ ಕೀರ್ತಿ ಆಜಾದ್ ಕೂಡ ಸರ್ಕಾರದ ನಡೆ ವಿರುದ್ಧ ಆಕ್ರೋಶ ಹೊರಹಾಕಿದರು.

ಈ ವಿಚಾರ ಕುರಿತು ಕಾನೂನು ಸಚಿವ ಅರ್ಜುನ್ ಮೇಘವಾಲ್ ಅವರು ಸ್ಪಷ್ಟನೆ ನೀಡಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದರು.

ಐತಿಹಾಸಿಕ ಕ್ರಮ–ಬಿಜೆಪಿ: ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ಮಂಡಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸಮರ್ಥನೆ ಮಾಡಿಕೊಂಡ ಬಿಜೆಪಿ ಸದಸ್ಯರು, ಇದೊಂದು ಐತಿಹಾಸಿಕ ನಿರ್ಧಾರ ಎಂದು ಹೇಳಿದರು.

ಮಲಬಾರ್‌ನಿಂದ 'ಆನಿಕ' ವಜ್ರದ ಆಭರಣ ಸಂಗ್ರಹ ಅನಾವರಣ

ಅಕ್ಷಯ ತೃತೀಯ ಅಂಗವಾಗಿ ಬಾಲಿವುಡ್‌ನ ಖ್ಯಾತ ನಟಿ ಕರೀನಾ ಕಪೂರ್ ಖಾನ್‌ರಿಂದ 'ಆನಿಕ' ವಜ್ರದ ಆಭರಣಗಳ ಸಂಗ್ರಹ ಅನಾವರಣ; ಗ್ರಾಹಕರಿಗೆ ವಿನೂತನ ಸೇವೆ ನೀಡಲು ಮಲಬಾರ್ ಸಜ್ಜು

ಬೆಂಗಳೂರು: ಆಭರಣ ಕ್ಷೇತ್ರದಲ್ಲಿ ಸದಾ ಗ್ರಾಹಕರಿಗೆ ವಿನೂತನ ವಿನ್ಯಾಸಗಳ ಮತ್ತು ವಿಶ್ವಾಸಾರ್ಹ ಸೇವೆ ನೀಡುತ್ತಿರುವ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನಿಂದ ಈ ವರ್ಷದ ಅಕ್ಷಯ ತೃತೀಯ ಸಂಭ್ರಮದ ಭಾಗವಾಗಿ 'ಆನಿಕ' ವಜ್ರದ ಆಭರಣ ಅನಾವರಣಗೊಳಿಸಲಾಗಿದೆ. ಬಾಲಿವುಡ್‌ನ ಖ್ಯಾತ ನಟಿ ಕರೀನಾ ಕಪೂರ್ ಖಾನ್ ಸಮ್ಮುಖದಲ್ಲಿ ಈ ಅನಾವರಣ ಕಾರ್ಯಕ್ರಮ ನಡೆದಿದ್ದು, ಗ್ರಾಹಕರು ಈ ಅಕ್ಷಯ ತೃತೀಯವನ್ನು ಅತ್ಯಂತ ಸಂಭ್ರಮದಿಂದ ಸ್ವಾಗತಿಸಬಹುದಾಗಿದೆ. ಪವಿತ್ರ ಸಾಂಪ್ರದಾಯಿಕ ಮತ್ತು ಆಧುನಿಕ ಐಷಾರಾಮಿ ಶೈಲಿಯ ನೈಸರ್ಗಿಕ ವಜ್ರದ ಆಭರಣಗಳ ನೂತನ ಸಂಗ್ರಹವಾದ 'ಆನಿಕ' ಗ್ರಾಹಕರಿಗೆ ಲಭ್ಯವಿರಲಿದೆ. ಆನಿಕ ಸಂಗ್ರಹವು ಭಕ್ತಿ ಮತ್ತು ಸಮೃದ್ಧಿಯ ಪರಿಕಲ್ಪನೆಯನ್ನು ಆಧರಿಸಿದೆ. ದೇವಸ್ಥಾನದ ವಾಸ್ತುಶಿಲ್ಪ, ಪಾವಿತ್ರ್ಯ ಮತ್ತು ಸಂಕೀರ್ಣ ಕೆತ್ತನೆಗಳಿಂದ ಸ್ಫೂರ್ತಿ ಪಡೆದ ಈ ವಿನ್ಯಾಸಗಳು, ಪ್ರಾಚೀನ ಪರಂಪರೆಯನ್ನು ಇಂದಿನ ಆಧುನಿಕ ಮಹಿಳೆಯರಿಗೆ ಒಪ್ಪುವಂತೆ ರೂಪಿಸಲಾಗಿದೆ. ಈ ಆಭರಣಗಳಲ್ಲಿ ವಿಶೇಷವಾಗಿ ಪುರಾತನ ಗೋಪುರಗಳು ಮತ್ತು ಅಲಂಕಾರಿಕ ಮಾದರಿಗಳನ್ನು ಸುಂದರವಾದ ಮತ್ತು ಧರಿಸಲು ಯೋಗ್ಯವಾದ ಆಧುನಿಕ ಶೈಲಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಜತೆಗೆ, ಈ ಸಂಗ್ರಹದಲ್ಲಿ ಆಕರ್ಷಕ ನೆಕ್ಲೇಸ್‌ಗಳು, ಕಲಾತ್ಮಕ ಕಿವಿಯೋಲೆಗಳು, ಸಾಂಪ್ರದಾಯಿಕ ಕಡಗಗಳು ಮತ್ತು ಬಳೆಗಳು ಸೇರಿವೆ. ಪ್ರತಿಯೊಂದು ಆಭರಣವೂ ವಿಶೇಷವಾಗಿ ಪಡೆಯಲಾದ ನೈಸರ್ಗಿಕ ವಜ್ರಗಳಿಂದ ಕೂಡಿದ್ದು, ಗ್ರಾಹಕರಿಗೆ ಹೊಸ ಮೆರುಗನ್ನು ನೀಡಲಿದೆ.

ಗ್ರಾಹಕರ ವಿಶ್ವಾಸವನ್ನು ಹೆಚ್ಚಿಸಲು, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಈ ಸಂಗ್ರಹದೊಂದಿಗೆ ಕೆಲವು ವಿಶೇಷ ಭರವಸೆಗಳನ್ನು ನೀಡುತ್ತಿದೆ. ಪ್ರತಿಯೊಂದು ವಜ್ರವು ಪಾರದರ್ಶಕ ವಿವರಗಳೊಂದಿಗೆ ಅಂತರಾಷ್ಟ್ರೀಯ ಮಟ್ಟದ ಪ್ರಮಾಣಪತ್ರವನ್ನು ಹೊಂದಿರುತ್ತದೆ. ಪ್ರತಿ ಖರೀದಿಯ ಮೇಲೆ ಜೀವಮಾನದ ನಿರ್ವಹಣಾ ಬೆಂಬಲವಿರುತ್ತದೆ. ಬ್ರ್ಯಾಂಡ್ ವತಿಯಿಂದ ಗ್ಯಾರಂಟಿ ಬೈಬ್ಯಾಕ್ ಮತ್ತು ಚಿನ್ನದ ಆಭರಣಗಳ ಮೇಲೆ 100% ಎಕ್ಸ್‌ಚೇಂಜ್ ಮೌಲ್ಯವನ್ನು ನೀಡಲಾಗುತ್ತದೆ.

ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ.ಅಹಮದ್ ಮಾತನಾಡಿ, ಆನಿಕ ಸಂಗ್ರಹವು ಇಂದಿನ ಗ್ರಾಹಕರ ಆಕಾಂಕ್ಷೆಗಳಿಗೆ ಅನುಗುಣವಾಗಿ ವಿಕಸನಗೊಳ್ಳುತ್ತಿರುವ ನಮ್ಮ ಪರಂಪರೆಯನ್ನು ಸಂರಕ್ಷಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ನೈಸರ್ಗಿಕ ವಜ್ರಗಳ ಮೇಲೆ ಹೆಚ್ಚಿನ ಗಮನ ಹರಿಸಿರುವ ಈ ಸಂಗ್ರಹವು ಅಪರೂಪತೆ, ನೈಜತೆ ಮತ್ತು ಕಲಾತ್ಮಕತೆಯನ್ನು ಒಳಗೊಂಡಿದೆ. ಆನಿಕ ಸಂಗ್ರಹವು ಕೇವಲ ಸೌಂದರ್ಯಕ್ಕೆ ಸೀಮಿತವಾಗದೆ, ಮಲಬಾರ್ ಸಂಸ್ಥೆಯ ಸಾಮಾಜಿಕ ಜವಾಬ್ದಾರಿಯನ್ನೂ ಎತ್ತಿ ತೋರಿಸುತ್ತದೆ. ಸಂಸ್ಥೆಯು ತನ್ನ ಲಾಭದ 5% ರಷ್ಟನ್ನು ಇಎಸ್‌ಜಿ ಚಟುವಟಿಕೆಗಳಿಗೆ ಮೀಸಲಿಡುತ್ತಿದ್ದು, ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣೆ ಮತ್ತು ಮಹಿಳಾ ಸಬಲೀಕರಣದಂತಹ ಕಾರ್ಯಗಳಿಗೆ ನೆರವಾಗುತ್ತಿದೆ. ಆನಿಕ ಸಂಗ್ರಹವು ಎಲ್ಲಾ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಶೋರೂಂಗಳಲ್ಲಿ ಲಭ್ಯವಿದೆ ಎಂದರು.ಬೆಳೆದಿದೆ. 14 ದೇಶಗಳಲ್ಲಿ 425ಕ್ಕೂ ಹೆಚ್ಚು ಶೋರೂಂಗಳನ್ನು ಹೊಂದಿರುವ ಈ ಸಂಸ್ಥೆಯು ತನ್ನ ಲಾಭದ 5% ರಷ್ಟನ್ನು ಸಮಾಜ ಸೇವಾ ಚಟುವಟಿಕೆಗಳಿಗೆ ಮೀಸಲಿಡುತ್ತಿದೆ.

ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ 'ಆನಿಕಾ' ವಜ್ರದ ಆಭರಣ ಸಂಗ್ರಹವನ್ನು ಬಾಲಿವುಡ್ ಖ್ಯಾತ ನಟಿ ಕರೀನಾ ಕಪೂರ್ ಖಾನ್ ಅನಾವರಣಗೊಳಿಸಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಮನೆಗೆಲಸ ಮನೆಯ ಎಲ್ಲರದು

ಎಲ್ಲ ಕ್ಷೇತ್ರಗಳೂ ಕಾಲಕ್ಕೆ ತಕ್ಕಂತೆ ಬದಲಾಗಿವೆ. ಆದರೆ ಮನೆಗೆಲಸದ ವಿಷಯ ಮಾತ್ರ ಕೆಟ್ಟು ಹೋದ ಗಡಿಯಾರದಂತೆ ನಿಂತಲ್ಲೇ ನಿಂತುಬಿಟ್ಟಿದೆ! ಮನೆಗೆ ಸೀಮಿತಳಾಗಿದ್ದರೂ ಸರಿ, ಹೊರಗೆ ಹೋಗಿ ಗಂಡಿನ ಸಮಸಮಕ್ಕೆ ದುಡಿಯುತ್ತಿದ್ದರೂ ಸರಿ, ಮನೆಗೆಲಸ ಮಾತ್ರ ಆಕೆಗೆ ಕಟ್ಟಿಟ್ಟಬುತ್ತಿ. ಈ ಅಲಿಖಿತ ನಿಯಮಕ್ಕೆ ಬ್ರೇಕ್ ನೀಡುವಂತಿದೆ, ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪು.

• ಡಾ. ಕೆ.ಎಸ್.ಚೈತ್ರಾ

'ಎಷ್ಟು ಒಳ್ಳೆಯ ಸಂಬಂಧ ಬಂದಿತ್ತು! ನಮ್ಮ ಮಗಳಂತೆ ಅವನೂ ಎಂಜಿನಿಯರ್. ಜೊತೆಗೆ ಸುಂದರ, ಶ್ರೀಮಂತ. ಅದೇನೋ ಅವನ ಜತೆ ಮಾತನಾಡಿದ್ದೇ ಬೇಡ ಅಂದುಬಿಟ್ಟಳು'. ತಂದೆ ತಾಯಿ ಬಹಳ ಬೇಸರದಲ್ಲಿದ್ದರು. ಮಗಳು ಹೇಳಿದ್ದಿಷ್ಟೇ– ಪತ್ನಿಯಿಂದ ನಿನ್ನ ನಿರೀಕ್ಷೆ ಏನೆಂದು ಕೇಳಿದರೆ, 'ಸಿಂಪಲ್... ರುಚಿಯಾದ ಅಡುಗೆ, ಅಚ್ಚುಕಟ್ಟಾದ ಮನೆ' ಎಂಬ ಉತ್ತರ ಬಂತು. ಈಗಾಗಲೇ ಅಮ್ಮ-ಅಜ್ಜಿಯರನ್ನು ನೋಡಿದ್ದಾಗಿದೆ. ಎಷ್ಟು ಮಾಡಿದರೂ ಮುಗಿಯದ, ಹೊತ್ತು ಗೊತ್ತಿಲ್ಲದ, ಎಂದೆಂದಿಗೂ ನಿವೃತ್ತಿ ಸಿಗದ, ದುಡ್ಡು- ಮನ್ನಣೆ ಇರದ ಯಾಂತ್ರಿಕ ದುಡಿತ ಈ ಮನೆಗೆಲಸ. ನಾನು ಓದಿದ್ದೇನೆ, ಕೆಲಸದಲ್ಲಿದ್ದೇನೆ. ಮದುವೆ ಇಬ್ಬರಿಗೆ, ಮನೆಗೆಲಸ ಮಾತ್ರ ನನಗೆ. ಆ ಸುಖಕ್ಕೆ ಮದುವೆ ಯಾಕಾಗಬೇಕು? ಅವನಿಗೆ ಬೇಕಾದದ್ದು ಮ್ಯಾರೇಜ್ ಅಲ್ಲ ಮೇಯ್ಡ್ ಸರ್ವಿಸ್. ನನಗಿದು ಒಪ್ಪಿಗೆ ಇಲ್ಲ!' ಎಂಬ ಸ್ಪಷ್ಟ ನುಡಿ. ಹೆಣ್ಣು ಅಂದ ಮೇಲೆ ಮನೆಗೆಲಸ ಮಾಡಲೇಬೇಕಲ್ಲವೇ, ತಪ್ಪೇನಿದೆ ಎನ್ನುವ ವಾದ ಅವಳ ಅಪ್ಪ-ಅಮ್ಮನದ್ದು!

***

ಮಗನಿಗೆ ಮದುವೆಯಾಗಿ ವರ್ಷವಾಗಿದೆ. ಊರಿಂದ ಅಪ್ಪ-ಅಮ್ಮ ಬಂದಿದ್ದಾರೆ. ಮಗ, ಸೊಸೆ ಇಬ್ಬರಿಗೂ ಕೆಲಸಕ್ಕೆ ಓಡುವ ಗಡಿಬಿಡಿ. ಸೊಸೆ ಅಡುಗೆ ಮಾಡುವಾಗ ಮಗ ಪಾತ್ರೆ ತೊಳೆದರೆ ಅತ್ತೆಗೆ ಸಿಟ್ಟು. ತನ್ನ ಮಗ ಗಂಡಸಾಗಿ ಮನೆಗೆಲಸ ಮಾಡುವ ಹಾಗಾಯಿತಲ್ಲ ಎಂದು ದುಃಖ.

ಅರೆ, ಇದೆಲ್ಲ ಅಂದಕಾಲತ್ತಿಲ್ ಕತೆ, ಈಗ ಪರಿಸ್ಥಿತಿ ಸುಧಾರಿಸಿದೆ ಎನ್ನುವುದು ಭಾಗಶಃ ಸತ್ಯ. ಕಾಲ ಬದಲಾಗಿದೆ, ಆಧುನಿಕ ಮಹಿಳೆಯ ಬದುಕು ಉದ್ಯೋಗ- ಕುಟುಂಬ ಎರಡನ್ನೂ ಒಳಗೊಂಡಿದೆ. ಹೆಚ್ಚು ಹೆಚ್ಚು ಮಹಿಳೆಯರು ಉದ್ಯೋಗಸ್ಥರಾಗಿದ್ದಾರೆ, ಆರ್ಥಿಕವಾಗಿಯೂ ಸ್ವಾವಲಂಬಿಗಳಾಗಿದ್ದಾರೆ. ಹಾಗಾಗಿ, ಖಂಡಿತವಾಗಿ ಸುಧಾರಣೆಯ ಗಾಳಿ ಬೀಸುತ್ತಿದೆ. ಇಂದಿನ ದಿನಗಳಲ್ಲಿ ಮಹಿಳೆ- ಪುರುಷ ಇಬ್ಬರೂ ದುಡಿಯುವುದು ಅನಿವಾರ್ಯ. ಅಂದರೆ ಆರ್ಥಿಕ ಜವಾಬ್ದಾರಿಯನ್ನೂ ಮಹಿಳೆ ಹೊತ್ತಿದ್ದಾಳೆ. ಆದರೆ ಮನೆಗೆಲಸ? ಅದು ಮಹಿಳೆಯ ಮೂಲಭೂತ ಜವಾಬ್ದಾರಿ ಎಂಬ ಅಲಿಖಿತ ನಿಯಮ ಇಂದಿಗೂ ಜಾರಿಯಲ್ಲಿದೆ.

ಹಿಂದಿನ ವರ್ಷವಷ್ಟೇ ನಡೆದ ಸಮೀಕ್ಷೆಯೊಂದರ ಪ್ರಕಾರ, ಮಹಿಳೆಯರು ಸರಿಸುಮಾರು ನಾಲ್ಕು ಗಂಟೆ ಮನೆಗೆಲಸದಲ್ಲಿ ತೊಡಗಿಕೊಂಡರೆ, ಪುರುಷರ ಕೊಡುಗೆ ಬರೀ ಇಪ್ಪತ್ನಾಲ್ಕು ನಿಮಿಷ! ಅಷ್ಟಾದರೂ ಜನ ಈ ವಿಷಯವಾಗಿ ಕೋರ್ಟ್‌ಗೂ ಹೋಗುತ್ತಿದ್ದಾರೆ! ಉದಾಹರಣೆಗೆ, ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುವ ದಂಪತಿಗೆ ಸಂಬಂಧಿಸಿದ ಇತ್ತೀಚಿನ ಪ್ರಕರಣ.

ಪತ್ನಿ ಅಡುಗೆ ಮಾಡುತ್ತಿಲ್ಲ; ಅನುಚಿತವಾಗಿ ವರ್ತಿಸುತ್ತಿದ್ದಾಳೆ ಎಂದು, ಮದುವೆಯಾಗಿ ಎರಡು ವರ್ಷದ ನಂತರ ಪತಿಯು ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಇದೇ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ 'ಪತ್ನಿ ಸೇವಕಿಯಲ್ಲ, ಜೀವನ ಸಂಗಾತಿ. ಕಾಲ ಬದಲಾಗಿದೆ. ಅಡುಗೆ ಮಾಡುವುದು, ಮನೆ ಸ್ವಚ್ಛತೆ, ಬಟ್ಟೆ ಒಗೆಯುವುದು ಸೇರಿದಂತೆ ಮನೆಯ ಕೆಲಸಗಳನ್ನು ಪತ್ನಿಗೆ ಸಮನಾಗಿ ಪತಿಯೂ ಮಾಡಬೇಕು' ಎಂದು ತೀರ್ಪು ನೀಡಿದೆ! ಈ ತೀರ್ಪು ಸ್ವಾಗತಾರ್ಹ. ಆದರೆ ಸಮಾಜದಲ್ಲಿ ಅದರ ಅನುಷ್ಠಾನವನ್ನು ಸಮಾಧಾನ, ಸತತ ಪ್ರಯತ್ನದಿಂದಷ್ಟೇ ಸಾಧ್ಯವಾಗಿಸಬಹುದು.

ಎಲ್ಲರಿಗೂ ಅತ್ಯವಶ್ಯವಾಗಿ ತಿಳಿದಿರಲೇಬೇಕಾದ ಮನೆಗೆಲಸದ ಬಗ್ಗೆ ಇಷ್ಟೊಂದು ಅಸಡ್ಡೆ ಏಕೆ? ತಲತಲಾಂತರದಿಂದ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಲಿಂಗಾಧಾರಿತ ಕೆಲಸದ ವರ್ಗೀಕರಣ- ತಾರತಮ್ಯ ಪ್ರಮುಖ ಕಾರಣ. ಹಾಗೆಯೇ ಸ್ವಾವಲಂಬಿಗಳಾಗುವ ದಿಸೆಯಲ್ಲಿ ಬಾಲ್ಯದಿಂದಲೇ ಅವಶ್ಯವಾದ ಜೀವನಪಾಠವನ್ನು ಲಿಂಗಭೇದವಿಲ್ಲದೆ ಮಕ್ಕಳಿಗೆ ಕಲಿಸುವಲ್ಲಿ ತೋರುವ ನಿರ್ಲಕ್ಷ್ಯ. ಹೆಣ್ಣು ಮಗು ಬೆಳೆಯುವಾಗಲೇ ಮುಂದೆ ಮಾಡಬೇಕಾದ ಮನೆಗೆಲಸದ ಕುರಿತು ಎಲ್ಲರಿಂದಲೂ ನಿರಂತರವಾದ ಉಪದೇಶ. ಹೆಣ್ಣುಮಕ್ಕಳಿಗೆ 'ಸಹಜ' ಕೆಲಸವಾದ ಕಸ ಗುಡಿಸು, ಬಟ್ಟೆ ಒಗೆ, ಪಾತ್ರೆ ತೊಳೆ, ಅಡುಗೆ ಮಾಡು... ಇವುಗಳ ಸತತ ಮೇಲ್ವಿಚಾರಣೆ ನಡೆಯುತ್ತಿರುತ್ತದೆ. ಅದೇ ಗಂಡುಮಕ್ಕಳಿಗೆ ಪೊರಕೆ ಹಿಡಿಯುವುದು ನಿಷಿದ್ಧ, ಪಾತ್ರೆ ತೊಳೆಯುವುದು ಅವಮಾನ...

ಹೀಗೆ ಕೆಲಸದ ವರ್ಗೀಕರಣ ಬಾಲ್ಯದಿಂದಲೇ ಆರಂಭ. ಪಠ್ಯಪುಸ್ತಕಗಳು, ಮಾಧ್ಯಮ, ಚಲನಚಿತ್ರ, ಧಾರಾವಾಹಿಗಳಲ್ಲಿಯೂ ಇದೇ ಮುಂದುವರಿದು, ಈ ಸಿದ್ಧ ಮಾದರಿಯನ್ನು ಮತ್ತಷ್ಟು ಗಟ್ಟಿ ಮಾಡುತ್ತದೆ. ಮುಂದೆ ವಿದ್ಯಾಭ್ಯಾಸದಲ್ಲಿ ಉತ್ತಮ ಅಂಕ ಗಳಿಸಿದರೂ ಅಡುಗೆಮನೆ ಕೆಲಸ ಕಲಿಯಬೇಕು ಎನ್ನುವ ಬುದ್ಧಿವಾದವಾದರೆ, ಕಡಿಮೆ ಅಂಕ ಬಂದರಂತೂ ಮನೆಗೆಲಸ ಕಲಿತುಕೋ ಸಾಕು ಎನ್ನುವ ತಿರಸ್ಕಾರದ ಮಾತು. ಮದುವೆಯ ಸಂದರ್ಭ ಬಂದಾಗ ವರದಕ್ಷಿಣೆಯ ಬೇಡಿಕೆ ಇರದಿದ್ದರೂ ಮನೆಗೆಲಸ- ಅಡುಗೆಯ ಸಹಜ ನಿರೀಕ್ಷೆಯಂತೂ ಇದ್ದೇ ಇರುತ್ತದೆ. ಮದುವೆಯ ನಂತರ ಮಹಿಳೆಯ ವ್ಯಕ್ತಿತ್ವಕ್ಕೆ ಬೆಲೆ ಇಲ್ಲದೆ, ವೈಯಕ್ತಿಕ ಅಭಿರುಚಿಗೆ ಪ್ರೋತ್ಸಾಹವಿಲ್ಲದೆ ಬರೀ ಮನೆಗೆಲಸಕ್ಕೆ ಸೀಮಿತವಾದಾಗ ದೇಹ ದಣಿಯುತ್ತದೆ, ಮನಸ್ಸು ನರಳುತ್ತದೆ. ಕಸ ಗುಡಿಸುವಾಗ ಕನಸುಗಳು ಧೂಳೀಪಟವಾದರೆ, ಪಾತ್ರೆ ತೊಳೆಯುವಾಗ ಕಣ್ಣೀರೂ ಸೇರುತ್ತದೆ. 'ಮನೆ ಕೆಲಸವೇನು ಮಹಾ' ಎಂಬ ಮಾತು ಕೇಳಿ, ತನ್ನದು ಬಿಟ್ಟಿ ಚಾಕರಿ ಎಂಬ ನೋವು ಮೂಡುವುದು ಸಹಜ. ಅಲ್ಲಿಗೆ ಮನಸ್ಸು, ಮನೆ, ಮದುವೆಗೆ ಸಂಬಂಧಿಸಿದ ಎಲ್ಲ ಭಾವನೆಗಳೂ ಛಿದ್ರ!

ಸಮಾನತೆ ಎನ್ನುವುದು ಚಂದದ ಪದವಾದರೂ ಪ್ರಕೃತಿಯಲ್ಲಿ ಹೆಣ್ಣು ಮತ್ತು ಗಂಡು ಸಮಾನರಲ್ಲ; ದೈಹಿಕ, ಮಾನಸಿಕ, ಭಾವನಾತ್ಮಕವಾಗಿ ಅನೇಕ ವ್ಯತ್ಯಾಸಗಳಿವೆ. ಹಾಗಾಗಿಯೇ ಕಂದನನ್ನು ಒಡಲಲ್ಲಿ ಹೊತ್ತು ಹೆರುವ ವಿಶಿಷ್ಟ ಶಕ್ತಿ ಮತ್ತು ಜವಾಬ್ದಾರಿ ಮಹಿಳೆಗೆ. ಅದರಲ್ಲಿ ಪುರುಷರು ಅರ್ಥಮಾಡಿಕೊಂಡು ನೆರವಾಗಬಲ್ಲರೇ ವಿನಾ ತಾವೇ ಮಾಡಲು ಸಾಧ್ಯವಿಲ್ಲ. ಆದರೆ ಮನೆಗೆಲಸದ ವಿಷಯದಲ್ಲಿ ಹಾಗಲ್ಲ. ಪಾತ್ರೆ, ಬಟ್ಟೆ, ಅಡುಗೆ ಎಲ್ಲವನ್ನೂ ಕಲಿತು ಎಲ್ಲರೂ ಮಾಡಬಹುದು ಮತ್ತು ಮಾಡಬೇಕು!

ಮನೆ ಎಂದರೆ ಬರೀ ಕಟ್ಟಡವಲ್ಲ. ಮನಸ್ಸು ಬೆಸೆದು ಸಂಬಂಧಗಳು ಹೆಣೆದಿರುವ ನೆಮ್ಮದಿಯ ತಾಣ. ಸಹಬಾಳ್ವೆ–ಸಮಾನತೆ-ಸ್ವಾವಲಂಬನೆಯಂತಹ ಮೌಲ್ಯಗಳ ಅರಿವು ಮತ್ತು ಪ್ರಾಯೋಗಿಕ ಶಿಕ್ಷಣ ಆರಂಭವಾಗುವುದೇ ಮನೆಯಲ್ಲಿ. ಹಾಗಾಗಿ, ನಮ್ಮ ಮನೆಗೆಲಸವನ್ನು ನಾವು ಮಾಡಿಕೊಂಡು ಸ್ವಾವಲಂಬಿಗಳಾಗಿ ಬದುಕುವ ಪಾಠವನ್ನು ಬಾಲ್ಯದಿಂದಲೇ ಕಲಿಸುವುದು, ಕಲಿಯುವುದು ಅತ್ಯಗತ್ಯ. ಶಿಸ್ತಿನ ಬದುಕಿಗೆ ಅವಶ್ಯವಾದ ಮನೆಗೆಲಸದ ಬಗ್ಗೆ ತಾತ್ಸಾರ ಬೇಡ, ನನ್ನದು ನಿನ್ನದು ಎಂಬ ಜಗಳವೂ ಸರಿಯಲ್ಲ. ಬದಲಿಗೆ, ನಮ್ಮದು ಎಂದು ಎಲ್ಲರೂ ಹಂಚಿಕೊಂಡು ಮಾಡುವುದು ಮನೆಯ ನೆಮ್ಮದಿಗೆ ಹಾಗೂ ಗೌರವದ ಬದುಕಿಗೆ ಅಡಿಪಾಯ. ಸಂಸಾರ ರಥವನ್ನೆಳೆಯುವ ಚಕ್ರಗಳು ಓಡಬೇಕಾದದ್ದು ಸ್ಪರ್ಧೆಯಿಂದಲ್ಲ, ಪರಸ್ಪರ ಪೂರಕವಾದ ಸಾಮರಸ್ಯದಿಂದ ಎಂಬುದು ಎಂದಿಗೂ ಸತ್ಯ!

ಟೈಮ್ ಕೊಡಿ ಪ್ಲೀಸ್...

ನನಗೆ ಮನೆಗೆಲಸದಲ್ಲಿ ಭಾಗಿಯಾಗುವ ಮನಸ್ಸಿದೆ. ಆದರೆ ಹೆಂಡತಿಗೆ ನನ್ನ ಕೆಲಸ ಸರಿನೇ ಆಗಲ್ಲ. ಪರ್ಫೆಕ್ಟ್ ಆಗಿ ಮಾಡಬೇಕು ಅಂತಾರೆ. ಸಣ್ಣಪುಟ್ಟದ್ದಕ್ಕೂ 'ಈ ಥರಾ ಮಾಡೋದಾದ್ರೆ ನೀವು ಮಾಡೋದೇ ಬೇಡ' ಅಂತಾರೆ. ಹೊಸದಾಗಿ ಕಲಿಯಬೇಕಾದರೆ ಮಿಸ್ಟೇಕ್ ಆಗುತ್ತೆ. ಹೌದು, ನಮ್ಮ ಹಿಂದಿನವರು ಮಾಡುತ್ತಿರಲಿಲ್ಲ. ಅದು ತಪ್ಪು. ನಾವು ಮಾಡುವುದಕ್ಕೆ ಸಿದ್ಧರಾದ್ರೂ ಲೇಡೀಸ್ ಸ್ವಲ್ಪ ಅಡ್ಜಸ್ಟ್ ಮಾಡ್ಕೊಬೇಕು. ಸೊಸೈಟಿ ಚೇಂಜ್ ಆಗಬೇಕು, ಆಗುತ್ತೆ. ಸ್ವಲ್ಪ ಟೈಮ್ ಕೊಡಿ, ಕಲಿಸಿಕೊಡಿ ಎಂದಷ್ಟೇ ನಾವು ಕೇಳುವುದು!

ರಾಜ್‌ಕಮಲ್, ಎಂಜಿನಿಯರ್

ಸಹಾಯ ಮಾಡುವುದು ಬೇಡ!

'ನಾವು ತುಂಬಾ ಸುಧಾರಿಸಿದ್ದೇವೆ. ಹೆಂಡತಿಗೆ ಹೆಲ್ಪ್ ಮಾಡುತ್ತೇವೆ. ನಮ್ಮ ಅಪ್ಪ, ಅಜ್ಜ ಎಲ್ಲ ಅಡುಗೆ ಮನೆಗೇ ಹೋಗ್ತಿರಲಿಲ್ಲ. ಆದರೆ ನಾವು ಎಷ್ಟೋ ಸಲ ದೂಳು ತೆಗೆದು, ಪಾತ್ರೆ ತೊಳೆದು, ಅಡುಗೆಗೆ ತರಕಾರಿ ಹೆಚ್ಚಿ ಕೊಟ್ಟಿರೋದು ಇದೆ' ಎಂದು ಅನೇಕರು ಹೇಳುತ್ತಾರೆ. ಆದರೆ ಇವರಿಗೆ ಅರ್ಥವಾಗದೇ ಇರುವುದು ಏನೆಂದರೆ, ಸಂಸಾರ ನಡೆಸಲು ಹೆಣ್ಣುಮಕ್ಕಳು ಕೂಡ ಸಮಾನವಾಗಿಯೇ ಹೆಗಲು ಕೊಟ್ಟಿರುತ್ತಾರೆ ಎಂಬುದು. ಇವರಿಗೆ ಮನೆಗೆಲಸದಲ್ಲಿ ತೊಡಗುವುದು ಅಂದರೆ ಹೆಂಡತಿಯ ಕೆಲಸಕ್ಕೆ ಸಹಾಯ ಮಾಡುತ್ತಿದ್ದೇವೆ ಎಂಬ ಭಾವನೆ! ಮನೆಗೆಲಸ ಮಾಡುವುದು ತನ್ನ ಜವಾಬ್ದಾರಿ ಸಹ ಎನ್ನುವ ಅರಿವು ಮೂಡಬೇಕು. ಅದು ನಿಜವಾದ ಬದಲಾವಣೆ.

ನಿಶಾ, ಬೆಂಗಳೂರಿನಲ್ಲಿ ಬ್ಯಾಂಕ್ ಉದ್ಯೋಗಿ

• ಪ್ರಣತಿ ಪ್ರದೀಪ್

ವಯಸ್ಸು 30 ದಾಟಿದರೂ ಮದುವೆಯ ಬಗ್ಗೆ ಯೋಚನೆಯನ್ನೇ ಮಾಡದ, ಒಂದುವೇಳೆ ಮದುವೆಯಾಗಿದ್ದರೂ ಮಕ್ಕಳನ್ನು ಮಾಡಿಕೊಳ್ಳಲು ಮೀನಮೇಷ ಎಣಿಸುವವರ ಸಂಖ್ಯೆ ಹೆಚ್ಚುತ್ತಿರುವ ಈ ದಿನಮಾನದಲ್ಲಿ, 34ರ 'ಯುವತಿ'ಯೊಬ್ಬಳು ಅಜ್ಜಿಯಾಗುವ ಮೂಲಕ ಸುದ್ದಿಯಲ್ಲಿದ್ದಾಳೆ!

17 ವರ್ಷದವಳಾಗಿದ್ದಾಗ ತನ್ನ ಮೊದಲ ಮಗುವನ್ನು ಹೆತ್ತಿದ್ದ ಸಿಂಗಪುರದ ಶೆರ್ಲಿ ಲಿಂಗ್, ಅದಾದ 17 ವರ್ಷಗಳ ಬಳಿಕ, ಅದೇ ತನ್ನ 17 ವರ್ಷದ ಮಗನಿಗೆ ಹುಟ್ಟಿದ ಮಗುವನ್ನು ಎತ್ತಿಕೊಂಡು ಮುದ್ದಾಡುತ್ತಿದ್ದಾಳೆ. ಜೊತೆಗೆ, ಮಗನ ಈ 'ಸಾಧನೆ'ಗೆ ತಾನೇ ಸ್ಫೂರ್ತಿಯಾಗಿರಬಹುದು ಎಂದು ಹಾಸ್ಯಚಟಾಕಿ ಹಾರಿಸಿದ್ದಾಳೆ. 'ಈ ಸಂದರ್ಭದಲ್ಲಿ ಮಗನಿಗೆ ನನ್ನ ಸಂಪೂರ್ಣ ಬೆಂಬಲ ಇದೆ' ಎಂದಿರುವ ಶೆರ್ಲಿ, ಇಷ್ಟು ಚಿಕ್ಕ ವಯಸ್ಸಿಗೇ ಮಕ್ಕಳನ್ನು ಹೆತ್ತರೆ ಯಾವೆಲ್ಲಾ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸುವುದನ್ನೂ ಮರೆತಿಲ್ಲ.

ಇನ್‌ಫ್ಲುಯೆನ್ಸರ್ ಜೊತೆಗೆ ರೆಸ್ಟೋರೆಂಟ್ ಮಾಲೀಕಳಾಗಿರುವ ಶೆರ್ಲಿ, ತಾನು ಅಜ್ಜಿಯಾದ ಬಗೆಯನ್ನು ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾಳೆ. ಕಳೆದ ವರ್ಷ ಮಗನ ಗರ್ಲ್‌ಫ್ರೆಂಡ್ ಗರ್ಭಿಣಿಯಾಗಿದ್ದಾಳೆ ಎಂದು ತಿಳಿದಾಗ ಆಘಾತವಾದರೂ ತೋರಿಸಿಕೊಳ್ಳದೆ ಆಕೆ ಅತ್ಯಂತ ಪ್ರಬುದ್ಧಳಾಗಿ ವರ್ತಿಸಿದ್ದು ಸಾಮಾಜಿಕ ಮಾಧ್ಯಮದಲ್ಲಿ ಪ್ರಶಂಸೆಗೆ ಪಾತ್ರವಾಗಿದೆ.

ಮಗ ಬಂದು ವಿಷಯ ತಿಳಿಸಿದಾಗ, 'ಇದು ನಿನ್ನ ಜೀವನ. ನಿನಗೆ ಈಗ ಮಗು ಬೇಕೋ ಬೇಡವೋ ಎಂದು ನೀನೇ ನಿರ್ಧರಿಸಬೇಕು. ಮಗುವನ್ನು ಉಳಿಸಿಕೊ ಎಂದೋ ನಿನ್ನ ಗೆಳತಿಗೆ ಅಬಾರ್ಷನ್ ಮಾಡಿಸು ಎಂದೋ ನಾನು ಹೇಳಲಾರೆ. ಏಕೆಂದರೆ ಇದು ನಿಮ್ಮಿಬ್ಬರ ಭವಿಷ್ಯ. ಅದರಿಂದ ಎದುರಾಗುವ ಸವಾಲುಗಳನ್ನು ನೀವಿಬ್ಬರೇ ಎದುರಿಸಬೇಕು. ಒಂದು ವೇಳೆ ನಿನ್ನ ಪರವಾಗಿ ನಾನು ನಿರ್ಧಾರ ಕೈಗೊಂಡು, ಮುಂದೆ ಆ ಬಗ್ಗೆ ನಿನಗೆ ಪಶ್ಚಾತ್ತಾಪವಾದರೆ ಅದಕ್ಕೆ ಯಾರು ಹೊಣೆ?' ಎಂದು ಶೆರ್ಲಿ ಪ್ರತಿಕ್ರಿಯಿಸಿದ್ದಳು.

'ಒಂದು ವೇಳೆ ನನ್ನ ಮಾತಿಗೆ ಕಟ್ಟುಬಿದ್ದು ಅವನು ಗರ್ಭಪಾತ ಮಾಡಿಸಿದ್ದರೂ ಮುಂದೆ ಮತ್ತೆ ಅವನು ಅಂತಹ ತಪ್ಪು ಮಾಡುವುದಿಲ್ಲ ಎನ್ನುವುದು ಯಾವ ಗ್ಯಾರಂಟಿ? ಈಗ ಆಗಿಹೋಗಿರುವುದನ್ನು ಬದಲಿಸಲು ಸಾಧ್ಯವಿಲ್ಲ. ಹಾಗಾಗಿ, ಅವನಿಗೆ ಬೈಯ್ಯುವುದರ ಬದಲು ಅಗತ್ಯ ಸಲಹೆ ಮತ್ತು ಬೆಂಬಲ ನೀಡಲು, ಅವನ ಕೃತ್ಯಕ್ಕೆ ಅವನೇ ಹೊಣೆಗಾರನಾಗಬೇಕಾಗುತ್ತದೆ ಎಂಬುದನ್ನು ಮನದಟ್ಟು ಮಾಡಲು ನಿರ್ಧರಿಸಿದೆ' ಎಂದಿದ್ದಾಳೆ.

'ಒಳ್ಳೆಯ ಅಥವಾ ಕೆಟ್ಟ ಮಗ ಬೇಕೆಂದು ನಿರ್ಧರಿಸುವ ಅವಕಾಶ ನಿಮಗೆ ಇರುವುದಿಲ್ಲ. ಆದರೆ ಉತ್ತಮ ವ್ಯಕ್ತಿಯಾಗುವಂತೆ ನೀವು ಅವನಿಗೆ ಮಾರ್ಗದರ್ಶನ ಮಾಡಲು ಸಾಧ್ಯ' ಎಂಬುದು ಆಕೆಯ ಅನಿಸಿಕೆ.

ಈವರೆಗೆ ಮೂವರು ಗಂಡಂದಿರಿಂದ ಐವರು ಮಕ್ಕಳನ್ನು ಪಡೆದಿರುವ ಶೆರ್ಲಿಯ ದೊಡ್ಡ ಮಗನಿಗೆ ಈಗ 18 ವರ್ಷ. ಉಳಿದಂತೆ 17, 13, 10 ಮತ್ತು 8 ವರ್ಷದ ಮಕ್ಕಳಿದ್ದಾರೆ. ಇವರಲ್ಲಿ ಮೂವರು ಹೆಣ್ಣುಮಕ್ಕಳು.

'ನನ್ನಂತೆ ನನ್ನ ಮಕ್ಕಳು ಚಿಕ್ಕ ವಯಸ್ಸಿಗೇ ಅಪ್ಪ– ಅಮ್ಮ ಆಗುವುದನ್ನು ನಾನು ಎಂದಿಗೂ ಪ್ರೋತ್ಸಾಹಿಸುವುದಿಲ್ಲ. ನಿಮ್ಮ ಅಮ್ಮನಂತೆ ಚಿಕ್ಕ ವಯಸ್ಸಿಗೇ ಮದುವೆಯಾಗಬೇಡಿ ಎಂದು ಹೇಳುತ್ತಲೇ ಬಂದೆ. ಆದರೆ ಮಕ್ಕಳು ನೀವು ಏನನ್ನು ಮಾಡಬೇಡ ಎನ್ನುತ್ತೀರೋ ಅದನ್ನೇ ಮಾಡುತ್ತಾರೆ ಅಲ್ಲವೇ' ಎಂದು ತಮಾಷೆಯಾಗಿ ಕೇಳುತ್ತಲೇ ಪೋಷಕರಿಗೆ ಎದುರಾಗುವ ಸವಾಲುಗಳನ್ನು ಎತ್ತಿ ತೋರಿದ್ದಾಳೆ.

'ಚಿಕ್ಕ ವಯಸ್ಸಿನಲ್ಲೇ ಮಕ್ಕಳನ್ನು ಹೆರುವುದರಿಂದ ಒಳ್ಳೆಯದು, ಕೆಟ್ಟದ್ದು ಎರಡರ ಅನುಭವವೂ ಆಗುತ್ತದೆ. ಆದರೆ ಅವೆಲ್ಲವೂ ನೀವು ಅವುಗಳನ್ನು ಹೇಗೆ ನಿಭಾಯಿಸುತ್ತೀರಿ ಎನ್ನುವುದನ್ನು ಅವಲಂಬಿಸಿರುತ್ತವೆ' ಎನ್ನುವುದು ಶೆರ್ಲಿಯ ಅನುಭವದ ಮಾತು.

ಮಕ್ಕಳು ತಮ್ಮ ಬದುಕಿನ ಆಗುಹೋಗುಗಳಿಗೆ ತಾವೇ ಹೊಣೆಗಾರರು. ಆದರೆ ಅವರಿಗೆ ಅಗತ್ಯ ಬಂದಾಗ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕಾದುದು ಪೋಷಕರ ಕರ್ತವ್ಯ; ಅಷ್ಟೇ ಅಲ್ಲ ಎಂಥ ಸಂದರ್ಭದಲ್ಲೂ ಅವರ ಕೈಬಿಡದೆ ಅವರಿಗೆ ಅಪಾರವಾದ ಪ್ರೀತಿಯನ್ನು ನಾವು ನಿರಂತರವಾಗಿ ಕೊಡುತ್ತಿರಬೇಕು ಅಷ್ಟೆ ಎಂದಿದ್ದಾಳೆ.

ಶೆರ್ಲಿಯ ಪುತ್ರ ಹದಿವಯಸ್ಸಿಗೇ ಅಪ್ಪನಾಗಿರುವುದರ ಬಗ್ಗೆ ಜಾಲತಾಣದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಲವರು ಆಘಾತ ವ್ಯಕ್ತಪಡಿಸಿದ್ದಾರೆ. ಹುಡುಗ ತನ್ನ ಹೊಣೆಯನ್ನು ಸರಿಯಾಗಿ ನಿಭಾಯಿಸಬೇಕಾಗಿದೆ ಎಂದು ಒಬ್ಬರು ಕಳಕಳಿ ವ್ಯಕ್ತಪಡಿಸಿದ್ದರೆ, ಕುಟುಂಬದ ಬೆಂಬಲ ಸಿಕ್ಕರೆ ಮಕ್ಕಳು ಎಂತಹ ಕಷ್ಟಗಳನ್ನು ಬೇಕಾದರೂ ಎದುರಿಸುತ್ತಾರೆ ಎಂದು ಮತ್ತೊಬ್ಬರು ತಾಯಿಯ ಬೆಂಬಲವನ್ನು ಪ್ರಶಂಸಿಸಿದ್ದಾರೆ.

ಯಾಕಿಂಥ ಗೊಡ್ಡು ಸಂಪ್ರದಾಯ?

ಭಾವಯಾನ



• ದೀಪಶ್ರೀ ಎಸ್. ಕೂಡ್ಲಿಗಿ

ಅನ್ನಪೂರ್ಣ, ಸುಂದರರಾಜ್ ಅವರ ಒಬ್ಬಳೇ ಮುದ್ದಿನ ಮಗಳು ರೇಖಾ. ಶಾಲಾ ದಿನಗಳಿಂದಲೂ ನನ್ನ ಆಪ್ತ ಗೆಳತಿ. ಮನೆಯವರ ಪ್ರೀತಿಗೆ ಕೊರತೆ ಇಲ್ಲದಂತೆ ಬೆಳೆದವಳು. ಆದರೆ 8ನೇ ತರಗತಿಯಲ್ಲಿ ಋತುಮತಿಯಾದ ಬಳಿಕ ಮನೆಯವರಿಂದ, ಅದರಲ್ಲೂ ತಂದೆಯಿಂದ ಅವಳು ಅನುಭವಿಸಿದ ಮಾನಸಿಕ ಕಿರಿಕಿರಿ, ನೋವು ಈಗಲೂ ಎಷ್ಟೋ ಬಾರಿ ನನ್ನನ್ನು ಕಾಡುತ್ತದೆ. ಈ ದಿನಗಳಲ್ಲೂ ಇಂತಹ ಯಾತನೆ ಅನುಭವಿಸುತ್ತಿರುವ ಎಷ್ಟೋ ಹೆಣ್ಣುಮಕ್ಕಳ ಪ್ರತಿನಿಧಿಯಂತೆ ರೇಖಾ ನನಗೆ ಭಾಸವಾಗುತ್ತಾಳೆ.

ಆಕೆ ಋತುಮತಿಯಾದದ್ದು ತಾಯಿಗೆ ಖುಷಿಯ ಸಂಗತಿಯಾದರೆ ತಂದೆಗೆ ದುಃಖ, ಬೇಜಾರಿನ ವಿಷಯವಾಗಿತ್ತು. 9 ದಿನ ಆಕೆಯನ್ನು ಇನ್ನಿಲ್ಲದಂತೆ ಜತನ ಮಾಡಿ, ಕೊನೇ ದಿನ ನೆಂಟರಿಷ್ಟರನ್ನು ಕರೆದು ಅದ್ಧೂರಿ ಸಮಾರಂಭವನ್ನೇ ಮನೆಯವರು ಏರ್ಪಡಿಸಿದ್ದರು. ಆಗೆಲ್ಲಾ ಖುಷಿಯಾಗಿಯೇ ಇದ್ದ ರೇಖಾಗೆ ತಿಂಗಳ ಋತುಚಕ್ರ ಶುರುವಾದಾಗಷ್ಟೇ ತಂದೆಯ ಅತಿರೇಕದ ವರ್ತನೆ ಅನುಭವಕ್ಕೆ ಬರತೊಡಗಿತು.

ಮುಟ್ಟಾದ ಐದು ದಿನಗಳವರೆಗೂ ಮಡಿ, ಮಡಿ, ಮಡಿ. ಸಂಪ್ರದಾಯದ ಹೆಸರಿನಲ್ಲಿ ಕಟ್ಟುನಿಟ್ಟಿನ ನಿಯಮ ಪಾಲನೆ. ಒಮ್ಮೆ ಮುಟ್ಟಾದ ಮೂರನೇ ದಿನ, ಒಣಗಿದ ತುಳಸಿ ಗಿಡಕ್ಕೆ ನೀರು ಹಾಕುತ್ತಿದ್ದಳು ರೇಖಾ. ಮುಟ್ಟಾದವರು ತುಳಸಿ ಗಿಡಕ್ಕೆ ನೀರು ಹಾಕುವಂತಿಲ್ಲ, ಗಿಡವನ್ನು ಮುಟ್ಟುವಂತಿಲ್ಲ ಎಂದು ಕಟ್ಟಪ್ಪಣೆ ಮಾಡಿದರು ತಂದೆ. ರೋಗನಿರೋಧಕ ಶಕ್ತಿ ಹೆಚ್ಚಿಸುವ ತುಳಸಿ ಒಣಗಿದರೂ ಪರವಾಗಿಲ್ಲ ಮುಟ್ಟಾದ ಹೆಣ್ಣುಮಕ್ಕಳು ಅದಕ್ಕೆ ನೀರು ಹಾಕಬಾರದೇ ಎಂಬ ಪ್ರಶ್ನೆ ಕೇಳಲು ಧೈರ್ಯ ಸಾಲದೆ ಅವಳ ಗಂಟಲಲ್ಲೇ ಉಳಿಯಿತು.

ಅಂದೊಮ್ಮೆ ರೇಖಾಳ ತಂದೆ ಸ್ನಾನಕ್ಕೆಂದು ನೀರಿನ ಕೊಡಕ್ಕೆ ಹೀಟರ್ ಹಾಕಿದ್ದರು. ನೀರು ಅತಿಯಾಗಿ ಕಾದ ಕಾರಣ ಸ್ವಿಚ್ ಆಫ್ ಮಾಡಿದ ರೇಖಾ ಕೊಡವನ್ನು ಎತ್ತಿ ಪಕ್ಕಕ್ಕೆ ಇಟ್ಟಳು. ಅದನ್ನು ಕಂಡ ತಂದೆ ಹೌಹಾರಿದರು. ಅಷ್ಟೂ ಬಿಸಿನೀರನ್ನು ಕೂಡಲೇ ಕೆಳಕ್ಕೆ ಚೆಲ್ಲಿ, ಮಡಿ ಹೋಯಿತು ಎಂದು ಅಬ್ಬರಿಸಿದರು. ನೀರಿಗೂ ಮೈಲಿಗೆಯೇ ಎಂದು ವಿರೋಧಿಸಿದಳು ರೇಖಾ. ಅದರಿಂದ ಏನೂ ಪ್ರಯೋಜನವಾಗಲಿಲ್ಲ.

ಮುಟ್ಟಾದವಳು ಕೊಡ ತುಂಬಿ ಹರಿಯುತ್ತಿದ್ದರೂ ನಲ್ಲಿಯನ್ನು ನಿಲ್ಲಿಸುವಂತಿಲ್ಲ, ಪೂಜೆಗೆ ಕೂತಾಗ ಆಕೆ ಓಡಾಡುವುದು ಕಂಡರೂ ಮೈಲಿಗೆ, ದೇವರ ವಿಗ್ರಹದ ಮೇಲೆ ಅವಳ ನೆರಳು ಬೀಳುವಂತಿಲ್ಲ, ಪೂಜೆಗೆ ತಂದ ಹೂ ಮುಟ್ಟುವಂತಿಲ್ಲ. ತಂದೆಯನ್ನು ಅಪ್ಪಿತಪ್ಪಿ ಮುಟ್ಟಿದರೆ ಕೂಡಲೇ ಅವರು ಮತ್ತೆ ಸ್ನಾನದ ಮನೆಗೆ ಓಡುತ್ತಾರೆ. ಇದೆಂಥ ಪದ್ಧತಿ? ಪ್ರಕೃತಿಗೆ ಇಲ್ಲದ ಮೈಲಿಗೆ ಮನುಷ್ಯರಿಗೇಕೆ? ಯಾವ ಧರ್ಮಗ್ರಂಥದಲ್ಲಿವೆ ಇಂತಹ ನಿಯಮಗಳು ಎಂದು ನನ್ನ ಮುಂದೆ ಹೇಳಿಕೊಂಡು ಕಣ್ಣೀರಿಡುತ್ತಿದ್ದಳು ಅವಳು.

ಇದು ಹತ್ತಾರು ವರ್ಷಗಳ ಹಿಂದೆ ನನ್ನ ಅನುಭವಕ್ಕೆ ಬಂದ ಸಂಗತಿಯಾದರೂ ಇಂದಿಗೂ ಎಷ್ಟೋ ಮನೆಗಳಲ್ಲಿ ಇಂತಹುದೇ ವಾತಾವರಣ ಇರುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಬಗೆಯ ಅನಗತ್ಯ, ಅವೈಜ್ಞಾನಿಕ ಪದ್ಧತಿಗಳು ನಿಲ್ಲುವುದು ಯಾವಾಗ? ಹೆಣ್ಣುಮಕ್ಕಳಿಗೆ ಇಂತಹ ಗೊಡ್ಡು ಸಂಪ್ರದಾಯಗಳಿಂದ ಮುಕ್ತಿ ದೊರಕುವುದು ಯಾವಾಗ?

ನಾನು ಚಿತ್ತಚಂಚಲೆ; ಥೆರಪಿ ಪಡೆಯಲೇ?

• **ನನಗೆ ಆಗಾಗ ಮೂಡ್ ಸ್ವಿಂಗ್ ಆಗುತ್ತಿರುತ್ತದೆ. ಹಾರ್ಮೋನ್‌ಗಳ ವ್ಯತ್ಯಯ ಇದಕ್ಕೆ ಕಾರಣವಲ್ಲ ಎಂದು ವೈದ್ಯರು ದೃಢೀಕರಿಸಿದ್ದಾರೆ. ಆದರೆ ಒಂದೊಳ್ಳೆ ಥೆರಪಿಸ್ಟ್‌ನ ನೋಡಿ ಎಂದು ಸಲಹೆ ನೀಡಿದ್ದಾರೆ. ಥೆರಪಿಗೆ ಒಳಗಾಗುವುದರಿಂದ ನನ್ನ ಸಮಸ್ಯೆಗೆ ಪರಿಹಾರ ಸಿಗುವುದೇ ತಿಳಿಸಿ.**

ರಚನಾ, ತ್ರಾಸಿ

ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

ಬಹಳ ಸರಳವಾದ ಪ್ರಶ್ನೆಯಂತೆ ಕಂಡರೂ ಇದರ ಉತ್ತರ ಬಹಳ ಕ್ಲಿಷ್ಟಕರವಾದದ್ದು. ಯಾಕೆಂದರೆ, ಥೆರಪಿ ಪಡೆಯುವಂತಹ ಅವಶ್ಯಕತೆ ಬಂದಿರುವುದು ಏಕೆ ಎಂಬಲ್ಲಿಂದ ವಿಚಾರ ವಿಮರ್ಶೆಯನ್ನು ಆರಂಭಿಸಬೇಕಾಗುತ್ತದೆ. ಒಂದುವೇಳೆ, ಥೆರಪಿ ತೆಗೆದುಕೊಳ್ಳುವ ಅವಶ್ಯಕತೆ ಇದೆಯೋ ಇಲ್ಲವೋ ಎಂಬುದನ್ನು ಅರ್ಥೈಸಿಕೊಳ್ಳುವ ಹಂತದಲ್ಲಿ ಇದ್ದೀರಿ ಎಂದಾದರೆ, ಮೊದಲು ನಿಮ್ಮ ಸಮಸ್ಯೆಯನ್ನು ಸರಿಯಾಗಿ ಗುರುತಿಸಿಕೊಳ್ಳಿ. ಮೂಡ್ ಸ್ವಿಂಗ್ ಅನ್ನುವುದು ಯಾವಾಗಿಂದ ಆಗುತ್ತಿದೆ ಮತ್ತು ಹಾಗೆ ಆಗುವುದರ ಹಿಂದೆ ಏನಾದರೂ ಪ್ರಚೋದನೆ ಇದೆಯೇ ಎಂಬುದನ್ನು ಪರಿಶೀಲಿಸಿ.

ಜೀವನದ ಯಾವೆಲ್ಲ ಸವಾಲುಗಳನ್ನು ಮೆಟ್ಟಿ ನಿಲ್ಲಲು ನಿಮ್ಮಿಂದ ಸಾಧ್ಯವಾಗುತ್ತಿಲ್ಲ ಅಥವಾ ಸಾಧ್ಯವಾಗುತ್ತಿದ್ದರೂ ಅದು ಪರಿಣಾಮಕಾರಿಯಾಗುತ್ತಿಲ್ಲ ಅನ್ನುವುದನ್ನು ಗಮನಿಸಿ. ಆಮೇಲೆ ಅದಕ್ಕೆ ಪರಿಹಾರದ ಸಾಧ್ಯತೆಗಳನ್ನು ಗುರುತಿಸಿಕೊಳ್ಳಿ. ಆಗ ಮೂಡ್ ಸ್ವಿಂಗನ್ನು ಹೇಗೆ ಸರಿಪಡಿಸಿಕೊಳ್ಳಬಹುದು ಎಂಬುದನ್ನು ಕಂಡುಕೊಳ್ಳಬಹುದು. ಅದಾದ ಮೇಲೆ, ನಿಮಗೆ ಸಿಕ್ಕಿದ ಪರಿಹಾರದ ಮಾರ್ಗಗಳಲ್ಲಿ ಒಂದಷ್ಟನ್ನು ಅನುಷ್ಠಾನಕ್ಕೆ ತನ್ನಿ. ಆಗ ನೀವು ನಿಜವಾಗಿ ಎಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ ಅಥವಾ ಸಿಕ್ಕಿಹಾಕಿಕೊಳ್ಳುತ್ತೀರಿ ಎಂಬುದರ ಸ್ಪಷ್ಟ ಅರಿವಾಗುತ್ತದೆ. ಆಗ ಜಟಿಲ ಸ್ಥಿತಿಯನ್ನು ಅರ್ಥೈಸಿಕೊಂಡು ಥೆರಪಿಸ್ಟ್ ಬಳಿ ಹೋದರೆ ನಿಮಗೆ ಪರಿಹಾರ ಸುಲಭವಾಗಿ ಸಿಗುತ್ತದೆ.

ಥೆರಪಿಯಿಂದ ಏನನ್ನು ಬೇಕಾದರೂ ಪಡೆದುಕೊಳ್ಳಬಹುದು. ಅದು ನಮ್ಮನ್ನು ಸಮಸ್ಯಾ ಸಂಕೋಲೆಯಿಂದ ಪರಿಹಾರದ ಬಿಡುಗಡೆಯ ಕಡೆಗೆ ಸುಲಭವಾಗಿ ಕೊಂಡೊಯ್ಯುವ ಸಾಧನ. ಆದರೆ ಪ್ರಶ್ನೆ ಇರುವುದು, 'ನೀವು ಏನನ್ನು ಪಡೆದುಕೊಳ್ಳಬೇಕೆಂದಿದ್ದೀರಿ?' ಎಂದು. ಅಂದರೆ ಮೂಡ್ ಸ್ವಿಂಗ್ ಅನ್ನು ಅರ್ಥ ಮಾಡಿಕೊಳ್ಳುವುದೋ ಅದರ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುವುದೋ ಅಥವಾ ಸಂಪೂರ್ಣವಾಗಿ ಅದರಿಂದ ಹೊರಗೆ ಬರುವುದೋ ಎಂಬುದನ್ನು ಕಂಡುಕೊಳ್ಳಿ.

ಇಲ್ಲಿ ಒಂದಿಷ್ಟು ವಿಚಾರಗಳನ್ನು ನಾವು ಅರ್ಥೈಸಿಕೊಳ್ಳಬೇಕು.

1. ನಿಮ್ಮ ಸಮಸ್ಯೆಯ ಸ್ಪಷ್ಟ ಅರಿವು ನಿಮಗಿರಬೇಕು. ಇಲ್ಲದಿದ್ದರೆ, ಮೊದಲಿಗೆ ಥೆರಪಿಸ್ಟ್ ಜೊತೆ ಚರ್ಚಿಸಿ ಅದನ್ನು ಕಂಡುಕೊಳ್ಳಬೇಕು.
2. ಥೆರಪಿಸ್ಟ್ ಆದವರು ನಿಮ್ಮ ಸಮಸ್ಯೆಯನ್ನು ಅದರಲ್ಲಿರುವ ಎಲ್ಲಾ ಜಟಿಲ ಸ್ಥಿತಿಗಳನ್ನೂ ಒಳಗೊಂಡು ಅರ್ಥೈಸಿಕೊಳ್ಳಬೇಕು. ಅವರ ತೀರ್ಮಾನದ ಆಧಾರದ ಮೇಲೆ, ಯಾವ ರೀತಿಯ ಚಿಕಿತ್ಸೆಯನ್ನು ಕೊಡಬಹುದು ಎಂಬುದರ ಯೋಜನೆ ಇರಬೇಕು.
3. ಇದನ್ನು ಕ್ಲೈಂಟ್ ಮತ್ತು ಥೆರಪಿಸ್ಟ್ ಇಬ್ಬರೂ ಸರಿಯಾಗಿ ಚರ್ಚಿಸಿಕೊಂಡು ಆಮೇಲೆ ಥೆರಪಿಯ ಪ್ರಕ್ರಿಯೆಯನ್ನು ಆರಂಭಿಸಬೇಕು.
4. ಅದಕ್ಕಿಂತಲೂ ಮುಂಚೆ ಆ ಥೆರಪಿಯ ಮೂಲ ಉದ್ದೇಶದ ಬಗ್ಗೆ ಅರಿವಿರಬೇಕು ಅಥವಾ ನಿರ್ಧಾರವಿರಬೇಕು.
5. ಗುರಿ ಸಾಧನೆಗೆ ಯಾವ ಮಾರ್ಗವನ್ನು ಆಯ್ಕೆ ಮಾಡುತ್ತೇವೆ ಎಂಬುದು ಕೂಡಾ ಒಂದು ಮಟ್ಟಿಗೆ ಗೊತ್ತಿರಬೇಕು.

ಹಾಗಾದಾಗ, ಥೆರಪಿ ಎನ್ನುವುದು ಬಹಳ ಪರಿಣಾಮಕಾರಿಯಾಗುತ್ತದೆ. ಮಾತ್ರವಲ್ಲ, ಅದು ಬರೀ ಸಂಭಾಷಣೆ, ಚರ್ಚೆ ಅಥವಾ ಸಂವಾದಕ್ಕಿಂತ ಮಿಗಿಲಾಗಿ ಚಿಕಿತ್ಸಾತ್ಮಕ ರೂಪವನ್ನು ಪಡೆದುಕೊಳ್ಳುತ್ತದೆ, ತನ್ಮೂಲಕ ಪರಿಹಾರವೂ ಸಿಗುತ್ತದೆ.

ಅಮ್ಮಾ ಹೇಳ್ತಾಳೆ

ಪಾತ್ರೆಯಲ್ಲಿ ಎಣ್ಣೆ ಬಿಸಿ ಆದಮೇಲೆ ಯಾವುದಾದರೂ ಪದಾರ್ಥ ಹಾಕಿದರೆ ಹೊರಗೆ ಸಿಡಿಯುತ್ತದೆ. ಇದನ್ನು ತಪ್ಪಿಸಲು, ಕಾದ ಎಣ್ಣೆಯಲ್ಲಿ ಸ್ವಲ್ಪ ಉಪ್ಪು ಹಾಕಿದರೆ ಆಗ ಎಣ್ಣೆ ಚಿಮ್ಮುವುದಿಲ್ಲ.

ಈರುಳ್ಳಿಯನ್ನು ಎಣ್ಣೆಯಲ್ಲಿ ಫ್ರೈ ಮಾಡುವಾಗ ಸ್ವಲ್ಪ ಸಕ್ಕರೆ ಹಾಕಿದರೆ ಈರುಳ್ಳಿಯು ಬೇಗ ಕಂದು ಬಣ್ಣಕ್ಕೆ ತಿರುಗುತ್ತದೆ.

ಹಲಸು ಪಕೋಡ: ಯಾರಿಗೆ ತಾನೇ ಬೇಡ?

• ಪದ್ಮಿನಿ ವಿಶ್ವನಾಥ್

ಈಗ ಬೇಸಿಗೆ ರಜೆ. ಮಕ್ಕಳು ಮನೆಯಲ್ಲೇ ಇರುವುದರಿಂದ ತಿನ್ನಲು ರುಚಿರುಚಿಯಾದ ಸ್ನ್ಯಾಕ್ಸ್ ಕೇಳುತ್ತಾರೆ. ದಿನವೂ ಹೊರಗಿನ ಆಹಾರ ಕೊಡುವುದು ಒಳ್ಳೆಯದಲ್ಲ. ಆದರೆ, ಅವರಿಗಾಗಿ ತರಕಾರಿ ಬಳಸಿ ಮನೆಯಲ್ಲೇ ಸುಲಭವಾಗಿ ಪೌಷ್ಟಿಕಾಂಶಭರಿತವಾದ ಸಂಜೆಯ ಸ್ನ್ಯಾಕ್ಸ್ ಮಾಡಿಕೊಟ್ಟರೆ ಬಾಯಿಗೂ ರುಚಿ, ಆರೋಗ್ಯಕ್ಕೂ ಒಳ್ಳೆಯದು ಹಾಗೂ ಹೆಚ್ಚಿನ ಖರ್ಚೂ ಇರದು.

ನನ್ನ ಮಕ್ಕಳು ಚಿಕ್ಕವರಿದ್ದಾಗ ಇಂತಹವೇ ಹಲವು ಬಗೆಯ ತಿಂಡಿಗಳನ್ನು ಮಾಡಿಕೊಡುತ್ತಿದ್ದೆ. ಮಾಡುವ ಮುಂಚೆ ಇದು ಯಾವುದರಿಂದ ಮಾಡಿದ್ದು ಎಂದು ಹೇಳದೆ, ತಿಂದಾದ ಮೇಲೆ ಅದನ್ನು ಹೇಳಿದಾಗ ಮಕ್ಕಳಿಗೆ ಅಚ್ಚರಿ. ಈಗ ದೊಡ್ಡವರಾಗಿರುವ ಅವರು ಸ್ವತಃ ಅವುಗಳನ್ನು ಮಾಡಿಕೊಳ್ಳುತ್ತಾರೆ.

ಆದರೂ ಒಮ್ಮೊಮ್ಮೆ ನಾನು ಏನಾದರೂ ತಿಂಡಿ ಮಾಡಿದರೆ, ತಿಂದಾದ ಮೇಲೆ, 'ಇದ್ಯಾವ ಗೆಡ್ಡೆಗೆಣಸು? ಯಾವ ಕಾಡು ತರಕಾರಿ ಬಳಸಿ ಮಾಡಿದ್ದು? ನೀನು ಯಾವುದರಲ್ಲಾದರೂ ಏನೋ ಒಂದು ರುಚಿಯಾಗಿ ಮಾಡಿ ನಾವು ಬೇಡ ಎನ್ನುವುದನ್ನೂ ತಿನ್ನಿಸಿಬಿಡುತ್ತೀಯ' ಎಂದು ರೇಗಿಸುತ್ತಾರೆ. ಅಂತಹ ಒಂದು ರೆಸಿಪಿಯೇ ಹಲಸಿನಕಾಯಿ ಪಕೋಡ.

ಬೇಸಿಗೆಯಲ್ಲಿ ದೊರೆಯುವ ಹಲಸು ಆರೋಗ್ಯದ ದೃಷ್ಟಿಯಿಂದ ಬಹು ಪ್ರಯೋಜನಕಾರಿ. ಹಲಸಿನಕಾಯಿ ಪೋಷಕಾಂಶಭರಿತ, ವಿಶಿಷ್ಟ ರುಚಿ ಮತ್ತು ಆರೋಗ್ಯಕರ ಗುಣಗಳಿಂದ ಜನಪ್ರಿಯ. ಕಾರ್ಬೋಹೈಡ್ರೇಟ್ ಮತ್ತು ನಾರಿನಂಶ ಹೊಂದಿದ ಸತ್ವಭರಿತ ತರಕಾರಿ ಇದು.

ವಿಶೇಷ ರುಚಿ ಹೊಂದಿರುವ ಈ ಹಲಸಿನಕಾಯಿ ಮತ್ತು ಹಣ್ಣಿನಲ್ಲಿ ನಾವು ಮಲೆನಾಡಿನ ಮಂದಿ ಹಲವಾರು ಬಗೆಯ ಪದಾರ್ಥಗಳನ್ನು ಮಾಡಿ ಸವಿಯುತ್ತೇವೆ. ಅದರಲ್ಲೂ ಹಲಸಿನಕಾಯಿಯನ್ನು ವಿವಿಧ ರೀತಿಯಲ್ಲಿ ಬಳಸಿ ರುಚಿರುಚಿಯಾದ ಖಾದ್ಯಗಳನ್ನು ಮಾಡುತ್ತೇವೆ. ಹಲಸಿನಕಾಯಿಯಲ್ಲಿ ಮಾಡಿದ ರುಚಿಯಾದ ಪಕೋಡವನ್ನು ಕಾಫಿಯೊಟ್ಟಿಗೆ ಸವಿಯುತ್ತಿದ್ದರೆ ಆಹಾ... ಅದರ ಗಮ್ಮತ್ತೇ ಬೇರೆ.

ಹಸಿ ಹಲಸಿನಕಾಯಿ, ಕಡಲೆಹಿಟ್ಟು, ಅಕ್ಕಿಹಿಟ್ಟು ಮತ್ತು ಮಸಾಲೆ ಪದಾರ್ಥಗಳನ್ನು ಬಳಸಿ, ಎಣ್ಣೆಯಲ್ಲಿ ಕರಿದು ಇದನ್ನು ತಯಾರಿಸಲಾಗುತ್ತದೆ. ಇದು ಹೊರಗೆ ಗರಿಗರಿಯಾಗಿಯೂ ಒಳಗೆ ಮೃದುವಾಗಿಯೂ ಇರುತ್ತದೆ. ಮುಖ್ಯವಾಗಿ ಸಂಜೆಯ ಚಹಾ ಸಮಯಕ್ಕೆ ಹೇಳಿ ಮಾಡಿಸಿದ ತಿನಿಸು.

ರಸಾಸ್ವಾದ

ಹೀಗೆ ಮಾಡಿ

ಎಳೆಯ ಹಲಸಿನಕಾಯಿಯ ತಿರುಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿ ಕುಕ್ಕರ್‌ಗೆ ಹಾಕಿ. ಅದಕ್ಕೆ ಸ್ವಲ್ಪ ಉಪ್ಪು, ಅರಸಿನ ಮತ್ತು ನೀರು ಹಾಕಿ ಬೇಯಲು ಇಡಿ. 2 ವಿಷಲ್ ಕೂಗಿಸಿ ಆರಲು ಬಿಡಿ.

ಅಷ್ಟರೊಳಗೆ ಒಂದು ಪಾತ್ರೆಯಲ್ಲಿ ಪಕೋಡಕ್ಕೆ ಹೆಚ್ಚುವ ರೀತಿಯಲ್ಲಿ ಸಣ್ಣಗೆ ಹೆಚ್ಚಿದ 2 ಈರುಳ್ಳಿ, ಒಂದೂವರೆ ಕಪ್ ಕಡಲೆಹಿಟ್ಟು, ಅರ್ಧ ಕಪ್ ಅಕ್ಕಿಹಿಟ್ಟು, ಒಂದು ಚಮಚ ಜೀರಿಗೆ, ಖಾರದ ಪುಡಿ, ಅರಸಿನ, ಗರಂ ಮಸಾಲ ಸ್ವಲ್ಪ, ಸಣ್ಣಗೆ ಹೆಚ್ಚಿದ ಎರಡು ಹಸಿಮೆಣಸಿನಕಾಯಿ, ಕರಿಬೇವು ಮತ್ತು ರುಚಿಗೆ ತಕ್ಕಷ್ಟು ಉಪ್ಪನ್ನು ಸೇರಿಸಿ ಸ್ವಲ್ಪ ಸ್ವಲ್ಪವೇ ನೀರು ಹಾಕಿ ಮಾಮೂಲಿ ಬೋಂಡಾ ಹಿಟ್ಟಿಗಿಂತ ಸ್ವಲ್ಪ ಗಟ್ಟಿಯಾಗಿ ಕಲಸಿ. ಕೊನೆಯಲ್ಲಿ ಈ ಹಿಟ್ಟಿಗೆ ಬೆಂದ ಹಲಸಿನಕಾಯಿಯ ತುಂಡುಗಳನ್ನು ಹಾಕಿ ಹಗುರವಾಗಿ ಕಲಸಿ.

ಎಣ್ಣೆಯನ್ನು ಬಿಸಿ ಮಾಡಿ, ಕಲಸಿದ ಹಿಟ್ಟನ್ನು ಹಾಕಿ ಮಧ್ಯಮ ಉರಿಯಲ್ಲಿ ಬೇಯಿಸಿ. ಗರಿಗರಿಯಾಗುವವರೆಗೆ ಕರಿಯಿರಿ.

ನಂತರ ತಾಜಾ ಕರಿಬೇವಿನ ಸೊಪ್ಪನ್ನು ಅದೇ ಎಣ್ಣೆಯಲ್ಲಿ ಗರಿಗರಿಯಾಗಿ ಕರಿದು, ಈಗಾಗಲೇ ಕರಿದಿಟ್ಟ ಹಲಸಿನ ಪಕೋಡ ಮೇಲೆ ಹಾಕಿ. ಬಿಸಿ ಬಿಸಿಯಾದ ಪಕೋಡದೊಟ್ಟಿಗೆ ಹಬೆಯಾಡುವ ಸ್ಟ್ರಾಂಗ್ ಕಾಫಿ ಇದ್ದಲ್ಲಿ ಅದರ ರುಚಿ ಮತ್ತಷ್ಟು ಹೆಚ್ಚುತ್ತದೆ.

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
Coolest Summer Finance Mela
Upto ₹15,000 ಕ್ಯಾಶ್ ಬ್ಯಾಕ್* ಫೈನಾನ್ಸ್ ಮೇಲೆ
ನಾವು ಇ.ಎಮ್.ಐ ಕಾರ್ಡ್ ಅನ್ನು ಸ್ವೀಕರಿಸುತ್ತೇವೆ*
1 ಇ.ಎಮ್.ಐ ಉಚಿತ*
ಎಕ್ಸ್ಚೇಂಜ್ ಬೊನಾಂಜಾ
Upto 25,000 ಕಡಿತ ಎಕ್ಸ್ಚೇಂಜ್ ಮೇಲೆ*
ಕ್ಯಾಶ್ ಬ್ಯಾಕ್ ಬೊನಾಂಜಾ
Upto 20% ಕ್ಯಾಶ್ ಬ್ಯಾಕ್*
FREE HOLIDAY PACKAGE WITH FAMILY 2 NIGHTS 3 DAYS HOLIDAY PACKAGE WORTH ₹5000
STORE LOCATOR
ಮಳಿಗೆಗಳು 10.30AM - 9.30PM ತೆರೆದಿರುತ್ತದೆ
Godrej 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,131
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Haier 1.0 TON 4 STAR INVERTER SPLIT AIR CONDITIONER ಇ.ಎಮ್.ಐ ₹2,719
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
BLUE STAR 1.0 TON 3STAR INVERTER SPLIT AIR CONDITIONER ಇ.ಎಮ್.ಐ ₹2,465
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Panasonic 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,687
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,784
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
SAMSUNG 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,516
LG 1.5TON 3 STAR INVERTER SPLIT AIR CONDITIONER ಇ.ಎಮ್.ಐ ₹2,967
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,669
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LLOYD 2.0 TON 3STAR INVERTER SPLIT AIR CONDITIONER ಇ.ಎಮ್.ಐ ₹3,567
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
LG 650 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3 ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653 ಲೀ CONVERTIBLE 5IN1 SIDE BY SIDE REFRIGERATOR RS76CG8103S9HL ಇ.ಎಮ್.ಐ ₹4,990
Haier 305 LITERS SINGLE DOOR VISI COOLER ಇ.ಎಮ್.ಐ ₹2,923
ಉಚಿತ: ₹1,895 ಮೌಲ್ಯದ PHILIPS TOASTER*
BOSCH 334 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,563
ಉಚಿತ: ₹3,315 ಮೌಲ್ಯದ BUTTERFLY PRESSURE COOKER
Whirlpool 308 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,053
ಉಚಿತ: ₹4,470 ಮೌಲ್ಯದ PREETHI INDUCTION COOKTOP*
Godrej 300L DEEP FREEZER ಇ.ಎಮ್.ಐ ₹2,278
ಉಚಿತ: ₹4,245 ಮೌಲ್ಯದ PREETHI MIXER GRINDER
iPhone 17 /17 PRO / 17 PRO MAX ₹4,000* CASH BACK STARTS FROM ₹81,500* EMI STARTS FROM ₹3,454
SAMSUNG S26/S26+/ S26 ULTRA EFFECTIVE PRICE ₹79,999* (AFTER CASH BACK) EMI STARTS FROM ₹3,667
OPPO F31 / OPPO F31/ OPPO F31+ 10% CASH BACK STARTS FROM ₹25,800* EMI STARTS FROM ₹2,150
Redmi NOTE15 / NOTE15 PRO/ NOTE15 PRO+ ₹2,000* CASH BACK ₹1,908 ONWARDS
Lenovo SLIM 3i 10% CASH BACK INTEL CORE i7 13620H 16GB RAM 512GB SSD 15.6" FHD WIN 11 MSO 24 EMI ₹6,333 OFFER PRICE ₹75,990
FREE: NAUTICA 25LTR TRAVEL BAG + COMPANY BAG PACK WORTH ₹6,999
hp 15 10% CASH BACK INTEL CORE i5 16GB, 512 GB SSD 15.6 FHD WIN 11 MSO 24 EMI ₹5,916 OFFER PRICE ₹64,990
FREE: NAUTICA 25LTR TRAVEL BAG + COMPANY BAG PACK WORTH ₹6,999
LG 55 4K ULTRA HD SMART OLED EVO TV (OLED55C56LA) ಇ.ಎಮ್.ಐ ₹4,990
ಉಚಿತ: ₹20000 ಮೌಲ್ಯದ FIREBOLTT SMART CALLING WATCH
SAMSUNG 65 4K ULTRA HD SMART OLED TV 65S90F ಇ.ಎಮ್.ಐ ₹6,990
SONY 55 4K ULTRA HD AI SMART MINI LED GOOGLE TV K-55XR70 ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,143
ಉಚಿತ: ₹4,470 ಮೌಲ್ಯದ PREETHI INDUCTION COOKTOP*
LG 9 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,897
ಉಚಿತ: ₹1,895 ಮೌಲ್ಯದ PHILIPS TOASTER*
LG SOUNDBAR S40T 2.1 CH, 300W, AI Sound Pro, Dolby Digital OFFER PRICE ₹11,990 EMI ₹1,000 MRP ₹26,990
ಕೆಟಲ್ ಕುದಿಯಲು LIMITED Stock!
ರೈಸ್ ಕುಕ್ಕರ್ ಅಡುಗೆಗಾಗಿ LIMITED Stock!
ALTERNATE TO LPG - GO ELECTRIC LIMITED Stock!
ಗೀಸರ್ ಗ್ಯಾಸ್ ಗೀಸರ್ ಬದಲಿಗೆ LIMITED Stock!
LG 28ಲೀ ಕನ್ವೆಕ್ಷನ್ ಮೈಕ್ರೋವೇವ್ ಓವೆನ್ MC-2846BR ಇ.ಎಮ್.ಐ ₹1,167
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
181 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
WE SUPPORT ROUND TABLE INDIA LADIES CIRCLE INDIA

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಜೀವನದಲ್ಲಿ ಸತ್ಯ ಮತ್ತು ಪ್ರಾಮಾಣಿಕತೆ ಮಾತ್ರ ನೈತಿಕ ಬಲ ನೀಡಬಲ್ಲದು.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಏರುಗತಿಯಲ್ಲಿ ಬೇಸಿಗೆಯ ಸವಾಲು ಶಾಶ್ವತ ಕ್ರಿಯಾಯೋಜನೆ ಅಗತ್ಯ

ಪ್ರಸಕ್ತ ವರ್ಷದ ಬೇಸಿಗೆಯು ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಎದುರಿಸಿದ ಅತ್ಯಂತ ಕಠಿಣ ಧಗೆಯ ಕಾಲಗಳಲ್ಲಿ ಒಂದಾಗಿದೆ. ಈ ಬೇಸಿಗೆ ಋತು ರಾಜ್ಯದೆಲ್ಲೆಡೆ ಹವಾಮಾನ ಬದಲಾವಣೆ ಅತ್ಯಂತ ತೀವ್ರವಾಗಿರುವುದನ್ನು ಅನುಭವಕ್ಕೆ ತರುವಂತಿದೆ. ಭಾರತೀಯ ಹವಾಮಾನ ಇಲಾಖೆಯ ದತ್ತಾಂಶಗಳು ಬಿಸಿಲ ಅಲೆಗಳು ದೀರ್ಘಾವಧಿ ಆಗಿರುವುದನ್ನು ಸೂಚಿಸುತ್ತಿವೆ. ಬಿಸಿಲ ಅಲೆಗಳ ಈ ಝಳವು ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕವನ್ನು ಹೆಚ್ಚಾಗಿ ಬಾಧಿಸುತ್ತಿದೆ. ಬಿಸಿಲು ಇಷ್ಟು ತೀವ್ರವಾಗಿದ್ದರೂ, ಇದು ರಾಜ್ಯದ ಇತಿಹಾಸದಲ್ಲಿ ಅತ್ಯಂತ ತೀವ್ರವಾದ ಬೇಸಿಗೆಯೇನೂ ಅಲ್ಲ. 2016ರ ಬೇಸಿಗೆ ಕಾಲದಲ್ಲಿ ಬೆಂಗಳೂರು ಮತ್ತು ರಾಜ್ಯದ ಬಹುತೇಕ ಭಾಗಗಳಲ್ಲಿ ಅಸಾಧಾರಣವಾದ ಧಗೆಯ ದಿನಗಳು ಕಂಡುಬಂದಿದ್ದವು. ಹತ್ತು ವರ್ಷಗಳ ಹಿಂದಿನ ಕಠಿಣ ದಿನಗಳನ್ನು ಈ ಬೇಸಿಗೆ ನೆನಪಿಸುವಂತಿದೆ; ಕಲಬುರಗಿ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಉಷ್ಣಾಂಶ ಈಗಾಗಲೇ 40 ಡಿಗ್ರಿ ಸೆಲ್ಸಿಯಸ್ ಮೀರಿದೆ. ಕಲಬುರಗಿ ಜಿಲ್ಲೆಯಲ್ಲಿ 42 ಸೆಲ್ಸಿಯಸ್ ಆಸುಪಾಸಿನಲ್ಲಿ ಉಷ್ಣಾಂಶವಿದೆ. ಬೀದರ್, ಬಳ್ಳಾರಿ ಮತ್ತು ಕೊಪ್ಪಳದಲ್ಲಿಯೂ ಅಸಹನೀಯ ಧಗೆಯ ವಾತಾವರಣವಿದೆ. ಈ ಬದಲಾವಣೆ ಆಕಸ್ಮಿಕವಾಗಿರದೆ ಪರಿಸರದ ಮೇಲೆ ತೀವ್ರವಾದ ಒತ್ತಡ ಉಂಟಾಗಿರುವುದನ್ನು ಸೂಚಿಸುತ್ತಿದೆ. ಉದ್ಯಾನನಗರಿ ಎನ್ನುವ ವಿಶೇಷಣಕ್ಕೆ ಪಾತ್ರವಾಗಿದ್ದ ಬೆಂಗಳೂರಿನಲ್ಲಿ ಕೂಡ ಉಷ್ಣಾಂಶದ ಗಣನೀಯ ಏರಿಳಿಕೆ ಕಂಡುಬರುತ್ತಿದೆ. ಬೆಂಗಳೂರಿನಲ್ಲಿ 35 ಸೆಲ್ಸಿಯಸ್ ಆಸುಪಾಸಿನಲ್ಲಿ ತಾಪಮಾನ ದಾಖಲಾಗುತ್ತಿದೆ. ತ್ವರಿತ ಗತಿಯಲ್ಲಿ ನಡೆಯುತ್ತಿರುವ ಕಾಂಕ್ರೀಟೀಕರಣ ಹಾಗೂ ತೀವ್ರವಾಗಿ ಕ್ಷೀಣಿಸುತ್ತಿರುವ ಹಸುರು ಹೊದಿಕೆಯು ಬೆಂಗಳೂರಿನ ತಾಪಮಾನ ಹೆಚ್ಚಳಕ್ಕೆ ಕಾರಣಗಳಾಗಿವೆ. ರಾಜಧಾನಿಯ ನಾಗರಿಕರಿಗೆ ರಾತ್ರಿಗಳು ಅಸಹನೀಯವಾಗುತ್ತಿರುವುದು ಹವಾಮಾನ ವ್ಯವಸ್ಥೆಯಲ್ಲಿ ಆಗಿರುವ ಆಳವಾದ ಬದಲಾವಣೆಯನ್ನು ಸೂಚಿಸುವಂತಿದೆ.



ಬಿಸಿಲಿನ ತೀವ್ರ ಝಳ ರಾಜ್ಯದ ಬಹುತೇಕ ಭಾಗಗಳನ್ನು ಬಾಧಿಸುತ್ತಿದೆ. ಉಲ್ಬಣಗೊಂಡಿರುವ ನೀರಿನ ಕೊರತೆ ಮತ್ತು ವಿದ್ಯುತ್ ಸಂಕಷ್ಟವು ಬೇಸಿಗೆಯನ್ನು ಮತ್ತಷ್ಟು ಅಸಹನೀಯಗೊಳಿಸುತ್ತಿದೆ.

ಬೇಸಿಗೆಯ ತೀವ್ರತೆಯ ತಕ್ಷಣದ ಪರಿಣಾಮ ನೀರಿನ ಕೊರತೆಯ ಸಂಕಟಕ್ಕೆ ಸಂಬಂಧಿಸಿದ್ದಾಗಿದೆ. ರಾಜ್ಯದ 207 ತಾಲ್ಲೂಕುಗಳಲ್ಲಿ ನೀರಿನ ಕೊರತೆಯು ಗಂಭೀರ ಪ್ರಮಾಣದಲ್ಲಿದೆ ಎಂದು ಗುರ್ತಿಸಲಾಗಿದೆ. ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿನ ನೀರಿನ ಮಟ್ಟ ಕುಸಿದಿರುವುದು ಕಳವಳ ಹುಟ್ಟಿಸುವಂತಿದೆ. ಉತ್ತರ ಕನ್ನಡ, ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈಗಾಗಲೇ ನೀರಿನ ಕೊರತೆ ಉಲ್ಬಣಗೊಂಡಿದೆ. ಏರುತ್ತಿರುವ ತಾಪಮಾನ ಹಾಗೂ ನೀರಿನ ಕೊರತೆಯು ವಿದ್ಯುತ್ ಬೇಡಿಕೆಯನ್ನು ಹೆಚ್ಚಿಸುತ್ತಿದೆ. ಫ್ಯಾನು ಸೇರಿದಂತೆ ತಂಪುಗಾಳಿಯನ್ನು ಪಸರಿಸುವ ಉಪಕರಣಗಳ ಬಳಕೆಯು ಹೆಚ್ಚಾಗುತ್ತಿರುವುದು ವಿದ್ಯುತ್ ಜಾಲದ ಮೇಲೆ ಭಾರೀ ಒತ್ತಡ ಹೇರುತ್ತಿದೆ. ಕೃಷಿ ಕ್ಷೇತ್ರವೂ ಒತ್ತಡ ಎದುರಿಸುತ್ತಿದೆ. ಭತ್ತ, ಕಬ್ಬು, ಮುಂತಾದ ಬೆಳೆಗಳು ತೇವಾಂಶದ ಕೊರತೆಯನ್ನು ಎದುರಿಸುತ್ತಿವೆ. ಇದು ಇಳುವರಿಯ ಮೇಲೆ ಪರಿಣಾಮ ಬೀರುವುದರೊಂದಿಗೆ, ರೈತರನ್ನೂ ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಲಿದೆ. ಹವಾಮಾನದಲ್ಲಿನ ವ್ಯತ್ಯಾಸವು ಸಾರ್ವಜನಿಕರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ನೀರಿನ ಮೂಲಕ ಹರಡುವ ರೋಗಗಳು, ಸೊಳ್ಳೆಯ ಮೂಲಕ ಹಬ್ಬುವ ಕಾಯಿಲೆಗಳು ಹಾಗೂ ಉದರಸಂಬಂಧಿ ಸಮಸ್ಯೆಗಳು ಬೇಸಿಗೆಯೊಂದಿಗೆ ಹೆಚ್ಚುತ್ತಾ ಹೋಗುವಂತಹವು. ನಾಡಿಗೆ ಮಾತ್ರವಲ್ಲದೆ, ಕಾಡಿಗೂ ಕಿಚ್ಚಿನ ರೂಪದಲ್ಲಿ ಪರಿಣಮಿಸುವ ಒಣಹವೆಯು ಅಪಾಯಕಾರಿಯಾಗಿದೆ.

ಬೇಸಿಗೆಯ ಸಂಕಷ್ಟಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕರು ಸ್ವಯಂ ಎಚ್ಚರಿಕೆಯ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಬಿಸಿಲು ತೀವ್ರವಾಗಿರುವ ಸಮಯದಲ್ಲಿ ಮನೆಯಿಂದ ಹೊರಗೆ ಬಾರದಿರುವುದು, ದೇಹಕ್ಕೆ ನೀರಿನ ಕೊರತೆ ಉಂಟಾಗದಂತೆ ಎಚ್ಚರಿಕೆ ವಹಿಸುವುದು ಹಾಗೂ ಆಹಾರ ಪಾನೀಯಗಳಲ್ಲಿ ಎಚ್ಚರಿಕೆ ವಹಿಸುವ ಮೂಲಕ ಆರೋಗ್ಯದ ಕಾಳಜಿಯನ್ನು ಮಾಡಬೇಕಾಗಿದೆ. ನೀರಿನ ಬಳಕೆ ಮತ್ತು ಮರುಬಳಕೆಯ ಬಗ್ಗೆ ಸಾರ್ವಜನಿಕರು ಎಚ್ಚರ ಮತ್ತು ವಿವೇಕದಿಂದ ವರ್ತಿಸಬೇಕಾಗಿದೆ. ಸರ್ಕಾರ ಕೂಡ ಬೇಸಿಗೆಯ ಝಳದಿಂದ ಸಾರ್ವಜನಿಕರನ್ನು ರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಕುಡಿಯುವ ನೀರಿನ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು, ಋತುಮಾನದ ರೋಗಗಳಿಗೆ ಆಸ್ಪತ್ರೆಗಳನ್ನು ಸಿದ್ಧಪಡಿಸುವುದು ಸರ್ಕಾರ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳಲ್ಲಿ ಸೇರಿವೆ. ವಿದ್ಯುತ್ ಉತ್ಪಾದನಾ ಸಂಸ್ಥೆಗಳು ಗರಿಷ್ಠ ಬೇಡಿಕೆಯ ಸವಾಲನ್ನು ನಿರ್ವಹಿಸಲು ಸಜ್ಜಾಗಬೇಕು. ಇವೆಲ್ಲವೂ ಅನುಸರಿಸಬೇಕಾದ ಆದರ್ಶಗಳಾಗಿರದೆ, ಪಾಲಿಸಲೇ ಬೇಕಾದ ಅಗತ್ಯಗಳಾಗಿವೆ. ತೀವ್ರ ಬೇಸಿಗೆಯ 2016 ನಮಗೆ ಎಚ್ಚರಿಕೆಯ ವರ್ಷವಾಗಿತ್ತು. ಆ ಎಚ್ಚರಿಕೆಯಿಂದ ನಾವು ಯಾವ ಪಾಠವನ್ನೂ ಕಲಿತಿಲ್ಲ ಎನ್ನುವುದನ್ನು 2026 ನೆನಪಿಸುವಂತಿದೆ.

ಚಾಟಿ

ವಿಶ್ವಾಸದಿಂದ ಬರಮಾಡಿಕೊಳ್ಳಿ

ಮಹಿಳೆಯರಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಿರಬಹುದು. ಆದರೆ, ಅವರು ಹುಟ್ಟಿನಿಂದಲೇ ವಿದ್ಯಾವಂತರು, ಪೊರೆಯುವವರು. ಮನೆಯನ್ನು ಕಟ್ಟುವ ಅವರು ದೇಶವನ್ನೂ ಕಟ್ಟಬಲ್ಲರು. ಅವರನ್ನು ಶಾಸನಸಭೆಗಳಿಗೆ ವಿಶ್ವಾಸದಿಂದ ಬರಮಾಡಿಕೊಳ್ಳಿರಿ.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಪ್ರಸ್ತುತ ದಕ್ಷಿಣದ ರಾಜ್ಯಗಳಿಗೆ ಸಮರ್ಪಕ ಪ್ರಾತಿನಿಧ್ಯ ಸಿಗುತ್ತಿಲ್ಲ. ಈಗ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಕೇಂದ್ರ ಸರ್ಕಾರ ಮುಂದಾಗಿದೆ. ಸಮತೋಲನ ಇಲ್ಲದೆ ಸ್ಥಾನಗಳನ್ನು ಹೆಚ್ಚಳ ಮಾಡಿದರೆ ದಕ್ಷಿಣ ರಾಜ್ಯಗಳಿಗೆ ಇನ್ನಷ್ಟು ಅನ್ಯಾಯ ಆಗಲಿದೆ.

ಡಾ. ಪ್ರಭಾ ಮಲ್ಲಿಕಾರ್ಜುನ್, ಕಾಂಗ್ರೆಸ್ ಸಂಸದೆ

25 ವರ್ಷಗಳ ಹಿಂದೆ

ಬುಧವಾರ, 18-4-2001

- **ಕಿರುತೆರೆಯ ಕಾರ್ಯಕ್ರಮಗಳಿಗೂ ರಾಜ್ಯ ಪ್ರಶಸ್ತಿ ಕೊಡಲು ನಿರ್ಧಾರ**

ಬೆಂಗಳೂರು, ಏ. 17– ಚಲನಚಿತ್ರ ಮಾಧ್ಯಮದಲ್ಲಿನ ಕೊಡುಗೆಗಾಗಿ ಪ್ರತಿ ವರ್ಷ ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಕೊಡುತ್ತಿದ್ದ ಸರ್ಕಾರ ಇದೀಗ ಕಿರುತೆರೆಯಲ್ಲಿ ಪ್ರದರ್ಶಗೊಳ್ಳುವ ಅತ್ಯುತ್ತಮ ಧಾರಾವಾಹಿ ಮತ್ತು ಸಾಕ್ಷ್ಯ ಚಿತ್ರಗಳಿಗೂ ಪ್ರಶಸ್ತಿ ಕೊಡಲು ನಿರ್ಧರಿಸಿದ್ದು, 1999–2000ನೇ ಸಾಲಿನ ಅತ್ಯುತ್ತಮ ಧಾರಾವಾಹಿ ಪ್ರಶಸ್ತಿಯು ಟಿ.ಎನ್. ಸೀತಾರಾಂ ನಿರ್ದೇಶನದ 'ಮಾಯಾಮೃಗ'ಕ್ಕೆ ಸಂದಿದೆ.

ಭೂಮಿಕಾ ಸಂಸ್ಥೆ ನಿರ್ಮಿಸಿದ ಈ ಧಾರಾವಾಹಿಗೆ 25,000 ರೂಪಾಯಿಗಳ ಬಹುಮಾನ ದೊರೆಯಲಿದ್ದು, ಅದೇ ಸಾಲಿನಲ್ಲಿ ದೂರದರ್ಶನ ಕೇಂದ್ರ ನಿರ್ಮಿಸಿ ಉಳ್ಳಾಲಿ ಸುಲೋಚನಾ ಮತ್ತು ರಘು ಅವರ ನಿರ್ದೇಶನದಲ್ಲಿ ಪ್ರಸಾರಗೊಂಡ 'ದೀಪಾವಳಿ ದೀಪೋತ್ಸವ' ಎಂಬ ಸಾಕ್ಷ್ಯಚಿತ್ರಕ್ಕೆ 15,000 ರೂಪಾಯಿಗಳ ಬಹುಮಾನ ಪ್ರಕಟಿಸಲಾಗಿದೆ.

- **ಬೀದರ್‌ನಲ್ಲಿ ಲಾಕಪ್ ಸಾವು: ಎಸ್‌ಐ ಸೇರಿ ಮೂವರ ಸಸ್ಪೆಂಡ್**

ಬೀದರ್, ಏ. 17– ಪೊಲೀಸ್ ಕಸ್ಟಡಿಯಲ್ಲಿದ್ದ ಆಟೊ ಚಾಲಕ ಮಾರುತಿ ಕೋಳಿ (25) ಇಂದು ಬೆಳಗಿನ ಜಾವ ಇಲ್ಲಿಯ ಗಾಂಧಿ ಗಂಜ್ ಠಾಣೆಯ ಲಾಕಪ್‌ನಲ್ಲಿ ಮೃತಪಟ್ಟ ಹಿನ್ನೆಲೆಯಲ್ಲಿ ಠಾಣೆಯ ಎಸ್‌ಐ ಸೇರಿದಂತೆ ಮೂವರನ್ನು ಸಸ್ಪೆಂಡ್ ಮಾಡಲಾಗಿದೆ.

75 ವರ್ಷಗಳ ಹಿಂದೆ

ಬುಧವಾರ, 18-4-1951

- **ಕನಿಷ್ಠ ಕೂಲಿ ಶಾಸನ ಕಾರ್ಯಾನ್ವಯ ಕ್ರಮಕ್ಕೆ ಅಧಿಕ ಕಾಲಾವಧಿ**

ದೆಹಲಿ, ಏ. 17– ಕೈಗಾರಿಕಾ ಹಾಗೂ ವ್ಯವಸಾಯ ಕಾರ್ಮಿಕರ ಕನಿಷ್ಠ ಕೂಲಿಯನ್ನು ನಿರ್ಧರಿಸುವ ಬಗ್ಗೆ ಕಾಲ ಪರಿಮಿತಿಯನ್ನು ಹೆಚ್ಚಿಸುವಂತಹ ಕನಿಷ್ಠ ಕೂಲಿ ತಿದ್ದುಪಡಿ ಮಸೂದೆಯು ಇಂದು ಭಾರತ ಪಾರ್ಲಿಮೆಂಟಿನಲ್ಲಿ ಅಂಗೀಕರಿಸಲ್ಪಟ್ಟಿತು.

1948ರ ಕನಿಷ್ಠ ಕೂಲಿ ಶಾಸನವನ್ನು ಕಾರ್ಯಾನ್ವಯಗೊಳಿಸಲು ಸಂಸ್ಥಾನ ಸರ್ಕಾರಗಳಿಗೆ ಈ ಮಸೂದೆ ಪರಿಣಾಮವಾಗಿ ಇನ್ನೂ ಒಂದು ವರ್ಷ ಹೆಚ್ಚು ಕಾಲಾವಕಾಶ ದೊರೆತಿದೆ. 1948ರ ಕನಿಷ್ಠ ಕೂಲಿ ಶಾಸನದಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲಿ ಕನಿಷ್ಠ ಕೂಲಿ ನಿರ್ಧರಿಸಲು 1950ರ ಮಾರ್ಚ್ 31ನೇ ತಾರೀಖು ಕೊನೆಯ ಅವಧಿ ಆಗಿತ್ತು. ಈ ಅವಧಿಯನ್ನು 1951ರ ಮಾರ್ಚ್ 31ನೆಯ ತಾರೀಖಿನವರೆಗೆ ಮುಂದುವರಿಸಲಾಗಿದೆ.

ಗಂಗಾವತರಣವೊ, ಗ್ರಹಣವೊ?

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಗ್ರಾಮೀಣ ಭಾರತದ ಪ್ರತಿ ಮನೆಗೂ ನೀರು ಒದಗಿಸುವ 'ಜಲ ಜೀವನ್ ಮಿಷನ್' ಯೋಜನೆ ಆಕರ್ಷಕವಾಗಿದೆ. ಆದರೆ, ಈ ಯೋಜನೆಯಿಂದಾಗಿ ಹಳ್ಳಿಗಳಿಗೆ ನೀರಿನ ಪೈಪುಗಳು ಬಂದಿವೆಯೇ ಹೊರತು, ನೀರಲ್ಲ! ಸ್ಥಳೀಯ ಜಲಮೂಲಗಳನ್ನು ನಿರ್ಲಕ್ಷಿಸುವ ಯೋಜನೆಗಳಿಂದ ಹಣ ಪೋಲಾಗುವುದರ ಹೊರತು ಹೆಚ್ಚಿನ ಉಪಯೋಗವಿಲ್ಲ.

ಸಾವಿರ ಜನಸಂಖ್ಯೆಯಿರುವ ಮಲೆನಾಡಿನ ಹಳ್ಳಿಯೊಂದರಲ್ಲಿ ಐದು ಪುರಾತನ ಕೆರೆಗಳಿವೆ. ಅಭಿವೃದ್ಧಿಪಡಿಸಿದಲ್ಲಿ ಊರಿನ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆ. ಇದನ್ನು ಮಾಡುವ ಬದಲಾಗಿ, ಗ್ರಾಮ ಪಂಚಾಯಿತಿ ಆಡಳಿತ ಕೊಳವೆಬಾವಿಗಳನ್ನು ಕೊರೆಸಿತು. ನೀರಿನ ತೊಟ್ಟಿಗಳನ್ನು ನಿರ್ಮಿಸಿತು. ಕೆಲವರಿಗೆ ನೀರು ಸಿಕ್ಕಿತು. ಹಲವರಿಗೆ ಸಿಗಲಿಲ್ಲ.

2019ರ ಆಗಸ್ಟ್ 15ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 'ರಾಷ್ಟ್ರೀಯ ಜಲ ಜೀವನ್ ಮಿಷನ್' ಯೋಜನೆಗೆ ಚಾಲನೆ ನೀಡಿದರು. ಪ್ರತಿ ಮನೆಗೂ ಕೊಳಾಯಿ ನೀರು ನೀಡುವುದು ಯೋಜನೆಯ ಉದ್ದೇಶ. 2024ರ ಹೊತ್ತಿಗೆ ಭಾರತದ ಗ್ರಾಮೀಣ ಪ್ರದೇಶಗಳ ಪ್ರತಿ ವ್ಯಕ್ತಿಗೆ ದಿನಕ್ಕೆ 55 ಲೀಟರ್ ಶುದ್ಧ ನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆ ಅದಾಗಿತ್ತು. ಆ ಯೋಜನೆಯ ಮೂಲ ಅಂದಾಜು ವೆಚ್ಚ ₹3.6 ಲಕ್ಷ ಕೋಟಿ. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮವನ್ನು ಪುನರ್ ರಚಿಸಿ ಆರಂಭಿಸಿದ ಈ ಯೋಜನೆ, ಜಗತ್ತಿನ ಅತಿದೊಡ್ಡ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ ಎಂಬ ಹೆಗ್ಗಳಿಕೆ ಹೊಂದಿದೆ. ಆದರೆ, 2024ರಲ್ಲಿ ಶೇ 100ರಷ್ಟು ಗುರಿ ಸಾಧನೆ ಆಗದ ಕಾರಣ 2028ರವರೆಗೆ ಯೋಜನೆ ಮುಂದುವರಿಯಲಿದೆ. ಅಂದಾಜು ವೆಚ್ಚ ₹8.29 ಲಕ್ಷ ಕೋಟಿಗೇರಿದೆ.

2019ರಲ್ಲಿ ದೇಶದ 3.23 ಕೋಟಿ (ಶೇ 17) ಗ್ರಾಮೀಣ ಕುಟುಂಬಗಳಿಗೆ ಮಾತ್ರ ನಲ್ಲಿ ನೀರಿನ ಸಂಪರ್ಕವಿತ್ತು. 2025ರ ಫೆಬ್ರುವರಿ ವೇಳೆಗೆ 15.44 ಕೋಟಿ (ಶೇ 79.74) ಗ್ರಾಮೀಣ ಕುಟುಂಬಗಳಿಗೆ ನಲ್ಲಿ ಸಂಪರ್ಕ ನೀಡಲಾಗಿದೆಯೆಂದು ಹೇಳಲಾಗುತ್ತಿದೆ. ವಾಸ್ತವ ಭಿನ್ನವಾಗಿದೆ. ನೆಲದಾಳದಲ್ಲಿ ಪೈಪಿದೆ, ಮನೆಯ ಮುಂದೆ ಮೀಟರ್ ಅಳವಡಿಸಿದ ನಲ್ಲಿಯೂ ಇದೆ. ಆದರೆ, ನೀರಿಲ್ಲ.

ಕರ್ನಾಟಕದಲ್ಲಿ 'ಜಲ ಜೀವನ್ ಮಿಷನ್' ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಂಘರ್ಷದ ವಿಷಯವಾಗಿ ಮಾರ್ಪಟ್ಟಿದೆ. ಕೇಂದ್ರದ ಪಾಲಿನ ಅನುದಾನ ಬಿಡುಗಡೆ, ಯೋಜನೆಗಾಗಿ ರಾಜ್ಯ ಸರ್ಕಾರ ಈಗಾಗಲೇ ಖರ್ಚು ಮಾಡಿದ ಹಣಕಾಸಿನ ಅಂಕಿ ಅಂಶಗಳು ಏನೇ ಇರಲಿ, ಯೋಜನೆಯು ವೈಫಲ್ಯದತ್ತ ಸಾಗುತ್ತಿರುವುದು ನಿಚ್ಚಳವಾಗುತ್ತಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ಇತ್ತೀಚಿನ ವರದಿಯು, ರಾಜ್ಯದಲ್ಲಿ ಜಲ ಜೀವನ್ ಮಿಷನ್ ಅನುಷ್ಠಾನದಲ್ಲಿನ ಲೋಪಗಳನ್ನು ಎತ್ತಿ ಹಿಡಿದಿದೆ. ತನ್ನ ಪಾಲಿನ ₹24,819 ಕೋಟಿ ಅನುದಾನದಲ್ಲಿ ರಾಜ್ಯ ಬಳಸಿರುವುದು ಶೇ 45ರಷ್ಟು. ಅನುದಾನದ ಅಸಮರ್ಪಕ ಬಳಕೆ, ಪ್ರಮಾಣ ಪತ್ರ ನೀಡುವಲ್ಲಿನ ವಿಳಂಬ ಮತ್ತು ಆಮೆಗತಿಯ ಅನುಷ್ಠಾನದಿಂದ ಸಂಪೂರ್ಣ ಅನುದಾನ ಬಿಡುಗಡೆ ಆಗಿಲ್ಲ. ರಾಜ್ಯದ ಶೇ 34ರಷ್ಟು ಕುಟುಂಬಗಳು ನಲ್ಲಿ ಸಂಪರ್ಕದಿಂದ ವಂಚಿತವಾಗಿವೆ.

ಸಿಎಜಿ ವರದಿಯ ಪ್ರಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೆರವಿನಿಂದ ಸಂಗ್ರಹಿಸಿದ ನೀರಿನ ಮಾದರಿ ಪರೀಕ್ಷೆಯಲ್ಲಿ ಬೆರಳೆಣಿಕೆಯಷ್ಟು ಗ್ರಾಮಗಳು ಮಾತ್ರ ನಿಗದಿತ ಗುಣಮಟ್ಟದ ನೀರಿನ ಸಂಪರ್ಕ ಹೊಂದಿವೆ. ಆರ್ಸೆನಿಕ್ ಮತ್ತು ಇತರ ಭಾರಲೋಹಗಳ ಮಾಲಿನ್ಯ ಪರೀಕ್ಷೆ ನಡೆಸಲು ಪ್ರಯೋಗಾಲಯದಂತಹ ಮೂಲಸೌಕರ್ಯವೇ ಇಲ್ಲದಿರುವುದು ಕಳವಳಕಾರಿ. ಅಂತರ್ಜಲ ಮೂಲಗಳ ಅತಿಯಾದ ಅವಲಂಬನೆಯು ದೀರ್ಘಾವಧಿ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ವರದಿ ಎಚ್ಚರಿಸಿದೆ.

ಕೇಂದ್ರ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂದು ರಾಜ್ಯ ಸರ್ಕಾರ ಆರೋಪಿಸುತ್ತಿದ್ದರೆ, ಸಿಎಜಿ ವರದಿ ರಾಜ್ಯ ಸರ್ಕಾರದ ದೋಷಗಳತ್ತ ಬೊಟ್ಟು ಮಾಡಿದೆ. ರಾಷ್ಟ್ರೀಯ ಮಟ್ಟದಲ್ಲೂ 2024–25ನೇ ಸಾಲಿನಲ್ಲಿ ₹70 ಸಾವಿರ ಕೋಟಿ ಅನುದಾನದಲ್ಲಿ ಬರೀ ಶೇ 30.79ರಷ್ಟು ಮಾತ್ರ ಬಳಕೆಯಾಗಿದೆ. 2019–20ರ ಮೂಲ ಯೋಜನೆಯ ಪ್ರಕಾರ, 19.3 ಕೋಟಿ ಗ್ರಾಮೀಣ ಮನೆಗಳು ಯೋಜನೆಯ ಫಲಾನುಭವಿಗಳು ಎಂದು ಗುರ್ತಿಸಲಾಗಿತ್ತು. ಪರಿಷ್ಕರಣೆಯ ನಂತರದಲ್ಲಿ ಮತ್ತೆ 4 ಕೋಟಿ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕದ ಅಗತ್ಯವಿದೆ ಎಂದು ಹೇಳಲಾಯಿತು. ಯೋಜನೆಯ ಅಧಿಕೃತ ದತ್ತಾಂಶ ಕಾಲಕಾಲಕ್ಕೆ ಪರಿಷ್ಕರಣೆಯಾಗದ ಕಾರಣಕ್ಕೆ ನಿಖರ ಮಾಹಿತಿ ಸರ್ಕಾರದಲ್ಲೂ ಲಭ್ಯವಿಲ್ಲ.

ಯೋಜನೆಯಲ್ಲಿ ಕಂಡುಬರುತ್ತಿರುವುದು ಬರೀ ಹಣ ಬಿಡುಗಡೆಯ ವಿವಾದ ಅಲ್ಲ. ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳಲ್ಲಿ ಟೆಂಡರ್ ದರ ಮತ್ತು ಅನುಮೋದಿತ ದರದ ನಡುವೆ ಶೇ 20ರಿಂದ 30ರಷ್ಟು ವ್ಯತ್ಯಾಸ ಕಂಡುಬಂದಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತಾಂತ್ರಿಕ ಸಿಬ್ಬಂದಿ ಕೊರತೆ ತೀವ್ರವಾಗಿದೆ. ಗುತ್ತಿಗೆದಾರರ ಕಾಮಗಾರಿ ಪರಿಶೀಲನೆ ಕಷ್ಟಕರವಾಗಿದೆ.

ಸ್ವಾತಂತ್ರ್ಯೋತ್ತರ ಭಾರತವು ಜಗತ್ತಿನ ಇತರ ದೇಶಗಳ ಮೇಲಿನ ಅವಲಂಬನೆಯನ್ನು ತಗ್ಗಿಸಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿತು. ಅಣೆಕಟ್ಟುಗಳು, ಕೈಗಾರಿಕೆಗಳು ಮತ್ತವಕ್ಕೆ ಬೇಕಾಗುವ ಮೂಲಸೌಕರ್ಯಗಳ ಕಾರಣಕ್ಕೆ ನಗರೀಕರಣಕ್ಕೆ ಹೆಚ್ಚು ಒತ್ತು ನೀಡುವುದು ನಿರಂತರವಾಗಿ ನಡೆಯಿತು. ಗ್ರಾಮೀಣ ಭಾರತಕ್ಕೂ ಮತ್ತು ನಗರಪ್ರಣೀತ ಇಂಡಿಯಾಕ್ಕೂ ಅಂತರ ಹೆಚ್ಚುತ್ತಲೇ ಹೋಯಿತು.

ಮಲೆನಾಡಿನ ಜಲತಜ್ಞರ ಪ್ರಕಾರ, ಕೇಂದ್ರೀಕೃತ ವ್ಯವಸ್ಥೆಯಿಂದ ಮನೆ ಮನೆಗೆ ನಲ್ಲಿ ಸಂಪರ್ಕ ನೀಡುವುದು ಯಾವ ರೀತಿಯಿಂದಲೂ ಸಾಧುವಲ್ಲ. ರಾಜರ ಕಾಲದಲ್ಲಿ ನಿರ್ಮಿಸಿದ ಕೆರೆಗಳನ್ನು ಪುನಶ್ಚೇತನಗೊಳಿಸಿದರೆ, ಅಂತರ್ಜಲ ತಾನಾಗಿಯೇ ಹೆಚ್ಚುತ್ತದೆ. ಕೊಳವೆಬಾವಿಗಳಿಗಿಂತ ತೆರೆದ ಬಾವಿಗಳಿಂದ ನೀರು ಪಡೆಯುವುದು ಹೆಚ್ಚು ಸೂಕ್ತ. ಸರ್ಕಾರದ ನೀರು ಸರಬರಾಜು ಯೋಜನೆ ಜಾರಿಯಿಂದಾಗಿ ಮಲೆನಾಡಿನ ಸಾಕಷ್ಟು ಕೆರೆಗಳು ನಶಿಸಿವೆ. ಸಾರ್ವಜನಿಕ ಬಾವಿಗಳು ಹೇಳ ಹೆಸರಿಲ್ಲದಂತೆ ಮಾಯವಾಗಿವೆ. ಕೆರೆ ಒತ್ತುವರಿ ನಿರಂತರವಾಗಿದೆ.

ತುಮಕೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಎತ್ತಿನಹೊಳೆ ಯೋಜನೆಯ ಮೂಲ ಯೋಜನಾ ವೆಚ್ಚ ₹12,912 ಕೋಟಿ. ಮರು ಪರಿಷ್ಕರಣೆ ಮಾಡಿದ ಯೋಜನಾ ವೆಚ್ಚ ₹23,251 ಕೋಟಿ. ನೇತ್ರಾವತಿ ಉಪನದಿಗಳಿಂದ ಹೆಚ್ಚುವರಿಯಾಗಿ 24 ಟಿಎಂಸಿ ಅಡಿ ನೀರು ಲಭ್ಯವಾಗುತ್ತದೆ ಎಂದು ಮೊದಲು ಅಂದಾಜಿಸಲಾಗಿತ್ತು. ಹಾಲಿ ಈ ಪ್ರಮಾಣ ಬರೀ 4 ಟಿಎಂಸಿ ಅಡಿ ಎಂದು ಹೇಳಲಾಗಿದೆ. ಲಭ್ಯವಾಗುವ ನೀರಿನ ಪ್ರಮಾಣ ಆರು ಪಟ್ಟು ಕಡಿಮೆ ಮತ್ತು ಯೋಜನಾ ವೆಚ್ಚ ದ್ವಿಗುಣವಾಗಿ, ಒಟ್ಟಾರೆ ಇಡೀ ಯೋಜನೆಯೇ ಸಂಪೂರ್ಣ ವ್ಯರ್ಥವಾಗಲಿದೆ ಎಂದು ಆ ಭಾಗದ ಪರಿಸರ ಹೋರಾಟಗಾರ ದಿನೇಶ್ ಹೊಳ್ಳ ಹೇಳುತ್ತಾರೆ. ವ್ಯರ್ಥ ಯೋಜನೆಗೆ ಇದುವರೆಗೂ ಖರ್ಚು ಮಾಡಲಾದ ಮೊತ್ತ ₹17,147 ಕೋಟಿ. ಇದಕ್ಕೂ ಕಡಿಮೆ ಖರ್ಚಿನಲ್ಲಿ ನಾಲ್ಕು ಜಿಲ್ಲೆಗಳ ಕೆರೆಗಳನ್ನು ಪುನಶ್ಚೇತನಗೊಳಿಸಿದ್ದರೆ, ಅದು ಶಾಶ್ವತ ಪರಿಹಾರವಾಗುತ್ತಿತ್ತು ಎಂದೂ ಅವರು ಹೇಳುತ್ತಾರೆ.

'ನಲ್ಲಿ ನೀರು ಬ್ರಹ್ಮರಾಕ್ಷಸ ಇದ್ದ ಹಾಗೆ. ನೀರಿನ ಎಲ್ಲ ನೈಸರ್ಗಿಕ ಮೂಲಗಳನ್ನೂ ನಾಶ ಮಾಡುವ ಪ್ರಕ್ರಿಯೆಯಿದು' ಎಂದು ಕಾದಂಬರಿಕಾರ ನಾ. ಡಿಸೋಜ ಹೇಳುತ್ತಿದ್ದರು. ತೆರೆದ ಬಾವಿಗಳು, ಕೆರೆ–ಕುಂಟೆಗಳು, ಸದಾ ಹರಿಯುವ ನದಿಗಳು ನಮಗೆ ನೀರಿನ ಮೂಲಗಳಾಗಬೇಕು. ನದಿಗೆ ನಿರಂತರವಾಗಿ ನೀರು ಲಭ್ಯವಾಗುವ ಹಾಗೆ ಮಾಡುವ ಅರಣ್ಯ ಸಂಪತ್ತನ್ನು, ಜೀವಿವೈವಿಧ್ಯ ನೆಲೆಗಳನ್ನು ರಕ್ಷಿಸಿಕೊಳ್ಳಬೇಕು ಎಂದವರು ಕಿವಿಮಾತು ಹೇಳುತ್ತಿದ್ದರು.

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ನೀರಿನ ಯೋಜನೆಗಳ ಪೈಪುಗಳು ಮತ್ತು ಜಲ ಜೀವನ್ ಮಿಷನ್ ಯೋಜನೆಯ ನೀರೇ ಹರಿಯದ ಪೈಪುಗಳು ಸೇರಿದಂತೆ ಅಗೆದಲ್ಲೆಲ್ಲಾ ಪ್ಲಾಸ್ಟಿಕ್ ಪೈಪುಗಳೇ ಸಿಗುತ್ತವೆ ಎನ್ನುತ್ತಾರೆ ಶಿವಾನಂದ ಕಳವೆ. ಸರ್ಕಾರದ ಸಹಾಯವಿಲ್ಲದೆ ಕೆರೆಗಳ ಪುನಶ್ಚೇತನ ಆಂದೋಲನದಲ್ಲಿ ತೊಡಗಿಕೊಂಡಿರುವ ಅವರು, 'ಸ್ಥಳೀಯ ಜಲಮೂಲಗಳನ್ನು ಪುನಶ್ಚೇತನಗೊಳಿಸಿ, ಅದರಿಂದ ಲಭ್ಯವಾಗುವ ನೀರನ್ನು ಸ್ಥಳೀಯರಿಗೆ ಹಂಚುವುದೇ ಸರಿಯಾದ ಮಾರ್ಗ' ಎನ್ನುತ್ತಾರೆ.

'ಪ್ರತಿ ಮನೆಗೂ ಕೊಳಾಯಿ ನೀರು ಎಂಬುದು ಬರೀ ಘೋಷಣೆಯಾಗಿಯೇ ಉಳಿದಿದೆ. ನಾನು ವಾಸಿಸುವ ಹಳ್ಳಿ ಬಿಕಾಂಪುರದಲ್ಲಿ ನೀರು ಶೇಖರಣೆಗೆ ದೊಡ್ಡ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಮನೆ ಮನೆಗೂ ನಲ್ಲಿ ಸಂಪರ್ಕ ನೀಡಲಾಗಿದೆ. ನೀರು ಮಾತ್ರ ಬಂದಿಲ್ಲ. ಇದು ಬರೀ ನನ್ನ ಹಳ್ಳಿಯ ಕಥೆಯಲ್ಲ. ಇಡೀ ದೇಶದ ಕಥೆ' ಎಂದು ಜಲ ಜೀವನ್ ಮಿಷನ್ ಯೋಜನೆಯ ಕುರಿತು ಅಭಿಪ್ರಾಯ ಹಂಚಿಕೊಂಡವರು 'ಭಾರತದ ಜಲಪುರುಷ' ಎಂದು ಪ್ರಸಿದ್ಧರಾದ ರಾಜೇಂದ್ರ ಸಿಂಗ್.

ಸಾಗರ ನಗರಕ್ಕೆ ಕುಡಿಯುವ ನೀರಿನ ಮೂಲ ಶರಾವತಿ ನದಿ. ಈ ನಗರಕ್ಕೆ 30 ಕಿ.ಮೀ. ದೂರದಿಂದ ಗುರುತ್ವಾಕರ್ಷಣೆ ಶಕ್ತಿಗೆ ವಿರುದ್ಧವಾಗಿ ನೀರನ್ನು ಎತ್ತಿ ತರಲಾಗುತ್ತಿದೆ. 24 ಗಂಟೆಯೂ ಜನರಿಗೆ ನೀರು ದೊರೆಯಬೇಕು ಎಂಬುದು ಇಲ್ಲಿನ ಜನಪ್ರತಿನಿಧಿಗಳ ಬಯಕೆ. ಇದರಿಂದ ಆಗುತ್ತಿರುವ ಅನಾಹುತವನ್ನು ಯಾರೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಶೇ 50ರಷ್ಟು ಸಂಸ್ಕರಿಸಿದ ಶುದ್ಧ ನೀರು ನಿರ್ವಹಣೆ ಕೊರತೆಯ ಕಾರಣಕ್ಕೆ ಚರಂಡಿ ಸೇರುತ್ತಿದೆ. 3,000 ಮಿ.ಮೀ.ಗಿಂತ ಹೆಚ್ಚು ಮಳೆ ಬೀಳುವ ಸಿದ್ದಾಪುರ ತಾಲ್ಲೂಕಿಗೂ ಶರಾವತಿ ನೀರನ್ನೇ ಒದಗಿಸುವ ಯೋಜನೆ ಭರದಿಂದ ಸಾಗಿದೆ. ಎತ್ತ ಸಾಗುತ್ತಿದೆ ಆಡಳಿತ?

ವಾಚಕರ ವಾಣಿ

ರಾಷ್ಟ್ರಧ್ವಜ ಬಳಕೆ: ಎಚ್ಚರ–ವಿವೇಕ ಅಗತ್ಯ

ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಕರಕುಶಲ ವಸ್ತುಪ್ರದರ್ಶನವನ್ನು 'ತ್ರಿವರ್ಣ ಧ್ವಜ'ದ ಟೇಪು ಕತ್ತರಿಸಿ ಉದ್ಘಾಟಿಸಲು ನಿರಾಕರಿಸಿದ ವಿಡಿಯೊ ಹರಿದಾಡುತ್ತಿದೆ. ಒಂದು ಕ್ಷಣ ಯೋಚಿಸಿ: ತ್ರಿವರ್ಣ ಧ್ವಜದ ಟೇಪು ಕತ್ತರಿಸಿದ್ದರೆ ಯಾವ ಪ್ರತಿಕ್ರಿಯೆ ಬರುತ್ತಿತ್ತು? ಟೇಪು ಕತ್ತರಿಸದೆ ಇದ್ದುದರಿಂದ ಈಗ ಯಾವ ಪ್ರತಿಕ್ರಿಯೆ ಬರುತ್ತಿದೆ? ಅವರು ತ್ರಿವರ್ಣ ಧ್ವಜದ ಟೇಪು ಕತ್ತರಿಸಿ ಉದ್ಘಾಟಿಸದೆ ಇದ್ದುದು ಒಳ್ಳೆಯದಾಯಿತು. ಯಾವುದೇ ದೇಶದ ಬಾವುಟಕ್ಕೆ ಚಾರಿತ್ರಿಕ, ಸಾಂಸ್ಕೃತಿಕ ಮಹತ್ವ ಇರುವಂತೆಯೇ ಭಾವನಾತ್ಮಕ ಆಯಾಮವೂ ಇರುತ್ತದೆ. ಧ್ವಜ, ದೇಶದ ಅಸ್ಮಿತೆ. ಟೇಪ್‌ನಲ್ಲಿನ ಬಾವುಟ ಕತ್ತರಿಸಿ, ತುಂಡಾಗಿಸಿ ನೆಲಕ್ಕೆ ಬಿಸಾಕುವುದು, ಅದನ್ನು ತುಳಿದು ನಡೆಯುವುದು ಘೋರ ಪಾತಕ ಕೆಲಸ. ಒಮರ್ ಅವರು ಟೇಪು ಕತ್ತರಿಸದೆ ಇದ್ದುದರಿಂದ ಆಗುವ 'ಅಚಾತುರ್ಯ' ತಪ್ಪಿದೆ.

ಆರ್.ಜಿ. ಹಳ್ಳಿ ನಾಗರಾಜ, ಬೆಂಗಳೂರು

ಋತುಚಕ್ರ ರಜೆ ಮತ್ತು ಮಹಿಳೆಯರ ಘನತೆ

ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಿಗೆ ಸಮಾನವಾಗಿ ಹೆಜ್ಜೆ ಹಾಕುತ್ತಿದ್ದಾರೆ. ಆದರೆ, ಋತುಚಕ್ರದ ಸಮಯದಲ್ಲಿ ಅವರು ಅನುಭವಿಸುವ ದೈಹಿಕ ಮತ್ತು ಮಾನಸಿಕ ವೇದನೆಗಳು ನಾಲ್ಕು ಗೋಡೆಗಳ ಮಧ್ಯೆಯಷ್ಟೇ ಚರ್ಚೆಯಾಗುತ್ತವೆ. ಕೆಲಸದ ಸ್ಥಳಗಳಲ್ಲಿ ಅದಕ್ಕೆ ಪೂರಕವಾದ ವಾತಾವರಣ ಇನ್ನೂ ನಿರ್ಮಾಣವಾಗಿಲ್ಲ. ಈ ನಿಟ್ಟಿನಲ್ಲಿ ಋತುಚಕ್ರದ ರಜೆಯನ್ನು ಕಡ್ಡಾಯಗೊಳಿಸುವುದು ಮಾನವೀಯತೆಯಷ್ಟೇ ಅಲ್ಲ, ಅದು ಮಹಿಳೆಯರ ಮೂಲಭೂತ ಹಕ್ಕಿಗೆ ಸಲ್ಲುವ ಗೌರವವೂ ಹೌದು. ಮಹಿಳಾ ಸಬಲೀಕರಣವು ಭಾಷಣಕ್ಕೆ ಸೀಮಿತವಾಗಬಾರದು. ಅವರ ಜೈವಿಕ ಅನಿವಾರ್ಯತೆಯನ್ನು ಅರ್ಥೈಸಿಕೊಂಡು, ಅದಕ್ಕೆ ಪೂರಕವಾದ ನಿಯಮ ರೂಪಿಸಿದಾಗಷ್ಟೇ ನಿಜವಾದ ಸಮಾನತೆ ಸಾಧ್ಯ. ಋತುಚಕ್ರದ ರಜೆಯನ್ನು ಕಡ್ಡಾಯಗೊಳಿಸುವುದು ಮಹಿಳೆಯರ ಘನತೆ ಎತ್ತಿ ಹಿಡಿಯುವ ಐತಿಹಾಸಿಕ ನಡೆಯಾಗಲಿದೆ.

ಗೌರಿ ತ್ರಿವೇಣಿ ದೊಡ್ಮನೆ, ಹೊಸಪೇಟೆ

ಜನಗಣತಿ ಯಶಸ್ಸಿಗೆ ಸಹಕಾರ ಅತ್ಯಗತ್ಯ

ಏಪ್ರಿಲ್ ಒಂದರಿಂದ ಜನಗಣತಿ ಪ್ರಕ್ರಿಯೆ ಆರಂಭಗೊಂಡಿದೆ. ಪ್ರಜ್ಞಾವಂತ ಜನಸಮುದಾಯವು ಸಹಕಾರ ನೀಡಿ ಯಶಸ್ವಿಗೊಳಿಸಬೇಕಿದೆ. ದೇಶದ ಆರ್ಥಿಕತೆ, ಶಿಕ್ಷಣ, ಸಾಕ್ಷರತೆ, ವಸತಿ, ಧರ್ಮ, ಭಾಷೆ ಇತ್ಯಾದಿ ದತ್ತಾಂಶ ಕುರಿತಂತೆ ನಿಖರವಾದ ಮಾಹಿತಿ ಪಡೆಯಲು ಗಣತಿಯಿಂದ ಸಾಧ್ಯವಾಗಲಿದೆ. ಹದಿನೈದು ವರ್ಷಗಳ ನಂತರ ನಡೆಯುತ್ತಿರುವ ಜನಗಣತಿ ಇದಾಗಿದೆ. ಜನ ಗಣ ಮನದ ಈ ಹಬ್ಬದಲ್ಲಿ ಎಲ್ಲ ನಾಗರಿಕರು ಭಾಗವಹಿಸುವುದೇ ರಾಷ್ಟ್ರೀಯತೆಯ ನಿಜವಾದ ಹೆಗ್ಗುರುತು.

ರಾಚು ಎಸ್. ಕೊಪ್ಪಾ, ಬಂಥನಾಳ

ಚಾರಿತ್ರಿಕ ಘಟನೆಯ ತಪ್ಪು ವ್ಯಾಖ್ಯಾನ ಸಲ್ಲ

2002ರಲ್ಲಿ ಆಂಧ್ರಪ್ರದೇಶವನ್ನು ವಿಭಜಿಸಿ ತೆಲಂಗಾಣ ರಾಜ್ಯ ರಚಿಸಲಾಯಿತು. ಆಗಿನ ಕೇಂದ್ರ ಸರ್ಕಾರದ ಈ ನಿರ್ಧಾರವನ್ನು ಸಂಸದ ತೇಜಸ್ವಿ ಸೂರ್ಯ ಅವರು, ಭಾರತ–ಪಾಕಿಸ್ತಾನದ ವಿಭಜನೆಗೆ ಹೋಲಿಸಿದ್ದಾರೆ. ಅವರ ಈ ಅಪ್ರಬುದ್ಧ ನಡೆಯಿಂದ ಕನ್ನಡಿಗರು ತಲೆತಗ್ಗಿಸುವಂತಾಗಿದೆ. ಈ ಹಿಂದೆಯೂ ನೆಹರೂ ಕುರಿತಂತೆ ಆಡಿದ ಅವರ ಮಾತುಗಳು ಟೀಕೆಗೆ ಗುರಿಯಾಗಿದ್ದವು. ಸಂಸತ್‌ನಲ್ಲಿ ಚರ್ಚಿಸಲು ಸಾಕಷ್ಟು ವಿಷಯಗಳಿವೆ. ಹೀಗಿದ್ದರೂ ಜವಾಬ್ದಾರಿಯುತ ಸಂಸದರು ಚಾರಿತ್ರಿಕ ಘಟನೆಗಳನ್ನು ತಪ್ಪಾಗಿ ವ್ಯಾಖ್ಯಾನಿಸುವುದು ದುರದೃಷ್ಟಕರ. ಇನ್ನಾದರೂ ಅವರು ಪ್ರಬುದ್ಧವಾಗಿ ವರ್ತಿಸಲಿ. ಜನಪ್ರತಿನಿಧಿಗಳು ಬಿಡುಬೀಸಾಗಿ ಮಾತನಾಡದೆ ಕರ್ನಾಟಕದ ಹಿರಿಮೆಯು ಹೆಚ್ಚುವಂತೆ ನಡೆದುಕೊಳ್ಳಲಿ.

ಶಾಂತಕುಮಾರ್, ಸರ್ಜಾಪುರ

ಕ್ಷೇತ್ರ ಮರುವಿಂಗಡಣೆ: ಅಸಮಾನತೆ ಸೃಷ್ಟಿ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆಯು ಸಂಕೀರ್ಣವಾದುದು. ಜನಸಂಖ್ಯೆಯ ಆಧಾರದ ಮೇಲೆ ನಡೆಯಲು ನಿರ್ಧರಿಸಿರುವ ಈ ಪ್ರಕ್ರಿಯೆಯು ರಾಜ್ಯಗಳ ನಡುವೆ ದೊಡ್ಡ ಕಂದಕ ಸೃಷ್ಟಿಸಲಿದೆ. ಕರ್ನಾಟಕ, ತಮಿಳುನಾಡು, ಕೇರಳದಂತಹ ರಾಜ್ಯಗಳು ಕುಟುಂಬ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಿವೆ; ಆ ಮೂಲಕ ದೇಶದ ಏಳಿಗೆಗೆ ಕಾರಣವಾಗಿವೆ. ಜನಸಂಖ್ಯೆ ಆಧಾರದ ಮೇಲೆ ಸೀಟು ಹಂಚಿಕೆಯಾದರೆ ಈ ರಾಜ್ಯಗಳಿಗೆ ಲೋಕಸಭಾ ಸ್ಥಾನಗಳ ಸಂಖ್ಯೆ ಕಡಿಮೆಯಾಗಲಿದೆ. ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಪ್ರಾದೇಶಿಕ ಅಸಮತೋಲನ ಸೃಷ್ಟಿಸುವುದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು. ಸಂಸತ್‌ನಲ್ಲಿ ಮಂಡಿಸುವ ಮಸೂದೆಗಳು ಅಸಮತೋಲನ ಸೃಷ್ಟಿಸುವುದಕ್ಕೆ ದಾರಿಯಾಗಬಾರದು.

ಕೃಷ್ಣಮೂರ್ತಿ ಆರ್., ತರೀಕೆರೆ

ಶೌಚಾಲಯ: ಪ್ರತಿ ನಾಗರಿಕನ ಆತ್ಮಗೌರವ

ಕರ್ನಾಟಕವು 'ಬಯಲು ಶೌಚ ಮುಕ್ತ' ರಾಜ್ಯವೆಂದು ಹೆಮ್ಮೆಯಿಂದ ಘೋಷಿಸಿಕೊಂಡಿದೆ. ಆದರೆ, ಈ ಸಂಭ್ರಮದ ಅಡಿಯಲ್ಲಿ ಬಡವರ ಕಣ್ಣೀರು ಮರೆಯಾಗಿದೆ. ಇಂದಿಗೂ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ದಲಿತ ಸಮುದಾಯದ ಕುಟುಂಬಗಳ ಶೇ 50ರಷ್ಟು ಮನೆಗಳಲ್ಲಿ ಶೌಚಾಲಯವಿಲ್ಲ. ಇದು ವ್ಯವಸ್ಥೆಯ ಅಟ್ಟಹಾಸಕ್ಕೆ ಸಾಕ್ಷಿ. ಕತ್ತಲಾದ ಮೇಲೆ ಹೆಣ್ಣುಮಕ್ಕಳು ಅಸಹಾಯಕತೆಯಿಂದ ಬಯಲಿಗೆ ಹೋಗುವ ಸ್ಥಿತಿ ಎಷ್ಟು ನೋವಿನದು? ಮೂಲಸೌಕರ್ಯದ ಕೊರತೆ ಬರೀ ಅಂಕಿ-ಅಂಶಗಳ ಆಟವಲ್ಲ; ಅದು ಮನುಷ್ಯನ ಘನತೆಯ ಪ್ರಶ್ನೆ. ಅಭಿವೃದ್ಧಿಯ ಮಂತ್ರ ಪಠಿಸುವ ಸರ್ಕಾರಗಳು ಕಟ್ಟಕಡೆಯ ವ್ಯಕ್ತಿಯ ನೋವಿಗೆ ಸ್ಪಂದಿಸದಿದ್ದರೆ, ಆ ಪ್ರಗತಿಗೆ ಅರ್ಥವಿದೆಯೆ? ಕಾಗದದ ಮೇಲಿನ ಘೋಷಣೆಗಿಂತ, ಬಡವನ ಮನೆಯ ಬಾಗಿಲಿಗೆ ಸೌಲಭ್ಯ ತಲಪಿದಾಗಷ್ಟೆ ನಿಜವಾದ ಬದಲಾವಣೆ ಸಾಧ್ಯ. ಶೌಚಾಲಯ ಬರೀ ಕಟ್ಟಡವಲ್ಲ; ಅದು ಪ್ರತಿಯೊಬ್ಬ ನಾಗರಿಕನ ಆತ್ಮಗೌರವ.

ಯು.ಎಂ. ನಂದೀಶ, ಕೊಟ್ಟೂರು

ಚುರುಮುರಿ

ಮಾಸ ಸಿಲಿಂಡರ್ ವ್ರತ!

• ತುರುವೇಕೆರೆ ಪ್ರಸಾದ್

ಅವಘಡೇ ಸಂವತ್ಸರೇ ದುರ್ಭಿಕ್ಷ ಯುಗೇ ಯಮಗಂಡ ಯುದ್ಧ ಕಾಲೇ ಈ ಮಾಸ ಸಿಲಿಂಡರ್ ವ್ರತವನ್ನು ಶ್ರದ್ಧಾಭಕ್ತಿಯಿಂದ ಮಾಡತಕ್ಕದ್ದು.

ರಾತ್ರಿ 'ರಮ್ಮೇಸ್ಮಿನ್ ಸನ್ನಿಧಿಂ ಕುರು' ಎಂದು ಎಣ್ಣೆಯಲ್ಲಿ ಮುಳುಗಿದ್ದ ಪತಿದೇವರನ್ನು ತಣ್ಣೀರು ಸುರಿದು ತೊಳೆದು ಪೂಜೆಗೆ ಸಿದ್ಧಪಡಿಸಿಕೊಳ್ಳಬೇಕು. ಪಶ್ಚಿಮ ಏಷ್ಯಾದ ಅಭಿಮುಖವಾಗಿ ಮಂಟಪವನ್ನು ರಚಿಸಿ ಅದರೊಳಗೆ ಖಾಲಿ ಸಿಲಿಂಡರ್ ಇರಿಸಿ, ಅದಕ್ಕೆ ಪಟಾಕಿ, ಬಾಂಬುಗಳನ್ನು ಕಟ್ಟಿ ಸಿಂಗರಿಸಬೇಕು. ಹಾಗೇ ಹಿಟ್ಟಿನಲ್ಲಿ ಡ್ರೋಣು, ಎಫ್–35, ಕ್ಷಿಪಣಿ ಮೊದಲಾದುವುಗಳನ್ನು ಮಾಡಿ ತೋರಣಕ್ಕೆ ತೂಗುಬಿಡಬೇಕು. ಸಗಣಿಯ ಟ್ರಂಪ್ ಪ್ರತಿಕೃತಿಯನ್ನು ನಿರ್ಮಿಸಿ ಇಟ್ಟುಕೊಳ್ಳಬೇಕು.

ಇಂತಿಪ್ಪ ವ್ಯವಸ್ಥೆಯೊಂದಿಗೆ ಭಕ್ತಿಭಾವಗಳಿಂದ ಸಿಲಿಂಡರ್ ದೇವನನ್ನು ಭಜನೆ, ಮಂತ್ರ ತಂತ್ರಗಳಲ್ಲಿ ಹಾಡಿ ಹೊಗಳಬೇಕು. 'ಕೊಲ್ಲಿ ನಡುವಿನ ಹೊರ್ಮುಜ್ ಸಂಧಿಗೊಂದಿಯಲಿ, ತೈಲ ನೌಕೆಗಳ ಹಿಂಡು ಹಿಂಡಿನಲಿ, ಇಂಡಿಯಾ ಹಡಗು ಮುಂದೆ ನಡೆಯಲಿ, ಯಾವ ಭೂಮಿ ಎಷ್ಟಾದರೂ ಕಾಯಲಿ, ಒಲೆಯೇ ಇಲ್ಲದೆ ಅಕ್ಕಿ ನೀರಿಟ್ಟರೆ ಅನ್ನವಾಗುವಂತೆ ಸೂರ್ಯ ಸುಡಲಿ, ನಮಸ್ತೇ ಕರೆಂಟ್ ಮಾಯೇ ಮಸ್ಕಾಂ ವಿದ್ಯುಲ್ಲತೇ! ಕೈ ಕೊಡದೆ ಅನವರತ ಕಾಯೇ ಕಣ್ಮುಚ್ಚಾಲೆ ಮಾತೆ!' ಎಂದು ಪ್ರಾರ್ಥಿಸಬೇಕು.

ಟ್ರಂಪ್ ರಾಕ್ಷಸನನ್ನು ಆವಾಹಿಸಿ 'ಎಲ್ಲಿ ನೋಡಿದರಲ್ಲಿ ತಾನೇ ಎನ್ನುತ ಕೈ ಮಿಲಾಯಿಸುವ ಗಾಂಪನೆಲ್ಲಿ ನೋಡಿದಿರೇ?' ಹಾವಾದ್ರೂ ಕಚ್ಚಬಾರ್ದಾ ಮಾದರಿಯಲ್ಲಿ 'ಡ್ರೋಣಾದ್ರೂ ಬೀಳಬಾರ್ದಾ, ಕ್ಷಿಪಣಿಯಾದ್ರೂ ಸಿಡೀಬಾರದಾ?' ಎಂದು ದರ್ಭೆಯಲ್ಲಿ ಬಡಿಯುತ್ತಾ ಸುಡಬೇಕು.

ಮಧ್ಯೆ ಮಧ್ಯೆ 'ಶಾಶ್ವತ ಕದನವಿರಾಮ ಪ್ರಾಪ್ತಿರಸ್ತು, ಸಿಲಿಂಡರ್ ವೃದ್ಧಿರಸ್ತು, ಪೆಟ್ರೋಲ್ ಪುಷ್ಟಿರಸ್ತು' ಎಂದು ಆಶೀರ್ವಾದ ಮಾಡುವ ಜೋಯಿಸರಿಗೆ ಯಥೋಚಿತ ನಗದು ಕಾಣಿಕೆಯೊಂದಿಗೆ ವಿದ್ಯುತ್ ಒಲೆ ದಕ್ಷಿಣೆಯಾಗಿ ನೀಡಿ, ಗಂಡನಿಗೆ ಕಂಕಣ ಕಟ್ಟಿ, ಪೂಜೆಗಿಟ್ಟ ಸಿಲಿಂಡರ್ ಹೆಗಲ ಮೇಲೆ ಹೊರಿಸಿ ಆರತಿ ಮಾಡಿ ಕ್ಯೂನಲ್ಲಿ ನಿಲ್ಲಲು ಕಳಿಸಿಕೊಡುವುದರೊಂದಿಗೆ ಮಾಸ ಸಿಲಿಂಡರ್ ವ್ರತವು ಸಂಪೂರ್ಣವು!

ಸಂಗತ

ವಿಶ್ವಮಾನವ ಸಂದೇಶ: ಶಿಕ್ಷಣವೇ ಭರವಸೆ

ಸಮ ಸಮಾಜ ರೂಪುಗೊಳ್ಳುವ ಸಂವಿಧಾನದ ಉದಾತ್ತ ಆಶಯಕ್ಕೆ 'ವಿಶ್ವಮಾನವ ಪರಿಕಲ್ಪನೆ'ಯು ಪೂರಕ. ಈ ಭರವಸೆಯ ಮಾರ್ಗದಲ್ಲಿ ಶಿಕ್ಷಕರೇ ಬೆಳ್ಳಿಚುಕ್ಕಿಗಳು!

• ಈ. ಬಸವರಾಜು

ಉದ್ಯೋಗ ಹುಡುಕಿಕೊಂಡು ನಗರಕ್ಕೆ ಬಂದ ಉತ್ತರ ಕರ್ನಾಟಕದ ಕುಟುಂಬವೊಂದರ ಪುಟ್ಟ ಬಾಲಕಿ, ಸರ್ಕಾರಿ ಶಾಲೆಯೊಂದರಲ್ಲಿ ಒಂದನೇ ತರಗತಿಯ ವಿದ್ಯಾರ್ಥಿನಿ. 'ನನಗೆ ಏನೂ ಅರ್ಥ ಆಗಲ್ಲರೀ, ನನಗೆ ಇದನ್ನೆಲ್ಲ ಬರೆಯೋಕಾಗಲ್ಲರೀ' ಎನ್ನುವುದು ಆ ಹುಡುಗಿಯ ಅಳಲು. ಶಿಕ್ಷಕಿ ಆ ಮಗುವಿಗೆ ವಿಶೇಷ ಕಾಳಜಿ ತೋರಿಸಿ, ಕಲಿಕೆಯಲ್ಲಿ ತೊಡಗಿಸಿದರು. ಅದರ ಪರಿಣಾಮವಾಗಿ ಆ ಬಾಲಕಿ ಕಲಿಕೆಯಲ್ಲಿ ಆಸಕ್ತಿ ತೋರುತ್ತಾ, ಅಚ್ಚರಿ ಮೂಡಿಸುವ ರೀತಿಯಲ್ಲಿ ಕಲಿಯತೊಡಗಿದಳು. ಶಿಕ್ಷಕಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿನಿಯಾದಳು.

ಎಲ್ಲವೂ ಸರಿಯಾಯಿತು ಎನ್ನುವಷ್ಟರಲ್ಲಿ ವಿದ್ಯಾರ್ಥಿನಿ ಶಾಲೆಗೆ ಗೈರುಹಾಜರಾದಳು. ವಿದ್ಯಾರ್ಥಿನಿಯ ತಂದೆಗೆ ಶಿಕ್ಷಕಿ ಕರೆಮಾಡಿ ವಿಚಾರಿಸಿದಾಗ ಅವರು, 'ನಮಗೆ ಇಲ್ಲಿ ಯಾರೂ ಮನೆಯನ್ನು ಕೊಡುತ್ತಿಲ್ಲ. ಆದ್ದರಿಂದ ನಾವು ನಮ್ಮ ಊರಿಗೆ ಹೋಗುತ್ತಿದ್ದೇವೆ, ನಮ್ಮ ಮಗಳು ನಿಮ್ಮ ಶಾಲೆಗೆ ಬರುವುದಿಲ್ಲ, ನಮ್ಮೂರಲ್ಲೇ ಶಾಲೆಗೆ ಸೇರಿಸುತ್ತೇನೆ ಮೇಡಂ' ಎಂದರು. ಆಗ ಶಿಕ್ಷಕಿಗೆ ಆದ ನೋವನ್ನು ವಿವರಿಸುವುದು ಹೇಗೆ?

ಇದು ಒಬ್ಬ ಶಿಕ್ಷಕಿ ಅಥವಾ ಶಿಕ್ಷಕರ ಅನುಭವವಲ್ಲ; ನಗರ ಪ್ರದೇಶದಲ್ಲಿ ಕೆಲಸ ಮಾಡುವ ಬಹುತೇಕ ಶಿಕ್ಷಕರು ಇಂಥ ಅನುಭವಗಳಿಗೆ ಒಳಗಾಗಿರುತ್ತಾರೆ. ತಮ್ಮ ಕಣ್ಣ ಮುಂದೆಯೇ ಕೆಲವು ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ಕಂಡು ಅಸಹಾಯಕತೆಯಿಂದ ಮರುಗಿರುತ್ತಾರೆ.

ಕೆಲಸ ಹುಡುಕಿಕೊಂಡು ಪಟ್ಟಣ ಪ್ರದೇಶಕ್ಕೆ ಬರುವವರಲ್ಲಿ ಹೆಚ್ಚಿನವರು ಬಡವರು ಹಾಗೂ ಸಾಮಾಜಿಕವಾಗಿ ಹಿಂದುಳಿದವರು. ಅವರು ಮನೆಯನ್ನು ಹುಡುಕುವಾಗ 'ನಾವು ಇಂತಹ ಜಾತಿಯವರಿಗೆ ಕೊಡುವು ದಿಲ್ಲ', 'ಇಂತಹ ಆಹಾರ ಸೇವಿಸುವ ವರಿಗೆ ಬಾಡಿಗೆಗೆ ಕೊಡುವುದಿಲ್ಲ' ಎನ್ನುವ ಮಾಲೀಕರ ಪ್ರಶ್ನೆಗಳಿಗೆ ತತ್ತರಿಸುತ್ತಾರೆ! ಕೆಲವರು ತಾತ್ಕಾಲಿಕ ಶೆಡ್‌ಗಳಲ್ಲಿ ದಿನದೂಡುತ್ತಾರೆ. ಜಾತಿ ಕಾರಣ ದಿಂದಾಗಿ ದೂರೀಕರಿಸುವ ಮನಃಸ್ಥಿತಿ ಇನ್ನೂ ಇರುವುದಕ್ಕೆ ನಾಗರಿಕ ಸಮಾಜ ನಾಚಿಕೆಪಡಬೇಕು. ಆದರೆ, ಜಾತಿವ್ಯಸನದ ಕೆಲವರು ತಾವು ಮಾಡುತ್ತಿರುವುದೇ ಸರಿ ಎಂಬ ನಂಬಿಕೆ ಹೊಂದಿರುವುದೇ ಇಂತಹ ಘಟನೆಗಳಿಗೆ ಕಾರಣವಾಗುತ್ತದೆ.

ತುಮಕೂರಿನಲ್ಲಿ ಬಂದಗುಂಟೆ ನಾಗರಾಜಯ್ಯ ಎಂಬ ಶಿಕ್ಷಕ ಹಾಗೂ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಿದ್ದರು. ಅವರು ಇತ್ತೀಚೆಗೆ ನಿಧನರಾದರು. ಅವರೊಮ್ಮೆ ಮಾತಿನ ಸಂದರ್ಭದಲ್ಲಿ, 'ನಿಮಗೆ ಜಾತಿವ್ಯವಸ್ಥೆಯ ಕೆಟ್ಟ ಮುಖದ ಪರಿಚಯ ಇರುವುದಿಲ್ಲ, ಅದನ್ನೆಲ್ಲ ನಾನು ಅನುಭವಿಸಿದ್ದೇನೆ' ಎಂದು ಹೇಳಿದ್ದರು. ನಾಗರಾಜಯ್ಯ ಒಂದು ಮನೆಯನ್ನು ಬಾಡಿಗೆಗೆ ಕೇಳಲು ಹೋದಾಗ, ಆ ಮನೆಯ ಮಾಲೀಕರು 'ನೋಡಿ ಸರ್, ನಾವು ಇಂತಿಂತಹ ಜಾತಿಗಳಿಗೆ ಬಾಡಿಗೆಗೆ ಕೊಡುವುದಿಲ್ಲ, ಅವರಿಗೆ ಕೊಟ್ಟು ನಮಗೆ ಬರಬಾರದ ಕಷ್ಟಗಳು ಬಂದವು' ಎಂದರಂತೆ. ಆಗ ನಾಗರಾಜಯ್ಯ ತಮ್ಮ ಜಾತಿಯನ್ನು ಹೇಳಿಕೊಳ್ಳದೆ, 'ಅವರಿಗೆ ಮನೆ ಕೊಡದಿದ್ದರೆ ಬೇಡ, ನನಗೆ ಕೊಡುತ್ತೀರೋ ಇಲ್ಲವೋ ಹೇಳಿ?' ಎಂದರಂತೆ. ಆಗ ಮಾಲೀಕರು, 'ನಿಮಗಾದರೆ ಬಾಡಿಗೆಗೆ ಕೊಡು ತ್ತೇನೆ' ಎಂದು ಮನೆ ಕೊಟ್ಟರಂತೆ. 'ಅಂದಿನಿಂದ ನಾನು ಬಹಳ ಎಚ್ಚರದಿಂದ ಆ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ' ಎಂದವರು ವಿಷಾದದ ಧ್ವನಿಯಲ್ಲಿ ತಮ್ಮ ಕಷ್ಟ ಹೇಳಿಕೊಂಡಿದ್ದರು.

ಇನ್ನೊಬ್ಬರು ಮಾಂಸಾಹಾರಿಯಾಗಿದ್ದರೂ 'ಸಸ್ಯಾಹಾರಿ' ಎಂದು ಹೇಳಿಕೊಂಡು ಮನೆಯನ್ನು ಬಾಡಿಗೆಗೆ ಪಡೆದುಕೊಂಡಿದ್ದರು. 'ಮಾಂಸಾಹಾರ ಇಷ್ಟವಾದರೂ, ಆ ಮನೆಯಲ್ಲಿ ಇರುವತನಕ ಸಸ್ಯಾಹಾರವನ್ನಷ್ಟೇ ಸೇವಿಸಿ ಕಾಲ ಹಾಕಿದೆ' ಎಂದು ಹೇಳಿದರು.

ಕುವೆಂಪು ಅವರು 'ಮಗು ವಿಶ್ವಮಾನವನಾಗಿ ಹುಟ್ಟುತ್ತದೆ, ಬೆಳೆಯುತ್ತಾ ಬೆಳೆಯುತ್ತಾ ನಾವು ಆ ಮಗುವನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಆ ಮಗುವನ್ನು ಮತ್ತೆ ವಿಶ್ವಮಾನವನನ್ನಾಗಿ ಮಾಡುವುದು ಶಿಕ್ಷಣದ ಉದ್ದೇಶವಾಗಬೇಕು' ಎನ್ನುತ್ತಾರೆ. ಆದರೆ, ಶಿಕ್ಷಣ ಪಡೆದವರೇ ಮನೆ ಬಾಡಿಗೆ ಕೊಡುವುದಕ್ಕೆ ಜಾತಿಯನ್ನು ನೋಡುತ್ತಾರೆ. ಇಂಥ ಮನಃಸ್ಥಿತಿ ವ್ಯಾಪಕವಾಗಿರುವಾಗ ನಾವು ಪ್ರಗತಿ ಹೊಂದುವುದು ಹೇಗೆ ಸಾಧ್ಯ? 'ಮಾನವರೆಲ್ಲರೂ ಒಂದೇ' ಎಂದು ಪಂಪ, ಕನಕದಾಸ, ಪುರಂದರದಾಸ, ಕಬೀರ ಸೇರಿದಂತೆ ನಮ್ಮ ಅನೇಕ ಪೂರ್ವಸೂರಿಗಳು ಹೇಳುತ್ತಾ ಬಂದಿದ್ದರೂ ನಾವಿನ್ನೂ ಯಾಕೆ ಅಲ್ಪ ಮಾನವರಾಗಿಯೇ ಉಳಿದಿದ್ದೇವೆ ಎಂಬ ಪ್ರಶ್ನೆಯನ್ನು ಎಲ್ಲರೂ ಹಾಕಿಕೊಳ್ಳಬೇಕಾಗಿದೆ. ವ್ಯವಸ್ಥೆಯಲ್ಲಿನ ಸಮಸ್ಯೆಯಿಂದಾಗಿ ಕೆಲವು ಸಮುದಾಯಗಳು ಹಿಂಸೆ ಅನುಭವಿಸುವುದು, ಶಿಕ್ಷಣದಿಂದ ವಂಚಿತರಾಗುವುದು ಸಮಾಜದ ಅನಾರೋಗ್ಯದ ಸ್ಥಿತಿಯನ್ನು ತೋರಿಸುತ್ತದೆ.

ಕೆಲವು ಜನಪ್ರತಿನಿಧಿಗಳು ಇಂತಹ ಜಾತಿಯವರೇ ತಮ್ಮ ಕ್ಷೇತ್ರಕ್ಕೆ ಬೇಕು ಎಂದು ಅಧಿಕಾರ ಚಲಾಯಿಸುವುದುಂಟು. ದಕ್ಷ, ಪ್ರಾಮಾಣಿಕ ಹಾಗೂ ಬದ್ಧತೆಯಿಂದ ಕೆಲಸ ಮಾಡುವ ಅಧಿಕಾರಿಯನ್ನು ಕೇಳುವ ಬದಲು, 'ತಮ್ಮವರೇ' ಬೇಕು ಎಂದು ಬಯಸುವುದು ಎಷ್ಟು ಸರಿ? ಕಚೇರಿಗಳಲ್ಲಿ, ವಿಶ್ವವಿದ್ಯಾಲಯಗಳಲ್ಲೂ ಜಾತಿಯ ಕಾಯಿಲೆ ಹರಡಿಕೊಂಡಿರುವುದನ್ನು ನೋಡಿದರೆ, ಕನ್ನಡ ವಿವೇಕ ಪರಂಪರೆಗೆ ಬಂದಿರುವ ಗತಿಯನ್ನು ಊಹಿಸಿಕೊಳ್ಳಬಹುದು.

ವ್ಯವಸ್ಥೆ ಪೂರ್ತಿ ಹಾಳಾಗಿಲ್ಲ, ಜಾತ್ಯತೀತವಾಗಿ ಆಲೋಚಿಸುವವರು ಅಲ್ಲಲ್ಲಿ ಇದ್ದಾರೆ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ತಾರತಮ್ಯ ತೋರದೆ, ಅವರಲ್ಲಿ ವಿಶ್ವಮಾನವ ಸಂದೇಶ ಸಾರುವ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ಕೆಲಸವನ್ನು ಪ್ರಜ್ಞಾಪೂರ್ವಕವಾಗಿ ಮಾಡಬೇಕಾಗಿದೆ. ಅದುವೇ ಶಿಕ್ಷಣದ ಪ್ರಮುಖ ಅಂಶವಾಗಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆಪಿಎಸ್‌ಸಿಯ ಹುಳುಕುಗಳು ಬಗೆದಷ್ಟೂ ಹೊರಬರುತ್ತಲೇ ಇವೆ. ಜಾತಿ, ಹಣ, ಸ್ವಜನಪಕ್ಷಪಾತ, ಇವುಗಳ ಜತೆಗೆ ರಾಜಕೀಯದ ನಂಟು; ಹೀಗೆ ಕೆಪಿಎಸ್‌ಸಿಯು ರಾಜ್ಯದ ಉದ್ಯೋಗಾಕಾಂಕ್ಷಿಗಳ ಕನಸುಗಳನ್ನು ನಿರಂತರವಾಗಿ ಕೊಲ್ಲುತ್ತಲೇ ಬರುತ್ತಿದೆ. ಭ್ರಷ್ಟಾಚಾರದಿಂದ ಸರ್ಕಾರಿ ವ್ಯವಸ್ಥೆಯನ್ನು ಹದಗೆಡಿಸುತ್ತಲೇ ಸಾಗುತ್ತಿದೆ. ಇದರ ನಡುವೆಯೇ, ಕೆಪಿಎಸ್‌ಸಿಯ ಕಾರ್ಯಶೈಲಿ ಬದಲಾಗಬೇಕು ಎನ್ನುವ ಒತ್ತಾಯ, ಒತ್ತಡ ತೀವ್ರವಾಗುತ್ತಿದೆ. ಈ ದಿಸೆಯಲ್ಲಿ ಇಬ್ಬರು ಜನಪ್ರತಿನಿಧಿಗಳ ಸಂದರ್ಶನಗಳು ಇಲ್ಲಿವೆ. ಕೆಪಿಎಸ್‌ಸಿ ಶುದ್ಧೀಕರಣಕ್ಕೆ ಆಗಬೇಕಿರುವುದೇನು ಎನ್ನುವ ಬಗ್ಗೆ **ಬಿಜೆಪಿ ಶಾಸಕ ಎಸ್.ಸುರೇಶ್‌ಕುಮಾರ್** ಮಾತನಾಡಿದ್ದರೆ, ಸರ್ಕಾರದ ಮುಂದಿರುವ ಚಿಂತನೆ ಏನು ಎನ್ನುವುದರ ಬಗ್ಗೆ **ಸಚಿವ ಕೃಷ್ಣಬೈರೇಗೌಡ** ಅವರು ಪ್ರಸ್ತಾಪಿಸಿದ್ದಾರೆ

ಸ್ವಚ್ಛವಾಗಲಿ

ಪ್ರಜಾವಾಣಿ ಸಂದರ್ಶನ

ಜಾತಿ, ಸ್ವಜನಪಕ್ಷಪಾತವೇ ಸಂಸ್ಥೆ ಅವನತಿಗೆ ಕಾರಣ

• ಎಸ್.ರವಿಪ್ರಕಾಶ್

ಎಸ್.ಸುರೇಶ್‌ಕುಮಾರ್
ಬಿಜೆಪಿ ಶಾಸಕ

• ಕೆಪಿಎಸ್‌ಸಿಯಲ್ಲಿ ಆಗಬೇಕಾಗಿರುವ ಬದಲಾವಣೆಗಳೇನು?

ಮೂಲಭೂತವಾಗಿ ಈ ಸಂಸ್ಥೆಯಲ್ಲಿ ಸಮಾಜಮುಖಿ ಚಿಂತನೆಯೇ ಇಲ್ಲ. ಸಾರ್ವಜನಿಕರ ಸೇವೆಗಾಗಿ ಇದ್ದೇವೆ ಎಂಬ ಭಾವನೆ ಮತ್ತು ಹೊಣೆಗಾರಿಕೆ ಇಲ್ಲ. ಕಚೇರಿ ಬಾಗಿಲಿಗೆ ಬರುವ ಅಭ್ಯರ್ಥಿಗಳ ಕುರಿತು ಕನಿಷ್ಠ ಕಳಕಳಿಯೂ ಇಲ್ಲ. ಇದರ ಅಧ್ಯಕ್ಷ, ಸದಸ್ಯರು ಮತ್ತು ಕಾರ್ಯದರ್ಶಿಗೆ ಈ ಕುರಿತು ಪ್ರಾಥಮಿಕ ಅರಿವು ಬಾರದ ಹೊರತು ಆಮೂಲಾಗ್ರ ಪರಿವರ್ತನೆ ಸಾಧ್ಯವಿಲ್ಲ. ಸೇವಾತತ್ಪರರನ್ನೇ ಆಯ್ಕೆ ಮಾಡಬೇಕು ಮತ್ತು ಸಂಸ್ಥೆಯ ಶುದ್ಧೀಕರಣವಾಗಬೇಕು. ಆಗಲೇ ಬದಲಾವಣೆ ಸಾಧ್ಯ.

• ನೀವು ಹಿಂದೆ ಕಾನೂನು ಸಚಿವರಾಗಿದ್ದಾಗ ಅಂತಹ ಪ್ರಯತ್ನ ಮಾಡಬಹುದಿತ್ತಲ್ಲವೇ ?

ನಮ್ಮ ಸರ್ಕಾರ ಇದ್ದ ಸಂದರ್ಭದಲ್ಲೇ ನಾನು ಕೆಪಿಎಸ್‌ಸಿ ಅವ್ಯವಸ್ಥೆ ವಿರುದ್ಧ ಹೋರಾಟ ಮಾಡಿದ್ದೆ. 'ನಿಮ್ಮದೇ ಆಡಳಿತ ಇರುವಾಗ ಏಕೆ ಹೋರಾಟ ಮಾಡುತ್ತೀರಿ' ಎಂದು ಹಲವರು ನನ್ನನ್ನು ಪ್ರಶ್ನಿಸಿದ್ದರು. ಇದೊಂದು ಸ್ವಾಯತ್ತ ಸಂಸ್ಥೆ, ಸರ್ಕಾರದ ನಿಯಂತ್ರಣದಲ್ಲಿ ಇಲ್ಲ ಮತ್ತು ಅದಕ್ಕೆ ನಿರ್ದೇಶನ ನೀಡಲೂ ಸಾಧ್ಯವಿಲ್ಲ. ಆದರೆ, ಅಲ್ಲಿನ ಅವ್ಯವಸ್ಥೆ ಬಗ್ಗೆ ಮಾತನಾಡಲೇಬೇಕು ಮತ್ತು ಅಭ್ಯರ್ಥಿಗಳಿಗೆ ಧ್ವನಿ ಆಗಲೇಬೇಕು ಎಂಬ ಕಾರಣಕ್ಕೆ ನಾನು ಧರಣಿ ಕೂತಿದ್ದೆ. ಪೊಲೀಸರು ನನ್ನನ್ನು ಬಂಧಿಸಿ ಕರೆದುಕೊಂಡು ಹೋಗಿದ್ದರು. ನಾನು ಕಾನೂನು ಸಚಿವನಾಗಿದ್ದ ಅವಧಿಯಲ್ಲಿ (2008–2009) ಕೆಪಿಎಸ್‌ಸಿ ಹಗರಣವಾಗಲಿ, ಆಯ್ಕೆ ಪಟ್ಟಿ ವಿವಾದವಾಗಲಿ ಹೈಕೋರ್ಟ್ ಮೆಟ್ಟಿಲು ಹತ್ತಿರಲಿಲ್ಲ. ಅಕ್ರಮಗಳಿಗೆ ಸಂಬಂಧಿಸಿದಂತೆ ಉದ್ಯೋಗಾಕಾಂಕ್ಷಿಗಳು ತಮ್ಮ ಕಷ್ಟ ಹೇಳಿಕೊಂಡು ನನ್ನ ಬಳಿ ಬಂದಿರಲಿಲ್ಲ. ಆದರೂ ಕೆಪಿಎಸ್‌ಸಿ ಬಹಳಷ್ಟು ಸುಧಾರಣೆ ಆಗಬೇಕು ಎಂಬ ಕಾರಣಕ್ಕೇ ಹೋರಾಟ ಮಾಡಿದ್ದೆ.

• ನಿಮ್ಮ ಸರ್ಕಾರದಿಂದ ನೇಮಕಗೊಂಡವರೂ ಕಳಂಕಿತರಾದರಲ್ಲವೇ?

ಹೌದು, ನೂರಕ್ಕೆ ನೂರು ಸತ್ಯ. ಆಯ್ಕೆಯಾಗುವ ಸದಸ್ಯರ ನೈತಿಕತೆ ಮಟ್ಟ ಅಳೆಯುವ ಮಾಪಕ ನಮ್ಮ ಬಳಿ ಇಲ್ಲ. ಸದಸ್ಯರನ್ನು ಆಯ್ಕೆ ಮಾಡಿ ಕಳುಹಿಸುವಾಗ ಒಳ್ಳೆಯ ಉದ್ದೇಶದಿಂದ ಮತ್ತು ಒಳ್ಳೆಯ ವ್ಯಕ್ತಿ ಎಂದು ತಿಳಿದುಕೊಂಡೇ ಕಳುಹಿಸುತ್ತೇವೆ. ಆದರೆ, ಅವರು ಸದಸ್ಯರಾದ ಬಳಿಕ ಯಾವ ರೀತಿ ವರ್ತಿಸುತ್ತಾರೆ ಎಂಬುದನ್ನು ಮೊದಲೇ ತಿಳಿದುಕೊಳ್ಳಲು ಆಗುವುದಿಲ್ಲ. ಸದಸ್ಯನನ್ನು ಆಯ್ಕೆ ಮಾಡುವುದಕ್ಕೂ ಮೊದಲು ಆತನ ಹಿನ್ನೆಲೆ, ಅಧಿಕಾರದಲ್ಲಿ ಇದ್ದಾಗ ಹೇಗೆ ಕೆಲಸ ಮಾಡಿದ್ದ, ಸಾಮಾನ್ಯ ಜನರ ಜತೆ ಹೇಗೆ ಸ್ಪಂದಿಸಿದ್ದ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮಾತ್ರ ಉತ್ತಮ ವ್ಯಕ್ತಿಯ ಆಯ್ಕೆ ಸಾಧ್ಯ. ಜಾತಿ, ಹಣ, ಸ್ವಜನಪಕ್ಷಪಾತ ಬಿಟ್ಟು ಸದಸ್ಯರ ಆಯ್ಕೆ ಮಾಡಬೇಕು. ಎಲ್ಲ ಪಕ್ಷಗಳ ಸರ್ಕಾರ ಇದ್ದಾಗಲೂ ಜಾತಿ, ಸ್ವಜನಪಕ್ಷಪಾತವೇ ಮೇಲುಗೈ ಸಾಧಿಸುತ್ತದೆ. ಸಂಸ್ಥೆಯ ಅವನತಿಗೆ ಇದೇ ಮುಖ್ಯ ಕಾರಣ.

• ಸದಸ್ಯರ ವಿರುದ್ಧ ಅಕ್ರಮಗಳ ಆರೋಪ ಬಂದಾಗ ಕಠಿಣ ಕ್ರಮ ತೆಗೆದುಕೊಳ್ಳಬೇಕಲ್ಲವೇ?

ನಿರ್ದಿಷ್ಟವಾಗಿ ಯಾವ ಸದಸ್ಯರ ಬಗ್ಗೆ ದೂರುಗಳು ಬರುತ್ತವೆಯೋ, ಅದಕ್ಕೆ ಪೂರಕ ಮಾಹಿತಿ ಸಿಕ್ಕಿದಾಗ ಅಂತಹವರ ವಿರುದ್ಧ ವಾಗ್ದಂಡನೆ ವಿಧಿಸುವ ಪ್ರಕ್ರಿಯೆ ಆರಂಭಿಸಬೇಕು. ವಿಧಾನಮಂಡಲ ಈ ಕೆಲಸ ಮಾಡಲೇಬೇಕು. ಕೆಪಿಎಸ್‌ಸಿ ಕಾರ್ಯವೈಖರಿ ಪಾರದರ್ಶಕತೆಯಿಂದ ಕೂಡಿಲ್ಲ. ಕೆಇಎಯೂ ಸಾಕಷ್ಟು ಪರೀಕ್ಷೆ ನಡೆಸುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಒಂದೂ ಆರೋಪ ಕೇಳಿಬಂದಿಲ್ಲ.

• ಈ ಕುರಿತು ಸರ್ಕಾರ ಸದನ ಸಮಿತಿ ರಚಿಸಿದರೆ ಏನನ್ನು ಹೇಳಲು ಬಯಸುತ್ತೀರಿ?

ಇನ್ನೂ ಸದನ ಸಮಿತಿ ರಚನೆ ಆಗಿಲ್ಲ. ಆದ ಬಳಿಕ ನಾನು ಹೇಳುವುದು ಇಷ್ಟೇ, ಕೆಪಿಎಸ್‌ಸಿ ಸದಸ್ಯರನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಒಂದು ಮಾರ್ಗಸೂಚಿ ರೂಪಿಸಬೇಕು. ನ್ಯಾಯಾಧೀಶರನ್ನು ಆಯ್ಕೆ ಮಾಡುವಾಗ ಯಾವ ರೀತಿ ಮಾನದಂಡ ಅನುಸರಿಸಲಾಗುತ್ತದೆಯೋ ಅದೇ ರೀತಿ ಕೆಪಿಎಸ್‌ಸಿ ಸದಸ್ಯರ ಆಯ್ಕೆಗೂ ನಿರ್ದಿಷ್ಟ ಮಾನದಂಡ ರೂಪಿಸಬೇಕು. ಈಗ ನೈತಿಕ ಮತ್ತು ಚಿಂತನಾ ದಿವಾಳಿತನ ಕಾಣುತ್ತಿದೆ. ಆಯ್ಕೆ ಮಾಡಿದವರು ಎಡವುವುದು ಒಂದು ಭಾಗವಾದರೆ, ಎಡವುವವರನ್ನೇ ಆಯ್ಕೆ ಮಾಡುವುದು ಇನ್ನೂ ಅಪಾಯಕಾರಿ. ರಾಜಕೀಯ ಲೇಪ ಇಲ್ಲದ ಸಂಸ್ಥೆ ಆಗಬೇಕು. ನಿವೃತ್ತ ಐಎಎಸ್ ಅಧಿಕಾರಿಗಳಾದ ಟಿ.ಎಂ.ವಿಜಯಭಾಸ್ಕರ್, ಎಸ್.ವಿ.ರಂಗನಾಥ್, ಹಾಲಿ ಡಿಜಿಪಿ ಸಲೀಂ ಅಂತಹವರ ಮಾರ್ಗದರ್ಶನ ಕೇಳಬಹುದು.

• ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಸದಸ್ಯರ ಮೇಲೆ ಸರ್ಕಾರದ ನಿಯಂತ್ರಣ ಅಗತ್ಯವಿದೆಯೇ?

ಕೆಪಿಎಸ್‌ಸಿ ಕಚೇರಿಗೆ ಹಲವು ಬಾರಿ ಭೇಟಿ ಕೊಟ್ಟಿದ್ದೇನೆ. ಆಗ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಾಗಿದ್ದವರ ಪಟ್ಟಿ ನೋಡಿದ್ದೇನೆ. ಹಿಂದೆಲ್ಲ ಎಂತೆಂಥಾ ಅಧ್ಯಕ್ಷರು, ಕಾರ್ಯದರ್ಶಿಗಳು ಆಗಿಹೋಗಿದ್ದರು ಎಂಬುದನ್ನು ನೋಡಿದಾಗ ಸಂತೋಷ ಆಗುತ್ತದೆ. ನನ್ನ ಪ್ರಕಾರ, ಡಾ.ಕೃಷ್ಣ ಮತ್ತು ಗೋನಾಳ್ ಭೀಮಪ್ಪ ಅವರು ಅಧ್ಯಕ್ಷರಾದ ಬಳಿಕ ಸಂಸ್ಥೆ ಅಧಃಪತನದತ್ತ ಜಾರಿತು. ಕೃಷ್ಣ ಅವಧಿಯಲ್ಲೇ 'ತಾಳಿಭಾಗ್ಯ' ಇತ್ಯಾದಿ ಬಂದಿತು. ರಾಜಕೀಯ 'ಗಾಡ್‌ಫಾದರ್'ಗಳು ಸದಸ್ಯರನ್ನು ಆಯ್ಕೆ ಮಾಡಿ ಕಳಿಸಲು ಆರಂಭಿಸಿದ ಬಳಿಕ ಅಧಃಪತನ ಇನ್ನಷ್ಟು ತೀವ್ರವಾಯಿತು. ಹಿಂದೆ ಕೆಪಿಎಸ್‌ಸಿ ಮೂಲಕ ಉತ್ತಮ ಕೆಎಎಸ್ ಅಧಿಕಾರಿಗಳು ಆಯ್ಕೆ ಆಗಿ ಬಂದ ಉದಾಹರಣೆಗಳಿವೆ. ಅವರು ರಾಜ್ಯಕ್ಕೆ ಹೆಮ್ಮೆ ತಂದಿದ್ದಾರೆ. ಕೆಪಿಎಸ್‌ಸಿ ಯಾವಾಗಲೂ ಹೀಗೆ ಇರಲಿಲ್ಲ. ಅಧಃಪತನ ಆರಂಭವಾದಾಗ ಅದನ್ನು ಗಮನಿಸಲಿಲ್ಲ. ಅಧಃಪತನ ತೀವ್ರತೆ ಪಡೆದಾಗ ಎಚ್ಚರಿಕೆ ಗಂಟೆ ಎಂದು ಯಾರೂ ಭಾವಿಸಲಿಲ್ಲ. ಅದರಿಂದ ಈ ದುಃಸ್ಥಿತಿ ಬಂದಿದೆ.

• ಕೆಪಿಎಸ್‌ಸಿಗೆ ಉತ್ತರದಾಯಿತ್ವ ಬೇಡವೇ?

ರಾಷ್ಟ್ರಪತಿಯವರು, ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿಯವರೇ ಉತ್ತರದಾಯಿಗಳಾಗಿದ್ದಾರೆ. ಹೀಗಿರುವಾಗ ಕೆಪಿಎಸ್‌ಸಿ ಸದಸ್ಯರು ಏಕೆ ಉತ್ತರದಾಯಿಗಳು ಆಗಬಾರದು. ಅವರಿಗೆ ವಿಶೇಷ ರಿಯಾಯಿತಿ ಏಕೆ? ಎಷ್ಟೋ ಒಳ್ಳೆಯ ಕಾರ್ಯದರ್ಶಿಗಳು ಬಂದರೂ ಸದಸ್ಯರನ್ನು ನಿಭಾಯಿಸಲು ಆಗಲಿಲ್ಲ. ಸುಧಾರಣೆಗಾಗಿ ಪ್ರಯತ್ನಿಸಿದ ಸುಬೋಧ್ ಯಾದವ್ ಅವರ ವಿರುದ್ಧ ಸದಸ್ಯರು ಯುದ್ಧವನ್ನೇ ಸಾರಿದರು. ಬದಲಿಸಿ ಅಂತ ಪಟ್ಟು ಹಿಡಿದರು. ಕಾರ್ಯದರ್ಶಿ ಮತ್ತು ಸದಸ್ಯರ ಮಧ್ಯೆ ಪರಸ್ಪರ ಗೌರವ ಇರಬೇಕು. ಜಗಳ, ವೈಮನಸ್ಯದಿಂದ ನೇಮಕ ಪ್ರಕ್ರಿಯೆಗೆ ತೊಂದರೆ ಆಗಬಾರದು.

• ಕೆಪಿಎಸ್‌ಸಿಯನ್ನು ಶಾಶ್ವತವಾಗಿ ಮುಚ್ಚುವುದರಿಂದ ಭ್ರಷ್ಟಾಚಾರದ ಸಮಸ್ಯೆ ಪರಿಹಾರ ಆಗುತ್ತದೆಯೇ?

ಮುಚ್ಚಬೇಕು ಎಂದು ಹೇಳುವವರ ಭಾವನೆ ಅರ್ಥವಾಗುತ್ತದೆ. ಕೆಪಿಎಸ್‌ಸಿ ಒಂದು ರೀತಿಯಲ್ಲಿ ಯುವಜನ ವಿರೋಧಿ, ಉದ್ಯೋಗಾಕಾಂಕ್ಷಿಗಳ ಶತ್ರು ಆಗಿದೆ. ಅದನ್ನು ಮುಚ್ಚಿಬಿಡಬೇಕು ಎಂದು ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಹೇಳಿದ್ದರು. ಅಂತಹ ಭಾವನೆ ಎಲ್ಲರಲ್ಲೂ ಬಂದರೂ ಅಚ್ಚರಿ ಇಲ್ಲ. ಆದರೆ, ಮುಚ್ಚುವುದು ಪರಿಹಾರವಲ್ಲ. ಪರೀಕ್ಷೆ ನಡೆಸಲು ಒಂದು ಏಜೆನ್ಸಿ ಇರಬೇಕು. ಎಲ್ಲ ರಾಜ್ಯಗಳಲ್ಲೂ ಲೋಕಸೇವಾ ಆಯೋಗ ಇರಬೇಕು ಎಂದು ಸಂವಿಧಾನ ಹೇಳಿದೆ. ಮುಚ್ಚಬೇಕು ಎನ್ನುವ ಕಾರಣಗಳನ್ನು ಅರ್ಥ ಮಾಡಿಕೊಂಡು, ಮುಚ್ಚದೇ ಇರಲು ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ನಾವು ಚರ್ಚೆ ಮಾಡಬೇಕು.

• ಅಧ್ಯಕ್ಷರು, ಸದಸ್ಯರು ಪ್ರತಿ ವರ್ಷ ತಮ್ಮ ಸಂಪತ್ತು ಘೋಷಿಸಬೇಕು ಎಂಬ ನಿಯಮ ತರುವ ಅಗತ್ಯವಿದೆಯೇ?

ಕೆಪಿಎಸ್‌ಸಿ ವಿಷಯ ಸದನದಲ್ಲಿ ಚರ್ಚೆ ನಡೆಯುತ್ತಿರುವಾಗಲೇ ಅಧ್ಯಕ್ಷರು ತಮ್ಮ ಆಸ್ತಿ ವಿವರ ಘೋಷಿಸಿಕೊಂಡರು. ಈ ರೀತಿ ಆಸ್ತಿ ವಿವರ ಘೋಷಿಸಿಕೊಳ್ಳಲು ಅವರು ಸದನದಲ್ಲಿ ಚರ್ಚೆ ಆಗುವವರೆಗೆ ಕಾಯಬೇಕಿತ್ತೇ? ಎಲ್ಲ ಸದಸ್ಯರೂ ಪಾರದರ್ಶಕವಾಗಿ ತಮ್ಮ ಆದಾಯ ಮತ್ತು ಆಸ್ತಿ ವಿವರಗಳನ್ನು ಪ್ರತಿ ವರ್ಷ ವೆಬ್‌ಸೈಟ್ ಮೂಲಕವೇ ಪ್ರಕಟಿಸಬೇಕು. ಶಾಸಕರು, ಸಚಿವರು ಪ್ರತಿ ವರ್ಷ ಜೂನ್‌ನಲ್ಲಿ ಲೋಕಾಯುಕ್ತಕ್ಕೆ ಆಸ್ತಿ ವಿವರ ಕೊಡುತ್ತೇವೆ. ಅದೇ ರೀತಿ ಕೆಪಿಎಸ್‌ಸಿ ಸದಸ್ಯರು ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಆದಾಯ ಮತ್ತು ಆಸ್ತಿ ವಿವರ ಪ್ರಕಟ ಮಾಡಿದಾಗ, ವಿಶ್ವಾಸಾರ್ಹತೆ ಗಳಿಸುವ ದಿಕ್ಕಿನಲ್ಲಿ ಒಂದು ಹೆಜ್ಜೆ ಇಟ್ಟಂತಾಗುತ್ತದೆ.

• ಮಧ್ಯವರ್ತಿಗಳನ್ನು ಮಟ್ಟ ಹಾಕಲು ಏಕೆ ಸಾಧ್ಯ ಆಗುತ್ತಿಲ್ಲ?

ಕೆಪಿಎಸ್‌ಸಿಯಲ್ಲಿ ಮಧ್ಯವರ್ತಿ ವ್ಯವಸ್ಥೆ ಬೇರುಬಿಟ್ಟಿದೆ. ಅಮಾಯಕರು ಬಲಿಯಾಗುತ್ತಾರೆ. ಪ್ರಾಮಾಣಿಕರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಬೇಕು. ಅವರಿಗೆ ತಮ್ಮ ಉದ್ದೇಶ ಮತ್ತು ಕೆಲಸದ ಬಗ್ಗೆ ಗೌರವ ಮತ್ತು ಹೆಮ್ಮೆ ಇರಬೇಕು. ಆಗ ಮಧ್ಯವರ್ತಿಗಳು ಸುಳಿಯುವುದಿಲ್ಲ. ಸರ್ಕಾರಿ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳನ್ನು ಮಟ್ಟ ಹಾಕಲೆಂದೇ ನಾನು ಸಚಿವನಾಗಿದ್ದಾಗ ಸಕಾಲ ಜಾರಿಗೆ ತಂದಿದ್ದೆ.

• ಪರೀಕ್ಷೆ ಪದ್ಧತಿಯಲ್ಲಿ ಮುಖ್ಯವಾಗಿ ಯಾವ ಬದಲಾವಣೆ ತರಬೇಕು?

ಪ್ರತಿ ಹಂತದಲ್ಲಿ ಅಭ್ಯರ್ಥಿಗೆ ಅವನು ಬರೆದ ಉತ್ತರ ಪತ್ರಿಕೆಗಳ ಪ್ರತಿ ನೀಡಬೇಕು. ತಾನು ಹೇಗೆ ಬರೆದಿದ್ದೇನೆ ಎಂಬುದು ಗೊತ್ತಾಗುತ್ತದೆ. ಎಷ್ಟು ಅಂಕ ಬರುತ್ತದೆ ಎಂಬುದು ಅವನಿಗೆ ಗೊತ್ತಾಗುತ್ತದೆ. ಆಗ ಅಕ್ರಮಗಳು ಮತ್ತು ಕೈಚಳಕ ತೋರಿಸಿ ಅನರ್ಹರನ್ನು ಆಯ್ಕೆ ಮಾಡುವುದಕ್ಕೆ ಕಡಿವಾಣ ಬೀಳುತ್ತದೆ. ❖

ಕೆಪಿಎಸ್‌ಸಿ ಸುಧಾರಣೆಗೆ ರಾಜ್ಯ ಸರ್ಕಾರ ಬದ್ಧವಾಗಿದೆ

• ರಾಜೇಶ್ ರೈ ಚಟ್ಲ



ಕೃಷ್ಣಬೈರೇಗೌಡ
ಕಂದಾಯ ಸಚಿವ

• ಕೆಪಿಎಸ್‌ಸಿ ಯಾಕೆ ಇಷ್ಟೊಂದು ಅಧೋಗತಿಗೆ ಇಳಿದಿದೆ?

ಇವತ್ತಲ್ಲ, ಕಳೆದ 30 ವರ್ಷಗಳಿಂದಲೂ ಇದರ ಮಟ್ಟ ಕುಸಿಯುತ್ತಲೇ ಬಂದಿದೆ. 1998ರಿಂದ ಈಚಿನ ನೇಮಕಾತಿಗಳನ್ನು ಗಮನಿಸಿದರೆ ಸಮಸ್ಯೆ ಉಲ್ಬಣ ಆಗುತ್ತಲೇ ಬಂದಿದೆ. ಹಾಗೆಂದು, ಸುಧಾರಣೆಗೆ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ಕಾಲಕಾಲಕ್ಕೆ ಪ್ರಯತ್ನಗಳು ಆಗಿವೆ. ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆ ಆಗಿಲ್ಲ ಎನ್ನುವುದು ನಿಜ. ಇದೊಂದು ಸಾಂವಿಧಾನಿಕ ಸಂಸ್ಥೆ ಆಗಿರುವುದರಿಂದ ಕೆಲವು ವಿಚಾರಗಳನ್ನು ಬಹಳ ಎಚ್ಚರಿಕೆಯಿಂದ ಮಾತನಾಡಬೇಕಾಗುತ್ತದೆ. ಒಟ್ಟಿನಲ್ಲಿ ಕೆಪಿಎಸ್‌ಸಿ ನಡವಳಿಕೆಯಿಂದ ರಾಜ್ಯದ ಜನ ಬೇಸತ್ತಿದ್ದಾರೆ. ಸುಧಾರಣೆ ಆಗಲೇಬೇಕು ಎನ್ನುವುದು ಒಟ್ಟು ಅಭಿಪ್ರಾಯ ಕೂಡಾ.

• ವ್ಯವಸ್ಥೆ ಹೀಗೇ ಮುಂದುವರಿದರೆ ಹೇಗೆ, ಇದಕ್ಕೊಂದು ಅಂತ್ಯ ಬೇಡವೇ?

ಹೌದು; ಕೆಪಿಎಸ್‌ಸಿ ಯುವಕರ ಬದುಕಿನ ಜೊತೆ ಚೆಲ್ಲಾಟವಾಡುವುದನ್ನು ಸಹಿಸಿಕೊಂಡಿರಲು ಸಾಧ್ಯ ಇಲ್ಲ. ಸರ್ಕಾರ ನಡೆಸುವಂಥವರನ್ನು ನೇಮಕಾತಿ ಮಾಡಿಕೊಡುವ ಸಂಸ್ಥೆಯಿಂದ ಇಷ್ಟೊಂದು ತಪ್ಪುಗಳಾದರೆ, ಆಡಳಿತದ ಮೇಲೆ ನೇರ ಪರಿಣಾಮ ಉಂಟಾಗುತ್ತದೆ. ನೇಮಕಾತಿಯೇ ಅಕ್ರಮವಾದರೆ ಒಳ್ಳೆಯ ಆಡಳಿತ ಕೊಡಲು ಹೇಗೆ ಸಾಧ್ಯ? ಸರಿ ಮಾಡಲೇಬೇಕಾದುದು ಅನಿವಾರ್ಯ.

• ಈ ದುಃಸ್ಥಿತಿಯಲ್ಲಿ ಎಲ್ಲ ಪಕ್ಷಗಳ ಸರ್ಕಾರದ ಪಾಲು ಇದೆಯಲ್ಲವೇ?

ಎಲ್ಲ ಪಕ್ಷಗಳ ಅವಧಿಯಲ್ಲಿ ನೇಮಕಗೊಂಡ ಆಯೋಗದ ಅಧ್ಯಕ್ಷರ, ಸದಸ್ಯರ ಮೇಲೆ ನಾನಾ ಆರೋಪಗಳಿವೆ. ನೇಮಿಸುವ ಸಂದರ್ಭದಲ್ಲಿ ಉತ್ತಮ ಗುಣ, ದಕ್ಷತೆ ಇರುವವರ ಕಡೆಗೆ ಗಮನ ಕೊಡಲಿಲ್ಲ ಎನ್ನುವ ಅಪವಾದ ಸರ್ಕಾರಗಳ ಮೇಲೆ ಬಂದಿದೆ. ಗುಣ, ನಡತೆ ಗೊತ್ತಿದ್ದು, ಒಳ್ಳೆಯವರೆಂದು ನೇಮಕಾತಿಗೊಂಡವರೂ ಅಲ್ಲಿಗೆ ಹೋದ ನಂತರ ಹಳಿ ತಪ್ಪಿದ್ದೂ ಇದೆ. ಇನ್ನು, ಹಲವು ನೇಮಕಾತಿಗಳಲ್ಲಿ ಅಕ್ರಮ ನಡೆದಿದೆ ಎಂದು ಕಂಡುಬಂದು, ನಾನಾ ಒತ್ತಡಗಳಿಗೆ ಮಣಿದು, ಕಾರಣರಾದವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಮುಂದುವರಿಸಿರುವುದೂ ಇದೆ. ಇದರಲ್ಲೂ ಎಲ್ಲ ಪಕ್ಷಗಳೂ ಭಾಗಿ.

• ಆಯೋಗದ ಎಡವಟ್ಟುಗಳಿಗೆ, ಮಾಡುವ ತಪ್ಪುಗಳಿಗೆ ಸರ್ಕಾರವೂ ಕಾರಣ ಎಂಬ ಆರೋಪ ಇದೆಯಲ್ಲ?

ಆಯೋಗ ಮಾಡಿರುವ ತಪ್ಪುಗಳಿಗೆ ಸರ್ಕಾರದಲ್ಲಿ ಇರುವವರು ಎಷ್ಟರ ಮಟ್ಟಿಗೆ ಪ್ರೇರಣೆ ನೀಡಿದ್ದಾರೆ, ಬಲವಂತವಾಗಿ ತಪ್ಪು ಮಾಡಿಸಿದ್ದಾರೆ ಎನ್ನುವ ಆರೋಪಗಳ ಬಗ್ಗೆ ವಿಚಾರ ಮಾಡಬೇಕು. ಸ್ವೇಚ್ಛಾಚಾರದಿಂದ, ಮಾಡಬಾರದ ತಪ್ಪುಗಳನ್ನು ಮಾಡಿ ಸರ್ಕಾರದ ಕಡೆಗೆ ಬೆರಳು ತೋರಿಸುವುದರಲ್ಲಿ ಅರ್ಥ ಇಲ್ಲ. ಸರ್ಕಾರದಲ್ಲಿ ಇರುವವರು ಯಾರೂ ತಪ್ಪು ಮಾಡಿ ಅಂದಿಲ್ಲ. ಸ್ವಾಯತ್ತ ಸಂಸ್ಥೆಯ ಮೇಲೆ ಸರ್ಕಾರದ ನಿಯಂತ್ರಣಕ್ಕೂ ಮಿತಿ ಇದೆ. ಇದನ್ನು ಹೇಳಿದರೆ ಅರ್ಥ ಮಾಡಿಕೊಳ್ಳಲು ಜನ ತಯಾರಿಲ್ಲ. ಸರ್ಕಾರಕ್ಕೆ ನೈತಿಕ ಜವಾಬ್ದಾರಿ ಇದೆ. ಸರ್ಕಾರ ಸಾಧ್ಯವಾದಷ್ಟು ಮಟ್ಟಿಗೆ ಸುಧಾರಣೆಗೆ ಪ್ರಯತ್ನಿಸಿದರೂ ಇನ್ನೊಂದು ಮಟ್ಟದಲ್ಲಿ ವಿಫಲವಾಗುತ್ತಿದೆ. ಸರಿಪಡಿಸುವ ಕೆಲಸವನ್ನು ಮಾಡಲೇಬೇಕು.

• ಸಾಂವಿಧಾನಿಕ ಸಂಸ್ಥೆ ಎಂಬ ಒಂದೇ ಕಾರಣಕ್ಕೆ ಕೆಪಿಎಸ್‌ಸಿ ಬಗ್ಗೆ ಸರ್ಕಾರ ಮೌನ ವಹಿಸಿದೆಯೇ?

ವಾಸ್ತವದಲ್ಲಿ ವ್ಯವಸ್ಥೆಯ ಕುಸಿತ ಕೆಪಿಎಸ್‌ಸಿಯಲ್ಲಿ ಮಾತ್ರ ಎಂದೇನೂ ಅಲ್ಲ. ಎಲ್ಲ ಸ್ವಾಯತ್ತ ಸಂಸ್ಥೆಗಳಲ್ಲಿ ಗುಣಮಟ್ಟ ಕುಸಿದಿದೆ. ಇಲ್ಲಿ ಎದ್ದು ಕಾಣುತ್ತದೆ ಅಷ್ಟೆ. ಹಾಗೆಂದು, ಇದು ಸಮರ್ಥನೀಯವಲ್ಲ. ಸಾಂವಿಧಾನಿಕ ಸಂಸ್ಥೆಗಳು ಸ್ವಯಂ ನಿಯಂತ್ರಣ ಸಾಧಿಸಿ ಕೆಲಸ ಮಾಡಬೇಕು ಎನ್ನುವುದು ಜನ, ಸರ್ಕಾರದ ನಿರೀಕ್ಷೆ. ಇಂತಹ ಸಂಸ್ಥೆಗಳ ಮೇಲೆ ಸರ್ಕಾರದ ಹಸ್ತಕ್ಷೇಪ ಸರಿಯಲ್ಲ. ಹಾಗೆಂದು, ಕೆಪಿಎಸ್‌ಸಿ ವಿಚಾರದಲ್ಲಿ ಸರ್ಕಾರ ಮೌನ ವಹಿಸಿದೆ ಎಂದು ವ್ಯಾಖ್ಯಾನಿಸುವುದೂ ಸಮಂಜಸವಲ್ಲ.

• 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದು ಸಾಕ್ಷ್ಯಗಳ ಸಹಿತ ಬಹಿರಂಗವಾಗಿದ್ದರೂ ಸರ್ಕಾರ ಸಕ್ರಮ ಮಾಡಿರುವುದು ಎಷ್ಟು ಸರಿ?

ಈ ಸಾಲಿನ ನೇಮಕಾತಿಯನ್ನು ಸರ್ಕಾರ ಒಮ್ಮೆಗೇ ಸಕ್ರಮಗೊಳಿಸಿಲ್ಲ. ಪಕ್ಷಾತೀತವಾಗಿ ಶಾಸಕರು ಸೇರಿದಂತೆ ಎಲ್ಲ ವಲಯಗಳಿಂದ ಸಾಕಷ್ಟು ಒತ್ತಡಗಳು ಬಂದ ನಂತರ ಅನಿವಾರ್ಯವಾಗಿ ಈ ಕ್ರಮ ತೆಗೆದುಕೊಳ್ಳಬೇಕಾಗಿ ಬಂತು. ಸಕ್ರಮ ಮಾಡುವುದೇ ಉದ್ದೇಶವಾಗಿರುತ್ತಿದ್ದರೆ, ಪ್ರಕರಣವನ್ನು ಸರ್ಕಾರ ಸಿಐಡಿ ತನಿಖೆಗೆ ವಹಿಸುವ ಅಗತ್ಯ ಏನಿತ್ತು? ತನಿಖಾ ಹಂತದಲ್ಲಿಯೇ ಸಕ್ರಮಗೊಳಿಸಿ ನೇಮಕಾತಿ ಮಾಡಿಕೊಳ್ಳಬಹುದಿತ್ತಲ್ಲವೇ? ನ್ಯಾಯಾಲಯದಲ್ಲಿ ವಾದವನ್ನು ಸಡಿಲಗೊಳಿಸುತ್ತಿದ್ದರೆ ಪ್ರಕರಣವೇ ಬಿದ್ದು ಹೋಗುತ್ತಿತ್ತಲ್ಲವೇ? ಈ ಸಾಲಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ನೇಮಕಾತಿ ಮಾಡಿಕೊಳ್ಳುವಂತೆ ಆಗ್ರಹಿಸಿ ಪ್ರತಿಭಟನೆ ಮಾಡಿದಾಗ ಎಷ್ಟು ಮಾಧ್ಯಮಗಳು ಆ ಅಭ್ಯರ್ಥಿಗಳ ಪರ ನಿಂತಿಲ್ಲ? ಸಕ್ರಮ ಮಾಡಲೇಬೇಕೆಂದು ನಮ್ಮ (ಸರ್ಕಾರ) ಮೇಲೆ ಒತ್ತಡ ಎಲ್ಲಿಂದ ಬಂತು?

• ಅಂದರೆ, ಅಕ್ರಮದ ಸಕ್ರಮಕ್ಕೆ ಎಲ್ಲರೂ ಪಾಲುದಾರರು ಎಂದರ್ಥವೇ?

ಹೌದು, ಅಕ್ರಮ ಸಕ್ರಮ ಮಾಡಲು ಎಲ್ಲ ಕಡೆಯಿಂದಲೂ ಒತ್ತಡ ಇತ್ತು. ಇದರಲ್ಲಿ ಎಲ್ಲರ ಪಾಲು, ಜವಾಬ್ದಾರಿಯೂ ಇದೆ. ಅನರ್ಹರಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡಿ, ಅನರ್ಹರನ್ನು ನೇಮಿಸಿಕೊಳ್ಳಿ ಎಂದು ಎಷ್ಟು ಪ್ರಕರಣಗಳಲ್ಲಿ ಕೋರ್ಟ್‌ಗಳಿಂದ ಆದೇಶ ಬಂದಿಲ್ಲ. ಎಷ್ಟು ಮಂದಿ ನೌಕರರ ಮೇಲಿನ ಶಿಸ್ತುಕ್ರಮ ಕುರಿತ ತನಿಖೆಯನ್ನು ಕೋರ್ಟ್‌ಗಳು ವಜಾ ಮಾಡಿಲ್ಲ. ಸರ್ಕಾರಕ್ಕೆ ಹೆಚ್ಚಿನ ಜವಾಬ್ದಾರಿ ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ

• ಕೆಪಿಎಸ್‌ಸಿ ಸುಧಾರಣೆಗೆ ಪಿ.ಸಿ.ಹೋಟಾ ಸಮಿತಿ ಹಲವು ಶಿಫಾರಸುಗಳನ್ನು ಮಾಡಿದರೂ ಸ್ಥಿತಿ ಬದಲಾಗಿಲ್ಲವಲ್ಲ?

ಹೋಟಾ ಸಮಿತಿ ನೀಡಿದ್ದ ಶಿಫಾರಸುಗಳ ಪೈಕಿ ಶೇ 90ರಷ್ಟು ಅನುಷ್ಠಾನ ಆಗಿವೆ. ಆದರೂ, ನೀವು ಚಾಪೆ ಕೆಳಗೆ ನುಗ್ಗಿದರೆ, ನಾವು ರಂಗೋಲಿ ಅಡಿ ನುಗ್ಗುತ್ತೇವೆ ಎನ್ನುವ ಮನಃಸ್ಥಿತಿಯಾದರೆ ಏನು ಮಾಡೋಣ? ಹೋಟಾ ಸಮಿತಿಯ ಶಿಫಾರಸಿನಲ್ಲಿರುವ ಕೆಲವು ಅಂಶಗಳ ಜಾರಿಗೆ ಕಾನೂನು ತಿದ್ದುಪಡಿ ಆಗಬೇಕು. ತಿದ್ದುಪಡಿ ಮಸೂದೆ ರಾಜ್ಯಪಾಲರಿಂದ ರಾಷ್ಟ್ರಪತಿಗೆ ಹೋಗಿದೆ. ರಾಷ್ಟ್ರಪತಿ ಅಂಕಿತ ಹಾಕಿದ ನಂತರ ಕಾನೂನು ತಿದ್ದುಪಡಿಗೂ ಸರ್ಕಾರ ತಯಾರಾಗಿದೆ.

• 2024ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ ಮುಖ್ಯ ಪರೀಕ್ಷೆ ಬರೆದಿದ್ದ 24 ಅಭ್ಯರ್ಥಿಗಳಲ್ಲಿ 11 ಮಂದಿ ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದಿರುವ ಬಗ್ಗೆ ಅಪಸ್ವರ ಇದೆಯಲ್ಲವೇ?

11 ಮಂದಿ ಯಾಕೆ ಅರ್ಹರಾಗಬಾರದು? ಪರೀಕ್ಷಾ ಕೊಠಡಿಯಲ್ಲಿ ಅಕ್ರಮ ನಡೆದಿದ್ದರೆ ಎಲ್ಲ 24 ಮಂದಿಯೂ ಆಯ್ಕೆ ಆಗಬೇಕಿತ್ತಲ್ಲವೇ? ತಾನು ಆಯ್ಕೆ ಆಗಿಲ್ಲ ಎಂಬ ಒಂದೇ ಕಾರಣಕ್ಕೆ ಅಕ್ರಮ ನಡೆದಿದೆ ಎಂದು ಊಹೆ ಮಾಡಿಕೊಂಡು ಆರೋಪ ಮಾಡುವುದರಲ್ಲಿಯೂ ಅರ್ಥ ಇಲ್ಲ. ಹೀಗೆ ಆರೋಪ ಮಾಡುವವರಿಗೆ ತಮ್ಮ ಸಾಮರ್ಥ್ಯದ ಅರಿವು ಇರಬೇಕು.

ಕಷ್ಟಪಟ್ಟು ಓದಿ ಪರೀಕ್ಷೆ ಬರೆದು ಅರ್ಹರಾದವರ ಮೇಲೆ ವಿನಾ ಕಾರಣ ಆರೋಪಗಳನ್ನು ಮಾಡಿ, ಮಾನಹಾನಿ ಮಾಡುವುದು ಸರಿಯಲ್ಲ. ಇಂತಹ ಬೆಳವಣಿಗೆ ಕಷ್ಟಪಟ್ಟು ಓದಿ ಪರೀಕ್ಷೆ ಬರೆದವರು ಅಕ್ರಮದ ದಾರಿ ಹಿಡಿಯಲು, ಹಣ ಕೊಡದಿದ್ದರೆ ಹುದ್ದೆಯೇ ಸಿಗುವುದಿಲ್ಲ ಎನ್ನುವ ಭಾವನೆ ಮೂಡಲು ಅವಕಾಶ ಮಾಡಿಕೊಡುತ್ತದೆ. ವಾಸ್ತವ ಇದ್ದರೆ, ದಾಖಲೆಗಳು, ಸಾಕ್ಷ್ಯಗಳಿದ್ದರೆ ತನಿಖೆಗೆ ಸರ್ಕಾರ ಸಿದ್ಧ.

• ಸರ್ಕಾರ ಏನೇ ಸುಧಾರಣೆ ತಂದರೂ ಅಕ್ರಮ ಮುಂದುವರಿದಿದೆಯಲ್ಲವೇ?

ನೀವು (ಮಾಧ್ಯಮಗಳು) ಸರ್ಕಾರವನ್ನು ದೂಷಿಸುತ್ತೀರಿ. ಪರೀಕ್ಷೆಯಲ್ಲಿ ಅಕ್ರಮ ನಡೆಯಲು ಎಲ್ಲಿಂದ ಪ್ರೇರಣೆ ಎನ್ನುವುದರ ಬಗ್ಗೆಯೂ ಯೋಚಿಸಬೇಕಲ್ಲವೇ? ಕೊಡುವವರು ಇರುವಾಗ ತೆಗೆದುಕೊಳ್ಳುವವರು ಸುಮ್ಮನಿರುತ್ತಾರೆಯೇ? ಒಬ್ಬರು ಒಂದು ಕೊಡುತ್ತೇನೆ ಅಂದಾಗ, ಅದರ ಎರಡು ಪಟ್ಟು, ಮೂರು ಪಟ್ಟು ಕೊಡಲು ಮುಂದೆ ಬರುವವರಿದ್ದಾರೆ. ಅದಕ್ಕೆ ಏನೆಂದು ಹೇಳೋಣ? ಆರೋಪ ಕೇಳಿಬಂದಾಗಲೆಲ್ಲ ಪರೀಕ್ಷೆಯನ್ನು ರದ್ದು ಮಾಡುತ್ತಲೇ ಹೋಗುವುದು ಪರಿಹಾರವೇ?

• ಕೆಪಿಎಸ್‌ಸಿ ಸುಧಾರಣೆಗೆ ಮುಂದಾದ ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕರನ್ನು ದಿಢೀರ್ ವರ್ಗಾವಣೆ ಮಾಡಿದ್ದರ ಹಕೀಕತ್ತು ಏನು?

ದೀರ್ಘ ಅವಧಿಗೆ ಉಳಿಸಿಕೊಂಡಿರುವುದಕ್ಕೂ ಆರೋಪ ಬಂದಿದೆಯಲ್ಲವೇ? ಪ್ರಾಮಾಣಿಕ, ದಕ್ಷ ಅಧಿಕಾರಿಗಳನ್ನೇ ಕೆಪಿಎಸ್‌ಸಿ ಕಾರ್ಯದರ್ಶಿ ಹುದ್ದೆಗೆ ಸರ್ಕಾರ ನೇಮಿಸುತ್ತ ಬಂದಿದೆ. ಅಭಿಪ್ರಾಯಭೇದ ಉಂಟಾಗುತ್ತಲೇ, ಕಾರ್ಯದರ್ಶಿ ಸಹಕಾರ ಕೊಡುವುದಿಲ್ಲ ಎನ್ನುವುದು ಆಯೋಗದ ದೂರು. ಸ್ವತಂತ್ರವಾಗಿ ಕೆಲಸ ಮಾಡಲು ಆಗುವುದಿಲ್ಲ ಎನ್ನುವುದು ಕಾರ್ಯದರ್ಶಿಯ ಪ್ರತಿದೂರು. ಇದರಿಂದ ಕೆಪಿಎಸ್‌ಸಿ ಕಾರ್ಯ ಚಟುವಟಿಕೆ ಸ್ಥಗಿತಗೊಂಡಿದ್ದೂ ಇದೆ. ಸುಗಮವಾಗಿ ಕೆಲಸ ಮುಂದುವರಿಯಬೇಕೆಂಬ ಕಾರಣಕ್ಕೆ ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕರನ್ನು ಸರ್ಕಾರ ಬದಲಾಯಿಸಿದೆ. ಕೆಲವೊಮ್ಮೆ ಆಯೋಗದ ಅಧ್ಯಕ್ಷರು, ಸದಸ್ಯರು ಕಾರ್ಯದರ್ಶಿಯ ಬದಲಾವಣೆಗೆ ಒತ್ತಡ ಹಾಕಿರಬಹುದು.

• ಸುಧಾರಣೆ ಮಾಡಲು ಸಾಧ್ಯವಾಗದಿದ್ದರೆ ಕೆಪಿಎಸ್‌ಸಿ ಮುಚ್ಚುವುದೇ ಒಳ್ಳೆಯದು ಎನ್ನುವ ವಾದಕ್ಕೆ ಏನು ಹೇಳುತ್ತೀರಿ?

ನಮ್ಮ ಆಕ್ರೋಶದ ಪ್ರತಿಬಿಂಬವಾಗಿ ಹೀಗೆ ಹೇಳಬಹುದಷ್ಟೆ. ಸಾಂವಿಧಾನಿಕ ಸಂಸ್ಥೆಯನ್ನು ಮುಚ್ಚಲು ಅವಕಾಶ ಇದೆಯೇ? ಲೋಕಭವನವನ್ನು ಮುಚ್ಚಿಬಿಡಿ ಅಂದರೆ ಆಗುತ್ತದೆಯೇ?

• ಹಾಗಾದರೆ, ಆಯೋಗ ವಿಶ್ವಾಸಾರ್ಹತೆ ಗಳಿಸುವುದು ಹೇಗೆ?

ಆಯೋಗದ ಸುಧಾರಣೆಗೆ ಕೆಲವು ಕ್ರಮಗಳನ್ನು ಈಗಾಗಲೇ ಘೋಷಿಸಿದ್ದೇವೆ. ಮುಂದಿನ ದಿನಗಳಲ್ಲಿ ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡಲು ಕೂಡಾ ತೀರ್ಮಾನಿಸಿದ್ದೇವೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿರುವ ಪರೀಕ್ಷಾ ವ್ಯವಸ್ಥೆಯನ್ನು ಕೆಪಿಎಸ್‌ಸಿಯಲ್ಲೂ ಅಳವಡಿಸಿಕೊಳ್ಳುವ ಕುರಿತು ಚರ್ಚೆ ನಡೆದಿದೆ. ಆಯೋಗದ ಒಟ್ಟು ಸದಸ್ಯರ ಸಂಖ್ಯೆಯನ್ನು 8ಕ್ಕೆ ಸೀಮಿತಗೊಳಿಸಲು ತೀರ್ಮಾನಿಸಿದ್ದೇವೆ.

ಪ್ರತಿ ವರ್ಷ ನಿಯಮಿತವಾಗಿ ನೇಮಕಾತಿಗಳನ್ನು ನಡೆಸುವ ಜೊತೆಗೆ, ಕಾಲಮಿತಿ ನಿಗದಿಪಡಿಸಲು ಉದ್ದೇಶಿಸಲಾಗಿದೆ. ನೇಮಕಾತಿಯಲ್ಲಿ ಪಾರದರ್ಶಕತೆ ತರಲು ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಆಗಬೇಕು. ಕೆಲವು ಸುಧಾರಣೆಗಳಿಗೆ ಸಂಬಂಧಿಸಿದಂತೆ ಕಡತ ಸಲ್ಲಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗೆ ಮುಖ್ಯಮಂತ್ರಿಯವರು ಈಗಾಗಲೇ ಸೂಚನೆ ನೀಡಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕೆಪಿಎಸ್‌ಸಿಯ ಸ್ಥಿತಿಯ ಬಗ್ಗೆ ಉಭಯ ಸದನಗಳಲ್ಲಿ ಗಂಭೀರ ಚರ್ಚೆ ನಡೆದು, ಕಾನೂನು, ನಿಯಮ, ಪದ್ಧತಿಯಲ್ಲಿ ಏನೆಲ್ಲ ಬದಲಾವಣೆಗಳನ್ನು ತರಬಹುದೆಂದು ಸದನ ಸಮಿತಿ ರಚಿಸಿ, ಅಭಿಪ್ರಾಯ ಪಡೆಯಲು ನಿರ್ಧರಿಸಲಾಗಿದೆ. ಸುಧಾರಣೆ ಮಾಡಲೇಬೇಕು ಎನ್ನುವುದು ಸರ್ಕಾರದ ಬದ್ಧತೆ. ಆ ಪ್ರಯತ್ನ ಖಂಡಿತ ಮಾಡುತ್ತೇವೆ. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

18 ಏಪ್ರಿಲ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಪ್ರತಿಪದ್ ಗಂ. 14-11. ನಕ್ಷತ್ರ: ಅಶ್ವಿನಿ ಗಂ. 9-43 ಯೋಗ: ಪ್ರೀತಿ ಗಂ. 23-56 ಕರಣ: ಬವ ಗಂ 14-11 ಮೇಷ ಮಾಸದ 05 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 , ಸೂರ್ಯೋದಯ : 06-19 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 29 ಶವ್ವಾಲ್ ,ಅದೃಷ್ಟ ಸಂಖ್ಯೆ : 9, 1

ಮೇಷ: ಮಾಧ್ಯಮ ಮಿತ್ರರಿಂದ ತಪ್ಪು ಮಾಹಿತಿ ರವಾನೆಯಾಗಬಹುದು. ಹಾಗಾಗಿ ಜಾಗ್ರತೆ ವಹಿಸಿ. ದೈವಾರಾಧನೆಯಿಂದ ರೈತರಿಗೆ ಅನುಕೂಲ. ಬಾಲ್ಯದ ಕನಸು ಈಡೇರುವ ದಿನವಾಗಿದೆ.

ವೃಷಭ: ದಾಸ್ತಾನನ್ನು ಅಚ್ಚುಕಟ್ಟುಗೊಳಿಸುವ ಸಲುವಾಗಿ ರಿಯಾಯಿತಿಯ ದರದ ಮಾರಾಟವನ್ನು ಮಾಡುವ ಯೋಚನೆ ಮಾಡುವಿರಿ. ಅಮೂಲ್ಯ ವಸ್ತು ಬಹಳ ದಿನದ ನಂತರ ಕೈ ಸೇರಲಿದೆ.

ಮಿಥುನ: ಕೆಲವೊಂದು ಅನಿರೀಕ್ಷಿತ ಹಾಗೂ ಉತ್ತಮ ಘಟನೆಗಳು ಜರುಗಲಿವೆ. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಗಮನಿಸಿ. ಎಲ್ಲರ ಪ್ರೀತಿ ವಿಶ್ವಾಸವನ್ನು ಗೆಲ್ಲುವಂತಾಗುತ್ತದೆ.

ಕರ್ಕಾಟಕ: ಮಾಡದೇ ಇರುವ ಕೆಲಸಗಳನ್ನು ಪೂರೈಸುವ ಬಗ್ಗೆ ಗಮನಹರಿಸಿ. ಇನ್ನೊಬ್ಬರಿಗೆ ಗೌರವವನ್ನು ಕೊಟ್ಟು ನಂತರದಲ್ಲಿ ನೀವು ಗೌರವವನ್ನು ಅಪೇಕ್ಷಿಸಬಹುದು. ದೂರ ಪ್ರಯಾಣದ ಸಾಧ್ಯತೆಗಳು ಹೆಚ್ಚಿವೆ.

ಸಿಂಹ: ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಪರಿಶ್ರಮದ ಜತೆ ದೇವರ ಕೃಪೆಗೆ ಪಾತ್ರರಾಗಬೇಕು. ಮಗಳ ಮದುವೆಯ ನಿಶ್ಚಯ ಸಂತೋಷವನ್ನು ಉಂಟುಮಾಡುತ್ತದೆ.

ಕನ್ಯಾ: ರೇಷ್ಮೆ ವ್ಯವಹಾರದಲ್ಲಿ ಆದಾಯವಿದ್ದು , ವ್ಯವಹಾರವನ್ನು ವಿಸ್ತರಿಸುವ ಬಗ್ಗೆ ಯೋಚಿಸುವಿರಿ. ಸಹೋದ್ಯೋಗಿಗಳ ಎಲ್ಲಾ ಸಲಹೆಗಳನ್ನು ನಿರಾಕರಣೆ ಮಾಡುವುದು ನಷ್ಟಕ್ಕೆ ಕಾರಣವಾಗುವುದು.

ತುಲಾ: ಕಾರ್ಯಕ್ಷೇತ್ರದಲ್ಲಿನ ಒತ್ತಡಗಳನ್ನು ಅನುಭವಿಸಲು ಕಷ್ಟವಾಗಬಹುದು. ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಟ್ಟು ಮಡದಿ ಮಕ್ಕಳೊಂದಿಗೆ ಸಂತಸದಿಂದ ಇರುವಿರಿ.

ವೃಶ್ಚಿಕ: ಧಾರ್ಮಿಕ ಮುಖಂಡರ ಸಾಮಾಜಿಕ ಕಳಕಳಿಯ ಮಾತುಗಳು ಆಕರ್ಷಿಸಲಿವೆ. ಇಂದಿನಿಂದ ಸಾಮಾಜಿಕ ಸೇವೆ ಮಾಡುವ ನಿರ್ಧಾರ ಕೈಗೊಳ್ಳುವಿರಿ. ವೈಯಕ್ತಿಕ ಪ್ರಗತಿ, ಅಭಿವೃದ್ಧಿಯಿಂದ ಮನಸ್ಸಿಗೆ ಸಂತೋಷವಿರುವುದು.

ಧನು: ಅಡೆತಡೆಗಳು ಮನಸ್ಸನ್ನು ಚಂಚಲಗೊಳಿಸದಂತೆ ಜಾಗ್ರತೆ ವಹಿಸಿ. ಹೀಗೆ ಮಾಡಿದಲ್ಲಿ ಕೆಲಸದ ಗುಣಮಟ್ಟ, ಕರ್ತವ್ಯ ನಿಷ್ಠೆಯು ಮೇಲಧಿಕಾರಿಗಳ ಗಮನಕ್ಕೆ ಬಂದು ಬಡ್ತಿಗೆ ಮೂಲ ಕಾರಣವಾಗುತ್ತದೆ.

ಮಕರ: ಕೆಟ್ಟ ಪರಿಸ್ಥಿತಿಯಿಂದ ಹೊರಗೆ ಬರಲು ಕೆಲವು ಸಮಯದ ತನಕ ಮೌನವಾಗಿರಬೇಕು. ಹಾಡು ಹರಟೆಗಳಲ್ಲಿ ಕಾಲ ಕಳೆಯುವುದು ಬಿಡಿ. ಸೌಂದರ್ಯಪ್ರಜ್ಞೆಯು ಇತರರಿಗೂ ಮುದವನ್ನು ಕೊಡುವಂತಿರಲಿ.

ಕುಂಭ: ತಪ್ಪಿ ಹೋದ ಸ್ವಂತ ಆಸ್ತಿ ಅಥವಾ ಪಿತ್ರಾರ್ಜಿತ ಆಸ್ತಿ ಪುನಃ ನಿಮ್ಮ ಕೈ ಸೇರಲು ಪ್ರಯತ್ನ, ತಂತ್ರಗಾರಿಕೆ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಉತ್ತಮ ವ್ಯಾಸಂಗ ಮಾಡುವಿರಿ.

ಮೀನ: ಕಾರ್ಯ ರಂಗದಲ್ಲಿ ಸತತ ಪ್ರಯತ್ನ ಮತ್ತು ಅನುಭವಸ್ಥರ ಸಹಯೋಗದಿಂದ ಪ್ರಗತಿಯನ್ನು ನೋಡಬಹುದು. ಯಾವುದೇ ವಿಚಾರದ ಬಗ್ಗೆ ದೀರ್ಘವಾಗಿ ಆಲೋಚಿಸಿ ತೀರ್ಮಾನಿಸಿದಲ್ಲಿ ಜಯವಾಗುವುದು.

ಪದಬಂಧ 6377

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ರೂಪ ಬಲು ವಿರಳ (4)
3.ತನಯನ ಬಳಿಯಿರುವವ ತುಂಬಾ ಹಳಬ (4)
5.ಅಧಿಕ ಪದಕ್ಕೊಂದು ಪರ್ಯಾಯ ಪದ (3)
7.ಸೊಂಟಕ್ಕೆ ಸುತ್ತುವ ಪಂಜೆ (2)
8.ಬೆಟ್ಟವನ್ನು ಆವರಿಸಿರುವ ಕಾಡು (2)
9.ಗುಗ್ಗುರಿಯನ್ನು ತಿನ್ನುವತ್ತಲೇ ನೆಟ್ಟ ಲಕ್ಷ್ಯ (2)
10.ಮಕರ ಸಂಕ್ರಾಂತಿಯಿಂದ ಕರ್ಕಾಟಕ ಸಂಕ್ರಾಂತಿಯವರೆಗಿನ ಕಾಲ (5)
12.ಭಾಷಣ ಮಾಡುತ್ತಿರುವಾಗ ನೀಡಿದ ವಚನ (2)
13.ಪರವಶಗೊಂಡು ನೋಡಿದ ಹೆಣ (2)
14.ಜಾಗರೂಕತೆಯಿಂದಲೇ ಈ ಸ್ಥಳ ಹುಡುಕಿ! (2)
15.ಮೆತ್ತಿರುವುದೆಲ್ಲಾ ಪವಿತ್ರವಾದ ಮಣ್ಣು (3)
17.ಒಳಗಿನ ಅಭಿಪ್ರಾಯವಿದು (4)
18.ಸನ್ನಿಗೊಳಗಾದವನ ಎದುರು! (4)

ಮೇಲಿಂದ ಕೆಳಕ್ಕೆ

1.ಹೃದಯದಿಂದ ದೇಹದ ಇತರೆಡೆಗೆ ರಕ್ತ ಪೂರೈಸುವ ನಾಳ (5)
2.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3.ಇದೇ ಯುಕ್ತವಾದ ವೇಳೆ (3)
4.ಚಲುವಾದ ಹೆಂಗಸು ತರಿಯಲ್ಲಿ ನಿಂತಿದ್ದಾಳಲ್ಲಾ? (4)
6.ಮತ್ತೆ ಮತ್ತೆ ಉಂಟಾಗುವುದು (5)
9.ಗುಡಾಣದಂತಿರುವವನ ಸ್ವಭಾವ (2)
10.ಅರುಣೋದಯದ ಕಾಲ (2)
11.ಲೋಕವನ್ನು ನೋಡುವುದು (5)
12.ಭಾಗ ಹಿಡಿದೇ ನಿಂತಿದ್ದಾನೆ ಈ ಹರಿದಾಸ! (4)
15.ಎಲ್ಲರೂ ದಂಗಾಗುವಂತೆ ನುಡಿಸಿದ ಚರ್ಮವಾದ್ಯ (3)
16.ಕೆಲವರಷ್ಟೇ ಮಾಡುವ ಕಾರ್ಯ (3)



6376ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಹರವಿ 3.ಸಮೀಕ್ಷಕ
5.ಪ್ರಥಮಾ 6.ಕಣಕ
8.ಸುಭಗ 10.ಆನಂದಾಶ್ರು
11.ರಸದಾಳಿ 12.ತಮಾಳ
14.ಕದಂಬ 16.ಲಾಲಸ
18.ಅವಧಾನಿ 19.ಖರೀದಿ

ಮೇಲಿಂದ ಕೆಳಕ್ಕೆ:

2.ವಿಪ್ರ 3.ಸಮಾರಂಭ
4.ಕ್ಷಣಿಕ 7.ಕದಳಿ
8.ಸುಶ್ರುತ 9.ಗರಳ
10.ಆಸ್ತಿಕ 13.ಮಾತುಲಾನಿ
15.ಬಡವ 17.ಸಖ

ಸುಡೊಕು 6760

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			3		1		6
4							3	
	1		7	6	2		5	4
		3	5		6	4		
	4			2			6	7
6		5	1		7	3		
	8		6			2		3
2		6			3			
	3	4		7		6		5

6759 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,196
ಇಂದಿನ ಅಂತ್ಯ:	24,353
ದಿನದ ಗರಿಷ್ಠ:	24,371
	156

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹570
12 ಕ್ಕೆ	₹78
ಮೈಸೂರು: 100 ಕ್ಕೆ	₹580

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹227
ಆರ್‌ಎಸ್‌ಎಸ್-5	₹221
ಗುಡ್ ಲಾಟ್	₹200

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹415-716
ದ್ವಿತಳಿ (ಬಿ.ವಿ)	₹266-820

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹10000-13000
ಬೆಂಗಳೂರು	₹29000-35000
ದಾವಣಗೆರೆ	₹12800-12800

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1700 (1730)
ಸೋಯಾ (ರಿಫೈನ್ಡ್)	₹1540 (1540)
ಸೂರ್ಯಕಾಂತಿ (ರಿಫೈನ್ಡ್)	₹1675 (1680)
ಪಾಮೋಲಿನ್	₹1440 (1440)

ಹೊರ್ಮುಜ್ ಮುಕ್ತ: ಮಾರುಕಟ್ಟೆ ಸ್ವಾಗತ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬ್ಯಾರಲ್ 89 ಡಾಲರ್‌ಗೆ ಇಳಿಕೆ

ನ್ಯೂಯಾರ್ಕ್ / ಬೈರೂತ್ (ಎಪಿ): ಹೊರ್ಮುಜ್ ಜಲಸಂಧಿಯನ್ನು ಪೂರ್ಣವಾಗಿ ತೆರೆಯಲು ಇರಾನ್ ಒಪ್ಪಿರುವುದರಿಂದ ಕಳೆದ ಒಂದೂವರೆ ತಿಂಗಳಿಂದ ಇಂಧನ ಬಿಕ್ಕಟ್ಟು ಎದುರಿಸುತ್ತಿದ್ದ ದೇಶಗಳು ನಿಟ್ಟುಸಿರು ಬಿಟ್ಟಿವೆ. ಮಾರುಕಟ್ಟೆಯಲ್ಲೂ ಚೇತರಿಕೆ ಕಂಡುಬಂದಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಶೇ 10ಕ್ಕೂ ಹೆಚ್ಚು ಇಳಿಕೆ ಆಗಿದ್ದು, ಬ್ಯಾರಲ್‌ಗೆ 89 ಡಾಲರ್‌ಗಿಂತ ಕಡಿಮೆಯಾಗಿದೆ. ಪಶ್ಚಿಮ ಏಷ್ಯಾ ಸಂಘರ್ಷ ತೀವ್ರಗೊಂಡ ನಂತರ ದಾಖಲಾಗಿರುವ ಕನಿಷ್ಠ ಧಾರಣೆ ಇದಾಗಿದೆ. ಮುಂಬರುವ ದಿನಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಮತ್ತು ತೈಲ ಪೂರೈಕೆ ಹೆಚ್ಚುವ ನಿರೀಕ್ಷೆ ಇದ್ದು, ಬೆಲೆ ಇಳಿಕೆ ಆಗಬಹುದು ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ. ವಿವಿಧ ದೇಶಗಳ ಷೇರುಪೇಟೆಗಳಲ್ಲಿನ ವಹಿವಾಟು ಶುಕ್ರವಾರ ಶೇ 11ರಷ್ಟು ಏರಿಕೆ ಕಂಡುಬಂದಿದೆ.

ಹೊರ್ಮುಜ್ ಜಲಸಂಧಿ ಮುಕ್ತಗೊಂಡಿರುವುದು ಪರ್ಷಿಯನ್ ಕೊಲ್ಲಿಯಿಂದ ತೈಲ ಹಡಗುಗಳು ನಿರ್ಗಮಿಸಲು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಕಚ್ಚಾ ತೈಲ ಪೂರೈಸಲು ಅನುವು ಮಾಡಿಕೊಡುತ್ತದೆ.

ಅಮೆರಿಕದ ಫೆಡರಲ್ ರಿಸರ್ವ್ ಏಪ್ರಿಲ್ 28ರಂದು ಪ್ರಕಟಿಸಲಿರುವ ಹಣಕಾಸು ನೀತಿಯಲ್ಲಿ ಬಡ್ಡಿ ದರ ಕಡಿತ ಮಾಡಬಹುದು ಎಂದು ಅಂದಾಜಿಸಲಾಗಿದೆ. ಏರಿಕೆ ಹಾದಿಯಲ್ಲಿರುವ ಹಣದುಬ್ಬರ ಇಳಿಕೆಗೂ ಕದನ ವಿರಾಮ ಪೂರಕವಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ, ಅನಿಲ ಕೊರತೆ ಎದುರಾದ ಬೆನ್ನಲ್ಲೇ, ಭಾರತ, ಚೀನಾ, ಬ್ರಿಟನ್, ಫ್ರಾನ್ಸ್ ಸೇರಿದಂತೆ ವಿವಿಧ ದೇಶಗಳು ಹೊರ್ಮುಜ್ ಜಲಸಂಧಿ ತೆರೆಯುವಂತೆ ಇರಾನ್ ಮೇಲೆ ಒತ್ತಡ ಹೇರಿದ್ದವು.

ಮುಖ್ಯಾಂಶಗಳು

- ಇರಾನ್ ಯುರೇನಿಯಂ ಸಮೃದ್ಧೀಕರಣ ನಿಲ್ಲಿಸಲು ಒತ್ತಾಯ
- ಯುದ್ಧದ ಆರ್ಥಿಕ ಹಾನಿ ಭರಿಸಲು ಇರಾನ್ ಆಗ್ರಹ
- ಹಣದುಬ್ಬರ ಇಳಿಕೆ, ತೈಲ ದರ ತಗ್ಗುವ ನಿರೀಕ್ಷೆ

ಯುದ್ಧದಿಂದ ಉಂಟಾಗಿರುವ ಸಾವು

- **3,000** ಇರಾನ್
- **2,100** ಲೆಬನಾನ್
- **23** ಇಸ್ರೇಲ್ | **13** ಅಮೆರಿಕ
- **12** ಕೊಲ್ಲಿ ದೇಶಗಳು

ಲೆಬನಾನ್ ದಾಳಿ; ಇಸ್ರೇಲ್‌ಗೆ ನಿಷೇಧ

'ಇಸ್ರೇಲ್– ಲೆಬನಾನ್ ನಡುವಿನ 10 ದಿನಗಳ ತಾತ್ಕಾಲಿಕ ಕದನ ವಿರಾಮವು ಲೆಬನಾನ್ ಪಾಲಿಗೆ ಐತಿಹಾಸಿಕ ದಿನ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಮುಂದುವರಿದು, 'ಲೆಬನಾನ್ ಮೇಲೆ ಮತ್ತಷ್ಟು ದಾಳಿ ಮಾಡದಂತೆ ಅಮೆರಿಕವು ಇಸ್ರೇಲ್‌ಗೆ ನಿಷೇಧ ಹೇರಿದೆ ಮತ್ತು ಹಿಜ್ಬುಲ್ಲಾ ವಿರುದ್ಧ ನಡೆಸುತ್ತಿರುವ ದಾಳಿ ಇನ್ನು ಸಾಕು' ಎನ್ನುವುದು ನಮ್ಮ ಅಭಿಪ್ರಾಯ ಎಂದು ಟ್ರಂಪ್ ಹೇಳಿದ್ದಾರೆ.

ಆದರೆ, 'ಲೆಬನಾನ್ ಜತೆಗಿನ ಶಾಂತಿ ಪ್ರಯತ್ನಗಳನ್ನು ಮುಂದುವರಿಸಲು ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದೇವೆಯೇ ಹೊರತು, ಇಸ್ರೇಲ್ ಪಡೆಯು ಹಿಜ್ಬುಲ್ಲಾ ವಿರುದ್ಧದ ಹೋರಾಟದಿಂದ ಹಿಂದೆ ಸರಿದಿಲ್ಲ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಕದನ ವಿರಾಮದ ಬಗ್ಗೆ ಲೆಬನಾನ್ ಅಥವಾ ಹಿಜ್ಬುಲ್ಲಾ ಬಂಡುಕೋರರು ಅಧಿಕೃತ ಹೇಳಿಕೆ ನೀಡಿಲ್ಲ.

ಇಸ್ರೇಲ್–ಲೆಬನಾನ್ ಕದನ ವಿರಾಮವು, ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ಪಾಕಿಸ್ತಾನದ ಮಧ್ಯಸ್ಥಿಕೆ ಪ್ರಯತ್ನಗಳಿಗೆ ದೊಡ್ಡ ಮಟ್ಟದಲ್ಲಿ ಬಲ ತುಂಬಿದೆ. ಇದರಿಂದ ಅಮೆರಿಕ–ಇರಾನ್ ನಡುವೆ ಎರಡನೆಯ ಸುತ್ತಿನ ಮಾತುಕತೆಗೆ ಹಾದಿ ಸುಗಮಗೊಂಡಿದೆ ಎಂದು ಮೂಲಗಳು ಹೇಳಿವೆ.

ಇಸ್ರೇಲ್–ಲೆಬನಾನ್ ಕದನ ವಿರಾಮ ಘೋಷಣೆಯಾಗುತ್ತಿದ್ದಂತೆ ದಕ್ಷಿಣ ಲೆಬನಾನ್‌ನ ಪ್ರಜೆಗಳು ಸುರಕ್ಷಿತ ಸ್ಥಳಕ್ಕೆ ತೆರಳಿದರು —ಎಎಫ್‌ಪಿ ಚಿತ್ರ

> **ಹೊರ್ಮುಜ್ ಜಲಸಂಧಿ ಮಾರ್ಗದಲ್ಲಿ ಸಾರಿಗೆ ಶುಲ್ಕ ವಿಧಿಸುವ ಎಲ್ಲ ಯೋಜನೆಗಳನ್ನು ಇರಾನ್ ಕೈಬಿಡಬೇಕು ಹಾಗೂ ಎಲ್ಲ ದೇಶಗಳಿಗೆ ಈ ಮಾರ್ಗ ಮುಕ್ತವಾಗಿಡಬೇಕು**
> **ಕಾಜಾ ಕಲ್ಲಾಸ್,** ಯುರೋಪಿಯನ್ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥೆ

> **ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರ ವಿರುದ್ಧ ಇಸ್ರೇಲ್ ಕಾರ್ಯಾಚರಣೆ ಪೂರ್ಣಗೊಂಡಿಲ್ಲ. ಹಿಜ್ಬುಲ್ಲಾ ನಿರ್ಮೂಲನೆಯೇ ಪ್ರಮುಖ ಉದ್ದೇಶವಾಗಿದೆ**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

> **ಹಿಜ್ಬುಲ್ಲಾ ಬಂಡುಕೋರರು ಶಸ್ತ್ರಾಸ್ತ್ರ ತ್ಯಜಿಸಬೇಕು. ಇಸ್ರೇಲ್, ಲೆಬನಾನ್‌ನ ಸಾರ್ವಭೌಮತೆ ಗೌರವಿಸಿ ಯುದ್ಧ ನಿಲ್ಲಿಸಬೇಕು**
> **ಇಮ್ಯಾನುಯೆಲ್ ಮ್ಯಾಕ್ರನ್,** ಫ್ರಾನ್ಸ್ ಅಧ್ಯಕ್ಷ

ಮಾತುಕತೆಗೆ ಪಾಕ್ ಸಿದ್ಧತೆ

ಇಸ್ಲಾಮಾಬಾದ್ (ಪಿಟಿಐ): ಅಮೆರಿಕ–ಇರಾನ್ ನಡುವಿನ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ನಿರ್ಣಾಯಕ ಮಾತಕತೆಗೆ ಮಧ್ಯಸ್ಥಿಕೆ ವಹಿಸಲು ಪಾಕಿಸ್ತಾನ ಸಿದ್ಧಗೊಂಡಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸೀಮ್ ಮುನೀರ್ ಅವರು ಟೆಹರಾನ್‌ನಲ್ಲಿ ಶುಕ್ರವಾರ ಇರಾನ್ ಸೇನಾ ಅಧಿಕಾರಿಗಳು, ಮುಖಂಡರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಇನ್ನೊಂದೆಡೆ ಸಭೆಯ ಆತಿಥ್ಯ ವಹಿಸಿರುವ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಅವರು ಸೌದಿ ಅರೇಬಿಯಾ, ಕತಾರ್ ಹಾಗೂ ಟರ್ಕಿ ದೇಶಗಳ ಪ್ರವಾಸ ಕೈಗೊಂಡಿದ್ದು, ಮುಖಂಡರ ಜತೆಗೆ ಮಾತುಕತೆ ನಡೆಸಿದ್ದಾರೆ.

ಎರಡನೆಯ ಸುತ್ತಿನ ಮಾತುಕತೆ ದಿನಾಂಕದ ಬಗ್ಗೆ ಪಾಕಿಸ್ತಾನ ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ, ಸಭೆ ನಡೆಯುವ ಸಾಧ್ಯತೆ ಇರುವ ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿಯಲ್ಲಿ ಭಾರಿ ಸಿದ್ಧತೆಗಳು ನಡೆಯುತ್ತಿವೆ. ಬೇರೆಡೆಯಿಂದ ಇಲ್ಲಿಗೆ ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಮೂಲಗಳು ಹೇಳಿವೆ.

ನಲುಗಿದ ಶ್ರೀಲಂಕಾ: ವಿಶ್ವಸಂಸ್ಥೆ ವರದಿ

ಕೊಲಂಬೊ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದಿಂದ, ಏಷ್ಯಾ–ಪೆಸಿಫಿಕ್ ವಲಯದಲ್ಲಿ ತೀವ್ರ ಪರಿಣಾಮ ಎದುರಿಸಿದ ದೇಶ ಶ್ರೀಲಂಕಾ ಎಂದು ವಿಶ್ವಸಂಸ್ಥೆ ವರದಿ ತಿಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷವು ವಿವಿಧ ದೇಶಗಳ ಮೇಲೆ ಹೇಗೆ ಪರಿಣಾಮ ಬೀರಿದೆ ಎನ್ನುವುದರ ಪ್ರಾಥಮಿಕ ಮೌಲ್ಯಮಾಪನ ಒಳಗೊಂಡ ವರದಿಯನ್ನು ವಿಶ್ವಸಂಸ್ಥೆ ಗುರುವಾರ ಬಿಡುಗಡೆ ಮಾಡಿದೆ.

ಈ ವರದಿಯಲ್ಲಿ, ಶ್ರೀಲಂಕಾದ ಜಿಡಿಪಿ ಮೇಲೆ ಯುದ್ಧ ಹೇಗೆ ಕೆಟ್ಟ ಪರಿಣಾಮ ಬೀರಿದೆ ಎನ್ನುವುದನ್ನು ವಿಶ್ವಸಂಸ್ಥೆ ವಿವರಿಸಿದೆ.

ಯುದ್ಧ ಆರಂಭಗೊಂಡ ನಂತರ ಪಶ್ಚಿಮ ಏಷ್ಯಾದ ದೇಶಗಳಲ್ಲಿದ್ದ ಶ್ರೀಲಂಕಾದ ಶೇಕಡ 80.2ರಷ್ಟು ವಲಸೆ ಕಾರ್ಮಿಕರು ದೇಶ ತೊರೆದಿದ್ದಾರೆ. ಇನ್ನೊಂದೆಡೆ ಶ್ರೀಲಂಕಾಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲೂ ಶೇ 40ರಷ್ಟು ಇಳಿಕೆಯಾಗಿದೆ. ಲಕ್ಷಾಂತರ ಜನರಿಗೆ ಉದ್ಯೋಗ ನಷ್ಟವಾಗಿದೆ. ಶ್ರೀಲಂಕಾದಿಂದ ಕೊಲ್ಲಿ ದೇಶಗಳಿಗೆ ಪ್ರಮುಖವಾಗಿ ಚಹಾ ರಫ್ತಾಗುತ್ತಿತ್ತು. ಇದೀಗ ರಫ್ತು ವಹಿವಾಟು ಕುಸಿದಿರುವುದರಿಂದ ಹೆಚ್ಚಿನ ಆರ್ಥಿಕ ಒತ್ತಡ ಎದುರಿಸುವಂತಾಗಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ 14 ದೇಶಗಳಲ್ಲಿ ಸುಮಾರು 88 ಲಕ್ಷ ಜನರು ಬಡತನಕ್ಕೆ ಜಾರುವ ಅಪಾಯದಲ್ಲಿದ್ದಾರೆ ಎಂದೂ ವಿಶ್ವಸಂಸ್ಥೆ ವರದಿ ಹೇಳಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 504 ಅಂಶ ಏರಿಕೆ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಒಳಹರಿವು ಮತ್ತು ಕಚ್ಚಾ ತೈಲದ ಬೆಲೆ ಇಳಿಕೆಯಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಯಿಂದ ಉತ್ತಮ ಫಲಿತಾಂಶ ಹೊರಹೊಮ್ಮಬಹುದು ಎಂಬ ಭರವಸೆ ಉಂಟಾಗಿದೆ. ಇಸ್ರೇಲ್ ಮತ್ತು ಲೆಬನಾನ್ ನಡುವೆ ಏರ್ಪಟ್ಟಿರುವ 10 ದಿನದ ಕದನ ವಿರಾಮದಿಂದ ಜಾಗತಿಕ ಮಟ್ಟದಲ್ಲಿ ಉಂಟಾಗಿದ್ದ ಆತಂಕ ಸ್ವಲ್ಪ ಕಡಿಮೆಯಾಗಿದೆ. ಇದರಿಂದ ಹೂಡಿಕೆದಾರರು ಷೇರುಗಳ ಖರೀದಿಗೆ ಮುಂದಾಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 504 ಅಂಶ ಏರಿಕೆಯಾಗಿ, 78,493ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 156 ಅಂಶ ಹೆಚ್ಚಳವಾಗಿ, 24,353ಕ್ಕೆ ಕೊನೆಗೊಂಡಿದೆ.

ಷೇರು ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ₹4.84 ಲಕ್ಷ ಕೋಟಿ ವೃದ್ಧಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 3.07ರಷ್ಟು ಇಳಿಕೆಯಾಗಿದ್ದು, ಪ್ರತೀ ಬ್ಯಾರಲ್ ದರವು 96.34 ಡಾಲರ್ ಆಗಿದೆ.

ಶ್ರೀಲಂಕಾ ಸಚಿವ ರಾಜೀನಾಮೆ

ಕೊಲಂಬೊ (ಪಿಟಿಐ): ಸರ್ಕಾರಿ ಸ್ವಾಮ್ಯದ ಸಂಸ್ಥೆಯೊಂದು ವಿದ್ಯುತ್ ಉತ್ಪಾದನೆಗಾಗಿ ಕಲ್ಲಿದ್ದಲು ಆಮದು ಮಾಡಿಕೊಂಡಿರುವ ಕುರಿತು ತನಿಖೆ ನಡೆಸುವುದಾಗಿ ರಾಷ್ಟ್ರಾಧ್ಯಕ್ಷರ ಉನ್ನತಾಧಿಕಾರ ಆಯೋಗವೊಂದು ಘೋಷಿಸಿದ ಬೆನ್ನಲ್ಲೆ ಶ್ರೀಲಂಕಾದ ಇಂಧನ ಸಚಿವ ಕುಮಾರ ಜಯಾಕೊಡಿ ಅವರು ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ಭ್ರಷ್ಟಾಚಾರ ವಿರೋಧಿ ಹೋರಾಟಗಳ ಬಳಿಕ ರಚನೆಗೊಂಡಿದ್ದ ನ್ಯಾಷನಲ್ ಪೀಪಲ್ಸ್ ಸರ್ಕಾರದ ಸಚಿವರೇ ಅಕ್ರಮ ಆರೋಪದಡಿ ರಾಜೀನಾಮೆ ನೀಡಿರುವುದು ಮಹತ್ವದ ವಿಚಾರವಾಗಿದೆ. ಅವರು ಕಳೆದ ವಾರವಷ್ಟೆ ವಿಶ್ವಾಸ ಮತ ಯಾಚನೆಯಲ್ಲಿ ಗೆಲುವು ಕಂಡಿದ್ದರು.

ಜಯಾಕೊಡಿ ಜೊತೆ ಸಚಿವಾಲಯದ ಕಾರ್ಯದರ್ಶಿ ಉದಯಾಂಗ ಹೇಮಾಪಾಲ ಅವರೂ ರಾಜೀನಾಮೆ ನೀಡಿದ್ದಾರೆ ಎಂದು ಅಧ್ಯಕ್ಷ ಅನುರಾಕುಮಾರ ದಿಸ್ಸನಾಯಕೆ ಅವರ ಕಚೇರಿ ತಿಳಿಸಿದೆ. 'ಕಲ್ಲಿದ್ದಲು ಆಮದು ಪ್ರಕರಣದ ಕುರಿತು ಆಯೋಗದ ತನಿಖೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಅಧ್ಯಕ್ಷರ ಮಾಧ್ಯಮ ವಿಭಾಗ ತಿಳಿಸಿದೆ.

ಅದಾನಿ ಏಷ್ಯಾದ ಶ್ರೀಮಂತ ವ್ಯಕ್ತಿ

ಗೌತಮ್ ಅದಾನಿ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ, ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಮತ್ತೆ ಹೊರಹೊಮ್ಮಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಸಮೂಹದ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಇದುವರೆಗೆ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದರು. ಇದೀಗ ಅಂಬಾನಿಯನ್ನು ಹಿಂದಿಕ್ಕಿ ಅದಾನಿ, ಭಾರತ ಮತ್ತು ಏಷ್ಯಾದ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಅದಾನಿ ಸಮೂಹದ ಷೇರು ಮೌಲ್ಯದಲ್ಲಿ ಏರಿಕೆ ಕಂಡುಬಂದ ಕಾರಣ ಅದಾನಿ ಅವರ ನಿವ್ವಳ ಆಸ್ತಿ ಮೌಲ್ಯವು ಗಣನೀಯವಾಗಿ ಹೆಚ್ಚಾಗಿದೆ.

ಗೌತಮ್ ಅದಾನಿ ಅವರ ನಿವ್ವಳ ಸಂಪತ್ತಿನ ಮೌಲ್ಯ ₹8.59 ಲಕ್ಷ ಕೋಟಿಗೆ (92.6 ಬಿಲಿಯನ್ ಡಾಲರ್) ಏರಿಕೆ ಆಗಿದೆ. ಅಂಬಾನಿ ಸಂಪತ್ತು ₹8.42 ಲಕ್ಷ ಕೋಟಿ (90.8 ಬಿಲಿಯನ್ ಡಾಲರ್) ಇದೆ.

ಬ್ಲೂಮ್‌ಬರ್ಗ್ ಶುಕ್ರವಾರ ಪ್ರಕಟಿಸಿರುವ ಜಾಗತಿಕ ಸಿರಿವಂತರ ಪಟ್ಟಿಯಲ್ಲಿ ಅದಾನಿ 19ನೇ ಸ್ಥಾನ ಪಡೆದಿದ್ದಾರೆ. ಜಗತ್ತಿನ 500 ಶ್ರೀಮಂತ ವ್ಯಕ್ತಿಗಳ ಹೆಸರನ್ನು ದಿನನಿತ್ಯ ಬ್ಲೂಮ್‌ಬರ್ಗ್ ನವೀಕರಿಸುತ್ತದೆ.

ಅದಾನಿ ಅವರ ಸಂಪತ್ತಿನ ಬಹುಪಾಲು ಆದಾಯವು ಅವರ ಸಮೂಹದ ಪ್ರಮುಖ 10 ಕಂಪನಿಗಳ ಷೇರುಗಳಿಂದ ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಅದಾನಿ ಸಮೂಹದ ಷೇರುಗಳ ಬೆಲೆ ಏರಿಕೆಯಾಗಿದ್ದು, ಸಮೂಹದ ಮಾರುಕಟ್ಟೆ ಮೌಲ್ಯಕ್ಕೆ ಶತಕೋಟಿ ಡಾಲರ್‌ಗಳನ್ನು ಸೇರಿಸಿದೆ.

ಆದರೆ, ರಿಲಯನ್ಸ್ ಇಂಡಸ್ಟ್ರೀಸ್‌ನ ಇಂಧನ, ದೂರಸಂಪರ್ಕ ಮತ್ತು ರಿಟೇಲ್ ವಹಿವಾಟಿನಲ್ಲಿ ಲಾಭದ ಪ್ರಮಾಣವು ಇಳಿಕೆಯಾಗಿದೆ. ಇದು ಅಂಬಾನಿ ಸಂಪತ್ತು ಇಳಿಕೆಗೆ ಕಾರಣವಾಗಿದೆ. ಇದರಿಂದ ಶತಕೋಟ್ಯಧಿಪತಿಗಳ (ಬಿಲಿಯನೇರ್‌ಗಳು) ಶ್ರೇಯಾಂಕದಲ್ಲಿ ಬದಲಾವಣೆ ಆಗಿದೆ.

ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್, ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಇವರ ಸಂಪತ್ತಿನ ನಿವ್ವಳ ಮೌಲ್ಯ ₹60 ಲಕ್ಷ ಕೋಟಿ (656 ಬಿಲಿಯನ್ ಡಾಲರ್) ಆಗಿದೆ.

ಅಡಿಕೆ ಧಾರಣೆ

ಚಿತ್ರದುರ್ಗ		ಶಿವಮೊಗ್ಗ			
ಬೆಟ್ಟೆ	37500-37900	ಸರಕು	55509-96999	ಚಾಲಿ	41199-47699
ಕೆಂಪುಗೋಟು	31400-31800	ಬೆಟ್ಟೆ	53099-65369	ಕೋಕ	24319-33689
ರಾಶಿ	50300-50700	ರಾಶಿ	42669-57009	ಕೆಂಪುಗೋಟು	30689-37600
ಕುಮಟಾ		ಗೊರಬಲು	19030-43338	ರಾಶಿ	49309-54599
ಚಿಪ್ಪು	31089-36999	**ಶಿರಸಿ**		ತಟ್ಟಿಬೆಟ್ಟೆ	36399-49099
ಕೋಕ	17029-35019	ಬೆಟ್ಟೆ	41099-52993	**ಯಲ್ಲಾಪುರ**	
ಫ್ಯಾಕ್ಟರಿ	12019-30389	ಬಿಳಿಗೋಟು	27899-39600	ಆಪಿ	62119-75865
ಹಳೆಚಾಲಿ	47599-49798	ಚಾಲಿ	44599-48891	ಬಿಳಿಗೋಟು	17312-42399
ಹೊಸಚಾಲಿ	43010-48099	ಕೆಂಪುಗೋಟು	28121-39599	ಚಾಲಿ	37892-50189
ಪುತ್ತೂರು		ರಾಶಿ	50699-55899	ಕೋಕ	15000-37499
ಕೋಕ	20000-34500	**ಸಿದ್ದಾಪುರ**		ಕೆಂಪುಗೋಟು	18000-37969
ಹೊಸತು	30000-48500	ಬಿಳಿಗೋಟು	26900-38979	ರಾಶಿ	48900-58799
				ತಟ್ಟಿಬೆಟ್ಟೆ	38761-51899

ವೋಲ್ವೊ ಕಾರು ಬೆಲೆ ಹೆಚ್ಚಳ

ಮುಂಬೈ (ಪಿಟಿಐ): ಐಷಾರಾಮಿ ಕಾರು ತಯಾರಕ ಕಂಪನಿ ವೋಲ್ವೊ ಕಾರ್ ಇಂಡಿಯಾ, ತನ್ನ ವಾಹನಗಳ ಬೆಲೆಯನ್ನು ಭಾರತದಲ್ಲಿ ₹1 ಲಕ್ಷದವರೆಗೆ ಹೆಚ್ಚಿಸಿದೆ. ಪರಿಷ್ಕೃತ ದರವು ಮೇ 1ರಿಂದ ಜಾರಿಗೆ ಬರಲಿದೆ.

ಜಾಗತಿಕ ಮಟ್ಟದಲ್ಲಿ ಪೂರೈಕೆ ಸರಪಳಿಯಲ್ಲಿ ಉಂಟಾಗಿರುವ ಅಡಚಣೆಯು ಮುಂದುವರಿದಿರುವುದು ಮತ್ತು ಕರೆನ್ಸಿ ವಿನಿಮಯ ದರದಲ್ಲಿನ ಏರಿಳಿತದಿಂದಾಗಿ ವಾಹನಗಳ ಬೆಲೆ ಹೆಚ್ಚಳಕ್ಕೆ ಮುಂದಾಗಿದ್ದೇವೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

17-04-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1710 (1740)
ಒಂದು ವಾರದ ಡೆಲಿವರಿ	1705 (1735)
ಪಾಮ್ ವಾರದ ಡೆಲಿವರಿ	1438 (1438)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,52,500 (1,52,500)
ಬೆಳ್ಳಿ ಕೆ.ಜಿಗೆ	2,56,500 (2,51,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

721 ಟನ್ ಚಿನ್ನ, 7,334 ಟನ್ ಬೆಳ್ಳಿ ಆಮದು: ವಾಣಿಜ್ಯ ಸಚಿವಾಲಯ

₹6.68 ಲಕ್ಷ ಕೋಟಿ ಚಿನ್ನ ಆಮದು

ನವದೆಹಲಿ (ಪಿಟಿಐ): 2025–26ರ ಆರ್ಥಿಕ ವರ್ಷದಲ್ಲಿ ₹6.68 ಲಕ್ಷ ಕೋಟಿ ಮೌಲ್ಯದ ಚಿನ್ನ ದೇಶಕ್ಕೆ ಆಮದಾಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಶುಕ್ರವಾರ ತಿಳಿಸಿದೆ.

2024–25ರಲ್ಲಿ ₹5.38 ಲಕ್ಷ ಕೋಟಿ ಮೌಲ್ಯದ ಚಿನ್ನ ದೇಶಕ್ಕೆ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಚಿನ್ನದ ಆಮದು ಪ್ರಮಾಣ ಶೇ 24ರಷ್ಟು ಹೆಚ್ಚಳವಾಗಿದೆ. ಚಿನ್ನದ ಬೆಲೆಯಲ್ಲಿ ಹೆಚ್ಚಳವಾಗಿದ್ದರಿಂದ ಆಮದು ಮೌಲ್ಯ ಏರಿಕೆಯಾಗಿದೆ ಎಂದು ತಿಳಿಸಿದೆ.

2024–25ರಲ್ಲಿ 757.09 ಟನ್‌ನಷ್ಟು ಚಿನ್ನ ಆಮದಾಗಿತ್ತು. ಕಳೆದ ಆರ್ಥಿಕ ವರ್ಷದಲ್ಲಿ 721.03 ಟನ್ ಆಮದಾಗಿದ್ದು, ಶೇ 4.76ರಷ್ಟು ಆಮದು ಪ್ರಮಾಣವು ಇಳಿಕೆ ಆಗಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಬೆಳ್ಳಿ ಆಮದು ಶೇ 150ರಷ್ಟು ಹೆಚ್ಚಳವಾಗಿದ್ದು, ₹1.11 ಲಕ್ಷ ಕೋಟಿ ಮೌಲ್ಯದಷ್ಟು ಆಮದಾಗಿತ್ತು. ಗಾತ್ರದ ಲೆಕ್ಕದಲ್ಲಿ 7,334.96 ಟನ್‌ನಷ್ಟು ಆಮದಾಗಿದ್ದು, ಶೇ 42ರಷ್ಟು ಏರಿಕೆಯಾಗಿದೆ.

ಈ ಲೋಹಗಳ ಆಮದು ಹೆಚ್ಚಳದಿಂದ ದೇಶದ ವ್ಯಾಪಾರ ಕೊರತೆ ₹30.93 ಲಕ್ಷ ಕೋಟಿಗೆ ಏರಿಕೆಯಾಗಿದೆ. ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ದೇಶದ ಒಟ್ಟು ಬೇಡಿಕೆಯ ಪೈಕಿ ಶೇ 40ರಷ್ಟು ಚಿನ್ನ ಸ್ವಿಟ್ಜರ್ಲೆಂಡ್‌ನಿಂದ ಆಮದಾಗುತ್ತದೆ. ಯುಎಇನಿಂದ ಶೇ 16 ಮತ್ತು ದಕ್ಷಿಣ ಆಫ್ರಿಕಾದಿಂದ ಶೇ 10ರಷ್ಟು ಚಿನ್ನ ಆಮದಾಗುತ್ತದೆ. ದೇಶದ ಒಟ್ಟು ಆಮದಿನಲ್ಲಿ ಅಮೂಲ್ಯ ಲೋಹಗಳ ಆಮದು ಪ್ರಮಾಣ ಶೇ 5ಕ್ಕಿಂತ ಹೆಚ್ಚು ಪಾಲನ್ನು ಹೊಂದಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಸ್ವಿಟ್ಜರ್ಲೆಂಡ್‌ನಿಂದ ₹2.25 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದಾಗಿದ್ದು, 2024–25ಕ್ಕೆ ಹೋಲಿಸಿದರೆ ಶೇ 11ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಚೀನಾ ಬಳಿಕ ಭಾರತವು ಜಗತ್ತಿನ ಎರಡನೇ ಅತಿದೊಡ್ಡ ಚಿನ್ನದ ಗ್ರಾಹಕ ರಾಷ್ಟ್ರವಾಗಿದೆ.

ಮುಖ್ಯಾಂಶಗಳು

- 2025–26ರಲ್ಲಿ ಚಿನ್ನದ ಆಮದು ಶೇ 24ರಷ್ಟು ಹೆಚ್ಚಳ
- ಸ್ವಿಟ್ಜರ್ಲೆಂಡ್‌ನಿಂದ ₹2.25 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದು
- ಭಾರತವು ಜಗತ್ತಿನ 2ನೇ ಅತಿದೊಡ್ಡ ಚಿನ್ನದ ಗ್ರಾಹಕ ರಾಷ್ಟ್ರ



ಬೆಳ್ಳಿ ₹5,700 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,600 ಕಡಿಮೆಯಾಗಿ, ₹1,56,200ರಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹5,700 ಇಳಿಕೆಯಾಗಿ, ₹2.53 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದೇಶದ ಮಾರುಕಟ್ಟೆಯಲ್ಲಿ ಅಮೂಲ್ಯ ಲೋಹಗಳಿಗೆ ಬೇಡಿಕೆ ಕಡಿಮೆಯಾಗಿದೆ. ಇದು ಚಿನ್ನ ಮತ್ತು ಬೆಳ್ಳಿ ಬೆಲೆ ಇಳಿಕೆಗೆ ಒಂದು ಕಾರಣ ಎಂದು ತಿಳಿಸಿದೆ.

ವಿನಯ ಕುಲಕರ್ಣಿಗೆ ಜೈಲಿನ ಸಮವಸ್ತ್ರ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ವಿನಯ ಕುಲಕರ್ಣಿ ಸೇರಿ 17 ಮಂದಿಯನ್ನು ಬಿಗಿ ಭದ್ರತೆಯ ನಡುವೆ ಸಿಬಿಐ ಪೊಲೀಸರು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದು ಶುಕ್ರವಾರ ರಾತ್ರಿ 9.30ರ ಸುಮಾರಿಗೆ ಬಿಟ್ಟುಬಂದರು. ದಾಖಲಾತಿ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಅಪರಾಧಿಗಳನ್ನು ಸಜಾಬಂದಿಗಳ ಬ್ಯಾರಕ್‌ಗೆ ಕಳುಹಿಸಲಾಯಿತು.

'ಅಪರಾಧಿಗಳಿಗೆ ಜೈಲಿನ ಸಮವಸ್ತ್ರ ವಿತರಣೆ ಮಾಡಲಾಗಿದೆ. ಎಲ್ಲರಿಗೂ ಶನಿವಾರ ಕೈದಿಗಳ ಸಂಖ್ಯೆ ಹಂಚಿಕೆ ಮಾಡಲಾಗುವುದು' ಎಂದು ಜೈಲಿನ ಮೂಲಗಳು ತಿಳಿಸಿವೆ.

ಜೀವಾವಧಿ ಮತ್ತು ಐಪಿಸಿ ಕಲಂ 55

ಜೀವಾವಧಿ ಎಂದರೆ ಆಜೀವ ಪರ್ಯಂತ ಅಥವಾ ಇಡೀ ಜೀವನದ ಅವಧಿ. ಕೋರ್ಟ್‌ನ ಲೆಕ್ಕಾಚಾರದಲ್ಲಿ; ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 302ರ ಅನುಸಾರ ಜೀವಿತದ ಸಂಪೂರ್ಣ ಕಾಲವನ್ನು ಜೈಲಿನಲ್ಲಿ ಅನುಭವಿಸಬೇಕಾಗುತ್ತದೆ.

ಈ ಕಲಂ ಕುರಿತಂತೆ 'ಪ್ರಜಾವಾಣಿ'ಗೆ ವಿವರಿಸಿದ ಹೈಕೋರ್ಟ್‌ನ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, 'ಜೀವಾವಧಿ ಶಿಕ್ಷೆಯನ್ನು ಐಪಿಸಿ ಕಲಂ 55ರ ಅನುಸಾರ ತಗ್ಗಿಸಲು ಸರ್ಕಾರಕ್ಕೆ ಅಧಿಕಾರ ಇದೆ. ಸಂದರ್ಭಗಳನ್ನು ಪರಿಗಣಿಸಿ ಮಾನವೀಯ ನೆಲೆಯಲ್ಲಿ ಶಿಕ್ಷೆಯನ್ನು ಕಡಿಮೆ ಮಾಡಲು ಈ ಕಾನೂನು ಅವಕಾಶ ಕಲ್ಪಿಸುತ್ತದೆ. ಈ ಅಧಿಕಾರ ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಇರುತ್ತದೆ' ಎನ್ನುತ್ತಾರೆ.

'ಕೈದಿಯೊಬ್ಬ ಜೈಲಿನಲ್ಲಿ ಕನಿಷ್ಠ 12 ವರ್ಷ ಶಿಕ್ಷೆ ಅನುಭವಿಸಿದ ನಂತರ ನಡತೆಯ ಪರಿಗಣನಾ ಪಟ್ಟಿಗೆ ಸೇರ್ಪಡೆಯಾಗುತ್ತಾನೆ. ಇದಕ್ಕೆ ಪೂರ್ವಭಾವಿಯಾಗಿ ಒಂದು ವರ್ಷ ಕಾಲ ಆಯ್ಕೆ ಮಾಡಬೇಕಾದವರ ಕುರಿತು ಪರಿಗಣಿಸಲಾಗುತ್ತದೆ. ಸಮಿತಿಯು ಕೈದಿಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಪಟ್ಟಿ ಮಾಡುತ್ತದೆ. ಈತ ಸಂಪೂರ್ಣ ಬದಲಾಗಿದ್ದಾನೆ, ವರ್ತನೆ ತೃಪ್ತಿದಾಯಕವಾಗಿದೆ, ಜೈಲಿನಿಂದ ಹೊರಗೆ ಹೋದರೆ ಸಮಾಜಕ್ಕೆ ಕಂಟಕ ಆಗುವುದಿಲ್ಲ, ಬಿಡುಗಡೆಗೆ ಅರ್ಹನಾಗಿದ್ದಾನೆ... ಎನಿಸಿದರೆ ಜೈಲು ಸಮಿತಿ ಸರ್ಕಾರಕ್ಕೆ ವರದಿ ನೀಡುತ್ತದೆ. ಆಗ ಸರ್ಕಾರ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುತ್ತದೆ' ಎಂದು ಹನುಮಂತರಾಯ ವಿವರಿಸುತ್ತಾರೆ.

'ಅಪರಾಧಿಯ ಒಪ್ಪಿಗೆ ಇಲ್ಲದೆಯೂ ಸರ್ಕಾರ ಬಿಡುಗಡೆಯ ನಿರ್ಧಾರ ತೆಗೆದುಕೊಳ್ಳಬಹುದು. ಒಂದು ವೇಳೆ ಸಜಾಬಂದಿ ತಾನು ಜೈಲಿನಲ್ಲಿ ಇರುತ್ತೇನೆಂದರೂ ಸರ್ಕಾರ ಬಿಡುಗಡೆಗೆ ತೀರ್ಮಾನ ಕೈಗೊಂಡಾಗ ಆತನನ್ನು ಬಿಡುಗಡೆ ಮಾಡಲೇ ಬೇಕಾಗುತ್ತದೆ. ಕಲಂ 55ರ ಉದ್ದೇಶ ಅಪರಾಧಿಯ ಉತ್ತಮ ನಡವಳಿಕೆ ಮತ್ತು ಮಾನವೀಯ ನೆಲೆಗಟ್ಟಿನ ಆಧಾರದಲ್ಲಿ ತೀರ್ಮಾನವಾಗುತ್ತದೆ. ಇಂಥವರನ್ನು ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ ದಿನ, ಮಹಾತ್ಮ ಗಾಂಧಿ ಜನ್ಮ ದಿನಾಚರಣೆ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುತ್ತದೆ' ಎಂದು ಹೇಳುತ್ತಾರೆ.

'ನಾಸಿಕ್ ಪ್ರಕರಣ: ಜಾಲ ಮಟ್ಟಹಾಕುತ್ತೇವೆ'

ಟಿಸಿಎಸ್‌ನಲ್ಲಿ ಲೈಂಗಿಕ ಕಿರುಕುಳ, ಬಲವಂತದ ಮತಾಂತರದ ಆರೋಪ

ದೇವೇಂದ್ರ ಫಡಣವೀಸ್

ಕೋಲ್ಕತ್ತ (ಪಿಟಿಐ): 'ನಾಸಿಕ್‌ನಲ್ಲಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಘಟಕದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರದ ಜಾಲವನ್ನು ನಮ್ಮ ಸರ್ಕಾರ ಭೇದಿಸಲಿದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಶುಕ್ರವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಫಡಣವೀಸ್, 'ಇದು ಗಂಭೀರವಾದ ವಿಷಯವಾಗಿದ್ದು, ಇದರ ಹಿಂದೆ ದೊಡ್ಡ ಜಾಲವೇ ಇದೆ. ನಾವು ಆ ಜಾಲವನ್ನು ಮಟ್ಟಹಾಕುತ್ತೇವೆ. ಪ್ರಕರಣದಲ್ಲಿ ಭಾಗಿಯಾದ ಯಾರನ್ನೂ ರಕ್ಷಿಸುವುದಿಲ್ಲ. ತನಿಖೆ ಸಂಬಂಧ ಕೇಂದ್ರ ಸಂಸ್ಥೆಗಳ ನೆರವನ್ನೂ ಪಡೆಯುತ್ತಿದ್ದೇವೆ' ಎಂದು ಹೇಳಿದ್ದಾರೆ.

'ಬಹುರಾಷ್ಟ್ರೀಯ ಕಂಪನಿಯು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ತನಿಖೆಗೆ ಸಹಕಾರ ನೀಡಲು ಅಗತ್ಯ ಕ್ರಮ ಕೈಗೊಂಡಿದೆ' ಎಂದು ತಿಳಿಸಿದ್ದಾರೆ.

ಮಹಾರಾಷ್ಟ್ರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಹೇಳಿಕೆ ಪ್ರಕಾರ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಏಳು ಆರೋಪಿಗಳು ಮಹಿಳಾ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು ಸಂಘಟಿತ ಗ್ಯಾಂಗ್‌ನಂತೆ ಕಾರ್ಯನಿರ್ವಹಿಸುತ್ತಿದ್ದರು. ಈ ಆರೋಪಗಳಿಗೆ ಸಂಬಂಧಿಸಿದಂತೆ ಪೊಲೀಸರು ಒಂಬತ್ತು ಪ್ರಕರಣಗಳನ್ನು ದಾಖಲಿಸಿದ್ದಾರೆ.

'ಪ್ರಮುಖ ಆರೋಪಿ ಎಚ್‌ಆರ್ ಆಗಿರಲಿಲ್ಲ'

ಮುಂಬೈ: ನಾಸಿಕ್ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಪ್ರಮುಖ ಆರೋಪಿ ಎನ್ನಲಾದ ನಿದಾ ಖಾನ್ ಅವರು ಟಿಸಿಎಸ್ ಘಟಕದ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂಬ ಸಂಗತಿ ಗೊತ್ತಾಗಿದೆ.

ನಿದಾ ಖಾನ್ ಅವರ ಪತ್ತೆಗಾಗಿ ಎಸ್‌ಐಟಿ ಪೊಲೀಸರು ಠಾಣೆ ಜಿಲ್ಲೆಯ ಮುಂಬ್ರಾ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು. 'ನಿದಾ ಖಾನ್ 2021ರ ಡಿಸೆಂಬರ್‌ನಲ್ಲಿ ಟಿಸಿಎಸ್ ಘಟಕದಲ್ಲಿ ಕೆಲಸಕ್ಕೆ ಸೇರಿದ್ದಳು. ಎಚ್‌ಆರ್ ಆಗಿರಲಿಲ್ಲ. ಆಕೆ, ಟೆಲಿಕಾಲರ್ ಆಗಿ ಕೆಲಸ ಮಾಡುತ್ತಿದ್ದಳು' ಎಂದು ನಿದಾ ಅವರ ಕುಟುಂಬಸ್ಥರು ತಿಳಿಸಿದ್ದಾರೆ.

'ನಿದಾ ಅವರು ಪ್ರಕರಣದ ಪ್ರಮುಖ ಸೂತ್ರಧಾರಿ' ಎಂಬ ಮಾಧ್ಯಮಗಳ ವರದಿಯನ್ನು ಅವರ ವಕೀಲ ಬಾಬಾ ಸಯ್ಯದ್ ನಿರಾಕರಿಸಿದ್ದಾರೆ.

'ಎಫ್‌ಐಆರ್‌ನಲ್ಲಿ ಧಾರ್ಮಿಕ ಮತಾಂತರದ ಯಾವುದೇ ಉಲ್ಲೇಖವಿಲ್ಲ. ಸಿಆರ್‌ನಲ್ಲಿ ನಿದಾ ಖಾನ್ ಅವರ ಹೆಸರು ಇದೆ. ಆದರೆ, ಅವರೇ ಪ್ರಕರಣದ ಸೂತ್ರಧಾರಿ ಎಂದು ಬಿಂಬಿಸಲಾಗುತ್ತಿದೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂಬುದು ಮಾತ್ರ ಅವರ ಮೇಲಿರುವ ಏಕೈಕ ಆರೋಪವಾಗಿದೆ. ಅವರು ಬಹಿರಂಗವಾಗಿ ಕಾಣಿಸಿಕೊಂಡರೆ ಬಂಧಿಸಲಾಗುತ್ತದೆ. ಅವರಿಗೆ ಕಂಪನಿಯು ಕಳುಹಿಸಿರುವ ಅಮಾನತು ಪತ್ರದಲ್ಲೂ, ಪ್ರೊಸೆಸ್ ಅಸೋಸಿಯೇಟ್ ಎಂದೇ ಉಲ್ಲೇಖಿಸಲಾಗಿದೆ' ಎಂದು ಸಯ್ಯದ್ ತಿಳಿಸಿದ್ದಾರೆ.

ಗರ್ಭಿಣಿಯಾಗಿರುವ ನಿದಾ ಖಾನ್, ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಪ್ರಕರಣದಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ನಮಗೆ ಜಯ ಸಿಕ್ಕಿದ್ದು ಹೆಮ್ಮೆ; ಹೋರಾಟ ನಿರಂತರ'

ಧಾರವಾಡ: 'ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಜಯ ಸಿಕ್ಕಿದ್ದಕ್ಕೆ ಹೆಮ್ಮೆಯಾಗಿದೆ. ಈಗ ಮೊದಲ ಹಂತದ ಹೋರಾಟದ ಮುಗಿದಿದೆ' ಎಂದು ಜನಜಾಗೃತಿ ವೇದಿಕೆ ಅಧ್ಯಕ್ಷ ಬಸವರಾಜ ಕೊರವರ ತಿಳಿಸಿದರು. 'ಈ ಪ್ರಕರಣದಲ್ಲಿ ಆರಂಭದಿಂದಲೂ ಹೋರಾಡಿದ್ದೇನೆ. ಕೃತ್ಯ ಎಸಗಿದವರಿಗೆ ಕೋರ್ಟ್ ಶಿಕ್ಷೆ ವಿಧಿಸಿದೆ. ಶಿಕ್ಷೆಗೆ ಗುರಿಯಾದವರು ಮೇಲ್ಮನವಿ ಸಲ್ಲಿಸಬಹುದು. ಗುರುನಾಥಗೌಡ (ಯೋಗೀಶಗೌಡ ಗೌಡರ್ ಸಹೋದರ) ಕುಟುಂಬದ ಪರವಾಗಿ ನಾವು 'ಇಂಪ್ಲೀಡ್' ಆಗಬೇಕಾಗುತ್ತದೆ. ಸುಪ್ರೀಂ ಕೋರ್ಟ್‌ವರೆಗೆ ಹೋಗಬಹುದು. ಇದು ಎರಡನೇ ಹಂತದ ಹೋರಾಟ. ನಮ್ಮ ಹೋರಾಟ ನಿರಂತರ' ಎಂದರು.

> **ವಿನಯ ಕುಲಕರ್ಣಿ ಪ್ರಕರಣದಲ್ಲಿ ನಾನು ಹೇಳಿದ ಮಾತೇ ಸತ್ಯ ಎಂಬುದು ಈಗ ಸಾಬೀತಾಗಿದೆ**
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

'ಪತಿ ನೆನಪಿನಲ್ಲೇ ಬದುಕು ಸವೆಸುವೆ'

'ಪತಿ ಯೋಗೀಶ್‌ಗೌಡ ಗೌಡರ್ ನೆನಪಿನಲ್ಲೇ ಜೀವನ ಮಾಡುತ್ತಿದ್ದೇನೆ. ಈಗಲೂ ಅವರು ನನ್ನ ಜತೆಯಲ್ಲೇ ಇದ್ದಾರೆ. ಮಕ್ಕಳ ಬೆನ್ನಹಿಂದೆಯೇ ಇದ್ದಾರೆ ಎಂದು ಭಾವಿಸಿದ್ದೇನೆ. ಪತಿಯ ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದವರು ಜೈಲಿನಲ್ಲಿ ಅನುಭವಿಸುವುದಕ್ಕಿಂತ ನಾಲ್ಕು ಪಟ್ಟು ಹೆಚ್ಚು ನೋವನ್ನು 10 ವರ್ಷಗಳಲ್ಲಿ ಅನುಭವಿಸಿದ್ದೇನೆ' ಎಂದು ಮಲ್ಲಮ್ಮ ಪ್ರತಿಕ್ರಿಯಿಸಿದರು.

ತೀರ್ಪಿನ ಹಿನ್ನೆಲೆಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಜತೆಯಲ್ಲೇ ಇದ್ದ ಮಹಾಂಬಳೇಶ ಹೊಂಗಲ ಎಂಬಾತನೂ ಈ ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ಶಿಕ್ಷೆಗೆ ಗುರಿಯಾಗಿದ್ದಾನೆ. ಆತ ಪ್ರಕರಣದಲ್ಲಿ ಭಾಗಿಯಾಗಿದ್ದ ಎಂಬುದನ್ನು ನಂಬಿರಲಿಲ್ಲ, ಅವನು ಇದ್ದಿದ್ದು ಬಹಳ ನೋವುಂಟು ಮಾಡಿದೆ' ಎಂದರು.

ಜಾಗತಿಕ ಸುಸ್ಥಿರ ಇಂಧನ ಸಮ್ಮೇಳನ

ಬೆಂಗಳೂರು: 'ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047-ಇಂಧನ ಭದ್ರತೆಗಾಗಿ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ' ಕುರಿತ 2 ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ ಏಪ್ರಿಲ್ 18, 19 ರಂದು ಬೆಂಗಳೂರಿನ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ನಡೆಯಲಿದೆ.

ಕಾಮನ್‌ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ ಮತ್ತು ಇಂಧನ ಇಲಾಖೆ ಜಂಟಿಯಾಗಿ ಆಯೋಜಿಸುತ್ತಿರುವ ಈ ಸಮ್ಮೇಳನವನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಇದರಲ್ಲಿ ದೇಶ-ವಿದೇಶಗಳ ಪ್ರಮುಖ ನ್ಯಾಯಶಾಸ್ತ್ರಜ್ಞರು, ನೀತಿ ನಿರೂಪಕರು, ಉದ್ಯಮ ಮತ್ತು ಶಿಕ್ಷಣ ತಜ್ಞರು ಭಾಗವಹಿಸಲಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
House
Andrahalli
ANDHRAHALLI MAIN road,Newly built house, 4bhk duplex+1bhk rent. Price-1.70cr, North facing,park view, BDA khata(loan title).Kaveri+borewellfacility ,contact-9845039092,9986401098

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Multiple Vacancy
URGENT HIRING GP Courier Company: Warehouse Helper Operation Executive Field Sales Executive in Bangalore, Delhi, Pune. Freshers/ Experienced. Call: 8147394231/ 7204305834

ವಾಹನ
Four Wheelers Buying
Honda
WANTED HONDA civic manual post 2009. Preferred geniune owners only. Contact no 8660514812

ವೈಯಕ್ತಿಕ
Lost
I BILAPPA s/o Lt Lakshmaiah have lost my original property documents i.e original Mother Deed No 5590/1958-59 and original Sale deed No 2864/1974-78, both the documents were registered at Bangalore north subregistrar office pertaining to our ancestral property at sy no 84/1 of kodigehalli village. A police complaint is registered for the same with ref no - 2126986/2026 Any person finding it can forward to the following address- No 2 SRS nilaya, 7th cross, 7th block, Muddinapalya Bengaluru-91. 9902376956 , 9902007316.

ಪ್ರವಾಸ
Travel
24-4-2026 ಆಗ್ರಾ, ದೆಹಲಿ, ಅಮೃತ್ ಸರ್, ವೈಷ್ಣೋದೇವಿ, ಹರಿದ್ವಾರ. 2-5-2026 ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ. 16-5-2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 29-6-2026 ಅಮರನಾಥ ಯಾತ್ರಾ. ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಭಾರತಪರಂಪರ ದರ್ಶನ: 23.4.2026 5ದಿನ ಮಂತ್ರಾಲಯ,ಶ್ರೀಶೈಲಂ ನವನಾರಸಿಂಹ ಅಹೋಬಿಲಂ. 18.5.2026 13ದಿನ ಚಾರ್ ಧಾಮ್. 20.6.2026 ಮುಕ್ತಿನಾಥ್,ಕಾಶಿ,ದೇವಘರ್ ಸಹಿತ ನೇಪಾಳಯಾತ್ರೆ. 2.7.2026 ಅಮರನಾಥ್ ವೈಷ್ಣೋದೇವಿ. ಪ್ರಕಾಶ್ ಹೆಬ್ಬಾರ್ : 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹ್ಯಾಟ್ರಿಕ್ ಜಯದತ್ತ ಆರ್‌ಸಿಬಿ ಚಿತ್ತ

ತವರಿನಂಗಳದಲ್ಲಿ ರಜತ್ ಪಡೆಗೆ ಡೆಲ್ಲಿ ಕ್ಯಾಪಿಟಲ್ಸ್ ಸವಾಲು ಇಂದು: ವಿರಾಟ್, ರಾಹುಲ್ ಮೇಲೆ ಕಣ್ಣು

● ಪ್ರದೀಶ್ ಎಚ್. ಮರೋಡಿ

ಮುಖ್ಯಾಂಶಗಳು

- ಹಸಿರು ಜೆರ್ಸಿಯಲ್ಲಿ ಆಡಲಿರುವ ಆರ್‌ಸಿಬಿ ಆಟಗಾರರು
- ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸುವ ಯತ್ನ

ಬೆಂಗಳೂರು: ತವರಿನಂಗಳದಲ್ಲಿ ಜಯದ ಹ್ಯಾಟ್ರಿಕ್ ಸಾಧಿಸಿ ಭರ್ತಿ ಆತ್ಮವಿಶ್ವಾಸದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶನಿವಾರ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣವನ್ನು ಭದ್ರಕೋಟೆಯನ್ನಾಗಿಸಿಕೊಂಡಿರುವ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು 'ಹ್ಯಾಟ್ರಿಕ್' ಗೆಲುವಿನೊಂದಿಗೆ ಅಗ್ರಸ್ಥಾನವನ್ನು ಮರಳಿ ಪಡೆಯುವತ್ತ ಚಿತ್ತ ಹರಿಸಿದೆ. ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯವನ್ನು ಹೊರತುಪಡಿಸಿ ಉಳಿದ ನಾಲ್ಕು ಪಂದ್ಯಗಳಲ್ಲಿ ರಜತ್ ಪಾಟೀದಾರ್ ಬಳಗ ಜಯಭೇರಿ ಬಾರಿಸಿದೆ. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ತಂಡವು ಅಭಿಮಾನಿಗಳ ಸಮ್ಮುಖದಲ್ಲಿ ಜಯದ ಓಟ ಮುಂದುವರಿಸುವ ಛಲದಲ್ಲಿದೆ.

ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಗಾಯದ ಕಾರಣಕ್ಕೆ 'ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್' ಆಗಿ ಕಣಕ್ಕಿಳಿದು 49 ರನ್ ಬಾರಿಸಿದ್ದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಪಾತ್ರದ ಬಗ್ಗೆ ಕುತೂಹಲವಿದೆ. ಐದು ಪಂದ್ಯಗಳಿಂದ 57ರ ಸರಾಸರಿಯಲ್ಲಿ ಒಟ್ಟು 228 ರನ್ ಗಳಿಸಿದ್ದಾರೆ. ಶುಕ್ರವಾರ ತಾಲೀಮು ವೇಳೆ ಅವರು ಸಹ ಆಟಗಾರರೊಂದಿಗೆ ಉತ್ಸಾಹದಿಂದ 'ಸಿಕ್ಸರ್' ಹೊಡೆಯುವ ಅಭ್ಯಾಸ ನಡೆಸಿದರು.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯಕ್ಕೆ ಕೊಹ್ಲಿ ಲಭ್ಯತೆಯನ್ನು ತಂಡದ ಪರ ಸುದ್ದಿಗೋಷ್ಠಿಗೆ ಹಾಜರಾಗಿದ್ದ ವೇಗಿ ಜೋಶ್ ಹ್ಯಾಜಲ್‌ವುಡ್ ಖಚಿತ ಪಡಿಸಿದರು.

ಆರ್‌ಸಿಬಿ ತನ್ನ ಕೊನೆಯ ಪಂದ್ಯದಲ್ಲಿ ಲಖನೌ ವಿರುದ್ಧ ಏಕಪಕ್ಷೀಯವಾಗಿ ಜಯ ಸಾಧಿಸಿದ ಹುಮ್ಮಸ್ಸಿನಲ್ಲಿದೆ. ಈ ಪಂದ್ಯದಲ್ಲಿ ಜಮ್ಮು ಕಾಶ್ಮೀರದ ಕಣಿವೆಯ ಪ್ರತಿಭೆ ರಸಿಕ್ ಸಲಾಮ್ ದಾರ್ ನಾಲ್ಕು ವಿಕೆಟ್ ಪಡೆದು ಮಿಂಚಿದ್ದರು. ವೇಗಿಗಳಾದ ಹ್ಯಾಜಲ್‌ವುಡ್, ಭುವನೇಶ್ವರ್ ಕುಮಾರ್, ಸ್ಪಿನ್ ಜೋಡಿಯಾದ ಕೃಣಾಲ್ ಪಾಂಡ್ಯ–ಸುಯಶ್ ಶರ್ಮಾ ಪರಿಣಾಮಕಾರಿ ದಾಳಿ ಸಂಘಟಿಸಿದ್ದರು. ಈಗ ಡೆಲ್ಲಿ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಅವರ ಮುಂದಿದೆ.



ಡೆಲ್ಲಿ ತಂಡಕ್ಕೆ ಹೋಲಿಸಿದರೆ ಆರ್‌ಸಿಬಿಯ ಬ್ಯಾಟಿಂಗ್ ವಿಭಾಗವೂ ಬಲಿಷ್ಠವಾಗಿದೆ. ಐದು ಪಂದ್ಯಗಳಲ್ಲಿ 21 ಸಿಕ್ಸರ್ ಬಾರಿಸಿರುವ ರಜತ್ (222 ರನ್) ಅಮೋಘ ಲಯದಲ್ಲಿದ್ದಾರೆ. ಟಿಮ್ ಡೇವಿಡ್ (147), ಫಿಲ್ ಸಾಲ್ಟ್ (139), ಸ್ಥಳೀಯ ತಾರೆ ದೇವದತ್ತ ಪಡಿಕ್ಕಲ್ (135) ಉಪಯುಕ್ತ ಕಾಣಿಕೆ ನೀಡಿದ್ದಾರೆ. ವಿಕೆಟ್ ಕೀಪರ್ ಜಿತೇಶ್ ಶರ್ಮಾ, ರೊಮಾರಿಯೊ ಶೆಫರ್ಡ್ ಅವರೂ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಗಳಿಸುವ ಸಾಮರ್ಥ್ಯ ಹೊಂದಿದ್ದಾರೆ.

33 ಒಟ್ಟು ಪಂದ್ಯ	ಬಲಾಬಲ
ಆರ್‌ಸಿಬಿ ಗೆಲುವು	20
ಡಿಸಿ ಗೆಲುವು	12
ಫಲಿತಾಂಶವಿಲ್ಲ	1

ಅಕ್ಷರ್ ಪಟೇಲ್ ಬಳಗವು ಆರಂಭದ ಎರಡು ಪಂದ್ಯಗಳಲ್ಲಿ ಜಯ ಸಾಧಿಸಿ, ನಂತರದಲ್ಲಿ ಎರಡೂ ಸೋಲು ಅನುಭವಿಸಿ ಗೆಲುವಿನ ಹಳಿಗೆ ಮರಳುವ ಪ್ರಯತ್ನದಲ್ಲಿದೆ. ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಅವರಿಗೂ 'ಚಿನ್ನಸ್ವಾಮಿ' ತವರಿನಂಗಳ ಎಂಬುದು ವಿಶೇಷ. ಮತ್ತೊಬ್ಬ ಕನ್ನಡಿಗ ಕರುಣ್ ನಾಯರ್ ತಂಡದಲ್ಲಿದ್ದರೂ ಹಾಲಿ ಟೂರ್ನಿಯಲ್ಲಿ ಆಡಲು ಅವಕಾಶ ಸಿಕ್ಕಿಲ್ಲ.

ಕಳೆದ ಆವೃತ್ತಿಯಲ್ಲಿ ಇದೇ ತಾಣದಲ್ಲಿ ನಡೆದ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ರಾಹುಲ್ ಅಜೇಯ 93 ರನ್ ಬಾರಿಸಿ, ತಮ್ಮ ತಂಡಕ್ಕೆ 6 ವಿಕೆಟ್‌ಗಳ ಗೆಲುವಿನ ಕಾಣಿಕೆ ನೀಡಿದ್ದರು. ಮಾತ್ರವಲ್ಲ, ಕಾಂತಾರ ಸಿನಿಮಾದ ಶೈಲಿಯಲ್ಲಿ ಬ್ಯಾಟ್‌ನಿಂದ ಕ್ರೀಸ್‌ನಲ್ಲಿ ವೃತ್ತ ಬರೆದು, ಆ ವೃತ್ತದೊಳಗೆ ಬ್ಯಾಟ್ ಕುಟ್ಟಿ ಸಂಭ್ರಮಿಸಿದ್ದರು. ಆದರೆ, ನಂತರದ ಮುಖಾಮುಖಿಯಲ್ಲಿ ಆರ್‌ಸಿಬಿ ತಂಡವು ಡೆಲ್ಲಿ ತಂಡವನ್ನು ಅವರದೇ ತವರಿನಲ್ಲಿ ಆರು ವಿಕೆಟ್‌ಗಳಿಂದ ಸೋಲಿಸಿ ಮುಯ್ಯಿ ತೀರಿಸಿಕೊಂಡಿತ್ತು.

33 ವರ್ಷದ ರಾಹುಲ್ ಈ ಬಾರಿ ಸ್ಥಿರ ಪ್ರದರ್ಶನ ನೀಡದಿರುವುದು ಡೆಲ್ಲಿ ತಂಡಕ್ಕೆ ಚಿಂತೆಯಾಗಿದೆ. ಗುಜರಾತ್ ಟೈಟನ್ಸ್ ವಿರುದ್ಧ ಮಿಂಚಿನ 92 ರನ್ ಗಳಿಸಿದರೂ ಆ ಪಂದ್ಯವನ್ನು 1 ರನ್‌ನಿಂದ ಸೋತಿತ್ತು. ಉಳಿದ ಮೂರು ಪಂದ್ಯಗಳಲ್ಲೂ ರಾಹುಲ್ ಬೇಗನೆ ವಿಕೆಟ್ ಒಪ್ಪಿಸಿದ್ದರು. ಅವರು ಬ್ಯಾಟಿಂಗ್‌ಗೆ ಕುದುರದಂತೆ ನೋಡಿಕೊಳ್ಳುವ ಜವಾಬ್ದಾರಿ ಆರ್‌ಸಿಬಿ ಬೌಲರ್‌ಗಳ ಮೇಲಿದೆ.

ಸಮೀರ್ ರಿಜ್ವಿ ಹೊರತುಪಡಿಸಿ ಡೆಲ್ಲಿಯ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಮಟ್ಟದಲ್ಲಿ ರನ್ ಬಂದಿಲ್ಲ. ಸಮೀರ್ ನಾಲ್ಕು ಪಂದ್ಯಗಳಲ್ಲಿ 55ರ ಸರಾಸರಿಯಲ್ಲಿ 166 ರನ್ ಗಳಿಸಿದ್ದು, ತಂಡದ ಗರಿಷ್ಠ ಸ್ಕೋರರ್ ಎನಿಸಿದ್ದಾರೆ. ಶ್ರೀಲಂಕಾದ ಬ್ಯಾಟರ್ ಪಥುಮ್ ನಿಸಾಂಕ (127) ನಂತರದ ಸ್ಥಾನದಲ್ಲಿದ್ದಾರೆ. ಡೇವಿಡ್ ಮಿಲ್ಲರ್, ಟ್ರಿಸ್ಟನ್ ಸ್ಟಬ್ಸ್ ಅವರ ಮೇಲೆ ಹೆಚ್ಚಿನ ನಿರೀಕ್ಷೆಯಿದೆ.

ನಾಲ್ಕು ಪಂದ್ಯಗಳಲ್ಲಿ ಐದು ವಿಕೆಟ್ ಕಬಳಿಸಿರುವ ಲುಂಗಿ ಎನ್‌ಗಿಡಿ ಬೌಲರ್‌ಗಳ ಪೈಕಿ ಪರಿಣಾಮಕಾರಿ ಎನಿಸಿದ್ದಾರೆ. ಆದರೆ ಮುಕೇಶ್ ಕುಮಾರ್, ಟಿ. ನಟರಾಜ್ ತಲಾ ನಾಲ್ಕು ವಿಕೆಟ್ ಪಡೆದರೂ ಉದಾರಿಯೆನಿಸಿದ್ದಾರೆ. ಅನುಭವಿ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್, ಅಕ್ಷರ್ ಅವರ ಕೈಚಳಕವೂ ನಡೆಯುತ್ತಿಲ್ಲ. ಆರ್‌ಸಿಬಿ ವಿರುದ್ಧ ಹೊಸ ಮುಖಗಳಿಗೆ ಅವಕಾಶ ನೀಡಿದರೂ ಅಚ್ಚರಿಯಿಲ್ಲ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್ ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

ಟೈಟನ್ಸ್‌ಗೆ ಹ್ಯಾಟ್ರಿಕ್ ಜಯ: ಕೋಲ್ಕತ್ತಕ್ಕೆ 5ನೇ ಸೋಲು

ಗಿಲ್, ರಬಾಡ ಆಟಕ್ಕೆ ಗೆಲುವು

ಅಹಮದಾಬಾದ್ (ಪಿಟಿಐ): ವೇಗಿ ಕಗಿಸೊ ರಬಾಡ (29ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಳಿಕ ನಾಯಕ ಶುಭಮನ್ ಗಿಲ್ (86;50ಎ) ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದರು. ಅವರಿಬ್ಬರ ಆಟದ ಬಲದಿಂದ ಗುಜರಾತ್ ಟೈಟನ್ಸ್ ತಂಡವು ಐಪಿಎಲ್‌ನಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿತು. ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸೋಲಿನ ಸರಪಳಿ ಮುಂದುವರಿಯಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕ್ಯಾಮರಾನ್ ಗ್ರೀನ್ ಅವರ ಏಕಾಂಗಿ ಹೋರಾಟದ ಬಲದಿಂದ ತಂಡವು 20 ಓವರ್‌ಗಳಲ್ಲಿ 180 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಗುರಿ ಬೆನ್ನಟ್ಟಿದ ಗುಜರಾತ್ ತಂಡವು ಎರಡು ಎಸೆತ ಇರುವಂತೆ 5 ವಿಕೆಟ್‌ಗೆ 181 ರನ್ ಗಳಿಸಿ ಐದು ವಿಕೆಟ್‌ಗಳ ಗೆಲುವು ಸಾಧಿಸಿತು. ಆರಂಭದ ಎರಡು ಪಂದ್ಯ ಸೋತಿದ್ದ ಗಿಲ್ ಪಡೆ ಸತತ ಮೂರನೇ ಜಯ ದಾಖಲಿಸಿತು. ಮೂರು ಬಾರಿಯ ಚಾಂಪಿಯನ್ ಕೋಲ್ಕತ್ತ ತಂಡವು ಐದನೇ ಸೋಲು ಅನುಭವಿಸಿತು. ಪಂಜಾಬ್ ಕಿಂಗ್ಸ್ ವಿರುದ್ಧದ ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು.

ಸಾಯಿ ಸುದರ್ಶನ್ (22) ಮತ್ತು ಗಿಲ್ ಮೊದಲ ವಿಕೆಟ್‌ಗೆ 57 (31ಎ) ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಸುದರ್ಶನ್ ಔಟಾದ ಬಳಿಕ ವಿಕೆಟ್ ಕೀಪರ್ ಜೋಸ್ ಬಟ್ಲರ್ (25) ಗಿಲ್ ಅವರನ್ನು ಸೇರಿಕೊಂಡರು. ಎರಡನೇ ವಿಕೆಟ್‌ಗೆ 38 ರನ್ ಕಲೆ ಹಾಕಿದರು. ಈ ಹಂತದಲ್ಲಿ ವರುಣ್ ಚಕ್ರವರ್ತಿ ಕೈಚಳಕ ತೋರಿದರು. ಬಟ್ಲರ್ ಮತ್ತು ವಾಷಿಂಗ್ಟನ್ ಸುಂದರ್ (13) ಅವರ ವಿಕೆಟ್ ಕಬಳಿಸಿದರು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ಮತ್ತೊಂದೆಡೆ ಗಿಲ್ ಬೀಸಾಟ ನಡೆಸಿದರು. ಅವರ ಇನಿಂಗ್ಸ್‌ನಲ್ಲಿ ಎಂಟು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳು ಸೇರಿದ್ದವು.

ಗೆಲುವಿಗೆ 23 ರನ್ ಬೇಕಿದ್ದಾಗ ಗಿಲ್ ವೈಭವ್ ಅರೋರ ಅವರ ಎಸೆತದಲ್ಲಿ ಕ್ರಾಮರಾನ್ ಗ್ರೀನ್ ಅವರಿಗೆ ಕ್ಯಾಚ್ ಆದರು. ನಂತರದಲ್ಲಿ ಕೋಲ್ಕತ್ತ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಸಾಧಿಸುವ ಪ್ರಯತ್ನ ನಡೆಸಿದರೂ ಫಲ ನೀಡಲಿಲ್ಲ.

ಇದಕ್ಕೂ ಮುನ್ನ ಗುಜರಾತ್ ಬೌಲರ್‌ಗಳ ಶಿಸ್ತಿನ ದಾಳಿಯಿಂದಾಗಿ ಕೋಲ್ಕತ್ತ ಬ್ಯಾಟರ್‌ಗಳು ಆರಂಭದಲ್ಲಿಯೇ ಆಘಾತ ಅನುಭವಿಸಿದರು. ಮೊದಲ ಓವರ್‌ನಲ್ಲಿ ಕೋಲ್ಕತ್ತ ನಾಯಕ ಅಜಿಂಕ್ಯ ರಹಾನೆ ವಿಕೆಟ್ ಗಳಿಸುವಲ್ಲಿ ಮೊಹಮ್ಮದ್ ಸಿರಾಜ್ ಯಶಸ್ವಿಯಾದರು. ಅಜಿಂಕ್ಯ ಅವರು ಗೋಲ್ಡನ್ ಡಕ್ ಪಡೆದರು. ನಂತರದ ಓವರ್‌ಗಳಲ್ಲಿ ಕಗಿಸೊ ರಬಾಡ ಅವರು ಟಿಮ್ ಸೀಫರ್ಟ್ (19 ರನ್) ಮತ್ತು ಅಂಗಕ್ರಿಷ್ ರಘುವಂಶಿ (8 ರನ್) ಅವರ ವಿಕೆಟ್‌ಗಳನ್ನು ಗಳಿಸಿದರು. ಇದರಿಂದಾಗಿ ತಂಡವು 32 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಗಟ್ಟಿಯಾಗಿ ನಿಂತ ಗ್ರೀನ್ ಅವರು ಇನಿಂಗ್ಸ್‌ಗೆ ಬಲ ತುಂಬುವತ್ತ ನಿಗಾ ವಹಿಸಿದರು. ಅವರೂ ಕಳೆದ ಕೆಲವು ಇನಿಂಗ್ಸ್‌ಗಳಲ್ಲಿ ವೈಫಲ್ಯ ಅನುಭವಿಸಿದ್ದರು. ಅದ್ದರಿಂದ ಬಹಳಷ್ಟು ಟೀಕೆಗಳಿಗೂ ಗುರಿಯಾಗಿದ್ದರು. ಆದರೆ ಇಲ್ಲಿ ಅವರು ಎಲ್ಲ ಟೀಕೆಗಳಿಗೂ ಉತ್ತರ ಕೊಟ್ಟರು. ಗ್ರೀನ್ ಅವರು ರೋವ್ಮನ್ ಪೊವೆಲ್ (27; 20ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು. ನಂತರ ಗ್ರೀನ್ ಅವರು ಅನುಕೂಲ್ ರಾಯ್ ಜೊತೆಗೂಡಿ 60 ರನ್ ಸೇರಿಸಿದರು. ಆದರೆ ಕೊನೆಯ 32 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಪತನವಾದವು. ಇದರಿಂದಾಗಿ 200 ರನ್‌ಗಳಿಗಿಂತ ಹೆಚ್ಚಿನ ಮೊತ್ತ ಗಳಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 180 (ಕ್ಯಾಮರಾನ್ ಗ್ರೀನ್ 79, ರೋವ್ಮನ್ ಪಾವೆಲ್ 27; ಮೊಹಮ್ಮದ್ ಸಿರಾಜ್ 23ಕ್ಕೆ 2, ಕಗಿಸೊ ರಬಾಡ 29ಕ್ಕೆ 3, ಪ್ರಸಿದ್ಧ ಕೃಷ್ಣ 32ಕ್ಕೆ 1, ಅಶೋಕ್ ಶರ್ಮಾ 45ಕ್ಕೆ 2). ಗುಜರಾತ್ ಟೈಟನ್ಸ್: 19.4 ಓವರ್‌ಗಳಲ್ಲಿ 5 ವಿಕೆಟ್‌ಗೆ 181 (ಸಾಯಿ ಸುದರ್ಶನ್ 22, ಶುಭಮನ್ ಗಿಲ್ 86, ಜೋಸ್ ಬಟ್ಲರ್ 25; ವೈಭವ್ ಅರೋರಾ 35ಕ್ಕೆ 1, ಸುನಿಲ್ ನಾರಾಯಣ್ 28ಕ್ಕೆ 1, ವರುಣ್ ಚಕ್ರವರ್ತಿ 34ಕ್ಕೆ 2, ರಮಣದೀಪ್ 5ಕ್ಕೆ 1). ಪಂದ್ಯದ ಆಟಗಾರ: ಶುಭಮನ್ ಗಿಲ್.

ಚೆಂಡನ್ನು ಸಿಕ್ಸರ್‌ಗೆ ಅಟ್ಟಿದ ಶುಭಮನ್ ಗಿಲ್ ಪಿಟಿಐ ಚಿತ್ರ

ಗುಜರಾತ್ ಟೈಟನ್ಸ್‌ಗೆ ಎಸ್ಟರ್‌ಹೈಝೆನ್

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್– ಬ್ಯಾಟರ್ ಕಾನರ್ ಎಸ್ಟರ್‌ಹೈಝೆನ್ ಅವರು ಗುಜರಾತ್ ಟೈಟನ್ಸ್ ಪರ ಆಡಲಿದ್ದಾರೆ. ಗಾಯಾಳಾಗಿರುವ ಇಂಗ್ಲೆಂಡ್ ಆಟಗಾರ ಟಾಮ್ ಬ್ಯಾಂಟನ್ ಬದಲು ಟೈಟನ್ಸ್ ತಂಡವು ಕಾನರ್ ಅವರನ್ನು ಸೇರ್ಪಡೆಗೊಳಿಸಿದೆ.

ಬ್ಯಾಂಟನ್ ಅವರು ಬೆರಳಿನ ಗಾಯದಿಂದಾಗಿ ಐಪಿಎಲ್ ಕಳೆದುಕೊಂಡಿದ್ದಾರೆ. 24 ವರ್ಷ ವಯಸ್ಸಿನ ಎಸ್ಟರ್‌ಹೈಝೆನ್ ಅವರು ಮಾರ್ಚ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಐದು ಪಂದ್ಯಗಳ ಟಿ20 ಸರಣಿಗೆ ಪದಾರ್ಪಣೆ ಮಾಡಿದ್ದರು. ಆದರೆ ತಮ್ಮ ಅಮೋಘ ಮತ್ತು ಸ್ಥಿರ ಬ್ಯಾಟಿಂಗ್‌ನಿಂದಾಗಿ ಸರಣಿಯ ಆಟಗಾರ ಗೌರವಕ್ಕೆ ಪಾತ್ರರಾಗಿದ್ದರು.

ಜೋಸ್ ಬಟ್ಲರ್ ಅವರಿಗೆ ಬ್ಯಾಕಪ್ ಕೀಪರ್ ಆಗಲಿದ್ದಾರೆ. ಅವರು ಮೂಲಬೆಲೆ ₹75 ಲಕ್ಷಕ್ಕೆ ಟೈಟನ್ಸ್ ಪಾಲಾಗಿದ್ದಾರೆ. ಇದು ಅವರಿಗೆ ಮೊದಲ ಐಪಿಎಲ್ ಋತುವಾಗಿದೆ.

ಬಿಂದರ್‌ಗೆ ₹1 ಲಕ್ಷ ದಂಡ

ನವದೆಹಲಿ (ಪಿಟಿಐ): ಡಗ್‌ಔಟ್‌ನಲ್ಲಿ ಮೊಬೈಲ್ ಬಳಸುವ ಮೂಲಕ ಭ್ರಷ್ಟಾಚಾರ ತಡೆ ನಿಯಮ ಉಲ್ಲಂಘಿಸಿದ ರಾಜಸ್ಥಾನ ರಾಯಲ್ಸ್ ಟೀಮ್ ಮ್ಯಾನೇಜರ್ ರೋಮಿ ಬಿಂದರ್ ಅವರಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹1 ಲಕ್ಷ ದಂಡ ವಿಧಿಸಿದೆ.

ಮಂಡಳಿ ನೀಡಿದ ಷೋಕಾಸ್ ನೋಟಿಸ್‌ಗೆ ಅವರ ಉತ್ತರ ತೃಪ್ತಿದಾಯಕವಾಗಿಲ್ಲದ ಕಾರಣ ಅವರಿಗೆ ಎಚ್ಚರಿಕೆಯನ್ನೂ ನೀಡಲಾಗಿದೆ ಎಂದು ಕಾರ್ಯದರ್ಶಿ ದೇವಜಿತ್ ಸೈಕಿಯಾ ಶುಕ್ರವಾರ ಪಿಟಿಐಗೆ ತಿಳಿಸಿದ್ದಾರೆ.

ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಣ ಏಪ್ರಿಲ್ 10ರಂದು ನಡೆದ ಪಂದ್ಯದ ವೇಳೆ ಬಿಂದರ್ ನಿಯಮ ಉಲ್ಲಂಘಿಸಿದ್ದರು. ಅವರಿಗೆ ಬಿಸಿಸಿಐನ ಭ್ರಷ್ಟಾಚಾರ ನಿಗ್ರಹ ಘಟಕದ ನೇತೃತ್ವ ವಹಿಸಿದ್ದ ಶರದ್ ಕುಮಾರ್ ಅವರು ಷೋಕಾಸ್ ನೋಟಿಸ್ ನೀಡಿ ವಿವರಣೆ ಕೇಳಿದ್ದರು. ಶಿಷ್ಟಾಚಾರದಂತೆ ಆಟಗಾರರು ಮತ್ತು ಅಧಿಕಾರಿಗಳು ಡಗ್‌ಔಟ್‌ನಲ್ಲಿ ಮೊಬೈಲ್ ಬಳಸುವಂತಿಲ್ಲ. ಆದರೆ ಡ್ರೆಸಿಂಗ್ ರೂಮ್‌ನಲ್ಲಿ ಬಳಸಲು ಅಡ್ಡಿಯಿಲ್ಲ.

'ಶರದ್ ಕುಮಾರ್ ಅವರ ತಂಡ ಬಿಂದರ್ ಅವರ ಪ್ರತಿಕ್ರಿಯೆ ಪರಿಶೀಲಿಸಿದ್ದು ಅವರು ದೋಷಿ ಎಂಬುದು ಸಾಬೀತಾಗಿದೆ. ಮೊದಲ ಬಾರಿ ಮಾಡಿದ ತಪ್ಪಿಗಾಗಿ ₹1 ಲಕ್ಷ ದಂಡ ವಿಧಿಸಲಾಗಿದೆ. ನೋಟಿಸ್‌ಗೆ ಅವರ ಉತ್ತರ ಸಮರ್ಪಕವಾಗಿಲ್ಲದ ಕಾರಣ ಎಚ್ಚರಿಕೆ ಸಹ ನೀಡಲಾಗಿದೆ' ಎಂದು ಸೈಕಿಯಾ ತಿಳಿಸಿದ್ದಾರೆ.

ಬಿಂದರ್ ಅವರು ಡಗ್‌ಔಟ್‌ನಲ್ಲಿ ಸ್ಮಾರ್ಟ್ ಫೋನ್ ಸ್ಕ್ರಾಲ್ ಮಾಡುತ್ತಿರುವ ಮತ್ತು ಪಕ್ಕದಲ್ಲಿ ಕುಳಿತಿದ್ದ ವೈಭವ್ ಸೂರ್ಯವಂಶಿ ಅದನ್ನು ಕುತೂಹಲದಿಂದ ಗಮನಿಸುತ್ತಿದ್ದ ದೃಶ್ಯ ಸೆರೆಯಾಗಿತ್ತು. ಆದರೆ ಸೂರ್ಯವಂಶಿ ಅವರಿಗೆ ದಂಡ ವಿಧಿಸಿಲ್ಲ. ಅವರು ಅಮಾಯಕ. ಅವರಿಗೆ ನಿಯಮಗಳ ಬಗ್ಗೆ ತಂಡವು ಹೆಚ್ಚಿನ ತಿಳಿವಳಿಕೆ ನೀಡಬೇಕೆಂದು ಬಿಸಿಸಿಐ ಬಯಸಿದೆ.

ಉತ್ಸಾಹಿ ಸನ್‌ಗೆ ಇಂದು ಸೂಪರ್ ಕಿಂಗ್ಸ್ ಸವಾಲು

ಹೈದರಾಬಾದ್ (ಪಿಟಿಐ): ಪ್ರಫುಲ್ ಹಿಂಗೆ ಮತ್ತು ಸಾಕಿಬ್ ಹುಸೇನ್ ಎಂಬ ಯುವ ವೇಗದ ಬೌಲರ್‌ಗಳ ಅಮೋಘ ರಂಗಪ್ರವೇಶವು ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಅತ್ಯಗತ್ಯವಾಗಿದ್ದ ಸಮತೋಲನ ನೀಡಿದೆ. ಶನಿವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ತವರಿನಲ್ಲಿ ನಡೆಯುವ ಪಂದ್ಯದಲ್ಲಿ ಹೆಚ್ಚಿನ ವಿಶ್ವಾಸದೊಡನೆ ಕಣಕ್ಕಿಳಿಯಲಿದೆ.

ಅನುಭವಿಗಳಾದ ಹರ್ಷಲ್ ಪಟೇಲ್ ಮತ್ತು ಜಯದೇವ ಉನದ್ಕತ್ ಅವರ ಬದಲು ಅವಕಾಶ ಪಡೆದ ಈ ಇಬ್ಬರು ಪದಾರ್ಪಣೆ ಪಂದ್ಯದಲ್ಲೇ ಪರಿಣಾಮಕಾರಿ ಎನಿಸಿದ್ದರು. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ರಾಜಸ್ಥಾನ ರಾಯಲ್ಸ್ ತಂಡ 9 ರನ್‌ಗಳಾಗುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು; ಮಾತ್ರವಲ್ಲ 57 ರನ್‌ಗಳಿಂದ ಮೊದಲ ಸೋಲನ್ನೂ ಅನುಭವಿಸಿತು.

24 ವರ್ಷದ ವಿದರ್ಭ ವೇಗಿ ಹಿಂಗೆ ಮೊದಲ ಸ್ಪೆಲ್‌ನಲ್ಲೇ ರಾಯಲ್ಸ್‌ನ ಪ್ರಮುಖ ಆಟಗಾರರಾದ ವೈಭವ್ ಸೂರ್ಯವಂಶಿ, ಧ್ರುವ್ ಜುರೇಲ್, ಲುವಾನ್ ಡ್ರೆ ಪ್ರಿಟೋರಿಯಸ್ ಮತ್ತು ನಾಯಕ ರಿಯಾನ್ ಪರಾಗ್ ವಿಕೆಟ್‌ಗಳನ್ನು ಗಳಿಸಿದ್ದರು. ಲೆಂಗ್ತ್‌ಗಳಿಂದ ಬ್ಯಾಟರ್‌ಗಳನ್ನು ತಬ್ಬಿಬ್ಬುಗೊಳಿಸಿದ್ದರು.

ಈ ಹಿಂದೆ ಕೆಕೆಆರ್‌ನಿಂದ ಅವಗಣನೆಗೆ ಒಳಗಾಗಿದ್ದ ಬಿಹಾರದ 21 ವರ್ಷದ ಸಾಕಿಬ್ ಇನ್ನೊಂದು ಕಡೆಯಿಂದ ಸಮರ್ಥ ಬೆಂಬಲ ನೀಡಿದ್ದರು. ಜಾಣ್ಮೆಯ ವೇರಿಯೇಷನ್‌ಗಳಿಂದ ಗಮನ ಸೆಳೆದಿದ್ದರು.

ಅಭಿಷೇಕ್, ಟ್ರಾವಿಸ್ ಹೆಡ್, ಇಶಾನ್ ಕಿಶನ್, ಕ್ಲಾಸೆನ್ ಅಂಥ ಆಕ್ರಮಣಕಾರಿ ಬ್ಯಾಟರ್‌ಗಳಿದ್ದರೂ, ಬೌಲಿಂಗ್ ವಿಭಾಗ ಅಷ್ಟೇನೂ ಪ್ರಭಾವಶಾಲಿ ಎನಿಸಿರಲಿಲ್ಲ. ದಿಢೀರ್ ಯಶಸ್ಸಿನಿಂದ ಹಿಂಗೆ ಮತ್ತು ಹುಸೇನ್ ಈಗ ಸೂಪರ್ ಕಿಂಗ್ಸ್ ವಿರುದ್ಧವೂ ಉತ್ತಮ ಪ್ರದರ್ಶನ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ಸೂಪರ್ ಕಿಂಗ್ಸ್ ನಾಯಕ ಋತುರಾಜ್ ಗಾಯಕವಾಡ್ ಸತತವಾಗಿ ವಿಫಲರಾಗಿದ್ದಾರೆ. ಐದು ಇನಿಂಗ್ಸ್‌ಗಳಲ್ಲಿ ಅವರ ಗರಿಷ್ಠ ಗಳಿಕೆ 28. ಆದರೆ ಸಂಜು ಸ್ಯಾಮ್ಸನ್ ಲಯಕ್ಕೆ ಮರಳಿರುವುದು ತಂಡಕ್ಕೆ ನೆಮ್ಮದಿ ಮೂಡಿಸಿದೆ. ಒಂದರಲ್ಲಿ ಅಜೇಯ ಶತಕ ಬಾರಿಸಿದ್ದ ಅವರು ಕೋಲ್ಕತ್ತ ವಿರುದ್ಧ ಕೊನೆಯ ಪಂದ್ಯದಲ್ಲಿ 48 ರನ್ ಗಳಿಸಿದ್ದರು. ಗಾಯಕವಾಡ್ ಬದಲು ಆಯುಷ್ ಮ್ಹಾತ್ರೆ ಅವರಿಗೆ ಬಡ್ತಿ ನೀಡುವ ಬಗ್ಗೆ ಸಿಎಸ್‌ಕೆ ಪರಿಶೀಲಿಸುತ್ತಿದೆ.

ಎಡಗೈ ವೇಗಿ ಖಲೀಲ್ ಅಹ್ಮದ್ ಅವರು ಗಾಯಾಳಾಗಿ ಹೊರಬಿದ್ದಿರುವುದು ತಂಡಕ್ಕೆ ತಲೆನೋವಾಗಿದೆ.

ಮೊದಲ ನಾಲ್ಕು ಪಂದ್ಯಗಳಲ್ಲಿ ಮೂರನ್ನು ಸೋತಿದ್ದ ಸನ್‌ರೈಸರ್ಸ್ ನಂತರ ಗೆಲುವಿನ ಹಳಿಗೆ ಮರಳಿದೆ. ಸೂಪರ್ ಕಿಂಗ್ಸ್ ಸಹ ಕೊನೆಯ ಎರಡು ಪಂದ್ಯಗಳನ್ನು ಗೆದ್ದುಕೊಂಡಿದೆ. ಈಗ ತವರಿನಿಂದ ಹೊರಗೆ ಮೊದಲ ಗೆಲುವಿನ ನಿರೀಕ್ಷೆಯಲ್ಲಿದೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	5	4	0	1	9	1.067
ಆರ್‌ಸಿಬಿ	5	4	1	0	8	1.503
ಆರ್ ಆರ್	5	4	1	0	8	0.889
ಜಿ ಟಿ	5	3	2	0	6	0.018
ಎಸ್‌ಆರ್‌ಎಚ್	5	2	3	0	4	0.576
ಡಿ ಸಿ	4	2	2	0	4	0.322
ಎಲ್‌ಎಸ್‌ಜಿ	5	2	3	0	4	- 0.804
ಸಿಎಸ್‌ಕೆ	5	2	3	0	4	- 0.846
ಎಂ ಐ	5	1	4	0	2	- 1.076
ಕೆಕೆಆರ್	6	0	5	1	1	- 1.149

ಆರೇಂಜ್ ಕ್ಯಾಪ್–ಶುಭಮನ್ ಗಿಲ್, ಜಿಟಿ (251 ರನ್)

ಪರ್ಪಲ್ ಕ್ಯಾಪ್–ಪ್ರಸಿದ್ಧ ಕೃಷ್ಣ, ಜಿಟಿ (11 ವಿಕೆಟ್)

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು V/s ಡೆಲ್ಲಿ ಕ್ಯಾಪಿಟಲ್ಸ್

ತಾಣ: ಬೆಂಗಳೂರು, ಸಮಯ: ಮಧ್ಯಾಹ್ನ 3.30

ಸನ್‌ರೈಸರ್ಸ್ ಹೈದರಾಬಾದ್ V/s ಚೆನ್ನೈ ಸೂಪರ್ ಕಿಂಗ್ಸ್

ತಾಣ: ಹೈದರಾಬಾದ್, ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಕ್ರಿಕೆಟ್: ನ್ಯೂಜಿಲೆಂಡ್ ಶುಭಾರಂಭ

ಮೀರ್‌ಪುರ (ಎಪಿ): ಆಲ್‌ರೌಂಡ್ ಆಡಿದ ಡೀನ್ ಫಾಕ್ಸ್‌ಕ್ರಾಫ್ಟ್ ಅವರ ಬಲದಿಂದ ನ್ಯೂಜಿಲೆಂಡ್ ತಂಡವು ಬಾಂಗ್ಲಾದೇಶ ಎದುರು ಶುಕ್ರವಾರ ನಡೆದ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಶೇರ್ ಎ ಬಾಂಗ್ಲಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕಿವೀಸ್ ಬಳಗವು ಬ್ಯಾಟಿಂಗ್ ಮಾಡಿತು. ಹೆನ್ರಿ ನಿಕೋಲ್ಸ್ (68; 83ಎ, 4X9) ಮತ್ತು ಡೀನ್ ಫಾಕ್ಸ್‌ಕ್ರಾಫ್ಟ್ (59; 58ಎ, 4X8) ಅವರ ಅರ್ಧಶತಕಗಳ ಬಲದಿಂದ ಕಿವೀಸ್ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 247 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಬಾಂಗ್ಲಾ ತಂಡವು 48.3 ಓವರ್‌ಗಳಲ್ಲಿ 221 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ನ್ಯೂಜಿಲೆಂಡ್ 26 ರನ್‌ಗಳಿಂದ ಗೆದ್ದಿತು. ಸೈಫ್ ಹಸನ್ (57; 76ಎ, 4X8, 6X1) ಮತ್ತು ತೌಹಿದ್ ಹೃದಯ್ (55; 60ಎ, 4X2, 6X2) ಅರ್ಧಶತಕ ಗಳಿಸಿದರು. ಲಿಟನ್ ದಾಸ್ ಕೂಡ 46 ರನ್‌ಗಳ ಕಾಣಿಕೆ ನೀಡಿದರು. ಆದರೂ ತಂಡವು ಜಯಗಳಿಸಲು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣವಾಗಿದ್ದು ನೇಥನ್ ಸ್ಮಿತ್ (45ಕ್ಕೆ3) ಮತ್ತು ಬ್ಲೇರ್ ಟಿಕ್ನರ್ (40ಕ್ಕೆ4) ಅವರ ಶಿಸ್ತಿನ ಬೌಲಿಂಗ್.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 247 (ಹೆನ್ರಿ ನಿಕೋಲ್ಸ್ 68, ವಿಲ್ ಯಂಗ್ 30, ಡೀನ್ ಫಾಕ್ಸ್ ಕ್ರಾಫ್ಟ್ 59, ನೇಥನ್ ಸ್ಮಿತ್ ಔಟಾಗದೇ 21, ಟಸ್ಕಿನ್ ಅಹಮದ್ 50ಕ್ಕೆ2, ಶರೀಫುಲ್ ಇಸ್ಲಾಂ 27ಕ್ಕೆ2, ರಿಷಾದ್ ಹುಸೇನ್ 44ಕ್ಕೆ2) ಬಾಂಗ್ಲಾ: 48.3 ಓವರ್‌ಗಳಲ್ಲಿ 221 (ಸೈಫ್ ಹಸನ್ 57, ಲಿಟನ್ ದಾಸ್ 46, ತೌಹಿದ್ ಹೃದಯ್ 55, ಅಫಿಫ್ ಹುಸೇನ್ 27, ನೇಥನ್ ಸ್ಮಿತ್ 45ಕ್ಕೆ3, ಬ್ಲೇರ್ ಟಿಕ್ನರ್ 40ಕ್ಕೆ4)

ಡೀನ್ ಫಾಕ್ಸ್‌ಕ್ರಾಫ್ಟ್

ಮಹಿಳಾ ಕ್ರಿಕೆಟ್: ಭಾರತಕ್ಕೆ ಸೋಲು

ಡರ್ಬನ್ (ಪಿಟಿಐ): ಅಯಾಬೊಂಗಾ ಕಾಕಾ (16ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಳಿಕ ನಾಯಕಿ ಲಾರಾ ವೋಲ್ವಾರ್ಟ್ ಅವರ ಅರ್ಧಶತಕದ ಬಲದಿಂದ ದಕ್ಷಿಣ ಆಫ್ರಿಕಾ ಮಹಿಳಾ ತಂಡವು ಶುಕ್ರವಾರ ಭಾರತ ವಿರುದ್ಧ ಮೊದಲ ಟಿ20 ಪಂದ್ಯದಲ್ಲಿ ಆರು ವಿಕೆಟ್‌ಗಳ ಗೆಲುವು ಸಾಧಿಸಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಶಫಾಲಿ ವರ್ಮಾ (34;20ಎ), ಜೆಮಿಮಾ ರಾಡ್ರಿಗಸ್ (36;29ಎ) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (47;33ಎ) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 157 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು ಐದು ಎಸೆತಗಳು ಇರುವಂತೆ 4 ವಿಕೆಟ್‌ಗೆ 158 ರನ್ ಗಳಿಸಿ ಗೆಲುವು ಸಾಧಿಸಿತು. ಆರಂಭಿಕ ಆಟಗಾರ್ತಿ ವೋಲ್ವಾರ್ಟ್ 51 ರನ್ ಮತ್ತು ಅನೇರಿ ಡರ್ಕಸನ್ ಔಟಾಗದೇ 44 ರನ್ ಗಳಿಸಿ ಗೆಲುವಿಗೆ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 157 (ಶಫಾಲಿ ವರ್ಮಾ 34, ಜೆಮಿಮಾ ರಾಡ್ರಿಗಸ್ 36, ಹರ್ಮನ್‌ಪ್ರೀತ್ ಕೌರ್ 47; ಅಯಾಬೊಂಗಾ ಕಾಕಾ 16ಕ್ಕೆ 3). ದಕ್ಷಿಣ ಆಫ್ರಿಕಾ: 19.1 ಓವರ್‌ಗಳಲ್ಲಿ 4 ವಿಕೆಟ್‌ಗೆ 158 (ವೋಲ್ವಾರ್ಟ್ 51, ಅನೇರಿ ಡರ್ಕಸನ್ ಔಟಾಗದೇ 44; ಶ್ರೇಯಾಂಕ ಪಾಟೀಲ 26ಕ್ಕೆ 2). ಪಂದ್ಯದ ಆಟಗಾರ್ತಿ: ಅಯಾಬೊಂಗಾ ಕಾಕಾ

ಕೋಚ್ ನವಲ್ ಸಿಂಗ್ ವಿರುದ್ಧ ಜಾವೆಲಿನ್ ಪಟು ಸುಮಿತ್ ದೂರು

ನವದೆಹಲಿ (ಪಿಟಿಐ): ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಕೋಚ್ ನವಲ್ ಸಿಂಗ್ ಅವರು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಮತ್ತು ನಿಂದಿಸುತ್ತಿದ್ದಾರೆ ಎಂದು ಪ್ಯಾರಾಲಿಂಪಿಕ್ಸ್ ಸ್ವರ್ಣ ವಿಜೇತ ಜಾವೆಲಿನ್ ಪಟು ಸುಮಿತ್ ಅಂಟಿಲ್ ದೂರು ಸಲ್ಲಿಸಿದ್ದಾರೆ. ಅವರ ದೂರಿಗೆ ಒಲಿಂಪಿಕ್ಸ್ ತಾರೆ ನೀರಜ್ ಚೋಪ್ರಾ ಸಮ್ಮತಿ ನೀಡಿದ್ದಾರೆ.

ಈ ಬಗ್ಗೆ ಭಾರತ ಕ್ರೀಡಾ ಪ್ರಾಧಿಕಾರಕ್ಕೆ (ಸಾಯ್) ಸುಮಿತ್ ದೂರು ಸಲ್ಲಿಸಿದ್ದಾರೆ. ದೂರು ಸ್ವೀಕರಿಸಿರುವುದನ್ನು ಸಾಯ್ ಒಪ್ಪಿಕೊಂಡಿದೆ. ಆದರೆ, 'ನವಲ್ ತಮ್ಮ ಉದ್ಯೋಗಿಯಲ್ಲ. ಅವರನ್ನು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಇನ್ನೊಬ್ಬ ಪ್ರಮುಖ ಅಥ್ಲೀಟ್ ತರಬೇತಿಗೆ ನಿಯೋಜಿಸಿದೆ' ಎಂದು ಸಾಯ್ ಹೇಳಿದೆ.

ನವಲ್ ಅವರು ಸಚಿನ್ ಯಾದವ್ ಅವರಿಗೂ ತರಬೇತಿ ನೀಡುತ್ತಿದ್ದಾರೆ. ಸಚಿನ್ ಅವರು 2025ರಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ನೀರಜ್ ಅವರನ್ನು ಹಿಂದೆಹಾಕಿ ನಾಲ್ಕನೇ ಸ್ಥಾನ ಪಡೆದಿದ್ದರು. ಗಾಯದ ಸಮಸ್ಯೆ ಎದುರಿಸುತ್ತಿದ್ದ ನೀರಜ್ ಆ ಕೂಟದಲ್ಲಿ ಎಂಟನೇ ಸ್ಥಾನ ಗಳಿಸಿದ್ದರು.

'ನವಲ್ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿರಬಹುದು. ಅವರು ಪ್ರಮುಖ ಅಥ್ಲೀಟುಗಳಾದ ತಮಗೆ ಮತ್ತು ನೀರಜ್ ಚೋಪ್ರಾ ಅವರಿಗೆ ಕಿರಿಕಿರಿ ಮಾಡಲು ಯತ್ನಿಸುತ್ತಿದ್ದಾರೆ' ಎಂದು 2020 ಮತ್ತು 2024ರ ಪ್ಯಾರಾಲಿಂಪಿಕ್ಸ್ ಸ್ವರ್ಣ ವಿಜೇತ ಅಂಟಿಲ್ ಆರೋಪಿಸಿದ್ದಾರೆ. ನವಲ್ ಅವರು ಪ್ಯಾರಾ ಅಥ್ಲೀಟುಗಳ ತರಬೇತಿಯಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ.

ಸುಮಿತ್ ಅಂಟಿಲ್ ಎಫ್64 ವಿಭಾಗದ (ಕಾಲು ಕಳೆದುಕೊಂಡವರ ವಿಭಾಗ) ಅಥ್ಲೀಟ್ ಆಗಿದ್ದಾರೆ. 2028ರ ಲಾಸ್ ಏಂಜಲೀಸ್ ಪ್ಯಾರಾಲಿಂಪಿಕ್ಸ್‌ನಲ್ಲೂ ಅವರು ಪದಕದ ಭರಸೆಯಾಗಿದ್ದಾರೆ.

'ಅಂಟಿಲ್ ಅವರು ನೀಡಿದ ದೂರಿನ ವಿಷಯವನ್ನು ಫೆಡರೇಷನ್ (ಎಎಫ್‌ಐ) ಜೊತೆ ಪ್ರಸ್ತಾಪಿಸಲಾಗಿದೆ. ಅವರ ದೂರಿಗೆ ನೀರಜ್ ಚೋಪ್ರಾ ಸೇರಿ ಇತರ ಅಥ್ಲೀಟುಗಳೂ ಬೆಂಬಲಿಸಿದ್ದಾರೆ' ಎಂದು ಸಾಯ್ ಮೂಲವೊಂದು ತಿಳಿಸಿದೆ.

ಊಬರ್ ಕಪ್ ಬ್ಯಾಡ್ಮಿಂಟನ್: ಡೆನ್ಮಾರ್ಕ್‌ನಲ್ಲಿ ಇದೇ 24ರಿಂದ ಟೂರ್ನಿ

ಹಿಂದೆಸರಿದ ಟ್ರೀಸಾ– ಗಾಯತ್ರಿ ಜೋಡಿ

ನವದೆಹಲಿ (ಪಿಟಿಐ): ಭಾರತದ ಮಹಿಳಾ ಡಬಲ್ಸ್ ಜೋಡಿಯಾದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಡೆನ್ಮಾರ್ಕ್‌ನಲ್ಲಿ ನಡೆಯಲಿರುವ ಉಬರ್ ಕಪ್ ಫೈನಲ್ಸ್‌ನಲ್ಲಿ ಭಾಗವಹಿಸುವ ತಂಡದಿಂದ ಹಿಂದೆ ಸರಿದಿದ್ದಾರೆ. ಟ್ರೀಸಾ ಅವರ ಪಾದದ ನೋವಿನಿಂದಾಗಿ ಈ ನಿರ್ಧಾರಕ್ಕೆ ಬಂದಿದ್ದಾರೆ.

ಭಾರತ ಪುರುಷರ ಮತ್ತು ಮಹಿಳಾ ತಂಡಗಳು ಏಪ್ರಿಲ್ 24 ರಿಂದ ಮೇ 3ರವರೆಗೆ ಡೆನ್ಮಾರ್ಕ್‌ನ ಹಾರ್ಸೆನ್ಸ್‌ನಲ್ಲಿ ನಡೆಯಲಿರುವ ಥಾಮಸ್ ಮತ್ತು ಉಬರ್ ಕಪ್ ಫೈನಲ್ಸ್‌ನಲ್ಲಿ ಭಾಗವಹಿಸಲಿದೆ.

ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್ ಷಿಪ್‌ಗೆ ಹೋಗುವ ಕೇವಲ 2–3 ದಿನ ಮೊದಲು ತಂಡದ ತರಬೇತಿ ವೇಳೆ ಟ್ರೀಸಾ ಅವರ ಪಾದ ಆಕಸ್ಮಿಕವಾಗಿ ಉಳುಕಿತ್ತು ಎಂದು ಭಾರತದ ಡಬಲ್ಸ್ ಕೋಚ್ ಬಿ.ಸುಮೀತ್ ರೆಡ್ಡಿ ತಿಳಿಸಿದ್ದಾರೆ.

'ಅವರು ವಿಶ್ರಾಂತಿಯಲ್ಲಿದ್ದು, ಪುನಃಶ್ಚೇತನಕ್ಕೆ ಒಳಗಾಗಲಿದ್ದಾರೆ. ಇದು ಗಂಭೀರ ಗಾಯವಲ್ಲ. ನಾಲ್ಕು ವಾರಗಳಲ್ಲಿ ಗುಣಮುಖರಾಗಲಿದ್ದಾರೆ. ಮೇ ತಿಂಗಳ ಕೊನೆಯಲ್ಲಿ ನಡೆಯಲಿರುವ ಸಿಂಗಪುರ ಓಪನ್ ವೇಳೆ ಕಣಕ್ಕೆ ಮರಳಬಹುದು' ಎಂದು ಹೇಳಿದ್ದಾರೆ.

ಟ್ರೀಸಾ–ಗಾಯತ್ರಿ ಗೈರಿನಲ್ಲಿ ಶ್ರುತಿ ಮಿಶ್ರಾ– ಪ್ರಿಯಾ ಕೊಂಜೆಂಗ್ಬಾಮ್ ಅವರು ಆಡಲಿದ್ದಾರೆ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆ ತಿಳಿಸಿದೆ.

ಡೆನ್ಮಾರ್ಕ್‌ನಲ್ಲಿ ತರಬೇತಿ: ಇದೇ ವೇಳೆ, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಥಾಮಸ್ ಕಪ್ ಫೈನಲ್‌ಗೆ ಕೆಲವು ದಿನಗಳ ಮೊದಲೇ ಡೆನ್ಮಾರ್ಕ್‌ಗೆ ತೆರಳಲಿದ್ದು ತರಬೇತಿ ಪಡೆಯಲಿದ್ದಾರೆ. ಅವರಿಬ್ಬರು ಶನಿವಾರವೇ ಪ್ರಯಾಣ ಬೆಳೆಸಲಿದ್ದಾರೆ ಎಂದು ಸುಮೀತ್ ತಿಳಿಸಿದ್ದಾರೆ.

ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು 'ಎ' ಗುಂಪಿನಲ್ಲಿವೆ. ಪುರುಷರ ವಿಭಾಗದಲ್ಲಿ ಭಾರತದ ಜೊತೆ ಹಾಲಿ ಚಾಂಪಿಯನ್ ಚೀನಾ, ಕೆನಡಾ, ಆಸ್ಟ್ರೇಲಿಯಾ ತಂಡಗಳಿವೆ. ಭಾರತ 2022ರಲ್ಲಿ ಚಾರಿತ್ರಿಕ ಪ್ರಶಸ್ತಿ ಗೆದ್ದಿತ್ತು.

ಮಹಿಳೆಯರ ವಿಭಾಗದಲ್ಲಿ (ಊಬರ್ ಕಪ್) ಭಾರತದ ಜೊತೆ 'ಎ' ಗುಂಪಿನಲ್ಲಿ 16 ಬಾರಿಯ ಚಾಂಪಿಯನ್ ಚೀನಾ, ಆತಿಥೇಯ ಡೆನ್ಮಾರ್ಕ್ ಮತ್ತು ಉಕ್ರೇನ್ ತಂಡಗಳು ಇವೆ.

ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಳಿ

ಐಎಸ್‌ಎಲ್ ಚಿತ್ರ

ಕಾಲ್ಚಳಕ

ಚೆನ್ನೈನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ (ನೀಲಿ) ಮತ್ತು ಸ್ಪೋರ್ಟಿಂಗ್ ಡೆಲ್ಲಿ ತಂಡಗಳ ಆಟಗಾರರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು. ಚೆನ್ನೈಯಿನ್ 1–0ಯಿಂದ ಗೆಲುವು ಸಾಧಿಸಿತು

ಎನ್. ರಾಮಚಂದ್ರನ್ ನಿಧನ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಮಿತಿ (ಐಒಎ) ಮಾಜಿ ಅಧ್ಯಕ್ಷ ಎನ್. ರಾಮಚಂದ್ರನ್ (77) ಅವರು ಅನಾರೋಗ್ಯದಿಂದ ಗುರುವಾರ ಚೆನ್ನೈನಲ್ಲಿ ನಿಧನರಾದರು. ಅವರ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು.

ಬಿಸಿಸಿಐನ ಮಾಜಿ ಅಧ್ಯಕ್ಷ ಎನ್. ಶ್ರೀನಿವಾಸನ್ ಅವರ ಸಹೋದರನಾಗಿರುವ ರಾಮಚಂದ್ರನ್ ಅವರು ಭಾರತ ಸ್ಕ್ವಾಷ್ ರಾಕೆಟ್ಸ್ ಫೆಡರೇಷನ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ರಾಮಚಂದ್ರನ್ ಅವರು 2014ರ ಫೆಬ್ರುವರಿಯಿಂದ 2017ರ ಡಿಸೆಂಬರ್‌ವರೆಗೆ ಐಒಎ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅವರು 2008ರಿಂದ 2016 ರವರೆಗೆ ವಿಶ್ವ ಸ್ಕ್ವಾಷ್ ಫೆಡರೇಷನ್‌ನ ನೇತೃತ್ವ ವಹಿಸಿದ್ದರು. ಒಲಿಂಪಿಕ್ ಚಳವಳಿಗೆ ನೀಡಿದ ಅತ್ಯುತ್ತಮ ಸೇವೆಯನ್ನು ಗುರುತಿಸಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು ರಾಮಚಂದ್ರನ್ ಅವರಿಗೆ 2016ರಲ್ಲಿ 'ಒಲಿಂಪಿಕ್ ಆರ್ಡರ್' ಗೌರವ ಪ್ರದಾನ ಮಾಡಿತ್ತು.

ಚಿನ್ನದ ಮೆರುಗಿನ ಸಮೃದ್ಧಿಯೊಂದಿಗೆ

ಜೋಸ್ಕೊ ಗ್ರೂಪ್

ನಾಳೆಯಿಂದ ಪ್ರಾರಂಭ

ಜೋಸ್ಕೊ **ಅಕ್ಷಯ ತೃತೀಯಾ**

ಏಪ್ರಿಲ್ 19 - 22

ಎಲ್ಲಾ ಚಿನ್ನದ ಆಭರಣಗಳಿಗೆ

4 ದಿನಗಳು | ಕೇವಲ **4%** ತಯಾರಿಕಾ ವೆಚ್ಚ

ಕೇವಲ 4% ತಯಾರಿಕಾ ವೆಚ್ಚಗಳು ಚೆಟ್ಟಿನಾಡ್, ನಗಾಸ್, ಮತ್ತು ಆಂಟಿಕ್ ಆಭರಣಗಳನ್ನೊಳಗೊಂಡು ಎಲ್ಲಾ ರೀತಿಯ ಚಿನ್ನದ ವಿನ್ಯಾಸಗಳಿಗೂ ಅನ್ವಯಿಸುತ್ತದೆ.

ಪ್ರತಿ ಕ್ಯಾರಟ್ ವಜ್ರಾಭರಣಗಳ ಮೇಲೆ **ರೂ. 22,000 ರಿಯಾಯಿತಿ**

ಅನ್-ಕಟ್ ವಜ್ರಾಭರಣಗಳ ಮೇಲೆ **ವಿಶೇಷ ಕೊಡುಗೆಗಳು**

ಚಿನ್ನದ ನಾಣ್ಯಗಳ ಮೇಲೆ **0% ತಯಾರಿಕಾ ವೆಚ್ಚ** (ಸೀಮಿತ ಸ್ಟಾಕ್)

ಗೊಂದಲ-ರಹಿತ ಶಾಪಿಂಗ್‌ಗಾಗಿ **ಮುಂಗಡವಾಗಿ ಬುಕ್ ಮಾಡಿಕೊಳ್ಳಿ!**

*T&C ಅನ್ವಯಿಸುತ್ತವೆ.

100% 916 HUID ಆಭರಣ | GIA | IGI | SGL ಜೋಸ್ಕೊ ಜ್ಯುವೆಲ್ಲರ್ಸ್ ವಿಶೇಷವಾಗಿ 100% ನೈಸರ್ಗಿಕ ವಜ್ರಗಳೊಂದಿಗೆ ಮಾತ್ರ ವ್ಯವಹರಿಸುತ್ತದೆ.

ವ್ಯಾಲೆಟ್ ಪಾರ್ಕಿಂಗ್ ಸೌಲಭ್ಯ ಲಭ್ಯವಿದೆ

ಬೆಂಗಳೂರು :
ಡಿಕನ್‌ಸನ್ ರಸ್ತೆ, ರಾಯಲ್ MLS ಪ್ರೈಡ್ – ನಂ. 8,
ಕಮರ್ಷಿಯಲ್ ಸ್ಟ್ರೀಟ್ ಜಂಕ್ಷನ್ ಸಮೀಪ,
ದೂ : 080 41211312, 9995610113, 9008736916

ಜಯನಗರ,
ಸೌತ್ ಎಂಡ್ ಸರ್ಕಲ್ ಮೆಟ್ರೋ ನಿಲ್ದಾಣದ ಸಮೀಪ,
ರಾಮಕೃಷ್ಣ ಆಸ್ಪತ್ರೆಯ ಎದುರು, 2ನೇ ಬ್ಲಾಕ್,
ದೂ : 080-41666843, 9901000111

ಜೋಸ್ಕೊ ಜ್ಯುವೆಲ್ಲರ್ಸ್

ಕೇರಳ ಮಳಿಗೆಗಳು

ತಿರುವನಂತಪುರಂ ವಿಭಾಗದ ಮಾರಾಟ ಮಳಿಗೆಗಳು
1 – ಈಸ್ಟ್ ಫೋರ್ಟ್, 2 – ಪಳವಂಗಡಿ, 3 – ಪಟ್ಟೊಮ್, 4 – ಪೆರೂರ್ಕಡ, 5 – ಲೂಲು ಮಾಲ್, 6 – ನೆಡುಮಾಂಗಡು,
7 – ಶೀಘ್ರದಲ್ಲಿಯೇ ಆರಂಭಗೊಳ್ಳಲಿದೆ – ಈಸ್ಟ್ ಫೋರ್ಟ್, ಅಟ್ಟುಕಲ್ ಶಾಪಿಂಗ್ ಕಾಂಪ್ಲೆಕ್ಸ್, ತಿರುವನಂತಪುರಂ
8 – ಶೀಘ್ರದಲ್ಲಿಯೇ ಆರಂಭಗೊಳ್ಳಲಿದೆ – ಎಂಜಿ ರಸ್ತೆ ಸರ್ಕಾರೀ ಆಯುರ್ವೇದ ಕಾಲೇಜು ಎದುರು, ತಿರುವನಂತಪುರಂ
– ತಿರುವನಂತಪುರಂನಲ್ಲಿನ ಅತಿದೊಡ್ಡ ಮಾರಾಟ ಮಳಿಗೆ

ಕೊಲ್ಲಮ್ ಮಾರಾಟ ಮಳಿಗೆ – ಬಿಷಪ್ ಜೆರೋಮ್ ನಗರದ ಎದುರು
ಪಟ್ಟಣಂತಿಟ್ಟ ಮಾರಾಟ ಮಳಿಗೆ – ಕೆ ಪಿ ರಸ್ತೆ
ತಿರುವಳ್ಳ ಮಾರಾಟ ಮಳಿಗೆ – ಎಮ್ ಸಿ ರಸ್ತೆ
ಕೊಟ್ಟಾಯಂ ವಿಭಾಗದ ಮಾರಾಟ ಮಳಿಗೆಗಳು
1. ರಾಜೀವ್ ಗಾಂಧಿ ಕಾಂಪ್ಲೆಕ್ಸ್ ಕೊಟ್ಟಾಯಂ, 2 – ಸೆಂಟ್ರಲ್ ಜಂಕ್ಷನ್, ಕೆಕೆ ರಸ್ತೆ, 3 – ಜೋಸ್ಕೊ ಜಂಕ್ಷನ್ ಕೆಕೆ ರಸ್ತೆ
ತೊಡುಪುಳಾ ಮಾರಾಟ ಮಳಿಗೆ – ಇಡುಕ್ಕಿ ರಸ್ತೆ
ಕೊಚ್ಚಿ ವಿಭಾಗದ ಮಾರಾಟ ಮಳಿಗೆ – 1 ಎಂಜಿ ರಸ್ತೆ, 2 – ಲೂಲು ಮಾಲ್
3. ಶೀಘ್ರದಲ್ಲಿಯೇ ಆರಂಭಗೊಳ್ಳಲಿದೆ–ಎಂಜಿ ರಸ್ತೆ, ಶೆಣೈ ಸಿನಿಮಾ ಎದುರು ಕೊಚ್ಚಿನ್–ಇದು ಭಾರತದಲ್ಲಿಯೇ ಅತಿ ದೊಡ್ಡ ಮಾರಾಟ ಮಳಿಗೆಯಾಗಲಿದೆ
ತ್ರಿಶೂರ್ ವಿಭಾಗದ ಮಾರಾಟ ಮಳಿಗೆಗಳು
1 – ಜೋಸ್ಕೋ ಗೋಲ್ಡ್ ಟವರ್ ಪ್ಯಾಲೇಸ್ ರಸ್ತೆ, 2 – YMCA ಬಿಲ್ಡಿಂಗ್, ಪ್ಯಾಲೇಸ್ ರಸ್ತೆ, 3 – ಚಾವಕ್ಕಾಡ್
ಪಾಲಕ್ಕಾಡ್ ವಿಭಾಗದ ಮಾರಾಟ ಮಳಿಗೆಗಳು
1 – ಇಂಗ್ಲಿಷ್ ಚರ್ಚ್ ರಸ್ತೆ 2 – TB ರಸ್ತೆ

ತಮಿಳುನಾಡಿನ ಮಾರಾಟ ಮಳಿಗೆಗಳು
ಕೊಯಮುತ್ತೂರಿನ ನವೀಕರಣಗೊಂಡ ಮಾರಾಟ ಮಳಿಗೆ – ಕ್ರಾಸ್‌ಕಟ್ ರಸ್ತೆ, ಗಾಂಧಿಪುರಂ– ಶೀಘ್ರದಲ್ಲಿಯೇ ಪುನರಾರಂಭಗೊಳ್ಳಲಿದೆ

Shop Online: **www.joscojewellers.in** | office@joscogroup.com | /joscojewellers | **+91 83 04 04 9000**

TONICO

ಜೋಸ್ ಆಲುಕ್ಕಾಸ್

A TRADITION OF FINE JEWELLERY

19 & 20 ಏಪ್ರಿಲ್

ಜೋಸ್ ಆಲುಕ್ಕಾಸ್‌ನೊಂದಿಗೆ ಐಶ್ವರ್ಯ ವೃದ್ಧಿ ಆರಂಭ

ಚಿನ್ನ: **ಉಚಿತ** ಚಿನ್ನದ ನಾಣ್ಯ — ಪ್ರತಿ 10 ಗ್ರಾಂ ಚಿನ್ನದ ಆಭರಣ ಖರೀದಿಸಿದಾಗ

ಫ್ಲ್ಯಾಟ್ **50%** ರಿಯಾಯಿತಿ ಚಿನ್ನ, ವಜ್ರ ಮತ್ತು ಪ್ಲಾಟಿನಂ ಆಭರಣಗಳ ಮೇಕಿಂಗ್ ಚಾರ್ಜಸ್‌ಗೆ
*ಆಯ್ದ ಆಭರಣಗಳ ಮೇಲೆ ಮಾತ್ರ

ವಜ್ರಗಳು: **ಉಚಿತ** ಚಿನ್ನದ ನಾಣ್ಯವನ್ನು ಪಡೆಯಿರಿ — ಪ್ರತಿ ಕ್ಯಾರೆಟ್‌ಗೆ ವಜ್ರ ಖರೀದಿಸಿದಾಗ

ವಜ್ರಗಳು: ಫ್ಲ್ಯಾಟ್ **30%** ರಿಯಾಯಿತಿ ವಜ್ರದ ಬೆಲೆಯ ಮೇಲೆ

ಎಕ್ಸ್‌ಚೇಂಜ್ ಮಾಡಿಕೊಂಡಾಗ 0%* ನಷ್ಟ ಇತ್ತೀಚಿನ ಟ್ರೆಂಡಿಂಗ್ ಡಿಸೈನ್‌ನ ಆಭರಣಗಳಿಗಾಗಿ ನಿಮ್ಮ ಹಳೆಯ 22 ಕ್ಯಾರಟ್ ಚಿನ್ನವನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳಿ

*ಷರತ್ತುಗಳು ಅನ್ವಯಿಸುತ್ತವೆ

UP TO ₹5,000 CASHBACK# SBI card
#Min. Trxn.: ₹50,000; Max. Cashback: ₹5,000 per card account; Validity: 13 Apr - 20 Apr 2026. T&C Apply.

ನಮ್ಮ ಶೋರೂಂಗಳು ಅಕ್ಷಯ ತೃತೀಯ ದಿನದಂದು ಬೆಳಿಗ್ಗೆ 8.00 ಗಂಟೆಯಿಂದ ತೆರೆದಿರುತ್ತವೆ.

ಜೋಸ್ ಆಲುಕ್ಕಾಸ್ ನೀಡಿರುವ ಕ್ಯಾಶ್‌ಬ್ಯಾಕ್ ವೋಚರ್‌ಗಳನ್ನು ಇಂದಿನಿಂದ ರಿಡೀಮ್ ಮಾಡಿಕೊಳ್ಳಬಹುದು. CASHBACK VOUCHER

JAYANAGAR, PH: 080-41539802 | **DICKENSON ROAD**, PH: 080-25552281
RAJAJINAGAR, PH: 080-23192319 | **FORUM MALL SOUTH**, PH: 080-6836 5475
KAMMANAHALLI MAIN ROAD, PH: 080-22204916 | **K.R.PURAM**, PH: 080 22440916
RR NAGAR, PH: 080-27622544 | **HSR LAYOUT**, PH: 080-22445916
MARATHAHALLI, PH: 080-25001916 | **HOSUR**, PH: 04344 - 227491

JOS ALUKKAS
A TRADITION OF FINE JEWELLERY

EV sahi hai

FINALLY, A CAR THAT'S AN APPRECIATING ASSET.

WINDSOR OWNERS WILL VOUCH FOR THAT.

MG WINDSOR EV LIVE BUSINESS CLASS | INDIA'S NO.1 EV*

AVAIL EXCLUSIVE BENEFITS BEFORE 20TH APRIL, 2026

FREE PUBLIC CHARGING** UP TO ₹20 000	ATTRACTIVE EMI PLAN ~~₹31 468~~ | ₹17 777^^	EXCHANGE BENEFIT UP TO ₹20 000<

BaaS^ RANGE STARTS AT ₹9.99^ LAKH + BATTERY RENTAL @ ₹3.99^/KM

HERE IS HOW YOU SAVE

SAVINGS UP TO ₹19.35> LAKH | ASSURED BUYBACK UP TO ₹11> LAKH | FUEL SAVINGS ₹4> LAKH | TAX BENEFIT ON DEPRECIATION ₹4.35> LAKH

449## KM IN A SINGLE CHARGE | AUTONOMOUS LEVEL-2 ADAS~ | VEHICLE TO LOAD - V2L# | LIFETIME WARRANTY on battery for the first owner~

SCAN TO SEE YOUR PERSONALISED SAVINGS REPORT

VISIT WWW.MGMOTOR.CO.IN OR CALL 1800 100 6464

^Ex-showroom price India for base variant under BaaS unique ownership programme. *As per EV Sales Data 2025. Product shown is for representation purposes only and may vary from actual product due to print paper quality. Accessories, features and specifications shown in the pictures may not be a part of standard equipment and will differ according to the variant. In view of our policy of continuously improving our products, JSW MG Motor India Pvt. Ltd. reserves the right to discontinue any variant or to alter any specifications, features and designs without prior notice and without liability. **T&Cs apply. Refer website for details- https://www.mgmotor.co.in/vehicles/windsor-ev-electric-car-in-india/terms-and-condition. ~Advanced Driver Assistance System (ADAS) is not a substitute for human eye and driver vigilance, it is a driver assist system that enhances driving experience and safety. The driver shall remain responsible for safe, vigilant and attentive driving. Product shown is for representation purposes only and may vary from actual product due to print paper quality. Features, accessories and specifications as shown are not standard for all variants. It may vary model wise. #The V2L adapter is designed exclusively for MG Windsor EV. Use only as directed, following the manufacturer's guidelines. ##Specified range is as per standard MIDC test procedure (Part I + Part 2), carried out by certifying authority. Range may vary depending on various driving behaviour, traffic conditions, speeds, vehicle loads etc. ^^₹17,777 EMI under Balloon Finance Scheme for MG Windsor EV is for a tenure of 60 months at an indicative interest rate of 9% p.a., with approx. 40% residual/balloon amount payable at the end of the tenure. "Zero Downpayment" is subject to customer eligibility and approval of the financing institution. On-road price, insurance, RTO, and other charges may vary by city/state. Processing fees and other applicable charges may be levied by the financier. The offer is subject to change without prior notice. Terms and conditions apply. For further details, please contact authorised dealers of MG Motor India. >Savings indicated are up to ₹19.35 lakh and are calculated over a 3-year ownership period. Savings comprise Assured Buyback value of up to ₹11 lakh, indicative fuel cost savings of up to ₹4 lakh and tax benefit on depreciation of up to ₹4.35 lakh. Actual savings may vary depending on variant, usage, kilometres driven, electricity and fuel prices, prevailing tax laws, customer eligibility, ownership profile and other factors. Assured Buyback is subject to applicable terms & conditions available at RVI Brochure. Tax benefits are applicable only to eligible customers and are subject to individual tax treatment. JSW MG Motor India Pvt. Ltd. does not guarantee the realization of the indicated savings. <Exchange value depends on vehicle condition and dealer evaluation.

Bengaluru: MG Bengaluru Central (08037080876), MG Bengaluru Chord Road (08037080870), MG Bengaluru Electronic City (08037080875), MG Bengaluru JP Nagar (08037080872), MG Bengaluru Kalyan Nagar (08037080874) MG Bengaluru Mysore Road (08037080877), MG Bengaluru ORR (08037080871) MG Bengaluru Magadi Road (08037080836), MG Bengaluru Yelahanka (08037080837) **Tumkur:** MG Tumkur (08037080878)

Cheil 31332/26

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಕಾಶ್ಮೀರ ಕಣಿವೆಯ 'ರಾಯಲ್ ಚಾಲೆಂಜರ್' ರಸಿಕ್

ಶನಿವಾರ • ಏಪ್ರಿಲ್ 18, 2026

ಟ್ಯಾಪ್ ರೂಟ್ ಸಮೂಹ ಶಿಕ್ಷಣ ಸಂಸ್ಥೆಗಳು

TAPROOT GROUP OF COLLEGES

FASTEST GROWING CHAIN OF PU COLLEGES ACROSS KARNATAKA

- **15** Students in TOP 10 State Ranks
- **59** Students in TOP 20 State Ranks
- **4 out of 5** "Taproot students have secured either Distinction or First Class"
- **249** Centums
- **860** Distinctions
- **1540** First Class

Name	State Rank	Stream	Marks : %
ANUSRI H	4th	Science	596 : 99.3%
SHREYAS H	6th	Science	594 : 99.0%
MANDAHAS	6th	Science	594 : 99.0%
GARGI G	7th	Commerce	594 : 99.0%
BHUVAN	8th	Commerce	593 : 98.8%
SHILPA	8th	Commerce	593 : 98.8%
MANISH	8th	Commerce	593 : 98.8%
NITHYASHREE	8th	Science	592 : 98.7%
VAISHNAVI	9th	Commerce	592 : 98.7%
ANJAN T P	9th	Commerce	592 : 98.7%
SANIKA S	10th	Commerce	591 : 98.5%
NIHARIKA	10th	Commerce	591 : 98.5%
SWETHA	10th	Science	590 : 98.3%
MONIKA R	10th	Science	590 : 98.3%
SHRAVYA	10th	Science	590 : 98.3%
ADITHI S S	11th	Commerce	590 : 98.3%
VISMAYA NAIR	11th	Science	589 : 98.2%
HITHAISHREE C	11th	Science	589 : 98.2%
KHUSHI SHARMA K	12th	Commerce	589 : 98.2%
PRIYA DARSHINI V	12th	Commerce	589 : 98.2%
PRATHIKSHA R	12th	Science	588 : 98.0%
GEETHANJALI J	12th	Science	588 : 98.0%
POOJA J	13th	Commerce	588 : 98.0%
LAKSHYA REDDY M	13th	Science	587 : 97.8%
PUNITH GOWDA H N	13th	Science	587 : 97.8%
NIKSHEP D	13th	Science	587 : 97.8%
TATA TANMAI	14th	Commerce	587 : 97.8%
AYESHA NOORAIN M S	14th	Commerce	587 : 97.8%
DIVYA SHREE B	14th	Commerce	587 : 97.8%
VARUN KUMAR	14th	Commerce	587 : 97.8%
MADEEHA A	14th	Science	586 : 97.7%
DIVYANSHI SUTHAR	15th	Commerce	586 : 97.7%
SHILPA C	15th	Commerce	586 : 97.7%
SHRI LAKSHMI M	15th	Science	585 : 97.5%
MAANYA R	16th	Commerce	585 : 97.5%
AANCHAL PARI	16th	Commerce	585 : 97.5%
ROHIT	17th	Commerce	584 : 97.3%
TAMIL ARASI	17th	Commerce	584 : 97.3%
DEEKSHA G R	17th	Science	583 : 97.2%
BRINDA C S	17th	Science	583 : 97.2%
SUNITHA O	18th	Commerce	583 : 97.2%
A AKSHITHA	18th	Commerce	583 : 97.2%
NIRMALA N	18th	Commerce	583 : 97.2%
THANUSHA S RAO	18th	Commerce	583 : 97.2%
BHAVYASREE U	18th	Science	582 : 97.0%
AISHWARYA S	18th	Science	582 : 97.0%
KISHORE KUMAR R	18th	Science	582 : 97.0%
AVINASH K V	18th	Science	582 : 97.0%
SNEHA SINGH	19th	Commerce	582 : 97.0%
SRUSHTI A	19th	Commerce	582 : 97.0%
MADHU CHANDRA L	19th	Science	581 : 96.8%
SYEDA SIDDIQA E	19th	Science	581 : 96.8%
GAANUSHREE B B	19th	Science	581 : 96.8%
MEGHANA N	19th	Science	581 : 96.8%
BHOOMIKA S	20th	Commerce	581 : 96.8%
SHAIK TAUHEED	20th	Commerce	581 : 96.8%
VARUNESHWAR	20th	Science	580 : 96.7%
SANGMESH	20th	Science	580 : 96.7%
PRAJWAL G D	20th	Science	580 : 96.7%

ADMISSIONS OPEN : 2026-27

PUC - SCIENCE
PCMB | PCMC | PCME
COMPETITIVE TRAINING
NEET | JEE | K-CET

PUC - COMMERCE
ABEC | ABES | ABEM | ABMS | ABSC
COMPETITIVE TRAINING
CA Foundation

DEGREE
B.Com | BBA | BCA
With Value Added Courses & Guaranteed Placements

OUR BRANCHES Ullal Main Road | Yelahanka | CV Raman Nagar | Vijayanagar | Sarjapura | Magadi Road | Kumbalagodu | Malleshwaram | Whitefield | Doddaballapura Main Road | Bidar | Bhalki

Inviting Expression of Interest From PU & Degree Colleges across Karnataka to be a Part of Taproot Group of Colleges

: +91 99025 83655, 95130 28263 : info@taprootcollege.com : www.taprootcollege.com

ಹಾಸ್ಯನಾಟಕ ಪ್ರದರ್ಶನ

ವಿಶ್ವಪಥ ಕಲಾಸಂಗಮ ತಂಡವು ಏ.19ರಂದು ಕಲಾಗ್ರಾಮದ ರಂಗಮಂದಿರದಲ್ಲಿ ಎರಡು ನಾಟಕಗಳ ಪ್ರದರ್ಶನವನ್ನು ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ ರಚನೆಯ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ಮತ್ತು ಎಚ್.ಡುಂಡಿರಾಜ್ ರಚನೆಯ 'ಪುಕ್ಕಟೆ ಸಲಹೆ' ಹಾಸ್ಯ ನಾಟಕಗಳು ಪ್ರದರ್ಶನಗೊಳ್ಳಲಿವೆ. ಸಮಯ 5ರಿಂದ.

ಹೆಚ್ಚಿನ ಮಾಹಿತಿ: 99459 77184

ರಾಗೋಲ್ಲಾಸ

ಭಾರತೀಯ ವಿದ್ಯಾಭವನವು ಡಾ. ಕೆ.ಎಂ. ಮುನ್ಷಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಆ್ಯಂಡ್ ಕಲ್ಚರ್‌ನ ಸಹಯೋಗದೊಂದಿಗೆ 'ರಾಗೋಲ್ಲಾಸ' ಕಾರ್ಯಕ್ರಮದ ಭಾಗವಾಗಿ ಶತಾವಧಾನಿ ಆರ್. ಗಣೇಶ್ ಅವರಿಗೆ ಸನ್ಮಾನ ಸಮಾರಂಭ, ಕೆ.ಜಿ.ರಾಘವನ್ ಅವರ 'ಇಕೋಸ್ ಫ್ರಂ ರಾಮಾಯಣ' ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಂಡಿದೆ. ಅಲ್ಲದೆ ಆರ್. ಗಣೇಶ್ ಅವರ ಪುಸ್ತಕಗಳ ಕುರಿತ ವಿಚಾರ ಸಂಕಿರಣ ನಡೆಯಲಿದೆ. ಭಾಗವಹಿಸುವವರು: ಅರ್ಜುನ್ ಭಾರದ್ವಾಜ್, ಎಚ್.ಎ.ವಾಸುಕಿ, ಅವಧಾನಿ ಗಣೇಶ್ ಭಟ್, ರಾಮಕೃಷ್ಣ ಪೆಜತ್ತಾಯ, ಡಾ. ನವೀನ್ ಭಟ್, ರಾಘವೇಂದ್ರ ಹೆಬ್ಬಳಲು, ಶ್ರೀಲಲಿತಾ ರೂಪನಗುಡಿ. ಬೆಳಿಗ್ಗೆ 10.

ಗಣೇಶ್ ಅವರ ರಚನೆಯ ಗೀತೆಗಳ ಸಂಗೀತ ಕಾರ್ಯಕ್ರಮ. ಸಂಯೋಜನೆ: ವಿದ್ವಾನ್ ಪ್ರವೀಣ್ ಡಿ. ರಾವ್. ಭಾಗವಹಿಸುವ ಕಲಾವಿದರು: ಡಾ. ಟಿ.ಎಸ್. ಸತ್ಯವತಿ ಮತ್ತು ವಿದ್ಯಾರ್ಥಿಗಳು, ಡಾ. ರಂಜನಿ ವಾಸುಕಿ, ಅಂಜಲಿ ಶ್ರೀರಾಮ್, ಎಂ.ಎಸ್.ಶೀಲಾ, ಆರ್.ಎಸ್.ನಂದಕುಮಾರ್, ಡಿ.ಎಸ್.ಶ್ರೀವತ್ಸ. ಕೊಳಲು: ರಘುನಂದನ್ ರಾಮಕೃಷ್ಣ, ಮೃದಂಗ: ಅನೂರು ವಿನೋದ್ ಶ್ಯಾಮ್. ಖಂಜಿರ: ತಿರುಮಲೆ ಗೋಪಿ ಶ್ರವಣ್. ಮಧ್ಯಾಹ್ನ 12.

ಗಣೇಶ್ ಅವರೊಂದಿಗೆ ಸಂವಾದ ಮಧ್ಯಾಹ್ನ 2. ಸನ್ಮಾನ ಮತ್ತು ಪುಸ್ತಕ ಬಿಡುಗಡೆ ಸಮಾರಂಭ. ಅತಿಥಿಗಳು: ಭರತನಾಟ್ಯ ಕಲಾವಿದೆ ಪದ್ಮಾ ಸುಬ್ರಹ್ಮಣ್ಯಂ, ಒಡಿಶಾ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ಭಾರತೀಯ ವಿದ್ಯಾಭವನದ ಬೆಂಗಳೂರು ಕೇಂದ್ರದ ಉಪಾಧ್ಯಕ್ಷ ಚಿರಂಜೀವಿ ಸಿಂಗ್, ಅಧ್ಯಕ್ಷ ಕೆ.ಜಿ.ರಾಘವನ್. ಮಧ್ಯಾಹ್ನ 3ರಿಂದ.

ವೀಣೆ– ಕೊಳಲು ಜುಗಲ್‌ಬಂದಿ

ಶ್ರೀ ರಾಮಸೇವಾ ಮಂಡಳಿ 88ನೇ ಶ್ರೀ ರಾಮನವಮಿ ಸಂಗೀತ ಉತ್ಸವ ನಡೆಯುತ್ತಿದೆ. ಇದರ ಪ್ರಯುಕ್ತ 18ರಂದು ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ. ಸಂಜೆ 6.30ಕ್ಕೆ.

19ರಂದು ವಿಶಾಖ ಹರಿ ಅವರಿಂದ 'ರಾಮಭಕ್ತಿ ಸಾಮ್ರಾಜ್ಯ' ಹರಿಕಥೆ. 5.30ಕ್ಕೆ.

20ರಂದು ಪ್ರವೀಣ್ ಗೋಡ್ಖಿಂಡಿ ಮತ್ತು ಡಾ. ಜಯಂತಿ ಕುಮರೇಶ್ ಅವರಿಂದ ವೀಣೆ ಮತ್ತು ಕೊಳಲು ಜುಗಲ್‌ಬಂದಿ. ಸಂಜೆ 6.30ಕ್ಕೆ.

ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ.

ಹಿರಣ್ಣಯ್ಯ ನೆನಪಿನಲ್ಲಿ ನಾಟಕೋತ್ಸವ

ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಮಾಸ್ಟರ್ ಹಿರಣ್ಣಯ್ಯ ಅವರ ನೆನಪಿನಲ್ಲಿ ಸುಚಿತ್ರಾ ಹಿರಣ್ಣಯ್ಯ ನಾಟಕೋತ್ಸವ ನಡೆಯುತ್ತಿದ್ದು, ಏಪ್ರಿಲ್ 18ರಂದು 'ಅಭಿಯಾನ' ನಾಟಕ ಪ್ರದರ್ಶನ ಇರಲಿದೆ. ರಚನೆ: ಜಯಪ್ರಕಾಶ ಮಾವಿನಕುಳಿ. ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ತಂಡ: ರಂಗ ಸಾಂಗತ್ಯ.

19ರಂದು 'ಮಹೋರ್ಣ' ನಾಟಕ ಪ್ರದರ್ಶನ. ರಚನೆ ಹಾಗೂ ನಿರ್ದೇಶನ: ವೆಂಕನಗೌಡ ಆನೇರ್. ತಂಡ: ಚಿಗುರು ಕಲಾತಂಡ.

ಸ್ಥಳ: ಪೀರ್ ರಂಗಸ್ಥಳ, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ. ಸಂಜೆ 7ಕ್ಕೆ.

ಸಂಗೀತೋತ್ಸವ

ಶ್ರೀವಾಣಿ ಕಲಾ ಕೇಂದ್ರವು 33ನೇ ಶ್ರೀ ರಾಮನವಮಿ ಸಂಗೀತೋತ್ಸವವನ್ನು ಹಮ್ಮಿಕೊಂಡಿದೆ. ಇದರ ಪ್ರಯುಕ್ತ ಏಪ್ರಿಲ್ 18ರಂದು ಕಲಾಗಂಗೋತ್ರಿ ತಂಡದಿಂದ ಕನ್ನಡ ನಾಟಕ 'ಸೂಜಿ ಮಲ್ಲಿಗೆ' ಪ್ರದರ್ಶನ ಇರಲಿದೆ. ಸಾಹಿತ್ಯ: ಸಚೇತನ್ ಭಟ್. ನಿರ್ದೇಶನ: ಸಿದ್ಧಾರ್ಥ್ ಭಟ್. ನಿರ್ವಹಣೆ: ಡಾ. ಬಿ.ವಿ.ರಾಜಾರಾಂ. ಸಂಜೆ 7.

ಸ್ಥಳ: ಶ್ರೀ ವಾಣಿ ವಿದ್ಯಾ ಕೇಂದ್ರ, ನಂ 1, 4ನೇ 'ಬಿ' ಮುಖ್ಯ ರಸ್ತೆ, 3ನೇ ಹಂತ, ಬಸವೇಶ್ವರ ನಗರ.

ಭಗವದ್ಗೀತೆ ಪ್ರವಚನ

ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಏಪ್ರಿಲ್ 18ರಂದು ಕೃಪಾ ತಂಡದಿಂದ ಸಂಗೀತ ಕಾರ್ಯಕ್ರಮ. 21 ರಿಂದ 24ರವರೆಗೆ ಭಗವದ್ಗೀತೆ 9ನೇ ಅಧ್ಯಾಯದ ಕುರಿತು ಪ್ರವಚನ: ಡಾ. ಸುರೇಶಾಚಾರ್ಯ.

ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡ ಪ್ರಸನ್ನ ಆಂಜನೇಯಸ್ವಾಮಿ ದೇಗುಲ. ಸಂಜೆ. 6.30ರಿಂದ.

ಸಾಂಸ್ಕೃತಿಕ

ವೀಕೆಂಡ್ ನಾಟಕೋತ್ಸವ

ಶ್ರೀ ದಕ್ಷ ಅಕಾಡೆಮಿಯು ವೀಕೆಂಡ್ ನಾಟಕೋತ್ಸವದ ಮೊದಲ ಆವೃತ್ತಿಯಾಗಿ ಬಸವೇಶ್ವರನಗರದ ಕೆ.ಇ.ಎ. ಪ್ರಭಾತ್ ರಂಗಮಂದಿರದಲ್ಲಿ ಏಪ್ರಿಲ್ ತಿಂಗಳ ಪ್ರತಿ ಶನಿವಾರ ಮತ್ತು ಭಾನುವಾರ (19 ಏಪ್ರಿಲ್ ಹೊರತುಪಡಿಸಿ) ನಾಟಕಗಳನ್ನು ಆಯೋಜಿಸಿದೆ.

ರಂಗಭೂಮಿಯ ಚಟುವಟಿಕೆಗಳು ನಿರಂತರವಾಗಿ ನಡೆಯದೇ ಇರುವ ರಂಗಮಂದಿರಗಳಲ್ಲಿ ಸ್ಥಳೀಯರನ್ನು ರಂಗಮಂದಿರಗಳತ್ತ ಸೆಳೆಯಲು ಸಮಾನಮನಸ್ಕ ಯುವ ರಂಗಕರ್ಮಿಗಳು ಸೇರಿ ಈ ನಾಟಕೋತ್ಸವವನ್ನು ಆಯೋಜಿಸಿದ್ದಾರೆ.

18ರಂದು ಪುನೀತ್ ರಂಗಾಯಣ ಅವರು ವಿನ್ಯಾಸ ಮಾಡಿ, ನಿರ್ದೇಶಿಸಿರುವ 'ಮಾಯಾ ದ್ವೀಪ' ನಾಟಕ ಪ್ರದರ್ಶನಗೊಳ್ಳಲಿದೆ. 'ನೆನಪು ಟ್ರಸ್ಟ್' ತಂಡದ ಸದಸ್ಯರು ಪ್ರದರ್ಶನ ನೀಡಲಿದ್ದಾರೆ. ಸಂಜೆ 6.30ಕ್ಕೆ

ಶಂಕರ ಜಯಂತಿ, ಸುವರ್ಣ ಮಹೋತ್ಸವ

ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್ ಶಂಕರ ಜಯಂತಿ ಮತ್ತು 54ನೇ ವರ್ಷದ ಸುವರ್ಣ ಮಹೋತ್ಸವದ ಪ್ರಯುಕ್ತ ಏಪ್ರಿಲ್ 18ರಿಂದ 21ರವರೆಗೆ ಸಂಗೀತೋತ್ಸವ ಸಮಾರಂಭ ನಡೆಯಲಿದೆ.

ಉದ್ಘಾಟನಾ ಸಮಾರಂಭವು ಏ. 18ರಂದು ನಡೆಯಲಿದೆ. ಅತಿಥಿಗಳು: ಎಸ್. ರಘುನಾಥ್, ಡಾ. ಎಸ್.ಸಿ.ಶರ್ಮ, ಅಧ್ಯಕ್ಷತೆ– ಟ್ರಸ್ಟ್‌ನ ಅಧ್ಯಕ್ಷ ಎಂ.ಅನಂತ್. ಸಂಗೀತೋತ್ಸವದ ಅಧ್ಯಕ್ಷತೆ: ಕಲಾವಿಮರ್ಶಕ ಶಾಮಸುಂದರ ಶರ್ಮ ಸಂಜೆ 4. ಡಾ. ಬಿ.ಕೆ.ಚಂದ್ರಮೌಳಿ ಅವರ ಸ್ಮರಣಾರ್ಥ 'ಲಯ ಮಿಲನ' ಕಾರ್ಯಕ್ರಮ. ಕೊಳಲು: ಎಲ್. ವಿ.ಮುಕುಂದ್, ಪಿಟೀಲು: ಜೆ.ಕೆ.ಶ್ರೀಧರ್. ಮೃದಂಗ: ಬಿ.ಸಿ.ಮಂಜುನಾಥ್, ಖಂಜಿರ: ಎ.ಎಸ್.ಎನ್. ಸ್ವಾಮಿ, ಘಟ: ಸ್ಕಂದ ಮಂಜುನಾಥ್, ಮೋರ್ಚಿಂಗ್: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ತಬಲ: ಉದಯರಾಜ್ ಕರ್ಪೂರ್, ಡೋಲಕ್: ವಿ.ಶ್ರೀಧರ, ಡ್ರಮ್ಸ್– ಕಾರ್ತಿಕ್ ಮಣಿ. ಸಂಜೆ 6ಕ್ಕೆ.

19ರಂದು ಕಲಾಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ. ಅತಿಥಿಗಳು: ಶಾಸಕ ಗೋಪಾಲಯ್ಯ, ಬಾಲಮೋಹನ್ ವಿದ್ಯಾಮಂದಿರದ ಅಧ್ಯಕ್ಷ ಎನ್. ಸತ್ಯಪ್ರಕಾಶ್. ಬೆಳಿಗ್ಗೆ 10ಕ್ಕೆ

'ಶಕ್ತಿ ಸ್ವರೂಪಿಣಿ ನೃತ್ಯ ರೂಪಕ' ಪ್ರದರ್ಶನ

ಬೆಂಗಳೂರಿನ ರಾಜಾಜಿನಗರ 2ನೇ ಹಂತದಲ್ಲಿರುವ ಶಿವ ಶಕ್ತಿ ನಾಟ್ಯಶಾಲೆಯ 26ನೇ ವಾರ್ಷಿಕೋತ್ಸವ ಸಮಾರಂಭವನ್ನು ಮಲ್ಲೇಶ್ವರಂನ ಚೌಡಯ್ಯ ಸ್ಮಾರಕ ಭವನದಲ್ಲಿ ಏಪ್ರಿಲ್ 20ರಂದು ಸೋಮವಾರ ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ.

ಉದ್ಘಾಟನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ. ಅತಿಥಿಗಳು: ಶಾಸಕರಾದ ಡಾ. ಸಿ.ಎನ್.ಅಶ್ವತ್ಥನಾರಾಯಣ, ಎಸ್.ಆರ್.ವಿಶ್ವನಾಥ್, ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್, ಪತ್ರಕರ್ತ ರಾಧಾಕೃಷ್ಣ ಎಸ್. ಭಡ್ತಿ.

ಗಾಯಕಿ ಡಾ.ಪದ್ಮಿನಿ ಎಲ್.ಓಕ್., ನಾಟ್ಯಾಚಾರ್ಯ ಸುಚೇಂದ್ರ ಬಾಬು, ಮೃದಂಗ ವಿದ್ವಾನ್ ಎಚ್.ಎಸ್. ಸುಧೀಂದ್ರ, ಕಲಾ ನಿರ್ದೇಶಕ ವಿದ್ವಾನ್ ಪ್ರಕಾಶ್. ಎಸ್. ಅಯ್ಯರ್ ಹಾಗೂ ವಿದ್ವಾನ್ ಹರೀಶ್ ರಾಮನ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.

ಶಿವ ಶಕ್ತಿ ನಾಟ್ಯ ಶಾಲೆಯ ಸಂಸ್ಥಾಪಕ ನಿರ್ದೇಶಕರಾದ ವಿದುಷಿ ಗುಣವತಿ ಕೆ.ಆರ್. ಮಾರ್ಗದರ್ಶನದಲ್ಲಿ ಅವರ ಶಿಷ್ಯವೃಂದದಿಂದ 'ಶಕ್ತಿ ಸ್ವರೂಪಿಣಿ' ನೃತ್ಯರೂಪಕ ಪ್ರದರ್ಶನ ಇರಲಿದೆ.

ಕಾಶ್ಮೀರ ಕಣಿವೆಯ 'ರಾಯಲ್ ಚಾಲೆಂಜರ್' ರಸಿಕ್

ರಸಿಕ್ ಸಲಾಮ್ ದಾರ್

• ಗಿರೀಶ ದೊಡ್ಡಮನಿ

'ನನ್ನ ಮಗ ನಮ್ಮ ಹಳ್ಳಿಯ ಹೆಸರನ್ನು ಮುಗಿಲೆತ್ತರಕ್ಕೆ ಏರಿಸಿದ...'

ಜಮ್ಮು–ಕಾಶ್ಮೀರ ಕಣಿವೆಯ ಪುಟ್ಟ ಗ್ರಾಮ ಅಷ್ಮೂಜಿಯ ಸರ್ಕಾರಿ ಶಾಲೆಯ ಶಿಕ್ಷಕ ಸಲಾಮ್ ದಾರ್ ಅವರು ಈ ಮಾತು ಹೇಳುವಾಗ ಕಂಗಳಲ್ಲಿ ಆನಂದಭಾಷ್ಪ ಮಿನುಗುತ್ತಿತ್ತು. ದನಿ ಗದ್ಗದಿತವಾಗಿತ್ತು. ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗದ ಬೌಲರ್ ರಸಿಕ್ ಸಲಾಮ್ ದಾರ್ ಅವರ ತಂದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ (ಏ. 15) ರಾತ್ರಿ ಲಖನೌ ಸೂಪರ್ ಜೈಂಟ್ಸ್ ತಂಡದ ಎದುರು ಆರ್‌ಸಿಬಿ ಜಯಿಸಲು ರಸಿಕ್ ಬೌಲಿಂಗ್ ಕಾರಣವಾಗಿತ್ತು. ಲಖನೌ ತಂಡದ ನಾಲ್ವರು ಪ್ರಮುಖ ಬ್ಯಾಟರ್‌ಗಳ (24ಕ್ಕೆ4) ವಿಕೆಟ್ ಕಿತ್ತು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು.

ರಸಿಕ್ ಅವರ ಈ ಯಶಸ್ಸಿನ ಹಿಂದೆ ಕಠಿಣ ಸವಾಲುಗಳನ್ನು ಎದುರಿಸಿ ಬಂದ ಕತೆಗಳಿವೆ. ಪ್ರತಿ ಸವಾಲಿನಲ್ಲಿಯೂ ಅವರಿಗೆ ಬೆನ್ನೆಲುಬಾಗಿ ನಿಂತವರು ಅಪ್ಪ ಸಲಾಮ್. ಬಾಲ್ಯದಿಂದಲೂ ಮಗನ ಕ್ರಿಕೆಟ್ ಪ್ರೀತಿಗೆ ಪ್ರೋತ್ಸಾಹದ ನೀರೆರೆದವರು ಅವರು.

ಅದರ ಫಲವಾಗಿ 17ನೇ ವಯಸ್ಸಿಗೇ ಐಪಿಎಲ್‌ನಲ್ಲಿ ಆಡುವ ಅವಕಾಶವನ್ನು ರಸಿಕ್ ಗಿಟ್ಟಿಸಿಕೊಂಡರು. ಮುಂಬೈ ಇಂಡಿಯನ್ಸ್ ತಂಡವನ್ನು ಸೇರಿಕೊಂಡರು. ಐಪಿಎಲ್‌ನಲ್ಲಿ ಆಡಿದ ಜಮ್ಮು–ಕಾಶ್ಮೀರದ ಮೂರನೇ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. 2024ರಲ್ಲಿ ಅವರು ಡೆಲ್ಲಿ ಕ್ಯಾಪಿಟಲ್ಸ್‌ಗೆ ಸೇರಿಕೊಂಡರು. ಆ ಋತುವಿನಲ್ಲಿ ಎಂಟು ವಿಕೆಟ್ ಗಳಿಸಿದರು.

ಹೋದ ವರ್ಷ ಅವರಿಗೆ ಆರ್‌ಸಿಬಿಯು ಅದೃಷ್ಟದ ಬಾಗಿಲು ತೆರೆಯಿತು. ₹ 6 ಕೋಟಿ ಕೊಟ್ಟು ಖರೀದಿಸಿತು. ಭುವನೇಶ್ವರ್ ಕುಮಾರ್, ಜೋಷ್ ಹ್ಯಾಜಲ್‌ವುಡ್ ಮತ್ತು ಯಶ್ ದಯಾಳ್ ಇದ್ದ ಕಾರಣ, ಹೋದ ಋತುವಿನಲ್ಲಿ ಅವರಿಗೆ ಹೆಚ್ಚು ಅವಕಾಶ ಸಿಕ್ಕಿರಲಿಲ್ಲ. ಆದರೂ ಆಡಲು ಸಿಕ್ಕ ಎರಡು ಪಂದ್ಯಗಳಲ್ಲಿ ಒಂದು ವಿಕೆಟ್ ಗಳಿಸಿದ್ದರು. ಅವರ ಅದೃಷ್ಟಕ್ಕೆ ತಂಡವು ಹೋದ ವರ್ಷ ಚಾಂಪಿಯನ್ ಆಯಿತು.

ಈ ಋತುವಿನಲ್ಲಿ ಎಡಗೈ ವೇಗಿ ಯಶ್ ದಯಾಳ್ ಅಲಭ್ಯರಾದರು. ಆದರೂ ರಸಿಕ್ ಅವರಿಗೆ ಈ ಸಲದ ಆರಂಭದ ಪಂದ್ಯಗಳಲ್ಲಿ ಅವಕಾಶಗಳು ಸಿಗಲಿಲ್ಲ. ಆದರೆ ಮುಂಬೈ ಎದುರಿನ ಪಂದ್ಯದಲ್ಲಿ ಕಣಕ್ಕಿಳಿದರು. ಒಂದು ವಿಕೆಟ್ ಗಳಿಸಿದರು. ಅಲ್ಲಿ ಹ್ಯಾಜಲ್‌ವುಡ್ ಆಡದ ಕಾರಣಕ್ಕೆ ಅವರಿಗೆ ಅವಕಾಶ ಒದಗಿತ್ತು. ಬೆಂಗಳೂರಿನ ಪಂದ್ಯದಲ್ಲಿ ಜೇಕಬ್ ಡಫಿಗೆ ವಿಶ್ರಾಂತಿ ನೀಡಿ ಹ್ಯಾಜಲ್‌ವುಡ್ ಆಡಿದರು. ಆದ್ದರಿಂದ ರಸಿಕ್ ಮುಂದುವರಿದರು. ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರು.

ರಸಿಕ್ ಅವರು ಸ್ವಿಂಗ್ ಎಸೆತಗಳನ್ನು ಹಾಕುವಲ್ಲಿ ಪರಿಣತರು. ಒಳ್ಳೆಯ ಶೈಲಿ ಮತ್ತು ರನ್ ಅಪ್ ಇರುವ ಅವರು ಕೆಂಪು ಚೆಂಡಿನಲ್ಲಿ ಉತ್ತಮವಾಗಿ ರಿವರ್ಸ್ ಸ್ವಿಂಗ್ ಮಾಡಬಲ್ಲರು. ಆರ್‌ಸಿಬಿಯ ಆಫ್‌ಸೀಸನ್ ಕ್ಯಾಂಪ್‌ನಲ್ಲಿ (ಈ ವರ್ಷದ ಟೂರ್ನಿಗೂ ಮುನ್ನ ನಡೆದ ತರಬೇತಿ) ಅವರ ಕೌಶಲಗಳಿಗೆ ಸಾಣೆ ಹಿಡಿಯಲಾಯಿತು. ಆರ್‌ಸಿಬಿ ಮುಖ್ಯ ಕೋಚ್ ಆ್ಯಂಡಿ ಫ್ಲವರ್, 'ಸ್ಟಾರ್ ಬ್ಯಾಟರ್' ವಿರಾಟ್ ಕೊಹ್ಲಿ, ಮೆಂಟರ್ ದಿನೇಶ್ ಕಾರ್ತಿಕ್ ಅವರ ಮಾರ್ಗದರ್ಶನ ಮತ್ತು ಭುವನೇಶ್ವರ್ ಕುಮಾರ್ ಅವರ ಸಾಂಗತ್ಯದಲ್ಲಿ ರಸಿಕ್ ಪರಿಪಕ್ವಗೊಂಡಿದ್ದಾರೆ.

ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡುವಾಗ ರಸಿಕ್ ಅವರ ಪ್ರತಿಭೆಯನ್ನು ಗುರುತಿಸಿದವರು ಮಾಜಿ ವೇಗದ ಬೌಲರ್ ಇರ್ಫಾನ್ ಪಠಾಣ್ ಅವರು. ರಣಜಿ ಟ್ರೋಫಿ ಟೂರ್ನಿಗಳಲ್ಲಿ ರಸಿಕ್ ಉತ್ತಮ ಸಾಧನೆ ಮಾಡಿದವರು. ಆದರೆ 2017–18ರ ಸಂದರ್ಭದಲ್ಲಿ ವಯೋಮಿತಿಗೆ ಸಂಬಂಧಿಸಿ ನಕಲಿ ಪ್ರಮಾಣಪತ್ರ ನೀಡಿದ್ದ ಪ್ರಕರಣದಲ್ಲಿ ಎರಡು ವರ್ಷ ಅಮಾನತುಗೊಂಡರು. ಅವರ ಶಿಕ್ಷೆಯ ಅವಧಿ ಮುಗಿಯುವ ಹೊತ್ತಿಗೆ ಕೋವಿಡ್ ಕಾಲ ಶುರುವಾಗಿತ್ತು. ಇದರಿಂದಾಗಿ ಅವರ ಕ್ರಿಕೆಟ್ ಜೀವನ ಮೊಟಕುಗೊಳ್ಳುವ ಆತಂಕ ಮೂಡಿತ್ತು. ಆದರೂ ಎದೆಗುಂದದ ಅವರು ತಮ್ಮ ಹಿಂದಿನ ಎಲ್ಲ ಲೋಪದೋಷಗಳನ್ನೂ ಮರೆತು ಕಣಕ್ಕಿಳಿದರು. ಕೋವಿಡ್ ದಿನಗಳಲ್ಲಿ ತಮ್ಮ ಊರಿನ ನಿರ್ಜನ ಮೈದಾನದಲ್ಲಿ ಬೌಲಿಂಗ್ ಅಭ್ಯಾಸ ಮಾಡುತ್ತಿದ್ದರು. ಅವರಿಗೆ ಮತ್ತೆ ಮರುಜನ್ಮ ಸಿಕ್ಕಿತು. ಕಳೆದ ಏಪ್ರಿಲ್ 5ರಂದು 26ನೇ ಜನ್ಮದಿನ ಆಚರಿಸಿಕೊಂಡ ರಸಿಕ್, ಭಾರತ ತಂಡದಲ್ಲಿ ಆಡುವ ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾರೆ.

ರಸಿಕ್ ಈಗ ತಮ್ಮ ತಂಡದ ಮ್ಯಾನೇಜ್‌ಮೆಂಟ್ ಇಟ್ಟ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ. ಇನ್ನೂ ದೀರ್ಘ ಋತು ಬಾಕಿ ಇದೆ. ತಮಗೆ ಸಿಗುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ವಿಶ್ವಾಸ ಅವರಲ್ಲಿದೆ. ಜೊತೆಗೆ ಅದೃಷ್ಟವೂ ಅವರೊಂದಿಗೆ ಇದೆ.

ಪ್ರಸಕ್ತ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್‌ನ ಅನುಭವಿ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಐದು ಪಂದ್ಯಗಳಿಂದ ಒಂದೂ ವಿಕೆಟ್ ಲಭಿಸಿಲ್ಲ. ಕೋಲ್ಕತ್ತ ನೈಟ್ ರೈಡರ್ಸ್ ತಂಡದ 'ಮ್ಯಾಜಿಕ್ ಸ್ಪಿನ್ನರ್' ವರುಣ್ ಚಕ್ರವರ್ತಿ ಅವರಿಗೂ ಫಾರ್ಮ್ ಕೈಕೊಟ್ಟಿದೆ. ಈ ಸಲದ ಐಪಿಎಲ್ ಅಂಗಳದಲ್ಲಿ ಇಂತಹ ಉದಾಹರಣೆಗಳು ಇನ್ನಷ್ಟು ಸಿಗುತ್ತವೆ. ಆದರೆ ಇನ್ನೊಂದು ಕಡೆ ಹೊಸ ಪ್ರತಿಭೆಗಳು ದಿಢೀರನೆ ಮಿಂಚುತ್ತಿವೆ. ಮತ್ತೊಂದು ಕಡೆ, ಕಳೆದ ಆವೃತ್ತಿಯ ಟೂರ್ನಿಗಳಲ್ಲಿ ಹೆಚ್ಚು ಸದ್ದು ಮಾಡದ ಬೌಲರ್‌ಗಳೂ ಪಂದ್ಯ ಗೆಲ್ಲಿಸಿಕೊಡುತ್ತಿದ್ದಾರೆ. ಅಂತಹ ಬೌಲರ್‌ಗಳಲ್ಲಿ ರಸಿಕ್ ಕೂಡ ಒಬ್ಬರು ಎಂಬುದು ಇಲ್ಲಿ ವಿಶೇಷ. ❖

ತೆರೆದುಕೊಳ್ಳಲಿದೆ ಸಾಂಪ್ರದಾಯಿಕ ದೇಸಿ ಉತ್ಪನ್ನ

ಕೈಮಗ್ಗ, ಹಸ್ತಶಿಲ್ಪ ಮತ್ತು ಪರಂಪರಾತ್ಮಕ ಕಲೆಗಳು, ಅಲಂಕಾರಿಕ ಆಭರಣಗಳು, ಸಾಂಪ್ರದಾಯಿಕ ಪೀಠೋಪಕರಣಗಳು, ಸೀರೆ ಸಹಿತ ವಿವಿಧ ಉಡುಪುಗಳು ಒಂದೆಡೆ ನೋಡಲು, ಕೊಂಡುಕೊಳ್ಳಲು ವೇದಿಕೆ ಸಿದ್ಧಗೊಳ್ಳುತ್ತಿದೆ. ತಾವು ತಯಾರಿಸಿದ ಕಲಾತ್ಮಕ ಉತ್ಪನ್ನಗಳನ್ನು ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ದೇಶದ ವಿವಿಧ ಕರಕುಶಲಿಗಳಿಗೆ ಅವಕಾಶ ಸಿಗಲಿದೆ.

ದೇಸಿ ಉತ್ಪನ್ನಗಳನ್ನು ಪ್ರೋತ್ಸಾಹಿಸುವ, ಹೊಸ ಪೀಳಿಗೆಗೆ ಸಾಂಪ್ರದಾಯಿಕ ಕಲಾಪ್ರಕಾರಗಳನ್ನು ಪರಿಚಯಿಸುವ ಈ ಪ್ರದರ್ಶನವನ್ನು ಮೇ 1ರಿಂದ 10ರವರೆಗೆ ಜಯಮಹಲ್ ಪ್ಯಾಲೆಸ್ ಹೋಟೆಲ್ ಸಭಾಂಗಣದಲ್ಲಿ 'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' (ಟಿಐಎಎಚ್) ಶೀರ್ಷಿಕೆಯಡಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಹಮ್ಮಿಕೊಂಡಿವೆ.

ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಅಲಂಕಾರಿಕ ವಸ್ತುಗಳು, ಜೈಪುರದ ನೀಲಿ ಮಡಿಕೆಗಳು, ಜೈಪುರ ಲೋಹ, ಒಡಿಶಾದ ಕಲ್ಲಿನ ವಿಗ್ರಹಗಳು, ಬೇವಿನ ಮರದ ಪಾತ್ರೆ, ಪಟಚಿತ್ರ, ಬಿಹಾರದ ಮಧುಬನಿ ವರ್ಣಚಿತ್ರ, ತಮಿಳುನಾಡಿನ ತಂಜಾವೂರು ವರ್ಣಚಿತ್ರ, ಪಶ್ಚಿಮ ಬಂಗಾಳದ ಕಾಲಿಗಟ್ ವರ್ಣಚಿತ್ರ, ಸೋಲಾ ಹೂವು, ಮಹಾರಾಷ್ಟ್ರದ ರಾಳದ ಕಲೆ, ಸಂಗೀತ ವಾದ್ಯಗಳು, ಆಂಧ್ರಪ್ರದೇಶದ ಚರ್ಮದ ಬೊಂಬೆ ಮತ್ತು ದೀಪ, ಆಗ್ರಾದ ಅಮೃತಶಿಲೆಯ ಕೆತ್ತನೆ, ಮಧ್ಯಪ್ರದೇಶದ ಭಿಲ್ ಚಿತ್ರಕಲೆ, ಗೊಂಡ್ ಚಿತ್ರಕಲೆ, ಕರ್ನಾಟಕದ ಸುರಪುರ ಸುಣ್ಣದ ಕಲೆ, ಹರಿಯಾಣದ ಕಲ್ಲಿನ ಚಿತ್ರಕಲೆ, ಮರದ ಕೆತ್ತನೆ, ಕೇರಳದ ಮರದ ಕೆತ್ತನೆಗಳು ನೋಡುಗರನ್ನು ಆಕರ್ಷಿಸಲಿವೆ.

ಪಶ್ಚಿಮ ಬಂಗಾಳದ ಆಕ್ಸಿಡೀಕೃತ ಆಭರಣ, ಕರ್ನಾಟಕದ ಟೆರಾಕೋಟಾ ಆಭರಣ, ಲಂಬಾಣಿ ಆಭರಣ, ಪಶ್ಚಿಮ ಬಂಗಾಳದ ಸಮುದ್ರ ಚಿಪ್ಪು ಮತ್ತು ಮುತ್ತಿನ ಆಭರಣ, ರಾಜಸ್ಥಾನದ ಮೀನಕರಿ ಆಭರಣ, ಪಂಜಾಬಿನ ಚರ್ಮದ ಚೀಲಗಳು, ಒಂಟೆ ಚರ್ಮದ ಚಪ್ಪಲಿ, ಕೊಲ್ಹಾಪುರಿ ಚಪ್ಪಲಿ, ಕೈಯಿಂದ ತಯಾರಿಸಿದ ಚರ್ಮದ ಚೀಲ, ಗುಜರಾತ್‌ನ ಪ್ಯಾಚ್‌ವರ್ಕ್ ಚೀಲ, ಕೈ ಕಸೂತಿ ಚೀಲಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಇರಲಿವೆ.

ರಾಜಸ್ಥಾನದ ಅಪ್ಲಿಕ್ ವರ್ಕ್, ಕೈಮಗ್ಗ, ಬಿಳಿ ಖಾದಿ ಟಾಪ್ಸ್, ಬಿಹಾರದ ಬಾಗಲ್‌ಪುರಿ ಸೀರೆ, ಗುಜರಾತ್‌ನ ಕಚ್‌ನ ಅಜರಖ್, ಬಾಂಧಿನಿ, ಉತ್ತರಪ್ರದೇಶದ ಚಿಕನ್ಕರಿ, ಒಡಿಶಾದ ಸಂಭಾಲ್ಪುರ್ ಸೀರೆ, ಪಶ್ಚಿಮ ಬಂಗಾಳದ ಕೈಮಗ್ಗದ ಸೀರೆ, ಜಾಮದಾನಿ ಸೀರೆ, ತೆಲಂಗಾಣದ ಇಕ್ಕತ್ ಸೀರೆ ಮತ್ತು ಉಡುಗೆಗಳು, ಕಾಶ್ಮೀರದ ಕೈಮಗ್ಗ, ಮಿರ್ಜಾಪುರದ ಕಾರ್ಪೆಟ್‌ಗಳು, ಕಂಬಳಿಗಳು, ಉತ್ತರಪ್ರದೇಶದ ಸೀತಾಪುರ ಕಂಬಳಿ, ಕರ್ನಾಟಕದ ಇಳಕಲ್ ಸೀರೆ, ತಮಿಳುನಾಡಿನ ಕಾಂಚೀಪುರಂ ಸೀರೆಗಳು ಆಕರ್ಷಿಸಲಿವೆ.

ರಾಜಸ್ಥಾನದ ಪ್ರಾಚೀನ ಪೀಠೋಪಕರಣಗಳು, ಆಂಧ್ರಪ್ರದೇಶದ ತಿರುಪತಿ ಪ್ರಾಚೀನ ಕೆತ್ತನೆಗಳು, ಪಶ್ಚಿಮ ಬಂಗಾಳದ ಗೋಲ್ಡನ್‌ಗ್ರಾಸ್ ಮ್ಯಾಟ್, ಉತ್ತರಪ್ರದೇಶದ ಸಹರಾನ್‌ಪುರ ಪೀಠೋಪಕರಣಗಳು ಇರಲಿವೆ.

ರಾಜಸ್ಥಾನದ ಜಾನಪದ ಗಾಯಕ ಉಸ್ತಾದ್ ಲತೀಫ್ ಖಾನ್ ಅವರು 10 ದಿನ ಗಾಯನ ಕಾರ್ಯಕ್ರಮ ನೀಡಲಿದ್ದಾರೆ. ಪ್ರತಿದಿನ ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೆ ಪ್ರದರ್ಶನವು ಸಾರ್ವಜನಿಕರಿಗೆ ತೆರೆದಿರಲಿದೆ. 'ದಿ ಇಂಡಿಯನ್ ಆರ್ಟಿಸಾನ್ಸ್ ಹಾತ್' ಸಹಸಂಸ್ಥಾಪಕರಾದ ನಾಗರಾಜ್ ಹುಂಡೇಕರ್, ಅಹ್ಮದ್ ಖಾನ್ ನೇತೃತ್ವದಲ್ಲಿ ಈ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ. ❖

ಹಳೆ ವಸ್ತ್ರ, ಕಲೆ ಸಹಸ್ರ

• ಎಂ.ಆರ್.ಮಂಜುನಾಥ್

ಬಟ್ಟೆ ಹಳತಾದಷ್ಟೂ ಅದರೊಂದಿಗೆ ಬೆಸೆದುಕೊಂಡ ನೆನಪುಗಳಿಗೆ ಎಂದಾದರೂ ಬರವೇ? ಪ್ರತಿ ಮನೆಯ ವಾರ್ಡ್‌ರೋಬ್‌ನ ಮೂಲೆಯಲ್ಲಿ ಪೇರಿಸಿಟ್ಟಿರುವ ಒಂದೊಂದು ಹಳೆಯ ವಸ್ತ್ರದ ಹಿಂದೆ ಹಲವು ನೆನಪುಗಳು ಹಣಕಿ ಹಾಕುತ್ತಲೇ ಇರುತ್ತವೆ. ಸಂತೋಷದ ಅಲೆಯಂತಹ ಈ ನೆನಪುಗಳು ಪಾದ ತಾಕಿ, ಕಚಗುಳಿ ಇಡುತ್ತವೆ. ಇಂತಹ ನೆನಪುಗಳೊಂದಿಗೆ ನೆರಿಗೆ ಮೂಡಿಸಿಕೊಂಡ ಬಟ್ಟೆಗಳನ್ನು ಅತ್ತ ಎಸೆಯಲೂ ಆಗದೆ, ಇತ್ತ ಇಡಲು ಜಾಗವೂ ಇಲ್ಲದೆ ಒದ್ದಾಡುತ್ತಿದ್ದೀರಾ? ಹಾಗಿದ್ದರೆ, ಅದಕ್ಕೆ ಬೆಂಗಳೂರಿನ 'ವಿಮೆನ್ ಆಫ್ ವಿಸ್ಡಮ್' ಸಂಸ್ಥೆಯು ಹೊಸದೊಂದು ತಂತ್ರವನ್ನು ಹೆಣೆದಿದೆ.

ಹಳೆಯ ರವಿಕೆ ಬಟ್ಟೆ, ದಾವಣಿ, ರೇಷ್ಮೆಸೀರೆ, ರೇಷ್ಮೆಪಂಚೆ, ಶಲ್ಯಗಳನ್ನು ಎಸೆಯುವ ಬದಲು ಅವುಗಳನ್ನು ಮರುಬಳಕೆ ಮಾಡಿ, ಉಪಯುಕ್ತ ಹಾಗೂ ಕಲಾತ್ಮಕ ವಸ್ತುಗಳನ್ನು ಸಂಸ್ಥೆ ತಯಾರಿಸುತ್ತಿದೆ. ಜತೆಗೆ ಆಸಕ್ತ ಮಹಿಳೆಯರಿಗೂ ಈ ಕಲಾತ್ಮಕ ತಯಾರಿಕೆಯ ಬಗ್ಗೆ ವಿಭಿನ್ನ ಎನಿಸುವ ಆಲೋಚನೆಗಳನ್ನು ಹೇಳಿಕೊಡುವ ಕೆಲಸ ಮಾಡುತ್ತಿದೆ.

ಸಂಸ್ಥೆಯ ಚುಕ್ಕಾಣಿ ಹಿಡಿದಿರುವ ಶ್ವೇತಾ ಅರಸ್ 'ನಮ್ಮ ಸಂಸ್ಥೆಯಲ್ಲಿ ಇರುವ 18 ಸದಸ್ಯೆಯರು ಮನೆ ಮನೆಗೆ ತೆರಳಿ, ನಿರುಪಯುಕ್ತ ಎನಿಸಿದ ಬಟ್ಟೆಗಳನ್ನು ಬಳಸಿ ಮಾಡುವ ಆಲಂಕಾರಿಕ ಹಾಗೂ ಸೃಜನಾತ್ಮಕ ಆಲೋಚನೆಗಳನ್ನು ಹಂಚಿಕೊಳ್ಳುತ್ತಾರೆ. ಅಲ್ಲದೆ ಅವುಗಳನ್ನು ತಯಾರಿಸುವಂತೆಯೂ ಪ್ರೇರೇಪಿಸುತ್ತಾರೆ' ಎಂದು ಹೇಳುತ್ತಾರೆ.

'ವಿಮೆನ್ ಆಫ್ ವಿಸ್ಡಮ್' ಸಂಸ್ಥೆಯ ಸದಸ್ಯರು ಹಳೆಬಟ್ಟೆಯಲ್ಲಿ ತಯಾರಿಸಿದ ಬ್ಯಾಗ್

ಏನೆಲ್ಲ ಮಾಡಬಹುದು?

ಹಳೆಬಟ್ಟೆಗಳಲ್ಲಿ ಅಗತ್ಯ ಎನಿಸುವ ಹಲವು ವಸ್ತುಗಳನ್ನು ಸಲೀಸಾಗಿ ತಯಾರಿಸಬಹುದು. ಕೈಚೀಲ, ಪರ್ಸ್, ಶಾಪಿಂಗ್ ಬ್ಯಾಗ್, ಹ್ಯಾಂಡ್ ಬ್ಯಾಗ್, ಸೀರೆಗಳಿಂದ ಡಿಸೈನರ್ ಬೆಲ್ಟ್, ಬೆಡ್‌ಶೀಟ್, ಟೇಬಲ್ ರನ್ನರ್, ವಾಲ್ ಹ್ಯಾಂಗಿಂಗ್, ರೇಷ್ಮೆ ಅಥವಾ ಎಂಬ್ರಾಯಿಡರಿ ರವಿಕೆ ಬಟ್ಟೆಗಳಿಂದ ಗಿಫ್ಟ್ ಪೌಚ್‌ಗಳನ್ನು ತಯಾರಿಸಬಹುದು.

ಉಪನಯನ, ನಾಮಕರಣ, ಮದುವೆ, ಸೀಮಂತದಂತಹ ಶುಭ ಸಮಾರಂಭಗಳಲ್ಲಿ ತಾಂಬೂಲ ಕೊಡುವಾಗ ಪ್ಲಾಸ್ಟಿಕ್ ಚೀಲಗಳ ಬದಲಿಗೆ ಹಳೆಯ ಬಟ್ಟೆಯಿಂದ ತಯಾರಿಸುವ ಬ್ಯಾಗ್‌ಗಳನ್ನು ಬಳಸಬಹುದು. ಅದ್ದೂರಿಯಾಗಿ ಇರಬೇಕೆಂದರೆ ಅವುಗಳನ್ನು ಝಗಮಗಿಸುವ ಮಣಿಗಳಿಂದ ಸಿಂಗರಿಸಿಯೂ ಕೊಡಬಹುದು. ಇವುಗಳನ್ನು ತಯಾರಿಸುವುದನ್ನು ಕಲಿತುಕೊಂಡರೆ, ಮಾರಾಟ ಮಾಡಿ ಸ್ವಯಂ ಉದ್ದಿಮೆಯನ್ನೂ ಸ್ಥಾಪಿಸಬಹುದು.

ಸಂಘದ ಸದಸ್ಯರು ಹಳೆಯ ಬಟ್ಟೆಗಳಿಂದ ತಯಾರಾದ ಕೈಚೀಲಗಳನ್ನು ದೇವಸ್ಥಾನಗಳಿಗೆ ಬರುವ ಭಕ್ತಾದಿಗಳಿಗೆ ಮತ್ತು ಅಲ್ಲಿ ಹಣ್ಣು, ಕಾಯಿ, ಹೂವು ಮಾರಾಟ ಮಾಡುವ ಅಂಗಡಿಗಳಿಗೆ ಉಚಿತವಾಗಿ ನೀಡಿ ಪ್ಲಾಸ್ಟಿಕ್ ಮಾಲಿನ್ಯದ ವಿರುದ್ಧ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ.

ಇನ್ನು, ದೇಗುಲಗಳ ಮುಂದೆ ಹಚ್ಚಿಟ್ಟ ನಿಂಬೆಹಣ್ಣಿನ ದೀಪ ಹಾಗೂ ಬೆಲ್ಲದಚ್ಚುಗಳ ಉಳಿಕೆಯನ್ನು ನೀರಿನ ಜತೆ ಮಿಶ್ರ ಮಾಡಿ, ಕೆಲವು ದಿನಗಳವರೆಗೆ ಬಾಟಲಿಯಲ್ಲಿ ಇಡಲಾಗುತ್ತದೆ. ಇದರಿಂದ ಪಾತ್ರೆ ಹಾಗೂ ಮನೆ ಸ್ವಚ್ಛ ಮಾಡುವ ಲಿಕ್ವಿಡ್ ತಯಾರಿಸಬಹುದು. ಈ ಕಾರ್ಯದಲ್ಲಿಯೂ ಸಂಘದ ಸದಸ್ಯರು ಕೈಜೋಡಿಸಿದ್ದಾರೆ.

ಮನೆಯ ಬಾಗಿಲ ಅಂದ ಹೆಚ್ಚಿಸುವ ತೋರಣಗಳ ತಯಾರಿಕೆಯಲ್ಲಿ ಪ್ಲಾಸ್ಟಿಕ್‌ದೇ ಸಿಂಹಪಾಲು. ಆದರೆ, ಸಂಘದ ಸದಸ್ಯೆಯರು ರವಿಕೆ ಬಟ್ಟೆಗಳಿಂದ ತೋರಣ ತಯಾರಿಸಿ ಕೊಡುತ್ತಾರೆ. ಹೀಗೆ ನಿರುಪಯೋಗಿ ಎನಿಸುವ ಬಟ್ಟೆಗಳಿಂದ ಅರಳಿದ ಕಲಾತ್ಮಕತೆಗೆ ಸೂಕ್ತ ಮಾರುಕಟ್ಟೆಯನ್ನು ಸೃಷ್ಟಿಸಲು ಸಾಧ್ಯವಾದರೆ, ಹಳೆ ಬೇರಿನಿಂದ ಹೊಸ ಚಿಗುರನ್ನು ಅರಳಿಸಬಹುದು. ❖

ವಿಮೆನ್ ಆಫ್ ವಿಸ್ಡಮ್...

ಎಂಟು ವರ್ಷಗಳಿಂದ ವಿಮೆನ್ ಆಫ್ ವಿಸ್ಡಮ್ ಸಂಸ್ಥೆಯು ಜೆ.ಪಿ. ನಗರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಆರಂಭದಿಂದಲೂ ತ್ಯಾಜ್ಯ ನಿರ್ವಹಣೆಯ ಬಗ್ಗೆ ಗಮನಹರಿಸಿರುವ ಸಂಸ್ಥೆಯು ಮನೆ ಮನೆಗೆ ತೆರಳಿ, ಹಸಿ ಮತ್ತು ಒಣ ಕಸ ವಿಂಗಡಣೆ, ಏಕ ಬಳಕೆಯ ಪ್ಲಾಸ್ಟಿಕ್ ನಿರ್ಮೂಲನೆಗೆ ಒತ್ತು ನೀಡುವ ದಿಸೆಯಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ.

'ದೇಗುಲದ ಮುಂಭಾಗಗಳಲ್ಲಿ ಸಂಸ್ಥೆಯ ಸದಸ್ಯರು ಪ್ಲಾಸ್ಟಿಕ್ ಬ್ಯಾಗ್ ತರುವವರಿಗೆ ಕೈಚೀಲ ನೀಡಿ, ಪ್ಲಾಸ್ಟಿಕ್ ಬಳಕೆಯನ್ನು ಸ್ವಯಂ ಬಿಡುವಂತೆ ಅಭಿಯಾನ ಮಾಡಿದ್ದರು. ರಾಗಿಗುಡ್ಡ ಆಂಜನೇಯ ದೇವಸ್ಥಾನದಲ್ಲಿ ಪ್ರತಿವರ್ಷ ಹನುಮ ಜಯಂತಿ ಪ್ರಯುಕ್ತ 12 ದಿನ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಇದೇ ಪ್ಲಾಸ್ಟಿಕ್ ವಿರೋಧಿ ಅಭಿಯಾನ ಕಾಯಕವನ್ನು ಆಯೋಜಿಸುತ್ತೇವೆ. ಇದರ ಜತೆಗೆ ಹಳೆ ಬಟ್ಟೆಗಳನ್ನು ತೆಗೆದುಕೊಂಡು ಅದರಲ್ಲಿಯೇ ಬ್ಯಾಗ್‌ಗಳನ್ನು ಹೊಲಿದು, 10 ರೂಪಾಯಿಗೆ ಕೊಡುತ್ತೇವೆ' ಎಂದು ಶ್ವೇತಾ ಅರಸ್ ಮಾಹಿತಿ ನೀಡಿದರು.

ಕಿಶೋರಿಯರಿಗೆ 'ಎಚ್‌ಪಿವಿ' ರಕ್ಷೆ: ಅಭಿಯಾನಕ್ಕೆ ಸಿಕ್ಕಿದೆ ಉತ್ತಮ ಸ್ಪಂದನೆ

ಯುದ್ಧ ತಂದ ಫಜೀತಿ

ಪಶ್ಚಿಮ ಏಷ್ಯಾ ಸಂಘರ್ಷವು ಇಂಧನ, ಕೃಷಿ, ವೈದ್ಯಕೀಯ ಸೇರಿದಂತೆ ಹಲವು ಕ್ಷೇತ್ರಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಹೊರ್ಮುಜ್ ಜಲಸಂಧಿಗೆ ಇರಾನ್ ದಿಗ್ಬಂಧನ ಹಾಕಿದ್ದರಿಂದ ಜಗತ್ತಿನಾದ್ಯಂತ ಹಲವು ಸಮಸ್ಯೆಗಳು ತಲೆದೋರಿವೆ. ಇಂಧನ ಸಮಸ್ಯೆಯಿಂದ ಕೆಲ ತಿಂಡಿಗಳು ಹೋಟೆಲ್ ಮೆನುವಿನಿಂದ ಮಾಯವಾದರೆ, ರಸಗೊಬ್ಬರದ ಅಲಭ್ಯತೆಯಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿವೆ.

ಹೋಟೆಲ್ ಮೆನುವಿನಲ್ಲಿ ಬಟರ್ ಚಿಕನ್, ದೋಸೆ ಮಾಯ: ದೋಸೆ, ಬಟರ್ ಚಿಕನ್ ತಯಾರಿಸಲು ಹೆಚ್ಚಿನ ಅಡುಗೆ ಅನಿಲದ ಅಗತ್ಯವಿದ್ದು, ಭಾರತದ ಹಲವು ಹೋಟೆಲ್‌ಗಳು ಈ ಪದಾರ್ಥಗಳನ್ನು ಮೆನುವಿನಿಂದ ತೆಗೆದುಹಾಕಿವೆ. ಗೃಹಬಳಕೆ ಸಿಲಿಂಡರ್ ವ್ಯತ್ಯಯವಾಗದಂತೆ ನೋಡಿಕೊಳ್ಳಲು ವಾಣಿಜ್ಯ ಬಳಕೆ ಸಿಲಿಂಡರ್‌ಗೆ ಸರ್ಕಾರ ಕಡಿವಾಣ ಹಾಕಿತ್ತು. ಇದು ಹೋಟೆಲ್‌ಗಳ ಮೇಲೆ ನೇರ ಪರಿಣಾಮ ಉಂಟುಮಾಡಿದೆ. ಅತಿ ಇಂಧನ ಬೇಡುವ ದೋಸೆ, ಚಪಾತಿ, ಬಟರ್ ಚಿಕನ್‌ನಂತಹ ಪದಾರ್ಥಗಳನ್ನು ತಯಾರಿಸದಿರಲು ಕೆಲವು ಹೋಟೆಲ್‌ಗಳು ನಿರ್ಧರಿಸಿವೆ.

ಸೆರಾಮಿಕ್ಸ್ ಕಾರ್ಖಾನೆಗಳು ಸ್ಥಗಿತ: ಸೆರಾಮಿಕ್ಸ್ ತಯಾರಿಕೆಗೆ ಬೇಕಾದ ಕುಲುಮೆಗಳನ್ನು ಉರಿಸಲು ಪ್ರೊಪೇನ್ ಅಗತ್ಯವಿದ್ದು, ಅವುಗಳ ಕೊರತೆಯಿಂದಾಗಿ ಉತ್ಪಾದನೆ ನಿಂತಿದೆ. ಪ್ರೊಪೇನ್ ಅನ್ನು ಗಲ್ಫ್ ರಾಷ್ಟ್ರಗಳಿಂದ ಖರೀದಿಸುತ್ತಿದ್ದು, ಯುದ್ಧದಿಂದ ಅವುಗಳ ಪೂರೈಕೆ ಸ್ಥಗಿತಗೊಂಡಿದೆ.

ಗೋಧಿ ಬೆಳೆಯುವುದನ್ನು ಕಡಿಮೆ ಮಾಡಿದ ಆಸ್ಟ್ರೇಲಿಯಾ: ಜಗತ್ತಿನ ಮೂರನೇ ಒಂದು ಭಾಗದಷ್ಟು ರಸಗೊಬ್ಬರವನ್ನು ಹೊರ್ಮುಜ್ ಜಲಸಂಧಿಯ ಮೂಲಕ ಸಾಗಿಸಲಾಗುತ್ತದೆ. ಜಲಸಂಧಿಯನ್ನು ಮುಚ್ಚಿದ್ದು ರಸಗೊಬ್ಬರ ಪೂರೈಕೆಯ ಮೇಲೆ ನೇರ ಪರಿಣಾಮ ಬೀರಿದೆ. ರಸಗೊಬ್ಬರದ ಬೆಲೆಯಲ್ಲಿನ ತೀವ್ರ ಏರಿಕೆಯು ರೈತರನ್ನು ಕಂಗಾಲಾಗಿಸಿದೆ. ರಸಗೊಬ್ಬರದ ಕೊರತೆ ಮತ್ತು ಬೆಲೆ ಏರಿಕೆಯಿಂದ ಬೇಸತ್ತ ಆಸ್ಟ್ರೇಲಿಯಾದ ರೈತರು ಗೋಧಿ ಬೆಳೆಯುವುದನ್ನು ಕಡಿಮೆ ಮಾಡಿದ್ದಾರೆ.

ದಕ್ಷಿಣ ಕೊರಿಯಾದಲ್ಲಿ ತಣ್ಣೀರೇ ಗತಿ : ಪಶ್ಚಿಮ ಏಷ್ಯಾ ಯುದ್ಧವು ದಕ್ಷಿಣ ಕೊರಿಯಾದ ವಿವಿಧ ರಂಗಗಳ ಮೇಲೆ ಪರಿಣಾಮ ಬೀರಿದೆ. ಇಲ್ಲಿನ ಹೆಚ್ಚಿನ ಮನೆಗಳು ನೀರು ಕಾಯಿಸಲು ಇಂಧನವನ್ನೇ ಅವಲಂಬಿಸಿವೆ. ಇಂಧನವು ಹೆಚ್ಚಾಗಿ ಮಧ್ಯಪ್ರಾಚ್ಯದಿಂದಲೇ ಬರುತ್ತದೆ. ಯುದ್ಧದಿಂದ ಅನಿವಾರ್ಯವಾಗಿ ಕಡಿಮೆ ಬಿಸಿನೀರಿನಲ್ಲಿ ಅಥವಾ ತಣ್ಣೀರಿನಲ್ಲಿ ಸ್ನಾನ ಮಾಡಬೇಕಾಗಿ ಬಂದಿದೆ.

ಶ್ರೀಲಂಕಾದಲ್ಲಿ ಕೆಲಸದ ಅವಧಿ ಕಡಿತ: ವಾಹನ ಸಂಚಾರ ಕಡಿಮೆ ಮಾಡುವ ಮೂಲಕ ಇಂಧನವನ್ನು ಉಳಿಸಲು ಶ್ರೀಲಂಕಾ ಸರ್ಕಾರ ವಾರದ ಮಧ್ಯದಲ್ಲಿ ಒಂದು ದಿನ ಸಾರ್ವಜನಿಕ ರಜೆ ಘೋಷಿಸಿದೆ.

ಬಲೂನ್ ಪೂರೈಕೆ ಕುಸಿತ: ನೈಸರ್ಗಿಕ ಅನಿಲದ ಉಪ ಉತ್ಪನ್ನವಾದ ಹೀಲಿಯಂನ ಜಾಗತಿಕ ಉತ್ಪಾದನೆಯಲ್ಲಿ ಕತಾರ್ ಮೂರನೇ ಒಂದು ಭಾಗದಷ್ಟು ಪಾಲು ಹೊಂದಿದೆ. ಉತ್ಪಾದನೆ ಮತ್ತು ರಫ್ತು ಸ್ಥಗಿತಗೊಂಡಿರುವುದರಿಂದ ಬಲೂನ್ ಪೂರೈಕೆದಾರರಿಗೆ ಹೀಲಿಯಂ ಕೊರತೆ ಎದುರಾಗಿದೆ.

ಫಾರ್ಮುಲಾ ಒನ್ ರೇಸ್ ರದ್ದು: ಗಲ್ಫ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿಯ ಭೀತಿ ಇರುವುದರಿಂದ, ಬಹ್ರೇನ್ ಮತ್ತು ಸೌದಿ ಅರೇಬಿಯಾದಲ್ಲಿ ನಡೆಯಬೇಕಿದ್ದ ಫಾರ್ಮುಲಾ ಒನ್ ರೇಸ್ ಅನ್ನು ರದ್ದುಗೊಳಿಸಲಾಗಿದೆ. ಇದೇ ರೀತಿ ಅನೇಕ ಕ್ರೀಡೆಗಳು ಸಹ ಸ್ಥಗಿತಗೊಂಡಿವೆ.

ಅಮೆರಿಕದಲ್ಲಿ ಮನೆ ಖರೀದಿ ದುಬಾರಿ: ತೈಲ ಬೆಲೆ ಏರಿಕೆಯು ಹಣದುಬ್ಬರದ ಭೀತಿಯನ್ನು ಹೆಚ್ಚಿಸಿದೆ. ಇದರಿಂದ ಗೃಹ ಸಾಲದ ಬಡ್ಡಿದರಗಳು ಏರಿಕೆಯಾಗಿವೆ.

ಸಕ್ಕರೆ ಬೆಲೆ ಏರಿಕೆ: ವಿಶ್ವದ ಅತಿದೊಡ್ಡ ಸಕ್ಕರೆ ಉತ್ಪಾದಕ ದೇಶವಾದ ಬ್ರೆಜಿಲ್‌ನ ಸಕ್ಕರೆ ಕಾರ್ಖಾನೆಗಳು, ಇಂಧನ ಬೆಲೆಯ ಲಾಭ ಪಡೆಯಲು ಸಕ್ಕರೆ ಬದಲಿಗೆ ಜೈವಿಕ ಇಂಧನ (Biofuel) ತಯಾರಿಕೆಗೆ ಒತ್ತು ನೀಡುತ್ತಿವೆ. ಇದರಿಂದ ಸಕ್ಕರೆ ಉತ್ಪಾದನೆ ಮೇಲೆ ಪರಿಣಾಮ ಬೀರಿದ್ದು, ಬೆಲೆ ಏರಿಕೆಯಾಗಿದೆ.

ವಿಮಾನ ಪ್ರಯಾಣ ದರದಲ್ಲಿ ಹೆಚ್ಚಳ: ವಿಮಾನ ಇಂಧನದ ಬೆಲೆ ಏರಿಕೆಯಾಗಿರುವುದರಿಂದ ವಿಮಾನಯಾನ ಸಂಸ್ಥೆಗಳು ಆ ಹೊರೆಯನ್ನು ಪ್ರಯಾಣಿಕರ ಮೇಲೆ ಹಾಕುತ್ತಿವೆ.

ಚಿನ್ನದ ಬೆಲೆಯಲ್ಲಿ ಇಳಿಕೆ: ಸಾಮಾನ್ಯವಾಗಿ ಅಸ್ಥಿರತೆ ಸಮಯದಲ್ಲಿ ಸುರಕ್ಷಿತ ಹೂಡಿಕೆ ಎನ್ನಲಾಗುವ ಚಿನ್ನದ ಬೆಲೆ ಏರಿಕೆಯಾಗುತ್ತದೆ. ಆದರೆ ಈ ಬಾರಿ ಅದು ಉಲ್ಟಾ ಹೊಡೆದಿದೆ. ಅಮೆರಿಕದಲ್ಲಿ ಬಡ್ಡಿದರ ಏರಿಕೆಯಾಗಿರುವುದರಿಂದ ಹೂಡಿಕೆದಾರರು ಚಿನ್ನ, ಬೆಳ್ಳಿಯನ್ನು ಮಾರಿ ಬಾಂಡ್‌ಗಳಿಗೆ ಹೂಡಿಕೆ ಮಾಡುತ್ತಿದ್ದಾರೆ. ಇದರಿಂದ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದ ಚಿನ್ನದ ಬೆಲೆಯು ಕುಸಿದಿದೆ.

ರಾಮಾಯಣ ದಿನಾಂಕ ಘೋಷಿಸಿದ ಯಶ್

ರಾಕಿಂಗ್ ಸ್ಟಾರ್ ಯಶ್ ಹಾಗೂ ನಮಿತ್ ಮಲ್ಹೋತ್ರಾ ಅವರು ಇತ್ತೀಚೆಗೆ ಲಾಸ್ ವೆಗಾಸ್‌ನಲ್ಲಿ ನಡೆದ 'ಸಿನಿಮಾಕಾನ್-2026' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಅಲ್ಲಿ 'ರಾಮಾಯಣ' ಚಿತ್ರ ಬಿಡುಗಡೆ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

'ರಾಮಾಯಣ' ಚಿತ್ರವನ್ನು ನವೆಂಬರ್ ಮೊದಲ ವಾರದಲ್ಲಿ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಹೇಳಿಕೊಂಡಿತ್ತು. ಪ್ರಚಾರದ ವೇಳೆ ಮಾತನಾಡಿದ ಯಶ್, 'ಅಕ್ಟೋಬರ್ ಕೊನೆಯ ವಾರದಲ್ಲಿ ಈ ಚಿತ್ರ ತೆರೆಮೇಲೆ ಬರಲಿದೆ' ಎಂದಿದ್ದಾರೆ. 'ರಾಮಾಯಣ ಚಿತ್ರವು ಕೇವಲ ಒಂದು ಕಥೆಯಲ್ಲ, ಅದೊಂದು ಅದ್ಭುತ ಅನುಭವ. ಪ್ರೇಕ್ಷಕರ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವಂತಹ ವಿಶಿಷ್ಟವಾದ ಸತ್ವ. ಇದು ಜನರನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುವಂತಹ ಅನುಭವವನ್ನು ನೀಡಲಿದೆ' ಎಂದಿದ್ದಾರೆ.

ಈ ಚಿತ್ರದಲ್ಲಿ ರಾಮನ ಪಾತ್ರದಲ್ಲಿ ರಣಬೀರ್ ಕಪೂರ್, ರಾವಣನಾಗಿ ಯಶ್, ಸೀತೆ ಪಾತ್ರದಲ್ಲಿ ಸಾಯಿ ಪಲ್ಲವಿ, ಹನುಮಂತನಾಗಿ ಸನ್ನಿ ಡಿಯೋಲ್, ಲಕ್ಷ್ಮಣನ ಪಾತ್ರದಲ್ಲಿ ರವಿ ದುಬೆ ಅವರು ನಟಿಸಿದ್ದಾರೆ. ಪ್ರೈಮ್ ಫೋಕಸ್ ಸ್ಟುಡಿಯೋಸ್, ಡಿಎನ್‌ಇಜಿ ಮತ್ತು ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸುತ್ತಿವೆ. ಚಿತ್ರದ ಎರಡನೇ ಭಾಗವು 2027ರ ದೀಪಾವಳಿಗೆ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಮೋಹನ್‌ಲಾಲ್ ಸಿನಿಮಾದ ಶೀರ್ಷಿಕೆ ಅನಾವರಣ

ಮಲಯಾಳ ನಟ ಮೋಹನ್‌ಲಾಲ್ ನಟನೆಯ, ತರುಣ್ ಮೂರ್ತಿ ನಿರ್ದೇಶನದ 'L366' ಚಿತ್ರಕ್ಕೆ ಈಗ ಅಧಿಕೃತವಾಗಿ 'ಅತಿಮನೋಹರಂ' ಎಂದು ಹೆಸರಿಡಲಾಗಿದೆ. ಈ ಕುರಿತು ಚಿತ್ರತಂಡ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿದೆ.

ಚಿತ್ರದ ಪೋಸ್ಟರ್ ಹಂಚಿಕೊಂಡಿರುವ ಮೋಹನ್‌ಲಾಲ್, 'ಅತಿಮನೋಹರವಾದ ವಿಷು ಹಬ್ಬದ ಶುಭಾಶಯಗಳು' ಎಂದಿದ್ದಾರೆ. ಆದರೆ, ಈ ಚಿತ್ರ ಬಿಡುಗಡೆ ದಿನಾಂಕ ಘೋಷಣೆ ಮಾಡಿಲ್ಲ. ತರುಣ್ ಅವರು ಹಂಚಿಕೊಂಡಿರುವ ಪೋಸ್ಟರ್‌ನಲ್ಲಿ ಶಬರಿಮಲೆ ಭಕ್ತರ ನಡುವೆ ಪೊಲೀಸ್ ಆಗಿ ಮೋಹನ್‌ಲಾಲ್ ನಿಂತಿದ್ದಾರೆ. ನಾಯಕಿಯಾಗಿ ಮೀರಾ ಜಾಸ್ಮಿನ್ ಕಾಣಿಸಿಕೊಳ್ಳುತ್ತಿದ್ದಾರೆ. ಸದ್ಯ, ಈ ಚಿತ್ರಕ್ಕೆ ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತರುಣ್ ಹಾಗೂ ಮೋಹನ್‌ಲಾಲ್ ಜೊತೆಯಾಗಿ ಕೆಲಸ ಮಾಡಿದ್ದ 'ತುಡರುಂ' ಚಿತ್ರವು ಪ್ರೇಕ್ಷಕರ ಮೆಚ್ಚುಗೆ ಪಡೆದಿತ್ತು. ಇವರಿಬ್ಬರೂ ಮತ್ತೆ 'ಅತಿಮನೋಹರಂ' ಚಿತ್ರದಲ್ಲಿ ಜೊತೆಯಾಗಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಈ ಚಿತ್ರದ ನಿರ್ದೇಶಕ ತರುಣ್ ಅವರು ಮೋಹನ್‌ಲಾಲ್ ಅವರನ್ನು ಕುರಿತಂತೆ, 'ಒಬ್ಬ ಕಥೆಗಾರನು ಸೂಪರ್ ಸ್ಟಾರ್ ಅವರನ್ನು ಭೇಟಿ ಆದಾಗ ಅಲ್ಲಿ ಮತ್ತೊಂದು ಲೋಕ ಸೃಷ್ಟಿಯಾಗುತ್ತದೆ' ಎಂದು ಹೇಳಿದ್ದರು.

ಟ್ರೆಂಡ್ ಸೃಷ್ಟಿಸಿದ ಬರೇಲಿಯ ಜುಮ್ಕಾ

ಮೇರು ಗಾಯಕಿ ಆಶಾ ಭೋಸ್ಲೆ ಅವರು ನಿಧನರಾಗಿರುವ ಇದೇ ಹೊತ್ತಿನಲ್ಲಿ, ಬರೇಲಿಯ ಸಾಂಪ್ರದಾಯಿಕ ಜುಮ್ಕಾ (ಕಿವಿಯೋಲೆ) ಮತ್ತೆ ಟ್ರೆಂಡ್ ಸೃಷ್ಟಿಸಿದೆ. ಅಕ್ಷಯ ತೃತೀಯ ಹಬ್ಬಕ್ಕೆ ಅನೇಕ ಯುವತಿಯರು ಈ 'ಜುಮ್ಕಾ'ವನ್ನು ಖರೀದಿಸಲು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ ಎಂದು ಆಭರಣ ವ್ಯಾಪಾರಿಗಳು ಹೇಳಿದ್ದಾರೆ.

ಈ ಕುರಿತು ಮಾತನಾಡಿರುವ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ರವೀಂದ್ರ ಕುಮಾರ್ ಅವರು, '1966ರ 'ಮೇರಾ ಸಾಯಾ' ಚಿತ್ರದ 'ಜುಮ್ಕಾ ಗಿರಾ ರೆ, ಬರೇಲಿ ಕೆ ಬಜಾರ್ ಮೇ' ಹಾಡಿಗೆ ಆಶಾ ಅವರು ಧ್ವನಿ ನೀಡಿದ್ದರು. ಈ ಹಾಡು ಬರೇಲಿ ನಗರಕ್ಕೆ ಒಂದು ವಿಶಿಷ್ಟ ಸಾಂಸ್ಕೃತಿಕ ಗುರುತನ್ನು ನೀಡಿತ್ತು. ಅಷ್ಟೇ ಅಲ್ಲದೆ, ಭಾರತ ಮತ್ತು ವಿದೇಶಗಳಲ್ಲಿ ಈ 'ಜುಮ್ಕಾ'ವು ಮಾರುಕಟ್ಟೆಗಳಲ್ಲಿ ಜನಪ್ರಿಯವಾಗಲು ಈ ಹಾಡು ಪ್ರಮುಖ ಕಾರಣವಾಗಿದೆ' ಎಂದಿದ್ದಾರೆ.

'ಆಶಾ ಅವರ ನಿಧನದ ಹೊತ್ತಿನಲ್ಲೇ ಈ ಹಾಡು ಮತ್ತೆ ಪ್ರಸಿದ್ಧಿ ಪಡೆದು, ಯುವತಿಯರು ಬರೇಲಿ 'ಜುಮ್ಕಿ' ಖರೀದಿಸಲು ಹೆಚ್ಚು ಒಲವು ತೋರುತ್ತಿದ್ದಾರೆ. ಅಲ್ಲದೆ, ಪ್ರವಾಸಿಗರು, ಯಾತ್ರಿಕರು ಮತ್ತು ಸಂದರ್ಶಕರು ಕೂಡ ಈ ಕಿವಿಯೋಲೆ ಬಗ್ಗೆ ತಿಳಿಯಲು ಆಸಕ್ತಿ ತೋರುತ್ತಿದ್ದಾರೆ. ಬರೇಲಿಯ ಈ ಸಾಂಪ್ರದಾಯಿಕ ಜುಮ್ಕಾಗೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಬೆಲೆಯೂ ದುಪ್ಪಟ್ಟಾಗುತ್ತಿದೆ ಎಂದು ರವೀಂದ್ರ ಮಾಹಿತಿ ಹಂಚಿಕೊಂಡಿದ್ದಾರೆ.

ಇನ್ನು, ಆಶಾ ಭೋಸ್ಲೆ ಅವರು ಎಂಟು ದಶಕಗಳ ಸುದೀರ್ಘ ವೃತ್ತಿಜೀವನದಲ್ಲಿ ಕನ್ನಡ, ಹಿಂದಿ ಸೇರಿ 20ಕ್ಕೂ ಹೆಚ್ಚು ಭಾಷೆಗಳಲ್ಲಿ ಸುಮಾರು 12,000ಕ್ಕೂ ಹೆಚ್ಚು ಹಾಡುಗಳಿಗೆ ಧ್ವನಿ ನೀಡಿದ್ದಾರೆ. ಇವರ ಅಪ್ರತಿಮ ಸಾಧನೆಗಾಗಿ ಭಾರತ ಸರ್ಕಾರವು ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಿ ಗೌರವಿಸಿತ್ತು.

ನ್ಯೂಯಾರ್ಕ್‌ನಲ್ಲಿ ಶೋಲೆ

ನ್ಯೂಯಾರ್ಕ್ ಇಂಡಿಯನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಭಾರತೀಯ ಚಿತ್ರಗಳಾದ 'ಶೋಲೆ' ಹಾಗೂ 'ಬೂಂಗ್' ಪ್ರದರ್ಶನಗೊಳ್ಳಲಿವೆ.

ಅಮಿತಾಭ್ ಮತ್ತು ಧರ್ಮೇಂದ್ರ ನಟನೆಯ 'ಶೋಲೆ' ಚಿತ್ರ ಬಿಡುಗಡೆಯಾಗಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ, ಈ ಚಿತ್ರವನ್ನು 4K ಗುಣಮಟ್ಟದಲ್ಲಿ ಮರುಸ್ಥಾಪಿಸಿದೆ.

ಎನ್‌ವೈಐಎಫ್‌ಎಫ್‌ನಲ್ಲಿ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ. ರಮೇಶ್ ಸಿಪ್ಪಿ ನಿರ್ದೇಶನದ ಈ ಸಿನಿಮಾದಲ್ಲಿ ಧರ್ಮೇಂದ್ರ ಅವರು ವೀರು ಪಾತ್ರದಲ್ಲಿ ನಟಿಸಿದ್ದರು. ಈ ಬಾರಿಯ ಚಿತ್ರೋತ್ಸವದ ಉದ್ಘಾಟನಾ ಸಿನಿಮಾವಾಗಿ 'ಬೂಂಗ್' ಸಿನಿಮಾ ಆಯ್ಕೆ ಆಗಿದೆ. ಇದು 'ಅತ್ಯುತ್ತಮ ಮಕ್ಕಳ ಮತ್ತು ಕೌಟುಂಬಿಕ ಚಿತ್ರ' ವಿಭಾಗದಲ್ಲಿ ಬಿಎಎಫ್‌ಟಿಎ (ಬ್ರಿಟಿಷ್ ಅಕಾಡೆಮಿ ಆಫ್ ಫಿಲ್ಮ್ ಆ್ಯಂಡ್ ಟೆಲಿವಿಷನ್ ಆರ್ಟ್ಸ್) ಪ್ರಶಸ್ತಿಯನ್ನು ಪಡೆದು ಇತಿಹಾಸ ನಿರ್ಮಿಸಿತ್ತು.

ಈ ಚಲನಚಿತ್ರೋತ್ಸವವು ಮೇ 28ರಿಂದ 31ರವರೆಗೆ ನಡೆಯಲಿದೆ. 15 ಭಾಷೆಗಳ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

11 ವರ್ಷಗಳ ಬಳಿಕ ರಣಬೀರ್ ಜತೆ ದೀಪಿಕಾ ನಟನೆ

ಸುಮಾರು ಹನ್ನೊಂದು ವರ್ಷಗಳ ಬಳಿಕ ಬಾಲಿವುಡ್ ನಟರಾದ ರಣಬೀರ್ ಕಪೂರ್ ಹಾಗೂ ದೀಪಿಕಾ ಪಡುಕೋಣೆ ಅವರು 'ಬ್ರಹ್ಮಾಸ್ತ್ರ : ಭಾಗ 2' ಚಿತ್ರದಲ್ಲಿ ಜೋಡಿಯಾಗಿ ನಟಿಸುತ್ತಿದ್ದಾರೆ ಎಂದು 'ಡೆಕ್ಕನ್ ಹೆರಾಲ್ಡ್' ವರದಿ ಮಾಡಿದೆ.

ರಾಕಿಂಗ್ ಸ್ಟಾರ್ ಯಶ್ ಹಾಗೂ ನಿರ್ಮಾಪಕ ನಮಿತ್ ಮಲ್ಹೋತ್ರಾ ಅವರು ಅಮೆರಿಕದಲ್ಲಿ 'ರಾಮಾಯಣ' ಚಿತ್ರದ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಆ ವೇಳೆ 'ಬ್ರಹ್ಮಾಸ್ತ್ರ : ಭಾಗ 2' ಚಿತ್ರಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ.

ಈ ಚಿತ್ರದಲ್ಲಿ ರಣಬೀರ್ ಮತ್ತು ದೀಪಿಕಾ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದು, ಅಯಾನ್ ಮುಖರ್ಜಿ ಅವರು ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ ಎಂದು ನಮಿತ್ ಮಲ್ಹೋತ್ರಾ ಹೇಳಿಕೊಂಡಿದ್ದಾರೆ.

ಇನ್ನು, ರಣಬೀರ್ ಮತ್ತು ದೀಪಿಕಾ ಅವರು 'ಬಚ್ನಾ ಏ ಹಸೀನೋ', 'ಯೇ ಜವಾನಿ ಹೈ ದಿವಾನಿ', 'ತಮಾಷಾ' ಚಿತ್ರದಲ್ಲಿ ಜೋಡಿಯಾಗಿ ನಟಿಸಿ ಪ್ರೇಕ್ಷಕರನ್ನು ಸೆಳೆದಿದ್ದರು. ನಂತರ ಈ ಜೋಡಿ ಮದುವೆಯಾಗುತ್ತಿದೆ ಎನ್ನುವ ವದಂತಿಗಳು ಹರಿದಾಡಿದ್ದವು. ಆ ಬಳಿಕ, ಇವರಿಬ್ಬರೂ ಒಟ್ಟಾಗಿ ತೆರೆ ಮೇಲೆ ಕಾಣಿಸಿಕೊಂಡಿರಲಿಲ್ಲ.

ಸ್ಟ್ಯಾಂಡಪ್ ಕಮಿಡಿಯನ್ ಬಂಧನ

ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಹಾಗೂ ನಟ ರಾಮ್‌ಚರಣ್ ಅವರ ವೈಯಕ್ತಿಕ ಜೀವನದ ಬಗ್ಗೆ ಹಾಸ್ಯ ಮಾಡಿದ ಆರೋಪದ ಮೇಲೆ ಸ್ಟ್ಯಾಂಡಪ್ ಕಮಿಡಿಯನ್ ಅನುದೀಪ್ ಕಾಟಿಕಾಲ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಹೈದರಾಬಾದ್ ಮೂಲದ ಅನುದೀಪ್ ಇತ್ತೀಚೆಗೆ ಯೂಟ್ಯೂಬ್‌ನಲ್ಲಿ ಹಂಚಿಕೊಂಡಿದ್ದ ವಿಡಿಯೊದಲ್ಲಿ, ಪವನ್ ಕಲ್ಯಾಣ್ ಮತ್ತು ನಿಹಾರಿಕಾ ಕೊನಿಡೇಲಾ ಅವರ ವಿಚ್ಛೇದನದ ಬಗ್ಗೆ ಹಾಸ್ಯ ಮಾಡಿದ್ದರು. 'ಹೆಂಡತಿಗೆ ಹೇಗೆ ವಿಚ್ಛೇದನ ನೀಡಬೇಕು ಎಂಬುದನ್ನು ಪವನ್ ಕಲ್ಯಾಣ್ ಅವರನ್ನು ನೋಡಿ ಕಲಿಯಬೇಕು' ಎಂದು ವ್ಯಂಗ್ಯವಾಡಿದ್ದರು. ಹಾಗೇ ಇತ್ತೀಚೆಗೆ ವಿಚ್ಛೇದನ ಪಡೆದ ಸೋದರಸಂಬಂಧಿ ನಿಹಾರಿಕಾ ಕೊನಿಡೇಲ ಅವರು ಈ ವಿಷಯದಲ್ಲಿ ತಮ್ಮ ಚಿಕ್ಕಪ್ಪನಿಂದ ಸಲಹೆ ಪಡೆಯಬಹುದು ಎಂದಿದ್ದರು. ಇದಲ್ಲದೆ ರಾಮ್‌ಚರಣ್ ಅವರನ್ನು ಕೆಟ್ಟ ಪದಗಳಿಂದ ನಿಂದಿಸಿದ್ದರು. ಅನುದೀಪ್ ವಿರುದ್ಧ ಮಾನನಷ್ಟ ಮೊಕದ್ದಮೆ, ಮಹಿಳೆಯ ಗೌರವಕ್ಕೆ ಧಕ್ಕೆ ತಂದ ಆರೋಪಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಹೊಸ ಉದ್ಯಮದತ್ತ ರಕ್ಷಿತಾ ಶೆಟ್ಟಿ



ರಕ್ಷಿತಾ ಶೆಟ್ಟಿ ಅವರು ಬಿಗ್‌ಬಾಸ್ ಸೀಸನ್ 12ರಲ್ಲಿ ರನ್ನರ್ ಅಪ್ ಆಗಿದ್ದರು. ತಮ್ಮ ನಟನೆ ಹಾಗೂ ಭಾಷೆಯಿಂದಲೇ ಹೆಚ್ಚಿನ ಜನರಿಗೆ ರಕ್ಷಿತಾ ಹತ್ತಿರವಾಗಿದ್ದಾರೆ. ಇದೀಗ ರಕ್ಷಿತಾ ಶೆಟ್ಟಿ ಹೊಸ ಉದ್ಯಮವನ್ನು ಶುರು ಮಾಡಿದ್ದಾರೆ. ತಮ್ಮ ಊರಿನಲ್ಲಿ 'ಪಟಾಕಿ ಕಿಚನ್' ಅನ್ನು ಆರಂಭಿಸಿರುವ ಅವರು, ಇನ್ನುಮುಂದೆ ತಮ್ಮ ಅಡುಗೆಯ ರೆಸಿಪಿಗಳನ್ನು ಈ ಮೂಲಕ ಹಂಚಿಕೊಳ್ಳಲಿದ್ದಾರೆ.

ರಕ್ಷಿತಾ ಅವರು ಸಾಮಾಜಿಕ ಮಾಧ್ಯಮದ ಮೂಲಕವೇ ಹೆಚ್ಚು ಮನ್ನಣೆ ಪಡೆದವರು. ಇದರಿಂದಾಗಿ ಅವರು ಬಿಗ್‌ಬಾಸ್ ಮನೆಗೂ ಪ್ರವೇಶ ಪಡೆದರು. ಪಟಾಕಿ ಕಿಚನ್ ಅನ್ನು ಬಿಗ್‌ಬಾಸ್‌ನ ಮತ್ತೊಬ್ಬ ಸ್ಪರ್ಧಿ ರಘು ಅವರೊಂದಿಗೆ ಉದ್ಘಾಟಿಸಿರುವ ವಿಡಿಯೊವನ್ನು ರಕ್ಷಿತಾ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಹಂಚಿಕೊಂಡಿದ್ದಾರೆ.

ವಿಡಿಯೊದಲ್ಲಿ ಮಾತನಾಡಿರುವ ರಕ್ಷಿತಾ 'ಇನ್ನು ಮುಂದೆ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಇಲ್ಲಿಯೇ ಅಡುಗೆ ಮಾಡುತ್ತೇವೆ' ಎಂದು ಹೇಳಿಕೊಂಡಿದ್ದಾರೆ. ಇದೇ ವೇಳೆ ರಘು ಅವರನ್ನು ತಮ್ಮ ಅಣ್ಣ ಎಂದು ರಕ್ಷಿತಾ ಕರೆದಿದ್ದಾರೆ. ಬಿಗ್‌ಬಾಸ್‌ನಲ್ಲಿ ರಕ್ಷಿತಾ ಅವರೊಟ್ಟಿಗೆ ಗಿಲ್ಲಿ ಹಾಗೂ ರಘು ಉತ್ತಮ ಬಾಂಧವ್ಯವನ್ನು ಹೊಂದಿದ್ದರು.

ಬಿಗ್‌ಬಾಸ್ ಮನೆಯಲ್ಲಿ ಒಬ್ಬರನ್ನೊಬ್ಬರು ಎಂದಿಗೂ ಬಿಟ್ಟುಕೊಟ್ಟಿರಲಿಲ್ಲ. ಇದೀಗ ಬಿಗ್‌ಬಾಸ್ ಮನೆಯಿಂದ ಆಚೆ ಬಂದ ಮೇಲೂ ಇವರ ಸ್ನೇಹ ಮತ್ತಷ್ಟು ಗಟ್ಟಿಯಾಗಿದೆ. ರಕ್ಷಿತಾ ಈ ಹಿಂದೆ ಬಿಗ್‌ಬಾಸ್ ಮನೆಯಲ್ಲಿದ್ದಾಗ 'ಕಿಚನ್' ಮಾಡುವ ಕನಸಿದೆ ಎಂದು ಹೇಳಿಕೊಂಡಿದ್ದರು. ಇದೀಗ ಅವರ ಕನಸು ನನಸಾಗಿದೆ.

ಡ್ರ್ಯಾಗನ್‌ಗೆ ಭಾರಿ ತೂಕ ಇಳಿಸಿಕೊಂಡ ಜೂ. ಎನ್‌ಟಿಆರ್



ಬಹುನಿರೀಕ್ಷಿತ 'ಡ್ರ್ಯಾಗನ್' ಚಿತ್ರಕ್ಕಾಗಿ ತೆಲುಗು ನಟ ಜೂನಿಯರ್ ಎನ್‌ಟಿಆರ್ ಅವರು ದೇಹದ ತೂಕ ಇಳಿಸಿಕೊಂಡಿದ್ದಾರೆ. ಆ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಪ್ರಶಾಂತ್ ನೀಲ್ ನಿರ್ದೇಶನದ 'ಡ್ರ್ಯಾಗನ್' ಚಿತ್ರದಲ್ಲಿ ನಟಿಸುತ್ತಿರುವ ಜೂನಿಯರ್ ಎನ್‌ಟಿಆರ್, ಈ ಚಿತ್ರಕ್ಕಾಗಿ ಕೇವಲ 50 ದಿನಗಳಲ್ಲಿ ಸುಮಾರು 9.5 ಕೆ.ಜಿ ತೂಕ ಇಳಿಸಿಕೊಂಡಿದ್ದಾರೆ ಎನ್ನಲಾಗಿದೆ.

ಎನ್‌ಟಿಆರ್ ಅವರು ದೇಹ ಸದೃಢಗೊಳಿಸಿ ಕೊಳ್ಳಲು ಜಿಮ್‌ನಲ್ಲಿ ಸಾಮು ಮಾಡುತ್ತಿರುವ ಚಿತ್ರಗಳನ್ನು ಹಂಚಿಕೊಂಡಿದ್ದು, ಇದರಲ್ಲಿ ಅವರ ಸ್ನಾಯುಬದ್ಧ ತೋಳುಗಳನ್ನು ಕಾಣಬಹುದು. 'ಪರಿಶ್ರಮದಿಂದ ಮಾಡಿಕೊಂಡಿರುವುದು. ಖರೀದಿಸಿದ್ದಲ್ಲ' ಎಂಬ ಅಡಿಬರಹವನ್ನು ಅದಕ್ಕೆ ನೀಡಿದ್ದಾರೆ.

ಮುಂಬರುವ ಚಿತ್ರಕ್ಕಾಗಿ ಅವರು ತರಬೇತುದಾರ ಕುಮಾರ್ ಮನ್ನವ ಅವರ ಮಾರ್ಗದರ್ಶನದಲ್ಲಿ ವಿಶೇಷ ವ್ಯಾಯಾಮ ಮತ್ತು ಆಹಾರ ಪದ್ಧತಿಯನ್ನು ಅನುಸರಿಸಿದ್ದಾರೆ. ತೂಕ ಇಳಿಸಲು ಡಯಟ್ ಮೊರೆ ಹೋಗಿದ್ದಾರೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ. 'ಡ್ರ್ಯಾಗನ್' ಆ್ಯಕ್ಷನ್ ಡ್ರಾಮಾ ಆಗಿದ್ದು, ಈ ಚಿತ್ರದಲ್ಲಿ ನಾಯಕಿಯಾಗಿ ರುಕ್ಮಿಣಿ ವಸಂತ್ ಹಾಗೂ ಪ್ರಮುಖ ಪಾತ್ರದಲ್ಲಿ ಅನಿಲ್ ಕಪೂರ್ ಅವರು ನಟಿಸುತ್ತಿದ್ದಾರೆ ಎನ್ನುವ ಮಾಹಿತಿ ಇದೆ.

‘ಎಂಪುರಾನ್–3’ ಖಚಿತ


ಮೋಹನ್‌ಲಾಲ್

ಪೃಥ್ವಿರಾಜ್ ಸುಕುಮಾರನ್ ನಿರ್ದೇಶಿಸಿ ಮೋಹನ್ ಲಾಲ್ ನಟಿಸಿದ್ದ ‘ಎಲ್ 2: ಎಂಪುರಾನ್’ ಬಾಕ್ಸಾಫೀಸ್‌ನಲ್ಲಿ ಉತ್ತಮ ಗಳಿಕೆ ಕಂಡಿತ್ತು. ಆದಾಗ್ಯೂ ಚಿತ್ರದ ಕಥೆಗೆ ತೀವ್ರ ವಿರೋಧ, ಟೀಕೆಗಳು ವ್ಯಕ್ತವಾಗಿದ್ದವು. ಹೀಗಾಗಿ ಇದರ ಮುಂದಿನ ಭಾಗ ಅನುಮಾನ ಎಂಬ ಸುದ್ದಿ ಹರಿದಾಡಿತ್ತು. ಚಿತ್ರದ ನಿರ್ದೇಶಕ ಪೃಥ್ವಿರಾಜ್ ಸುಕುಮಾರನ್ ಎಲ್ಲ ವದಂತಿಗಳನ್ನು ನಿರಾಕರಿಸಿದ್ದು, ‘ಎಂಪುರಾನ್–3’ ಸಿನಿಮಾ ಸೆಟ್ಟೇರುವುದು ಖಚಿತ. ಇಟ್ಟ ಹೆಜ್ಜೆ ಹಿಂದಿಡುವ ಪ್ರಶ್ನೆಯಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

‘ನಾನು ವಿವಾದಗಳಿಗೆ ಹೆದರಿ ಒಂದು ಸಿನಿಮಾದಿಂದ ಹಿಂದೆ ಸರಿದ ದಾಖಲೆಯೇ ಇಲ್ಲ. ಕೆಲವಷ್ಟು ಜನ ಸಿನಿಮಾ ಇಷ್ಟಪಟ್ಟಿಲ್ಲ ಎಂದ ಮಾತ್ರಕ್ಕೆ ಕೆಲಸದ ಕುರಿತಾಗಿನ ನನ್ನ ಬದ್ಧತೆ ಬದಲಾಗುವುದಿಲ್ಲ. ನಾನು ಪ್ರಯಾಣ ಮಾಡುವಾಗ ಈ ಚಿತ್ರದ ಮೂರನೇ ಭಾಗದ ಕುರಿತು ಆಕ್ರೋಶ ವ್ಯಕ್ತಪಡಿಸಿದವರನ್ನು ನೋಡಿದ್ದೇನೆ. ಇಲ್ಲಿ ಸವಾಲಿರುವುದು ಮೋಹನ್ ಲಾಲ್ ಅವರ ಸಮಯ ಹೊಂದಾಣಿಕೆಯದ್ದು. ಜತೆಗೆ ನಾನು ಈಗಾಗಲೇ ಒಪ್ಪಿಕೊಂಡಿರುವ ಸಿನಿಮಾಗಳನ್ನು ಪೂರ್ಣಗೊಳಿಸಬೇಕಿದೆ. ಅವುಗಳ ಬಳಿಕ ಈ ಸಿನಿಮಾ ಕೈಗೆತ್ತಿಕೊಳ್ಳುವೆ’ ಎಂದು ಅವರು ಮಲಯಾಳ ಮಾಧ್ಯಮಗಳಿಗೆ ಹೇಳಿದ್ದಾರೆ.

ಪೃಥ್ವಿರಾಜ್ ಸುಕುಮಾರನ್ ‘ಲೂಸಿಫರ್’ ಚಿತ್ರದ ಮೂಲಕ ನಿರ್ದೇಶಕರಾಗಿದ್ದರು. ಮೋಹನ್ ಲಾಲ್ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರ 2019ರಲ್ಲಿ ತೆರೆ ಕಂಡಿತ್ತು. ಇದರ ಮುಂದುವರಿದ ಭಾಗವೇ ‘ಎಲ್ 2–ಎಂಪುರಾನ್’. ಬಜರಂಗದಳದ ನಾಯಕ ಬಾಬು ಬಜರಂಗಿ ಅವರಿಗೆ ಹೋಲುವ ಕಥೆ ಎಂಬ ಕಾರಣಕ್ಕೆ ಚಿತ್ರಕ್ಕೆ ವ್ಯಾಪಕ ಟೀಕೆ ಎದುರಾಗಿತ್ತು. ಕೇರಳ ರಾಜಕೀಯದ ಕುರಿತು ಕಾಲ್ಪನಿಕ ಕಥೆ ಹೊಂದಿರುವ ಚಿತ್ರ ₹300 ಕೋಟಿಗೂ ಅಧಿಕ ಗಳಿಕೆ ಕಂಡಿತ್ತು.


ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್‌ಗೆ ಸರವಣನ್ ನಿರ್ದೇಶನ

ಸುದೀಪ್ ನಟನೆಯ ‘ಮಾರ್ಕ್’ ಸಿನಿಮಾ ನಿರ್ಮಾಣ ಮಾಡಿದ್ದ ದಕ್ಷಿಣ ಭಾರತದ ಖ್ಯಾತ ನಿರ್ಮಾಣ ಸಂಸ್ಥೆ ಸತ್ಯಜ್ಯೋತಿ ಫಿಲ್ಮ್ಸ್‌ ಶಿವರಾಜ್‌ಕುಮಾರ್ ಅವರ ಮುಂದಿನ ಸಿನಿಮಾ ನಿರ್ಮಾಣ ಮಾಡಲಿದೆ. ಸಿನಿಮಾವನ್ನು ‘ಎಂಗೇಯುಮ್ ಎಪ್ಪೋದುಮ್’ ಸಿನಿಮಾ ನಿರ್ದೇಶಿಸಿದ್ದ ಎಂ.ಸರವಣನ್ ನಿರ್ದೇಶಿಸಲಿದ್ದಾರೆ.

ಇತ್ತೀಚೆಗೆ ಸತ್ಯಜ್ಯೋತಿ ಫಿಲ್ಮ್ಸ್‌ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಸಿನಿಮಾದ ಪೋಸ್ಟರ್ ಒಂದನ್ನು ಬಿಡುಗಡೆ ಮಾಡಲಾಗಿದ್ದು, ಶೀಘ್ರದಲ್ಲೇ ಶೂಟಿಂಗ್ ಆರಂಭವಾಗಲಿದೆ ಎಂದು ಉಲ್ಲೇಖಿಸಲಾಗಿದೆ. ಪುನೀತ್ ರಾಜ್‌ಕುಮಾರ್ ಹಾಗೂ ರಚಿತಾ ರಾಮ್ ಮುಖ್ಯಭೂಮಿಕೆಯಲ್ಲಿದ್ದ ‘ಚಕ್ರವ್ಯೂಹ’ ಸಿನಿಮಾ ನಿರ್ದೇಶಿಸಿದ್ದ ಸರವಣನ್ ಇದೀಗ ಮತ್ತೊಮ್ಮೆ ಕನ್ನಡ ಸಿನಿಮಾ ನಿರ್ದೇಶಿಸಲಿದ್ದಾರೆ. ತಮಿಳು ಹಾಗೂ ಕನ್ನಡದಲ್ಲಿ ಈ ಸಿನಿಮಾ ಚಿತ್ರೀಕರಣಗೊಳ್ಳಲಿದ್ದು, ಇತರೆ ಭಾಷೆಗಳಿಗೆ ಡಬ್ ಆಗಲಿದೆ ಎನ್ನಲಾಗಿದೆ. ಚಿತ್ರದ ತಾರಾಬಳಗದ ಬಗ್ಗೆ ಚಿತ್ರತಂಡ ಇನ್ನಷ್ಟೇ ಮಾಹಿತಿಯನ್ನು ಹಂಚಿಕೊಳ್ಳಬೇಕಿದೆ.

ಸಿನಿಪಯಣದಲ್ಲಿ 40 ವರ್ಷ ಪೂರೈಸಿ ಹೆಜ್ಜೆ ಇಡುತ್ತಿರುವ ಶಿವರಾಜ್‌ಕುಮಾರ್ ಅವರ ಸಿನಿಬ್ಯಾಂಕ್ ದಿನಗಳು ಉರುಳಿದಂತೆ ಹಿಗ್ಗುತ್ತಿದೆ. ಕನ್ನಡದಲ್ಲಿ ‘666 ಆಪರೇಷನ್ ಡ್ರೀಮ್ ಥಿಯೇಟರ್’, ‘ಎ ಫಾರ್ ಆನಂದ್’, ‘ಬೈಲ್’, ‘ಡ್ಯಾಡ್’, ತಮಿಳಿನ ‘ಜೈಲರ್ 2’, ತೆಲುಗಿನ ‘ಪೆದ್ದಿ’, ‘ಗುಮ್ಮಡಿ ನರಸಯ್ಯ’ ಪ್ರಾಜೆಕ್ಟ್‌ಗಳು ಸದ್ಯ ಅವರ ಕೈಯಲ್ಲಿದೆ.

ಎ.24ಕ್ಕೆ ‘ಜೆರಾಕ್ಸ್’ ಬಿಡುಗಡೆ

ಜೆರಾಕ್ಸ್

ಶ್ರೀನಿಧಿ ಬೆಂಗಳೂರು ನಿರ್ದೇಶನದ, ನಾಗಭೂಷಣ್ ಮುಖ್ಯಭೂಮಿಕೆಯಲ್ಲಿರುವ ‘ಜೆರಾಕ್ಸ್’ ವೆಬ್‌ಸರಣಿ ಎ.24ರಿಂದ ಜೀ5ನಲ್ಲಿ ಸ್ಟ್ರೀಮ್ ಆಗಲಿದೆ. ಇತ್ತೀಚೆಗೆ ಇದರ ಟ್ರೇಲರ್ ಬಿಡುಗಡೆಯಾಗಿದೆ.

ಆರು ಸಂಚಿಕೆಗಳನ್ನು ಒಳಗೊಂಡ ಈ ಸರಣಿಯನ್ನು ಡಾಲಿ ಧನಂಜಯ ಅವರು ತಮ್ಮ ಡಾಲಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದಾರೆ. ‘ಮಳವಳ್ಳಿಯ ರಾಯದುರ್ಗದ ಪ್ರಕಾಶ (ನಾಗಭೂಷಣ್) ಜೆರಾಕ್ಸ್ ಅಂಗಡಿಯಲ್ಲಿ ಕೆಲಸಗಾರನಾಗಿರುತ್ತಾನೆ. ಅವನ ಜೆರಾಕ್ಸ್ ಯಂತ್ರಕ್ಕೆ ಒಂದು ಶಕ್ತಿಯುತ ತಾಯತ ತಾಗಿದಾಗ ಅವನ ಜೀವನ ಬದಲಾಗುತ್ತದೆ. ಅವನು ತೆಗೆಯುವ ಜೆರಾಕ್ಸ್ ಪ್ರತಿಗಳಿಗೆ ಜೀವ ಬರುತ್ತದೆ. ಇದರಿಂದ ಆಗುವ ಬದಲಾವಣೆಗಳು, ಊರಿನಲ್ಲಾಗುವ ಘಟನೆಗಳೇ ಸರಣಿಯ ಕಥೆ’ ಎಂದಿದೆ ತಂಡ.

ಪಾಯಲ್ ಚೆಂಗಪ್ಪ, ಮಂಜು ಪಾವಗಡ, ಓಂ ಪ್ರಕಾಶ್ ರಾವ್, ಶ್ರೀವತ್ಸ, ಯಶವಂತ್ ಶೆಟ್ಟಿ, ವಿಜಯ್ ಪ್ರಸಾದ್, ತುಕಾಲಿ ಸಂತು, ಜಗ್ಗಪ್ಪ, ಸಿದ್ದು ಮಂಡ್ಯ, ಸುಧಾಕರ್ ಗೌಡ ಮುಂತಾದವರು ಸರಣಿಯಲ್ಲಿ ನಟಿಸಿದ್ದಾರೆ.

‘ಜೈಲರ್–2’ಗೂ ಪೈರಸಿ ಭಯ

ತಮಿಳು ಚಿತ್ರೋದ್ಯಮ ಸದ್ಯ ಸಿನಿಮಾ ಪೈರಸಿ ಭಯ ಎದುರಿಸುತ್ತಿದೆ. ಇತ್ತೀಚೆಗಷ್ಟೇ ವಿಜಯ್ ನಟನೆಯ ‘ಜನ ನಾಯಗನ್’ ಚಿತ್ರದ ಪ್ರಮುಖ ದೃಶ್ಯಗಳು ಸೋರಿಕೆಯಾಗಿದ್ದವು. ಅದರ ಬೆನ್ನಲ್ಲೇ ರಜನಿಕಾಂತ್ ನಟನೆಯ ‘ಜೈಲರ್–2’ ಚಿತ್ರ ಕೂಡ ಸೋರಿಕೆಯ ಆತಂಕವನ್ನು ಹೆಚ್ಚಿಸಿದೆ. ಚಿತ್ರದ ಚಿತ್ರೀಕರಣ ಸ್ಥಳದ ವಿಡಿಯೊವೊಂದು ಹರಿದಾಡುತ್ತಿದ್ದು, ಅದರ ಬೆನ್ನಲ್ಲೇ ನಿರ್ಮಾಣ ಸಂಸ್ಥೆಯಾದ ಸನ್ ಪಿಕ್ಚರ್ಸ್ ಕಠಿಣ ಕ್ರಮ ಮತ್ತು ಕಾನೂನು ಹೋರಾಟದ ಎಚ್ಚರಿಕೆ ನೀಡಿದೆ.

ನೆಲ್ಸನ್ ದಿಲೀಪ್‌ಕುಮಾರ್ ನಿರ್ದೇಶನದ ಚಿತ್ರದ ಚಿತ್ರೀಕರಣ ಮುಕ್ತಾಯದ ಹಂತದಲ್ಲಿದೆ. ‘ಜೈಲರ್’ ಯಶಸ್ವಿ ಬಳಿಕ ದೊಡ್ಡ ಬಜೆಟ್‌ನಲ್ಲಿ ಈ ಚಿತ್ರ ನಿರ್ಮಾಣಗೊಳ್ಳುತ್ತಿದ್ದು, ದೊಡ್ಡ ಮಟ್ಟದಲ್ಲಿ ಗಳಿಕೆ ನಿರೀಕ್ಷೆ ಇದೆ. ಹೀಗಾಗಿ ಚಿತ್ರತಂಡ ಈಗಲಿಂದಲೇ ಪೈರಸಿ ವಿರುದ್ಧ ಮುನ್ನೆಚ್ಚರಿಕೆ ಕ್ರಮಗಳಿಗೆ ಮುಂದಾಗಿದೆ. ಚಿತ್ರದ ಯಾವುದೇ ಅಧಿಕೃತವಲ್ಲದ ವಿಡಿಯೊ ತುಣುಗಳನ್ನು ಹಂಚಿಕೊಳ್ಳದಂತೆ ಸನ್ ಪಿಕ್ಚರ್ಸ್ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಮಾನಿಗಳಿಗೆ ಮನವಿ ಮಾಡಿದೆ. ಒಂದೊಮ್ಮೆ ಯಾವುದೇ ಪೈರಸಿ ವಿಡಿಯೊ ಮರು ಹಂಚಿಕೆ ಮಾಡಿದರೆ, ಅವರ ವಿರುದ್ಧವೂ ಕಠಿಣ ಕ್ರಮದ ಎಚ್ಚರಿಕೆ ನೀಡಿದೆ.

ಈ ಚಿತ್ರದಲ್ಲಿ ಬಹುಭಾಷಾ ತಾರೆಯರ ಬಳಗವೇ ಇದೆ. ಮೋಹನ್ ಲಾಲ್, ವಿಜಯ್ ಸೇತುಪತಿ, ಮಿಥುನ್ ಚಕ್ರವರ್ತಿ, ಶಿವರಾಜ್‌ಕುಮಾರ್ ಮತ್ತು ವಿದ್ಯಾ ಬಾಲನ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ‘ಜೈಲರ್’ ₹700 ಕೋಟಿಗೂ ಅಧಿಕ ಗಳಿಕೆ ಕಂಡಿದ್ದು, ಈ ಭಾಗ ಅದಕ್ಕೂ ಹೆಚ್ಚು ಯಶಸ್ಸು ಕಾಣಲಿದೆ ಎಂಬ ಲೆಕ್ಕಾಚಾರದಲ್ಲಿದೆ ಚಿತ್ರತಂಡ. ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಚಿತ್ರಕ್ಕೆ ಅನಿರುದ್ಧ್ ಸಂಗೀತ ನೀಡುತ್ತಿದ್ದಾರೆ.

‘ಜನ ನಾಯಗನ್’ ಪೈರಸಿ ಸದ್ಯ ತಮಿಳುನಾಡು ಚಿತ್ರೋದ್ಯಮದಲ್ಲಿ ಬಿರುಗಾಳಿ ಎಬ್ಬಿಸಿದೆ. ಬೃಹತ್ ಗಳಿಕೆ ನಿರೀಕ್ಷಿತ ಸಿನಿಮಾವೊಂದು ಕೇಬಲ್ ವಾಹಿನಿಯಲ್ಲಿ ಬಿತ್ತರಗೊಂಡಿರುವುದು ದೊಡ್ಡ ನಿರ್ಮಾಣ ಸಂಸ್ಥೆಗಳನ್ನು ಚಿಂತೆಗೀಡು ಮಾಡಿವೆ. ಹೀಗಾಗಿ ಬೃಹತ್ ಬಜೆಟ್ ಸಿನಿಮಾ ನಿರ್ಮಾಣ ಸಂಸ್ಥೆಗಳು ಪ್ರಾರಂಭದಲ್ಲಿಯೇ ಕಾನೂನು ರಕ್ಷಣೆ ಮೊರೆ ಹೋಗಿವೆ.

ಕಿಶೋರಿಯರಿಗೆ ‘ಎಚ್‌ಪಿವಿ’ ರಕ್ಷೆ

• ವರುಣ ಹೆಗಡೆ

ಗರ್ಭಕಂಠದ ಕ್ಯಾನ್ಸರ್ ತಡೆಗೆ ಸಹಕಾರಿಯಾದ ‘ಹ್ಯೂಮನ್ ಪ್ಯಾಪಿಲೋಮ ವೈರಸ್’ (ಎಚ್‌ಪಿವಿ) ಲಸಿಕೆ ವಿತರಣಾ ಅಭಿಯಾನಕ್ಕೆ ರಾಜ್ಯದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, 14ರಿಂದ 15 ವರ್ಷದೊಳಗಿನ ಲಕ್ಷಕ್ಕೂ ಹೆಚ್ಚು ಕಿಶೋರಿಯರು ಈಗಾಗಲೇ ಲಸಿಕೆ ಪಡೆದಿದ್ದಾರೆ.

ಕೇಂದ್ರ ಸರ್ಕಾರವು ದೇಶದಾದ್ಯಂತ ಹಮ್ಮಿಕೊಂಡಿದ್ದ ಲಸಿಕಾ ಅಭಿಯಾನಕ್ಕೆ ಫೆಬ್ರುವರಿ 28ರಂದು ಚಾಲನೆ ಸಿಕ್ಕಿದೆ. ಈ ಅಭಿಯಾನದಡಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 5.08 ಲಕ್ಷ ಡೋಸ್‌ಗಳನ್ನು ಸರಬರಾಜು ಮಾಡಿದೆ. ಇದನ್ನು ಜಿಲ್ಲಾವಾರು ಹಂಚಿಕೆ ಮಾಡಿ, ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಪೂರೈಕೆ ಮಾಡಲಾಗಿದೆ. ಮಾರ್ಚ್‌ನಿಂದ ಮೇವರೆಗೆ ಹಮ್ಮಿಕೊಂಡಿರುವ ಅಭಿಯಾನದಡಿ, ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಈವರೆಗೆ 14 ವರ್ಷದ 1.45 ಲಕ್ಷಕ್ಕೂ ಅಧಿಕ ಹೆಣ್ಣುಮಕ್ಕಳಿಗೆ ಲಸಿಕೆ ಒದಗಿಸಲಾಗಿದೆ. ರಾಜ್ಯದಲ್ಲಿ ಸುಮಾರು 6 ಲಕ್ಷ ಹೆಣ್ಣುಮಕ್ಕಳು ಈ ಲಸಿಕೆಯ ಫಲಾನುಭವಿಗಳೆಂದು ಅಂದಾಜಿಸಲಾಗಿದೆ.

ನಿಯಮಿತ ತಪಾಸಣೆ, ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ, ಜಾಗೃತಿ ಸೇರಿ ವಿವಿಧ ಕ್ರಮಗಳಿಂದ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳ ಪ್ರಮಾಣ ಇಳಿಮುಖವಾಗುತ್ತಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಪ್ರಕಾರ, ದೃಢ ಕ್ಯಾನ್ಸರ್ ಪ್ರಕರಣಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಶೇ 16ರಷ್ಟಿದೆ. ರಾಜ್ಯದಲ್ಲಿ ಕಳೆದ ವರ್ಷ 89,165 ಸಕ್ರಿಯ ಕ್ಯಾನ್ಸರ್ ಪ್ರಕರಣಗಳಿರುವ ಬಗ್ಗೆ ಅಂದಾಜಿಸಲಾಗಿದೆ. ಅವುಗಳಲ್ಲಿ 4,476 ಪ್ರಕರಣಗಳು ಗರ್ಭಕಂಠ ಕ್ಯಾನ್ಸರ್‌ಗೆ ಸಂಬಂಧಿಸಿದವು.

ನಾನಾ ಕಾರಣ: ಎಚ್‌ಪಿವಿಯ ವಿವಿಧ ತಳಿಗಳು ಗರ್ಭಕಂಠ ಕ್ಯಾನ್ಸರ್‌ಗೆ ಮುಖ್ಯ ಕಾರಣವಾಗಿವೆ. ಸಣ್ಣ ವಯಸ್ಸಿನಲ್ಲಿಯೇ ವಿವಾಹ, ಅಶುಚಿತ್ವ, ಹೆಚ್ಚು ಬಾರಿ ಗರ್ಭ ಧರಿಸುವುದು, ಗರ್ಭನಿರೋಧಕಗಳ ಬಳಕೆ, ಧೂಮಪಾನ, ಮದ್ಯಪಾನ, ಮಾದಕದ್ರವ್ಯಗಳ ವ್ಯಸನ, ಸ್ಟಿರಾಯ್ಡ್ ಔಷಧಗಳ ಬಳಕೆ, ಎಚ್‌ಐವಿಯಂತಹ ಕಾಯಿಲೆಗಳು ಈ ಕ್ಯಾನ್ಸರ್‌ಗೆ ಕಾರಣವಾಗುತ್ತಿವೆ. ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಈ ವಿಧದ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿಯಾಗಿದ್ದು, ಈ ಲಸಿಕೆಯು ಕ್ಯಾನ್ಸರ್ ಕೋಶಗಳ ವಿರುದ್ಧ ನಿರೋಧಕ ಶಕ್ತಿಯನ್ನು ವೃದ್ಧಿಸಲಿದೆ.

‘ಎಚ್‌ಪಿವಿ ಲಸಿಕೆಯಿಂದ ಗರ್ಭಕಂಠ ಕ್ಯಾನ್ಸರ್ ಅನ್ನು ಶೇ 95ರಷ್ಟು ತಡೆಯಲು ಸಾಧ್ಯ. 9ರಿಂದ 15 ವರ್ಷದೊಳಗಿನವರಿಗೆ ಲಸಿಕೆಗೆ ಶಿಫಾರಸು ಮಾಡಲಾಗುತ್ತದೆ. ಲಸಿಕೆ ಪಡೆದವರಲ್ಲಿ ಕೆಲವರಿಗೆ ಜ್ವರ, ತಲೆನೋವು, ಊತದಂತಹ ಸಾಮಾನ್ಯ ಅಡ್ಡಪರಿಣಾಮಗಳು ಮಾತ್ರ ಕಾಣಿಸಿಕೊಳ್ಳುತ್ತವೆ. ಈ ಲಸಿಕೆ ಸುರಕ್ಷಿತವಾಗಿದೆ. ಖಾಸಗಿ ವ್ಯವಸ್ಥೆಯಡಿ ಈ ಲಸಿಕೆ ದುಬಾರಿಯಾಗಿದ್ದು, ಒಂದು ಡೋಸ್‌ಗೆ ₹ 10 ಸಾವಿರದವರೆಗೂ ಬೆಲೆ ನಿಗದಿಪಡಿಸಲಾಗಿದೆ’ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಕ್ಯಾನ್ಸರ್ ತಜ್ಞರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದಿಂದಲೂ ಲಸಿಕೆ ವಿತರಣೆ

ಗರ್ಭಕಂಠ ಕ್ಯಾನ್ಸರ್ ತಡೆಗೆ 9ರಿಂದ 14 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಎರಡು ಡೋಸ್ ಎಚ್‌ಪಿವಿ ಲಸಿಕೆ ಒದಗಿಸುವ ಬಗ್ಗೆ ಈ ಹಿಂದೆ ತಜ್ಞರ ಸಮಿತಿಯು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದರ ಅನುಸಾರ, ಗಣಿಬಾಧಿತ ಜಿಲ್ಲೆಗಳಲ್ಲಿ 14 ವರ್ಷದ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ ವಿತರಿಸಲು ರಾಜ್ಯ ಸರ್ಕಾರ ಕಳೆದ ವರ್ಷ ಕ್ರಮ ಕೈಗೊಂಡಿತ್ತು.

ತುಮಕೂರು, ಚಿತ್ರದುರ್ಗ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ 8 ತಾಲ್ಲೂಕುಗಳಿಂದ, ಬಿಪಿಎಲ್ ಕುಟುಂಬದ 14 ವರ್ಷದ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ ವಿತರಿಸಲು 37,470 ಫಲಾನುಭವಿಗಳನ್ನು ಗುರುತಿಸಲಾಗಿತ್ತು. ಈ ಲಸಿಕೆ ವಿತರಣೆಗೆ ಒಟ್ಟು ₹ 4.74 ಕೋಟಿ ಅನುದಾನಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿತ್ತು.

> **ಗರ್ಭಕಂಠ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ. ಹದಿಹರೆಯದ ಹುಡುಗಿಯರು ಇದನ್ನು ಪಡೆಯಬೇಕು. ಮಹಿಳೆಯರು ನಿಯಮಿತ ತಪಾಸಣೆಗೆ ಒಳಗಾಗಬೇಕು**
> **ಡಾ. ಟಿ.ನವೀನ್**
> ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

> **ಎಚ್‌ಪಿವಿ ಲಸಿಕೆ ವಿತರಣೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. 14 ವರ್ಷದ ಹೆಣ್ಣುಮಕ್ಕಳು ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಈ ಲಸಿಕೆ ಪಡೆಯಬೇಕು**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಗೊತ್ತೇ ಕರಿಬೇವಿನ ಮಹತ್ವ? ಬೆನ್ನುನೋವಿಗಿದು ರಾಮಬಾಣ

ಕರಿಬೇವಿಲ್ಲದ ಅಡುಗೆ ಬಹುಶಃ ಯಾರ ಮನೆಯಲ್ಲೂ ಪರಿಪೂರ್ಣ ಎನಿಸುವುದೇ ಇಲ್ಲ. ಎಂಥಾ ಅಡುಗೆಯಿದ್ದರೂ ಸರಿ, ಮೇಲೊಂದು ಕರಿಬೇವಿನ ಒಗ್ಗರಣೆ ಬಿದ್ದುಬಿಟ್ಟರೆ ಅದರ ರುಚಿಯ ಪರಮಾರ್ಥವೇ ಬೇರೆ. ಕರಿಬೇವಿಲ್ಲದ ಅಡುಗೆಯೆಂದರೆ ಸರ್ವಾಭರಣಭೂಷಿತೆ ತಿಲಕವಿಡದೆ ನಿಂತಂತೆಯೇ ಸರಿ.

ಇಷ್ಟಿದ್ದರೂ ಊಟ ಮಾಡುವವರು ಮಾತ್ರ ಅಡುಗೆ ಜೊತೆಗೆ ಬರುವ ಕರಿಬೇವನ್ನು ಆಹಾರದ ಜೊತೆಗೆ ತಿನ್ನುವುದು ಕಡಿಮೆಯೇ. ಬಹುತೇಕರು ಎಲೆಯ ಅಥವಾ ತಟ್ಟೆಯ ತುದಿಗೆ ಅದನ್ನು ಎತ್ತಿ ಇಟ್ಟೇ ಚೆಲ್ಲುತ್ತಾರೆ. ಇದೊಂಥರಾ ಮಕ್ಕಳು ಆಟವಾಡುವಾಗ ಕೆಲವರನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ನಡೆಸಿಕೊಳ್ಳುತ್ತಾರಲ್ಲಾ ಹಾಗೆ.

ನಿಜಕ್ಕೂ ಕರಿಬೇವಿನಲ್ಲಿರುವ ಪೌಷ್ಟಿಕಾಂಶ ಅಗಾಧ. ಕರಿಬೇವನ್ನು ತಿನ್ನುವುದರಿಂದ ಆಗುವ ಪ್ರಯೋಜನಗಳು ಗೊತ್ತಾದರೆ ಖಂಡಿತ ನೀವಿನ್ನು ಅದನ್ನು ತಿನ್ನದೇ ಬಿಸಾಡುವುದಿಲ್ಲ. ಫಾಸ್ಫರಸ್, ಕ್ಯಾಲ್ಸಿಯಂ, ಪೊಟಾಷಿಯಂ, ಕ್ಲೋರೈಡ್, ಬೀಟಾಕೆರೋಟಿನ್, ನಿಯಾಸಿನ್, ಫೋಲಿಕ್ ಆ್ಯಸಿಡ್, ವಿಟಮಿನ್ ‘ಸಿ’ ಹೀಗೆ ಆರೋಗ್ಯಕರ, ರೋಗನಿರೋಧಕ ಶಕ್ತಿಯನ್ನು ಒಳಗೊಂಡು, ದೇಹಕ್ಕೆ ಏನೇನು ಬೇಕೋ ಅದೆಲ್ಲವೂ ಕರಿಬೇವಿನಲ್ಲಿವೆ.

ಕರಿಬೇವಿನ ಎಲೆಗಳು ಉರಿಯೂತ ನಿವಾರಕ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದ್ದು, ದೇಹದಲ್ಲಿನ ಉರಿಯೂತವನ್ನು ಕಡಿಮೆ ಮಾಡುವುದರ ಜೊತೆಗೆ ದೇಹವನ್ನು ಸೋಂಕಿನಿಂದ ರಕ್ಷಿಸುತ್ತವೆ. ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರಹಾಕುವ ವಿಶೇಷ ಗುಣ ಇದರಲ್ಲಿ ಇರುವುದರಿಂದ, ಡೀಟಾಕ್ಸ್ ಮಾಡುವವರು ಇದನ್ನು ನೀರಿನೊಂದಿಗೆ ಕುದಿಸಿ, ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು ಎನ್ನುತ್ತಾರೆ ತಜ್ಞರು.

ಇನ್ನು ಇದು ನೋವನ್ನು ನಿವಾರಿಸಲು ಸಹಾಯ ಮಾಡುತ್ತದೆ. ಕರಿಬೇವಿನ ಎಲೆಗಳ ಸೇವನೆಯು ಸರ್ವಿಕಲ್ ಸ್ಪಾಂಡಿಲೋಸಿಸ್‌ನಂಥ ಸಮಸ್ಯೆಯ ನಿವಾರಣೆಗೂ ಬಳಕೆಯಾಗುತ್ತದೆ. ದೀರ್ಘಕಾಲದ ನೋವು, ಸುದೀರ್ಘ ಪ್ರಯಾಣ, ವಾಹನ ಚಾಲನೆಯಂಥ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಬೆನ್ನುನೋವಿನ ನಿವಾರಣೆಗೂ ಕರಿಬೇವು ರಾಮಬಾಣ.

ಇದಲ್ಲದೇ ಮೆದುಳಿನ ಆರೋಗ್ಯ ವೃದ್ಧಿ, ನೆನಪಿನ ಶಕ್ತಿ ಸುಧಾರಣೆಗೂ ಕರಿಬೇವು ಸಹಾಯ ಮಾಡುತ್ತದೆ. ಮಿದುಳಿಗೆ ಅಗತ್ಯವಾದ ಗ್ಲುಟಾಥಿಯೋನ್ ಪೆರಾಕ್ಸಿಡೇಸ್ (GPX), ಸೂಪರ್‌ಆಕ್ಸೈಡ್ ಡಿಸ್ಮುಟೇಸ್ (SOD) ಮತ್ತು ಗ್ಲುಟಾಥಿಯೋನ್ ರಿಡಕ್ಟೇಸ್ (GRD) ಎಂಬ ಅಂಶಗಳನ್ನು ಸಹ ಕರಿಬೇವು ಹೊಂದಿದೆ. ಇದರಿಂದ ಆಕ್ಸಿಡೇಟಿವ್ ಹಾನಿ ಮತ್ತು ಅಲ್ಜೈಮರ್‌ನಂಥ ಸಮಸ್ಯೆ ನಿವಾರಣೆಗೆ ಸಹಾಯ ಆಗುತ್ತದೆ.

ಇಂಥ ಕರಿಬೇವಿನಿಂದ ರುಚಿಕರ ತಂಬುಳಿ ಮಾಡಿ ಉಂಡರೆ? ಬೇಸಿಗೆಯ ಈ ಬಿಸಿಲಿಗೆ ಕರಿಬೇವಿನ ತಂಬುಳಿ ಹೇಳಿ ಮಾಡಿಸಿದ ರೆಸಿಪಿ. ಮಾಡುವುದೂ ಸುಲಭ.

ಎಳೆಯ ಒಂದು ಮುಷ್ಟಿ ಕರಿಬೇವಿನ ಎಲೆಗಳನ್ನು ಸ್ವಚ್ಛಗೊಳಿಸಿ, ತುಸು ತುಪ್ಪದಲ್ಲಿ ಬಾಡಿಸಿ, ಅದಕ್ಕೆ ಅರ್ಧ ಸ್ಪೂನ್ ಜೀರಿಗೆ, ಎಂಟರಿಂದ ಹತ್ತು ಕರಿಮೆಣಸಿನಕಾಳು, ತೆಂಗಿನತುರಿ ಸೇರಿಸಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ನುಣ್ಣಗೆ ರುಬ್ಬಿ. ಆ ಮಿಶ್ರಣಕ್ಕೆ ಕಡೆದ ಮಜ್ಜಿಗೆ ಒಂದು ಕಪ್ ಸೇರಿಸಿ, ಮೇಲಿಂದ ತುಪ್ಪ- ಜೀರಿಗೆಯ ಒಗ್ಗರಣೆ ಕೊಟ್ಟು ನೋಡಿ, ಘಮಘಮಿಸುವ ತಂಬುಳಿ ಸಿದ್ಧ. ಅನ್ನದೊಂದಿಗೆ ಕಲೆಸಿ ಉಣ್ಣಲು, ಹಾಗೆಯೇ ಕುಡಿಯಲು ಸಹ ಯೋಗ್ಯ. ಉತ್ತಮ ಜೀರ್ಣಕಾರಿ ಸಹ.

ಏನಿದು ಸೂರ್ಯಾಘಾತ? ಪರಿಹಾರವೇನು?

ಮುಂಜಾಗ್ರತಾ ಕ್ರಮ

- ಬೇಸಿಗೆಯ ಬಿಸಿಲಿನಲ್ಲಿ ಅನವಶ್ಯವಾಗಿ ಅಡ್ಡಾಡದಿರುವುದು ಕ್ಷೇಮಕರ.
- ತಲೆಗೆ ಟೋಪಿ ಹಾಕಿಕೊಂಡು ಬಿಸಿಲಿನಿಂದ ರಕ್ಷಣೆ ಪಡೆಯಬೇಕು. ಛತ್ರಿಯನ್ನು ಬಳಸಬಹುದು.
- ಬಿಸಿಲಲ್ಲಿ ಎಂದೂ ದಣಿವಾಗುವಂತಹ ವ್ಯಾಯಾಮ ಮಾಡಬಾರದು. ಯಥೇಚ್ಛ ಭೋಜನ, ಮದ್ಯಪಾನ ಮಾಡುವುದು ಒಳ್ಳೆಯದಲ್ಲ.
- ಬೇಸಿಗೆಯ ಬಿಸಿಲಲ್ಲಿ ಮನೆ ಬಿಟ್ಟು ಹೊರಗೆ ಹೋಗುವ ಪೂರ್ವದಲ್ಲಿ ಮತ್ತು ಹೋಗಬೇಕಾದ ಸ್ಥಳಕ್ಕೆ ಹೋಗಿ ಮುಟ್ಟಿದ ನಂತರ ಸಾಕಷ್ಟು ನೀರು ಕುಡಿಯಬೇಕು. ನೈಸರ್ಗಿಕ ಪೇಯಗಳಾದ ಎಳನೀರು, ಲಸ್ಸಿ, ಮಜ್ಜಿಗೆ ಅಂತಹವುಗಳನ್ನು ಸೇವಿಸಬೇಕು. ನಿಂಬೆಹಣ್ಣಿನ ಪಾನಕ, ಹಣ್ಣಿನರಸ ಸೇವಿಸಬೇಕು.
- ಬೇಸಿಗೆಯ ಕಾಲದಲ್ಲಿ ಸಡಿಲಾದ, ಬಿಳಿ ಬಣ್ಣದ ಹತ್ತಿ ಬಟ್ಟೆ ಧರಿಸುವುದು ಒಳ್ಳೆಯದು. ಗಾಢ ಬಣ್ಣದ ಮತ್ತು ಕಪ್ಪು ಬಟ್ಟೆಗಳನ್ನು ಬಳಸದಿರುವುದು ಸೂಕ್ತ.
- ವಿಪರೀತ ಬಿಸಿಲು ಇರುವ ಸಮಯದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ತೀವ್ರ ಬಿಸಿಲಿನಲ್ಲಿ ಕೆಲಸ ಮಾಡಬಾರದು.
- ರಕ್ಷಣಾ ಸಾಧನಗಳನ್ನು ಬಳಸದೇ ಬಿಸಿಲಲ್ಲಿ ತಿರುಗಾಡುವುದೆಂದರೆ, ಬಿಸಿಲಿನಿಂದ ಆಗುವ ದುಷ್ಪರಿಣಾಮಗಳನ್ನು ಆದರದಿಂದ ಸ್ವಾಗತಿಸಿದಂತೆಯೇ ಸರಿ.

• ಡಾ. ಕರವೀರಪ್ರಭು ಕ್ಯಾಲಕೊಂಡ

ಕಾಳಜಿ

ಈ ವರ್ಷದ ಬಿಸಿಲು ಬೆಂಕಿಯಾಗಿದೆ. ತಾಪದ ಬಿಸಿ ಎಲ್ಲರಿಗೂ ತಟ್ಟುತ್ತಿದೆ. ಇದು ಪ್ರತಿವರ್ಷ ಬೇಸಿಗೆಯಲ್ಲಿ ಇದ್ದದ್ದೇ. ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ಬಿರುಬಿಸಿಲಲ್ಲಿ ಕಾದ ಕಲ್ಲಿನ ಮೇಲೆ ಆಮ್ಲೆಟ್ ಮಾಡಿರುವ ಸುದ್ದಿಯನ್ನು ನೀವು ಓದಿರಬಹುದು.

ಈ ವಿಪರೀತ ಬಿಸಿಲಿನ ಕಾರಣದಿಂದ ದೇಹಕ್ಕೆ ಉಂಟಾಗುವ ಆಘಾತವನ್ನು ‘ಸನ್ ಸ್ಟ್ರೋಕ್’ ಎನ್ನುತ್ತಾರೆ. ಮಾನವನು ಉಷ್ಣಾಂಶವನ್ನು ಎಷ್ಟರಮಟ್ಟಿಗೆ ಸಹಿಸಬಲ್ಲ ಎನ್ನುವುದರ ಬಗ್ಗೆ ಅನೇಕ ಸಂಶೋಧನೆಗಳು, ಅಧ್ಯಯನಗಳು ಅವ್ಯಾಹತವಾಗಿ ನಡೆದಿವೆ. ಮರುಭೂಮಿಯಲ್ಲಿ ವಾಸಿಸುವ ಜನರನ್ನು ಅಭ್ಯಸಿಸಿ ಅನೇಕ ಮಾಹಿತಿಗಳನ್ನು ಕಲೆಹಾಕಲಾಗಿದೆ. ಈ ಕುರಿತು ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ, ಚರ್ಚಿಸಿದ್ದಾರೆ. ಈ ಕ್ಷೇತ್ರದ ಸಂಶೋಧನೆಯಲ್ಲಿ ಅಮೆರಿಕದ ಡಾ. ನ್ಯೂಬರ್ಗ್ ಅಗ್ರಗಣ್ಯರು. ಶರೀರವು ನಾವು ಸಾಮಾನ್ಯವಾಗಿ ಎಣಿಸುವುದಕ್ಕಿಂತ ಹೆಚ್ಚು ಪಟ್ಟು ಉಷ್ಣಾಂಷವನ್ನು ತಡೆಯುವ ತಾಕತ್ತು ಹೊಂದಿದೆ ಎಂಬುದು ಅವರ ಅಧ್ಯಯನಗಳಿಂದ ಸ್ಪಷ್ಟವಾಗಿದೆ.

ಆದರೂ ನಾವು ಬೇಸಿಗೆಯಲ್ಲಿ ಬಿಸಿಲಿನ ಬಳಲಿಕೆ, ಸೂರ್ಯಾಘಾತ (Sun stroke), ಉಷ್ಣಾಘಾತಗಳಿಂದ (Heat stroke) ರಕ್ಷಿಸಿಕೊಳ್ಳಬೇಕು. ಅಲಕ್ಷ್ಯ ಮಾಡಿದರೆ ಅನಾಹುತಗಳಿಗೆ ಆಹ್ವಾನ ನೀಡಿದಂತೆ ಆಗುತ್ತದೆ.

ಸೂರ್ಯಾಘಾತ, ಉಷ್ಣಾಘಾತ: ಸೂರ್ಯನ ಪ್ರಖರ ಕಿರಣಗಳಿಗೆ ದೀರ್ಘಕಾಲದವರೆಗೆ ಮೈಯೊಡ್ಡುವುದರಿಂದ ಸೂರ್ಯಾಘಾತ ಸಂಭವಿಸುತ್ತದೆ. ಅತ್ಯಂತ ಉಷ್ಣ ವಾತಾವರಣದಿಂದ ಸುತ್ತುವರಿದ ಕೋಣೆಯಲ್ಲಿ ಕೆಲಸ ಮಾಡುವವರು ಉಷ್ಣಾಘಾತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು. ಉರಿಬಿಸಿಲಿನಲ್ಲಿ ಬಕ್ಕ ತಲೆಯಲ್ಲಿ ಸುತ್ತುವ, ತಳ್ಳುಗಾಡಿಯ ಮೂಲಕ ದುಡಿದು ಹೊಟ್ಟೆ ತುಂಬಿಸಿಕೊಳ್ಳುವ ಕೂಲಿ ಕೆಲಸಗಾರರು ಸೂರ್ಯಾಘಾತಕ್ಕೆ ತುತ್ತಾಗಬಹುದು. ದೇಶಸೇವೆ ಮಾಡುವ ಬಿಸಿರಕ್ತದ ತರುಣರು ಉಷ್ಣಾಘಾತದ ಪರಿಣಾಮಗಳನ್ನು ಅನುಭವಿಸಬಹುದು. ಬಿಸಿಲಿನ ಬೇಗೆ ಉಂಟು ಮಾಡುವ ದುಷ್ಪರಿಣಾಮಗಳನ್ನು ಹೋಗಲಾಡಿಸಲು, ವೈದ್ಯಕೀಯ ಸೌಲಭ್ಯಗಳಿಂದ ವಂಚಿತವಾದ ಪ್ರದೇಶಗಳಿಗೆ ವೈದ್ಯರು ಹೋಗಿ ಚಿಕಿತ್ಸೆ ನೀಡುವ ಮೊದಲೇ ಆಗಬಹುದಾದ ಅನಾಹುತಗಳನ್ನು ತಪ್ಪಿಸಲು ಪ್ರತಿಯೊಬ್ಬರಲ್ಲೂ ಅರಿವು, ಸಾಮೂಹಿಕ ಜಾಗೃತಿ ಮೂಡಿಸುವುದು ಅವಶ್ಯ.

ಸಿಡಿಯುವಂಥ ತಲೆನೋವಿನೊಂದಿಗೆ ವಿಪರೀತ ಜ್ವರವು ಸೂರ್ಯಾಘಾತದ ಮುಖ್ಯ ಲಕ್ಷಣ. ತಲೆ ಸುತ್ತಬಹುದು. ಸುಸ್ತು, ವಾಕರಿಕೆ, ವಾಂತಿ ಆಗಬಹುದು. ದೌರ್ಬಲ್ಯ, ಸ್ನಾಯು ಸೆಳೆತ ಮತ್ತು ಸ್ನಾಯುಗಳಲ್ಲಿ ನೋವು ಕಂಡುಬರುವುದು. ರಕ್ತದ ಒತ್ತಡ ಕಡಿಮೆಯಾಗುವುದು. ಭ್ರಮೆ, ಗೊಂದಲ, ಗಡಿಬಿಡಿ, ತಳಮಳ, ದಿಗ್ಭ್ರಮೆ, ಚಿತ್ರವಿಚಿತ್ರ ನಡವಳಿಕೆಗಳು ಕಂಡುಬರಬಹುದು. ಚರ್ಮವು ಬಿಸಿಯಾಗಿದ್ದು, ಒಣಗುವುದು. ಮುಖ ಕೆಂಪಾಗಬಹುದು. ಇಷ್ಟಾದರೂ ಮೈ ಬೆವರುವುದಿಲ್ಲ. ಹೊಟ್ಟೆಯಲ್ಲಿ ಕಿಚ್ಚು ತುಂಬಿದಷ್ಟು ಸಂಕಟವಾಗುತ್ತದೆ. ಚಡಪಡಿಸಿ ಒಮ್ಮಿಂದೊಮ್ಮೆಲೇ ಪ್ರಜ್ಞಾಹೀನರಾಗಬಹುದು. ನಾಡಿಬಡಿತ ತ್ವರಿತಗೊಳ್ಳುವುದು. ಜ್ವರ 108 ಡಿಗ್ರಿ ಫ್ಯಾರನ್ ಹೀಟ್ ಅಥವಾ ಅದಕ್ಕಿಂತ ಅಧಿಕವಾಗಬಹುದು.

ಹೀಗಿರಲಿ ಪ್ರಥಮ ಉಪಚಾರ: ಜ್ವರ ಒಂದೇ ಸಮನೆ ಹೆಚ್ಚಾಗುವಾಗ ವೈದ್ಯರನ್ನು ಕರೆತರಲು ಆತುರ ಪಡದೆ, ಪ್ರಥಮೋಪಚಾರ ನೀಡುವುದು ಅತ್ಯಂತ ಪ್ರಮುಖವಾದದ್ದು. ರೋಗಿಯನ್ನು ಮಲಗಿಸಿ ಹಣೆಯ ಮೇಲೆ ತಣ್ಣೀರ ಪಟ್ಟಿ ಹಾಕಬೇಕು. ಮೈಯನ್ನು ಒದ್ದೆ ಅರಿವೆಯಿಂದ ಒರೆಸಬೇಕು. ಒದ್ದೆ ಬಟ್ಟೆಗಳನ್ನು ತೊಡಿಸಬೇಕು. ಐಸ್ ತುಂಡುಗಳನ್ನು ಬಟ್ಟೆಯಲ್ಲಿ ಸುತ್ತಿ ತಲೆ, ಕುತ್ತಿಗೆ ಮತ್ತು ಶರೀರದ ಸುತ್ತ ಇಡಬೇಕು. ರೋಗಿಯ ಸುತ್ತಮುತ್ತ ಜನ ಮುತ್ತುವುದನ್ನು ತಪ್ಪಿಸಿ, ಸಾಕಷ್ಟು ಗಾಳಿ ಆಡುವಂತೆ ಮಾಡಬೇಕು. ಫ್ಯಾನ್ ಹಾಕಬೇಕು. ರೋಗಿಯ ಕೈಕಾಲುಗಳನ್ನು ಉಜ್ಜಿ, ರಕ್ತಸಂಚಾರ ಆಗುವಂತೆ ಮಾಡಬೇಕು. ರೋಗಿಗೆ ಪ್ರಜ್ಞೆ ಬಂದ ಮೇಲೆ ತಂಪಾದ ಪಾನೀಯವನ್ನು ಕುಡಿಸಬೇಕು.

nandhana PARTY HALL
ನಂದನ®
ಪಾರ್ಟಿ ಹಾಲ್
ನಿಮ್ಮ ಸಮಾರಂಭವನ್ನು ವಿಶೇಷಗೊಳಿಸಿ

• ಹುಟ್ಟುಹಬ್ಬ • ನಿಶ್ಚಿತಾರ್ಥಗಳು • ನಾಮಕರಣ
• ಸಂತೋಷಕೂಟ • ಬೀಗರ ಔತಣ • ಆರತಕ್ಷತೆ
ಮೀಸಲಾತಿಗಾಗಿ ಕೂಡಲೇ ಕರೆ ಮಾಡಿ:
+91 99019 85642, 080 4613 1111
ನಮ್ಮ ಶಾಖೆಗಳು: ರಾಜಾಜಿನಗರ | ಕೋರಮಂಗಲ | ಕಮ್ಮನಹಳ್ಳಿ | ನ್ಯೂ ಬೆಲ್ ರೋಡ್ | ರಾಜರಾಜೇಶ್ವರಿ ನಗರ | ಸಹಕಾರ ನಗರ | ಕನಕಪುರ ರಸ್ತೆ | ಬೊಮ್ಮಸಂದ್ರ | ನಾಗರಭಾವಿ
www.nandhanarestaurants.com | banquets@nandhanahotels.com

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

SYA EDUCATIONAL INSTITUTIONS
Managed by : Sadashivanagar Youth Association (Regd)
S.Y.A. PRE-UNIVERSITY COLLEGE
Estd:1989
(Recognised by Govt. of Karnataka)
AECS Layout, 4th Main, Opp. Post office, Sanjaynagar, Bangalore-94. Ph: 080-23511832 Mob:9448716961
E-mail: syapuc65@gmail.com Web: www.syainstitutions.com

Heartly congratulation from the management & staff

State 13th Rank — SHALINI R (CEBA) 98%
State 20th Rank — MANASA S (CEBA) 97%

S.Y.A. PRE-UNIVERSITY COLLEGE 100% RESULTS

RAMYA SHREE (CEBA) 94%
FASIHA ANJUM (CEBA) 93%
BHUVAN OKAHDA (CEBA) 92%
DEEPTHI B V (CEBA) 92%
SRUSTI K (CEBA) 91.3%
SHASHI KUMAR Y (CEBA) 89%
THARAKRAM REDDY B (CEBA) 87%
JAVERIA BANU (CEBA) 85.1%
MOHAMMED AFNAN (CEBA) 84%
H SHANTHA KUMARI (CEBA) 83%
SANEYA BEGUM (CEBA) 83%

ADMISSIONS OPEN - 2026-27

Sri Bandeshwara Swamy Educational Society ®
S.B.S PU & DEGREE COLLEGE
Bandematta, Kommagatta Main Road, K.S.Town, Bengaluru - 560060

PU- 2 TOPPER 2025-26

JEEVA PRABHAKARA
State 5th Rank
CEBA -99.33%
ACC - 100, BS- 100
ECO-100, CS-100
KAN-99, ENG-97

SRIRAM ARUN — PCMB - 97.83% — PHY-100, CHE-96, MATHS-99, BIO-100, KAN-98, ENG-94
JEEVITH GOWDA R — PCMB - 97.83% — PHY-97.67, CHE-100, KAN-100
POOJA V — CEBA - 97.60% — ECO-100, BS-100, CS-100
DIKSHYA S — PCMC - 96.67% — CS-100
H R SUTEJ — PCMC - 96.67% — CS-100
VIKAS H C — PCMC - 96.67% — MATH -100
PALLAVI — PCMB-96.33% — MATH- 100
IMPANA.R — CEBA - 96.17%
DEEPIKA U — PCMC - 94.83%
DIGANTH S U — PCMB - 94.83%
DHARANI M — PCMC - 94.33%
DHANUSH K S — CEBA - 93.83%
DEEKSHA C N — PCMB - 93.67%
INCHANA R S GOWDA — CEBA - 93.67% — MATH- 100
TRISHA M — PCMB-93.5%
A S SIRI — PCMB - 93.33%
SANDESH B ULLAGADDI — PCMB-93.33%
SANDHYA K A — PCMB - 93.17%
SINCHANA B — PCMB - 93.17%
AJAY SHANKAR — PCMC -92.5%
NISARGA M — PCMC - 92.33%
SINDHURA S — CEBA - 91.5%
YASHAS M — PCMC - 91.17%
KUSHAL S — CEBA - 91%
SAMBRAM S — CEBA - 90.83%
ELISHA AMIT CHOPRA — PCMC - 90.50%
DHANUSHREE B H — PCMB - 89.33%
SANGEETHA C J — PCMB - 89%
PRARTHANA G — CEBA - 89%
ROSHAN KUMAR — PCMC - 88.50%
KAVANA M — PCMB - 88.17%
T D DEVENDRA — PCMB - 87.83%
D THANISHKA — PCMC - 87.67%
BHAGYALAKSHMI M P — CEBA - 87.50%
MONIKA M K — CEBA -87.50%
AMULYA S — CEBA - 87.33%
MITHUN GOWD B S — CEBA - 86.33%
DYUTI N — PCMB - 885.67%
NEETU N — PCMB - 85.67%
D THANISHKA — PCMC - 85.50%
SATHYASHREE S — PCMB - 84.83%

ADMISSION OPEN 2026-27
PU - SCIENCE: PCMB | PCMC, KCET | NEET | JEE
PU - COMMERCE: CEBA | SEBA, CA | CS | CMA
DEGREE: B.COM | BCA, CA | CS | CMA
100% MERIT SCHOLARSHIP ASSURED RESULTS
Contact us 9945833833 9606022599 9606022600
Scan for Location

SKYWAY
Your Travel Companion
SUMMER HOLIDAYS
Explore India & Beyond
BOOK NOW & WIN FREE HOLIDAY UPTO RS.50K*

DOMESTIC HOLIDAY PACKAGES

05 Days — SHIRDI - NASHIK- MUMBAI — Rs. 25,000/-* PP — Dep: Every Thursday
12 Days — CHARDHAM YATRA — Rs. 52,500/-* PP — Dep: Apr 22, 29 | May: 6, 13, 20 & 27 | June: 3 & 10
06 Days — AYODHYA & VARANASI — Rs.46,999/-* PP — Dep: Apr 3, 17 | May 1, 22 | Jun 5, 20
04 Days — BANGALORE - MYSORE - COORG — Rs. 16,000/-* PP — Dep: Every Thursday
04 Days — BANGALORE - MYSORE - OOTY — Rs. 15,000/-* PP — Dep: Every Thursday
06 Days — BANGALORE–OOTY–COORG – MYSORE — Rs. 21,000/-* PP — Dep: Every Tuesday
07 Days — BEST OF KASHMIR — Rs. 31,000/-* PP — Dep: Every Thursday
06 Days — HIMACHAL — Rs. 19,000/-* PP — Dep: Every Thursday
06 Days — ANDAMAN — Rs. 30,000/-* PP — Dep: Every Thursday
06 Days — GOLDEN TRIANGLE — Rs. 24,000/-* PP — Dep: Every Friday
06 Days — BEST OF KERALA — Rs. 21,000/-* PP — Dep: Every Friday
08 Days — ASSAM & MEGHALAYA — Rs. 50,000/-* PP — Dep: Every Friday

INTERNATIONAL HOLIDAY PACKAGES

06 Days — SRI LANKA-THE RAMAYANA TRAILS — Rs. 41,000/-* PP — Dep: Apr 18, May 23, Jun 20
07 Days — RUSSIA — Rs. 1,90,000/-* PP — Dep: Apr 17, 24 | May 1, 8, 15, 22, 29 Jun 5, 12,19, 26
07 Days — BHUTAN — Rs. 68,000/-* PP — Dep: Apr 10, 20| May 1, 6, 16,26 Jun 5
10 Days — EUROPEAN HIGHLIGHTS — Rs. 1,90,900/-* PP — Dep: Apr 22, May 20, Jun 24
13 Days — BEST OF EUROPE — Rs. 2,93,500/-* PP — Dep: Apr 22, May 20, Jun 24
13 Days — AUSTRALIA — Rs. 3,17,000/-* PP — Dep: Nov & Dec
06 Days — DUBAI — Rs. 44,200/-* PP — Dep: Every Wednesday
08 Days — VIETNAM & CAMBODIA — Rs. 45,800/-* PP — Dep: Every Wednesday
06 Days — BALI — Rs. 26,000/-* PP — Dep: Every Thursday
05 Days — THAILAND — Rs. 27,100/-* PP — Dep: Every Friday
08 Days — KENYA — Rs. 1,80,900/-* PP — Dep: Every Friday
08 Days — SINGAPORE & MALAYSIA — Rs. 95,600/-* PP — Dep: Every Friday

Tour Cost Includes: Accommodation + Meals* + Entry Tickets* + Transfers + Local Guide + GST

WHY SKYWAY? TRAVEL NOW PAY LATER | NO HIDDEN COSTS | 100% SATISFACTION | Trip Protection
BOOK BEFORE 31.05.2026 GET ₹2500/-* OFF
T&C Apply*

SKYWAY INTERNATIONAL TRAVELS PVT. LTD.
Recognised by Ministry of Tourism, Govt of India
32 YEARS 1994-2026
1st Floor, Papanna Lane, No.8. St. Marks Road, Bangalore-560001. Tel: 080-22111401 Mail: info@skywaytour.com
BANGALORE | CHENNAI | HYDERABAD | MADIKERI | MUMBAI | MYSORE
www.skywaytour.com • info@skywaytour.com • +91 8884 467 467

SG INTERNATIONAL PUBLIC SCHOOL
• ENTRUST • EMPOWER • ENLIGHTEN
Affiliated to CBSE, New Delhi Affiliation No. 830144
A Unit of Shruthi Sagara Vidya Samsthe (Established:1990)
18, Saraswathipuram, Nandini Layout, Bangalore - 560 096. 080 – 23497428
9538893387/88 help@sginternationalpublicschool.org.in https://www.sginternationalpublicschool.org/

Admission Open 2026-27
Congratulations from Management, Principal & Staff

CBSE AISSE RESULTS (STD-X) 2025-26
Grade-X Toppers 2025-26

RUCHIKA
D/o SANTOSH REVANKAR
98.8%
SCIENCE : CENTUM
100% Results

GUNJAN JAIN 98.4% — SCIENCE - 100
AVANEESH MAYYA G.R. 97.6%
KISHORE G.P. 97.2%
GOURAV M. 96.6%
PRAGNYA J. B. 95.4%
GURU KIRAN R 93.4%
MAYANK DAK 91%
YASHWIN B GOWDA 90.2%
MADHAVA N. 90.2%
JEEVIKA P. 89.6%
SAANVI PANI 88.2%
RUCHI RAJPUROHIT 87.4%
THEJUSH S. 87.2%
NISCHAL B S 86.8%
SANIKA PRASAD 86.6%
KISHAN GOWDA D 86.4%
JYESHTA J P BELLURE 85.8%
YUGANSH DAK 85.2%
M SHAKTHINADHAN 84.6%
UNNATI PRABHAT 84.2%
ADITI KAPIL BHURKE 84%
YASHAS RAJ K 80.4%

BRINGING OUT THE BEST SGIPS

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

DS MAX®

DS MAX SKY STANZA

2 & 3-BHK HOMES | ▲G+14 FLOORS▼

LUXURIOUS 2 & 3-BHK APARTMENTS

Jigani | 5 mins. APC Circle

2-BHK STARTS @ ₹ 61 L*

3-BHK STARTS @ ₹ 78 L*

BUY A HOME TO WIN A HOME*

DS MAX FLAT PATNI CONTEST
(Exclusively for our Customers)

ಡಿಎಸ್ ಮ್ಯಾಕ್ಸ್ ಫ್ಲಾಟ್ ಪತ್ನಿ ಕಾಂಟೆಸ್ಟ್

*T & C Apply

Visit our website or talk to our advisors for the complete portfolio

2, 3 & 4-BHK APARTMENTS FOR SALE IN VARIOUS LOCATIONS

RERA No.	Location	Floors	Landmark	Price	Phone
PRM/KA/RERA/1250/304/PR/251024/007179	WHITEFIELD	G+14	10 MINS. HOPEFARM METRO	₹ 72.86 L - 1.32 Cr*	8880 461 461
PRM/KA/RERA/1251/310/PR/210324/006724	SILKBOARD	G+14	NEAR SINGASANDRA METRO STN.	₹ 91.27 L - 1.47 Cr*	8880 013 310
PRM/KA/RERA/1251/472/PR/250225/007524	AIRPORT ROAD	G+14	NEAR PRESTIGE TECH IT PARK	₹ 87.89 L - 1.21 Cr*	8880 465 465
PRM/KA/RERA/1251/310/PR/150223/005721	MYSORE ROAD	G+14	NEAR CHALLAGHATTA METRO STN.	₹ 75.00 L - 1.06 Cr*	8880 461 461
PRM/KA/RERA/1251/309/PR/030524/006841	HENNUR	G+4	NEAR HENNUR DECATHLON	₹ 90.41 L - 1.21 Cr*	8880 465 465
PRM/KA/RERA/1251/308/PR/291225/008366	HOSUR ROAD	G+22	10 MINS. ELECTRONIC CITY	₹ 62.71 L - 1.01 Cr*	8880 003 003
PRM/KA/RERA/1250/301/PR/251024/007178	YELAHANKA	G+14	5 MINS. RAJANUKUNTE	₹ 54.85 - 97.21 Lakhs*	8880 465 465
PRM/KA/RERA/1251/308/PR/160824/006973	BANNERGHATTA RD.	G+14	NEAR KOPPA GATE	₹ 59.86 - 85.23 Lakhs*	8880 013 310
PRM/KA/RERA/1251/308/PR/230126/008427	SARJAPURA	G+4	SARJAPUR - ATTIBELE ROAD	₹ 60.01 - 83.25 Lakhs*	8880 003 003
PRM/KA/RERA/1251/308/PR/160824/006972	HOSA ROAD METRO	G+4	NEAR ELECTRONIC CITY	₹ 80.01 L - 1.44 Cr*	8880 013 310
PRM/KA/RERA/1251/310/PR/151223/006489	BANASHANKARI	G+3	OPP. NPS SCHOOL (3 & 4-BHK)	₹ 1.45 - 2.17 Cr*	8880 461 461
PRM/KA/RERA/1251/446/PR/190301/002464	WHITEFIELD	G+4	5 MINS - KADUGODI METRO	₹ 63.00 - 88.00 Lakhs*	8880 461 461

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment

9164 022 000

INTERIORS

We design and style your home.

9164 056 000

REFER A DS MAX HOME

Refer a buyer to earn big

9164 043 000

REFER A LAND TO DS MAX

Offer a Land, Get a Home.

8880 463 463

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331